ಮಂಗಳವಾರ, ಸೆಪ್ಟೆಂಬರ್ 5, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 247 | ಪುಟ 14
www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮಕ್ಕಳಲ್ಲೂ ಹೃದ್ರೋಗಗಳು ಸಾಮಾನ್ಯವಾಗುತ್ತಿವೆ. ಆರಂಭದಲ್ಲಿಯೇ ಇವನ್ನು ಗುರುತಿಸಿದರೆ ಪರಿಹಾರ ಸಾಧ್ಯ.

ಸನಾತನ ಧರ್ಮ ಕುರಿತ ಹೇಳಿಕೆಗೆ ಬದ್ಧ: ಉದಯನಿಧಿ 11
ಶಿಕ್ಷಕರ ದಿನದ ಶುಭಾಶಯಗಳು 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,628 ▲	19,528 ▲	₹61,380 (ಬೆಂಗಳೂರು)	₹75,900 (ಬೆಂಗಳೂರು)	82.71 ▼

ಬಾಲಕನ ಕೊಂದ ಹುಲಿ

ಪ್ರಜಾವಾಣಿ ವಾರ್ತೆ

ಚರಣ್ ನಾಯಕ್

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಮೇಟಿಕುಪ್ಪೆ ವನ್ಯಜೀವಿ ವಲಯ ವ್ಯಾಪ್ತಿಯ ಕಾಡಂಚಿನ ಜಮೀನಿನಿಂದ ಸೋಮವಾರ ಬಾಲಕನನ್ನು ಹುಲಿ ಪೊದೆಯೊಳಕ್ಕೆ ಎಳೆದೊಯ್ದು ಕೊಂದಿದೆ.

ತಾಲ್ಲೂಕಿನ ಕಲ್ಲಹಟ್ಟಿಯ ಕೃಷ್ಣ ನಾಯಕ್ ಪುತ್ರ ಚರಣ್ ನಾಯಕ್ (8) ಮೃತಪಟ್ಟವನು. ಈತನ ಪೋಷಕರು ಜಮೀನಿನಲ್ಲಿ ಮೆಣಸಿನಕಾಯಿ ಕೀಳುತ್ತಿದ್ದರು.

ಕ್ರೀಡಾಕೂಟಕ್ಕಾಗಿ ಶಾಲೆಗೆ ರಜೆ ಕೊಟ್ಟಿದ್ದರಿಂದ ಈತ ಪೋಷಕರೊಂದಿಗೆ ಬಂದಿದ್ದ. ಕೃಷ್ಣ ಅವರು ಮಗನನ್ನು ಮನೆಗೆ ಕರೆದೊಯ್ಯಲು ರಸ್ತೆ ಬದಿ ನಿಲ್ಲಿಸಿ, ಮೆಣಸಿನಕಾಯಿ ಮೂಟೆ ತರಲು ಜಮೀನಿಗೆ ಹೋಗಿದ್ದರು. ಆಗ, ಚರಣ್‌ನನ್ನು ಹುಲಿ ಎಳೆದೊಯ್ದಿದೆ. ತೊಡೆ, ಕೈ ಮತ್ತು ದೇಹದ ಇತರ ಭಾಗವನ್ನು ತಿಂದಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಳೆ ಕೊರತೆಯಿಂದ ಭತ್ತದ ಇಳುವರಿ ಕುಸಿತ • ದಾಸ್ತಾನು ಹೆಚ್ಚಳ

ಅಕ್ಕಿ ದರ ಎಲ್ಲೆಡೆ ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ಕೊರತೆಯ ಕಾರಣದಿಂದ ಭತ್ತದ ಇಳುವರಿ ಕುಸಿದಿದೆ. ಭತ್ತಕ್ಕೆ ಮುಂದೆ ಇನ್ನೂ ಹೆಚ್ಚು ಬೆಲೆ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ಭತ್ತದ ದಾಸ್ತಾನು ಹೆಚ್ಚಾಗಿದೆ. ಇದರ ಪರಿಣಾಮವಾಗಿ ರಾಜ್ಯದ ಬಹುತೇಕ ರಿಟೇಲ್ (ಚಿಲ್ಲರೆ) ಮಾರುಕಟ್ಟೆಗಳಲ್ಲಿ ಅಕ್ಕಿಯ ಬೆಲೆ ಭಾರಿ ಪ್ರಮಾಣದಲ್ಲಿ ಹೆಚ್ಚಳ ಆಗಿದೆ.

ಅಕ್ಕಿಯ ಬೆಲೆಯು ಕೆಲವು ಮಾರುಕಟ್ಟೆಗಳಲ್ಲಿ ಕೆ.ಜಿ.ಗೆ ₹20ರವರೆಗೆ ಹೆಚ್ಚಾಗಿದೆ. ಊಟಕ್ಕೆ ಹೆಚ್ಚಾಗಿ ಬಳಕೆಯಾಗುವ ಸೋನಾ ಮಸೂರಿ ಅಕ್ಕಿಯ ಬೆಲೆಯು ಕೋಲಾರದಲ್ಲಿ ₹15ರವರೆಗೆ, ತುಮಕೂರಿನಲ್ಲಿ ಕನಿಷ್ಠ ₹10ರಷ್ಟು ಜಿಗಿದಿದೆ.

ಬೇಡಿಕೆಗೆ ತಕ್ಕಷ್ಟು ಅಕ್ಕಿ ಪೂರೈಕೆ ಆಗುತ್ತಿಲ್ಲ, ಪೂರೈಕೆದಾರರು ಬೆಲೆ ಹೆಚ್ಚಿಸಿರುವುದರಿಂದ ಗ್ರಾಹಕರಿಂದ ಹೆಚ್ಚಿನ ದರ ಪಡೆಯುವುದು ಅನಿವಾರ್ಯವಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಮಲೆನಾಡಿನಲ್ಲಿ: ಮಲೆನಾಡಿನ ಕೆಲವೆಡೆ ಅಕ್ಕಿಯ ದರ ಗಗನಕ್ಕೇರಿದೆ. ಭತ್ತದ ಪೂರೈಕೆ ಇಲ್ಲದೇ ಇಲ್ಲಿನ ರೈಸ್ ಮಿಲ್‌ಗಳ ಕೆಲಸದ ದಿನಗಳು ಕಡಿತಗೊಂಡಿವೆ.

10ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ಮಳೆ ಇಲ್ಲದ ಕಾರಣ ರೈತರು ಭತ್ತವನ್ನು ಮನೆ ಬಳಕೆಗೆ ಇಟ್ಟುಕೊಳ್ಳುತ್ತಿದ್ದಾರೆ. ಕಳೆದ ವರ್ಷದ ಶೇ 10ರಷ್ಟು ಪೂರೈಕೆಯೂ ಇಲ್ಲ. 2ನೇ ದರ್ಜೆಯ ಅಕ್ಕಿ ಬೆಲೆಯೂ ಕೆ.ಜಿ.ಗೆ ₹45 ದಾಟಿದೆ

ರೆಹಮತುಲ್ಲಾ, ಶಿವಮೊಗ್ಗ ಜಿಲ್ಲೆ ಆನಂದಪುರದ ರೈಸ್‌ಮಿಲ್ ಮಾಲೀಕ

ಕುಚ್ಚಲಕ್ಕಿ ಬೆಲೆ ಏರಿಕೆ

ಮಂಗಳೂರು: ಕರಾವಳಿಯಲ್ಲಿ ವ್ಯಾಪಕವಾಗಿ ಬಳಕೆಯಾಗುವ ಕುಚ್ಚಲಕ್ಕಿ ದುಬಾರಿಯಾಗಿದೆ.

‘ಕುಚ್ಚಲಕ್ಕಿ (ಕಜೆ ಅಕ್ಕಿ) ದರ ಮೂರು ತಿಂಗಳಲ್ಲಿ ಕೆ.ಜಿ.ಗೆ ಸರಾಸರಿ ₹10ರಷ್ಟು ಏರಿಕೆಯಾಗಿದೆ. ಮಿಲ್‌ಗಳಿಂದ ಅಕ್ಕಿ ಪೂರೈಕೆಯಲ್ಲಿ ವ್ಯತ್ಯಯ ಆಗುತ್ತಿಲ್ಲ’ ಎನ್ನುತ್ತಾರೆ ಉಪ್ಪಿನಂಗಡಿಯ ಎಂಎಂಎಸ್ ಅಂಗಡಿ ಮಾಲೀಕ ಮುನ್ನಾ.

ಉಡುಪಿ ಜಿಲ್ಲೆಯಲ್ಲಿ ಕುಚ್ಚಲಕ್ಕಿ ದರ ಎರಡು ತಿಂಗಳಲ್ಲಿ ಶೇ 25ರಷ್ಟು ಹೆಚ್ಚಾಗಿದೆ. ಸೋನಾ ಮಸೂರಿ ಅಕ್ಕಿಯ ದರವೂ ₹48ರಿಂದ ₹62ಕ್ಕೆ ಏರಿಕೆಯಾಗಿದೆ.

‘ವಾಣಿಜ್ಯ ಬಳಕೆಯ ವಿದ್ಯುತ್ ದರ, ಭತ್ತದ ಧಾರಣೆ, ಉತ್ಪಾದನಾ ವೆಚ್ಚ ಗಣನೀಯ ಏರಿಕೆ ಕಂಡಿವೆ. ಹೊಸ ಭತ್ತ ಮಾರುಕಟ್ಟೆಗೆ ಬರುವವರೆಗೆ ಅಕ್ಕಿ ಕೊರತೆಯಾಗಿ, ಮಿಲ್ ಕೆಲಸ ನಿಂತುಹೋಗಬಾರದು ಎಂದು ಕೆಲವು ಮಿಲ್‌ಗಳ ಮಾಲೀಕರು ಭತ್ತ ದಾಸ್ತಾನು ಮಾಡುತ್ತಿದ್ದಾರೆ. ಹೀಗಾಗಿ, ಕೃತಕ ಕೊರತೆ ಸೃಷ್ಟಿಯಾಗಿರುವ ಸಾಧ್ಯತೆ ಇದೆ’ ಎನ್ನುತ್ತಾರೆ ಮಂಗಳೂರಿನ ಮಿಲ್ ಮಾಲೀಕ ವೆಂಕಟರಾಯ ಕಾಮತ್.

ಕೆಎಸ್‌ಪಿಸಿಬಿ ಅಧ್ಯಕ್ಷರಾಗಲು ಬಿಇ ಸಾಕು

ಮಾರ್ಗಸೂಚಿ, ನಿಯಮ, ಷರತ್ತು ತಿದ್ದುಪಡಿ ಮಾಡಿದ ರಾಜ್ಯ ಸರ್ಕಾರ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷರಾಗಲು ಇನ್ನು ಮುಂದೆ ‘ಪರಿಸರ ವಿಜ್ಞಾನ’ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಲೇಬೇಕು ಎಂದೇನೂ ಅಲ್ಲ. ಎಂಜಿನಿಯರಿಂಗ್ ಪದವಿ (ಬಿಇ) ಪಡೆದರೂ ಸಾಕು.

ಕೆಎಸ್‌ಪಿಸಿಬಿ ಅಧ್ಯಕ್ಷ ಸ್ಥಾನದಿಂದ ಶಾಂತ್ ಎ. ತಿಮ್ಮಯ್ಯ ಅವರನ್ನು ವಜಾಗೊಳಿಸಿ ಆದೇಶ ಹೊರಡಿಸಿದ ಬೆನ್ನಲ್ಲೆ, ಆ ಸ್ಥಾನ ಮತ್ತು ಮಂಡಳಿಗೆ ಸದಸ್ಯರ ನಾಮನಿರ್ದೇಶನದ ಮಾರ್ಗಸೂಚಿ, ನಿಯಮ ಮತ್ತು ಷರತ್ತುಗಳನ್ನು ರಾಜ್ಯ ಸರ್ಕಾರ ತಿದ್ದುಪಡಿ ಮಾಡಿದೆ. ಈ ತಿದ್ದುಪಡಿ 2020ರ ಜೂನ್ 19ರಿಂದಲೇ ಅನ್ವಯ ಆಗಲಿದೆ.

2020ರ ಜೂನ್ 19ರಂದು ಸರ್ಕಾರ ಹೊರಡಿಸಿದ್ದ ಆದೇಶದ ಪ್ರಕಾರ, ಅಧ್ಯಕ್ಷರಾಗಲು ಪರಿಸರ ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಪರಿಸರ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ಪದವಿ ಅಥವಾ ಅಂಗೀಕೃತ ವಿಶ್ವವಿದ್ಯಾಲಯ ಅಥವಾ ಸಂಸ್ಥೆಯಿಂದ ಪರಿಸರಕ್ಕೆ ಸಂಬಂಧಿಸಿದ ವಿಷಯದಲ್ಲಿ (ಅಲೈಡ್ ಸೈನ್ಸ್) ಪಡೆಯಬೇಕಿತ್ತು. ಈ ‘ಅರ್ಹತೆ’ಗೆ ತಿದ್ದುಪಡಿ ಮಾಡಲಾಗಿದ್ದು, ಎಂಜಿನಿಯರಿಂಗ್ ವಿಷಯದಲ್ಲಿ ಪದವಿ ಅಥವಾ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ಪದವಿ ಅಥವಾ ಅಂಗೀಕೃತ ವಿ.ವಿ ಅಥವಾ ಸಂಸ್ಥೆಯಿಂದ ಪರಿಸರಕ್ಕೆ ಸಂಬಂಧಿಸಿದ ವಿಷಯದಲ್ಲಿ ಪದವಿ ಪಡೆದರೆ ಸಾಕು.

10ನೇ ಪುಟ ನೋಡಿ

ಶಾಸಕರ ನೇಮಕಕ್ಕೆ ನಿಯಮ ಬದಲು?

ಮಂಡ್ಯ ಜಿಲ್ಲೆಯ ಶಾಸಕರೊಬ್ಬರನ್ನು ಮಂಡಳಿಯ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡುವ ಉದ್ದೇಶದಿಂದಲೇ ‘ಅರ್ಹತೆ’ಯ ನಿಯಮಗಳನ್ನು ಸಡಿಲಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಅಧ್ಯಕ್ಷರನ್ನು ಮುಖ್ಯಮಂತ್ರಿ ಅಧ್ಯಕ್ಷತೆಯ ಶೋಧನಾ ಕಮ್ ಆಯ್ಕೆ ಸಮಿತಿ ಆಯ್ಕೆ ಮಾಡಲಿದೆ. ಈ ಸಮಿತಿಗೆ ಅರಣ್ಯ ಸಚಿವ ಉಪಾಧ್ಯಕ್ಷ ರಾಗಿದ್ದು, ಮುಖ್ಯ ಕಾರ್ಯದರ್ಶಿ ಸಮಿತಿಯ ಕಾರ್ಯದರ್ಶಿ ಮತ್ತು ಸಂಚಾಲಕರಾಗಿದ್ದಾರೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಸಂಕನೂರು ಬಳಿ ಕೊಚ್ಚಿ ಹೋದ ಮಣ್ಣಿನ ಸೇತುವೆ

ಕುಷ್ಟಗಿಯ ಹನುಮನಾಳದಲ್ಲಿ 15 ಸೆಂ.ಮೀ ಮಳೆ

‘ಉತ್ತರ’ದಲ್ಲಿ ಮಳೆ ಸಂಭ್ರಮ

ಪ್ರಜಾವಾಣಿ ವಾರ್ತೆ

ಕಲಬುರಗಿ/ಹುಬ್ಬಳ್ಳಿ: ಕಳೆದ ತಿಂಗಳು ಮಳೆ ಕೊರತೆಯಿಂದ ಬರದ ಛಾಯೆ ಮೂಡಿದ್ದ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದ ವಿವಿಧೆಡೆ ಭಾನುವಾರ ರಾತ್ರಿ ಮತ್ತು ಸೋಮವಾರ ಬಿರುಸಿನ ಮಳೆಯಾಗಿದ್ದು, ರೈತರಲ್ಲಿ ಸ್ವಲ್ಪ ನೆಮ್ಮದಿ ತಂದಿದೆ. ಕಾಗಿಣಾ, ಬೆಣ್ಣೆತೊರಾ, ಮುಲ್ಲಾಮಾರಿ ನದಿಗಳು, ಕೆಲ ಹಳ್ಳ, ಕೊಳ್ಳಗಳು ತುಂಬಿ ಹರಿಯುತ್ತಿವೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ಕೊಪ್ಪಳ, ಬೀದರ್ ಹಾಗೂ ಕಿತ್ತೂರು ಕರ್ನಾಟಕದ ಗದಗ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ರಭಸದ ಮಳೆಯಾಗಿದ್ದು, ಹಲವು ರಸ್ತೆಗಳ ಸಂಪರ್ಕ ಕಡಿತಗೊಂಡಿತ್ತು.

ಕೊಪ್ಪಳ ಜಿಲ್ಲೆಯ ಕುಷ್ಟಗಿ ಸಮೀಪದ ಹನುಮನಾಳ ಸುತ್ತಮುತ್ತ ಭಾನುವಾರ ರಾತ್ರಿಯಿಂದ ಸೋಮವಾರ ಬೆಳಗಿನವರೆಗೆ 15 ಸೆಂ.ಮೀ ಮಳೆಯಾಗಿದೆ. ತಾಲ್ಲೂಕಿನ ತುಗ್ಗಲದೋಣಿ ಕೆರೆ ಭಾನುವಾರ ರಾತ್ರಿಯೇ ಭರ್ತಿಯಾಗಿ ಕೋಡಿ ಬಿದ್ದಿದೆ.

ಯಲಬುರ್ಗಾ ತಾಲ್ಲೂಕಿನ ಸಂಕನೂರು ಬಳಿ ಸೇತುವೆ ನಿರ್ಮಾಣವಾಗುತ್ತಿದ್ದು, ವಾಹನಗಳ ಸಂಚಾರಕ್ಕೆ ತಾತ್ಕಾಲಿಕವಾಗಿ ಇನ್ನೊಂದು ಮಣ್ಣಿನ ಸೇತುವೆ ನಿರ್ಮಿಸಲಾಗಿತ್ತು. ಮಳೆಯ ಅಬ್ಬರಕ್ಕೆ ಈ ಸೇತುವೆ ಕೊಚ್ಚಿ ಹೋಗಿದೆ.

ಕಲಬುರಗಿ ಜಿಲ್ಲೆಯ ಸೇಡಂ ಪಟ್ಟಣದ ಪೊಲೀಸ್ ಠಾಣೆಗೆ ಮಳೆ ನೀರು ನುಗ್ಗಿದ್ದರಿಂದ ಪೊಲೀಸರು ಕಂಪ್ಯೂಟರ್, ಟೇಬಲ್, ತಿಜೋರಿ, ಸೇರಿದಂತೆ ದಾಖಲೆಪತ್ರಗಳನ್ನು ರಕ್ಷಿಸಲು ದಿನವಿಡೀ ಹರಸಾಹಸಪಟ್ಟರು.

ಉಕ್ಕಿ ಹರಿಯುತ್ತಿರುವ ನದಿಗಳು: ಕಲಬುರಗಿ ಜಿಲ್ಲೆಯ ಚಿಂಚೋಳಿ, ಕಾಳಗಿ ಹಾಗೂ ಚಿತ್ತಾಪುರ ತಾಲ್ಲೂಕಿನಲ್ಲಿ ಭಾರಿ ಮಳೆಯಾಗಿದ್ದರಿಂದ ಕಾಗಿಣಾ, ಬೆಣ್ಣೆತೊರಾ ನದಿಗಳು ಉಕ್ಕಿ ಹರಿಯುತ್ತಿವೆ. ಇದರಿಂದಾಗಿ ಹಲವು ರಸ್ತೆಗಳು ಜಲಾವೃತವಾಗಿದ್ದು, ಸಂಪರ್ಕ ಸ್ಥಗಿತಗೊಂಡಿದೆ. ಚಿಂಚೋಳಿ ತಾಲ್ಲೂಕಿನ ಸುಲೇಪೇಟದಲ್ಲಿ ಕಬ್ಬು ಮಳೆ–ಗಾಳಿಗೆ ನೆಲಕ್ಕುರುಳಿದೆ.

ಭಾಲ್ಕಿ–ಚಿಂಚೋಳಿ ರಾಜ್ಯ ಹೆದ್ದಾರಿ 75ರಲ್ಲಿ ಕನಕಪುರ– ಗಾರಂಪಳ್ಳಿ ಮಧ್ಯೆ ಮಳೆ ಹಾಗೂ ದೋಟಿಕೊಳ ಕೆರೆಯ ನೀರು ಹರಿದು ಸಂಚಾರ ಸ್ಥಗಿತಗೊಂಡಿತ್ತು.

ಬಿರುಸಿನ ಮಳೆಯಿಂದ ಮುಲ್ಲಾಮಾರಿ ನದಿಯು ತುಂಬಿ ಹರಿಯುತ್ತಿದೆ. ಇದರಿಂದ ಪಟಪಳ್ಳಿ ಹಳೆಯ ಊರು ಹಾಗೂ ಹೊಸ ಊರಿನ ಮಧ್ಯೆ ಇರುವ ಸೇತುವೆ ಜಲಾವೃತವಾಗಿ ಸಂಚಾರ ಕಡಿತವಾಗಿತ್ತು.

ಚಂದ್ರಂಪಳ್ಳಿ ಜಲಾಶಯಕ್ಕೆ 4,100 ಕ್ಯೂಸೆಕ್ ಒಳ ಹರಿವಿದ್ದು, ಮುಂಜಾಗ್ರತಾ ಕ್ರಮವಾಗಿ ಜಲಾಶಯದ ಮೂರು ಗೇಟುಗಳ ಮೂಲಕ 4,300 ಕ್ಯೂಸೆಕ್ ನೀರು ಸರನಾಲಾ ನದಿಗೆ ಬಿಡಲಾಗುತ್ತಿದೆ.

ಬೀದರ್ ಜಿಲ್ಲೆಯಾದ್ಯಂತ ಧಾರಾಕಾರ ಮಳೆಯಾಗಿದ್ದು, ಔರಾದ್ ಹಾಗೂ ಭಾಲ್ಕಿಯಲ್ಲಿ ತಲಾ ಒಂದು ಮನೆಯ ಗೋಡೆ ಭಾಗಶಃ ಕುಸಿದಿದೆ. ಬೀದರ್ ಹೋಬಳಿ ವ್ಯಾಪ್ತಿಯಲ್ಲಿ 8.2 ಸೆಂ.ಮೀ ಮಳೆಯಾಗಿದೆ.

ಹಳ್ಳಗಳಿಗೆ ವ್ಯಾಪಕ ನೀರು: ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಹೊಳೆಆಲೂರ ಭಾಗದಲ್ಲಿ ಸುರಿದ ಮಳೆಯಿಂದ ಹುಲ್ಲೂರ- ಹುನಗುಂಡಿ, ಬಸರಕೋಡ ಮತ್ತು ಮೆಣಸಗಿ ಗ್ರಾಮಗಳ ಹಳ್ಳಗಳಿಗೆ ವ್ಯಾಪಕ ಪ್ರಮಾಣದ ನೀರು ಹರಿದು ಬಂದಿದೆ. ಹುಲ್ಲೂರು ಮುದೇನಗುಡಿಯ ನಡುವಿನ ಹಳ್ಳ ಉಕ್ಕಿ ಹರಿಯುತ್ತಿದ್ದು, ತಾಲ್ಲೂಕು ಕೇಂದ್ರ ರೋಣ ಪಟ್ಟಣ ಸಂಪರ್ಕಿಸುವ ರಸ್ತೆ ಜಲಾವೃತವಾಗಿದೆ.

ಹುನಗುಂಡಿಯ ಹಿರೇಹಳ್ಳಕ್ಕೂ ಹೆಚ್ಚಿನ ಪ್ರಮಾಣದ ನೀರು ಬಂದಿದ್ದು ಹಳ್ಳದ ಪಕ್ಕದಲ್ಲಿನ ಜಮೀನುಗಳಿಗೆ ನೀರು ನುಗ್ಗಿ ಈರುಳ್ಳಿ, ಮೆಣಸಿನಕಾಯಿ, ಗೋವಿನಜೋಳದ ಬೆಳೆಗಳು ಜಲಾವೃತವಾಗಿವೆ. ಕೃಷಿ ಹೊಂಡಗಳು ಭರ್ತಿಯಾಗಿವೆ.

ಸಿಕೆಸಿ ಗ್ರೂಪ್
150 ವರ್ಷಗಳು

ನಮ್ಮೆಲ್ಲರ ಪ್ರೀತಿಯ ಬೆಣ್ಣೆ ಕಳ್ಳ, ಗೀತ ಗಾಯಕ,
ರಾಧಿಕೆಯ ನಾಯಕ, ಬನ ವಿಹಾರಿ, ನಂದಲಾಲ...
ಆರಾಧನೆಗೆ ಒಂದು ಪರಿಪೂರ್ಣ ಮಾರ್ಗ

ಪರಿಚಯಿಸಲಾಗುತ್ತಿದೆ
ಲಾರ್ಡ್ ಕೃಷ್ಣ ನೈವೇದ್ಯಂ ಪ್ಲಾಟರ್

ಶ್ರೀ ಮಹಾವಿಷ್ಣು ಹಾಗು ತನ್ನ ಪೂರ್ಣಾವತಾರನಾದ ಶ್ರೀ ಕೃಷ್ಣನ ಸಂತೋಷಭರಿತ, ಪ್ರೇಮಪೂರ್ಣ, ಸಂಪ್ರೀತಿಯುಳ್ಳ ಗೌರವವನ್ನು ಸಲ್ಲಿಸುವ ಒಂದು ಸಮರ್ಪಕವಾದ ಪರಿಪೂರ್ಣ ಮಾರ್ಗ ಇಲ್ಲಿದೆ. ಸಿ. ಕೃಷ್ಣಯ್ಯ ಚೆಟ್ಟಿ ರವರ ಪರಂಪರೆಯ ಪ್ರಸಿದ್ಧ ಮಳಿಗೆಯಲ್ಲಿ ಮನಮೋಹಕವಾಗಿ ತಯಾರಿಸಲಾದ ಲಾರ್ಡ್ ಕೃಷ್ಣ ನೈವೇದ್ಯಂ ಪ್ಲಾಟರ್. ಪರಿಶುದ್ಧ ಬೆಳ್ಳಿ ಮತ್ತು ಚಿನ್ನದ ಲೇಪನದೊಂದಿಗೆ ತಯಾರಿಸಲಾಗಿರುವ ಈ ಪ್ಲಾಟರ್‌ನಲ್ಲಿ, ನಂದಕಿಶೋರನಿಗೆ ಸಮರ್ಪಿತ ಪಂಚ ಪ್ರತೀಕ ದೇವಸ್ಥಾನಗಳ ಪುಟ್ಟ ಪ್ರತಿಕೃತಿಗಳನ್ನು ಒಳಗೊಂಡಿದೆ.

ಶ್ರೀ ಅಪ್ರಮೇಯ ಸ್ವಾಮಿ ದೇವಸ್ಥಾನ, ಶ್ರೀ ಕೃಷ್ಣ ಜನ್ಮಭೂಮಿ ಮಂದಿರ, ಶ್ರೀ ಜಗನ್ನಾಥ ದೇವಾಲಯ, ಶ್ರೀ ರಂಗನಾಥ ಸ್ವಾಮಿ ದೇವಾಲಯ, ಶ್ರೀ ಅನಂತ ಪದ್ಮನಾಭ ಸ್ವಾಮಿ ಮಂದಿರ.

ಕೂಡಲೆ ಈ ಸೊಗಸಾದ ಪ್ಲಾಟರ್ ಪಡೆದುಕೊಳ್ಳಿರಿ ಮತ್ತು ಶ್ರೀ ಕೃಷ್ಣನಿಗೆ ನಿಮ್ಮ ಭಕ್ತಿ ಭಾವನೆಯನ್ನು ತೋರಿಸಿ.

ಸೀಮಿತ ಆವೃತ್ತಿ
ಸಾಮಾನ್ಯ ದರ : Rs.~~1,59,000/-~~*
ವಿಶೇಷ ದರ : 1,50,000/- ONWARDS*
(*ಈ ಕೊಡುಗೆ ಸೆಪ್ಟಂಬರ್ 15, 2023 ರವರೆಗೆ ಲಭ್ಯ)
ಆನ್‌ಲೈನ್ ಖರೀದಿಗಾಗಿ: www.ckcjewellers.com/Naivedyam-Platter
ಖರೀದಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

ಸಿ. ಕೃಷ್ಣಯ್ಯ ಚೆಟ್ಟಿ™ ಗ್ರೂಪ್ ಆಫ್ ಜ್ಯುವೆಲರ್ಸ್
ಬೆಂಗಳೂರಿನಾದ್ಯಂತ 5 ಬೃಹತ್ ಶೋರೂಮ್‌ಗಳು ಮತ್ತು ಬೊಟಿಕ್‌ಗಳು: ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರೋಡ್ • ಜಯನಗರ • ಮಲ್ಲೇಶ್ವರಂ • ಫೀನಿಕ್ಸ್ ಮಾರ್ಕೆಟ್ ಸಿಟಿ
Dedicated relationship manager: +91 95131 31869 | Tel: 080-4000 1869 / 4100 1869 | www.ckcjewellers.com

*ಷರತ್ತು ಮತ್ತು ನಿಬಂಧನೆಗಳು ಅನ್ವಯ. ಎಲ್ಲಾ ಟ್ರೇಡ್‌ಮಾರ್ಕ್ಸ್ ಹಾಗೂ ಲೋಗೋಗಳು ಸಂಬಂಧಿತ ಸಂಸ್ಥೆಯದ್ದಾಗಿರುತ್ತವೆ ಮತ್ತು ಇವನ್ನು ದುರುಪಯೋಗ ಮಾಡಿಕೊಳ್ಳುವುದನ್ನು ನಿರ್ಬಂಧಿಸಲಾಗಿದೆ.
ಸಿಕೆಸಿ ಸಮೂಹ ಕಂಪನಿಗಳು: C. KRISHNIAH CHETTY & SONS | C. KRISHNIAH CHETTY JEWELLERS | THE 1869 GUILD | C. Krishniah Chetty & Sons | C. KRISHNIAH CHETTY CHARITABLE TRUST | C. Krishniah Chetty Foundation

*ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಾಗಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೊ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ.
ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ.*

ಚುಚ್ಚುಮದ್ದು ವ್ಯತಿರಿಕ್ತ ಪರಿಣಾಮ: ಉದ್ಯಮಿ ಅಮರ್ ಶೆಟ್ಟಿ ಸಾವು ಪ್ರಕರಣ

ಅಗ್ರಹಾರದ ಭಾಗ್ಯ ಕ್ಲಿನಿಕ್ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುಚ್ಚುಮದ್ದು ವ್ಯತಿರಿಕ್ತ ಪರಿಣಾಮದಿಂದಾಗಿ ಹೋಟೆಲ್ ಉದ್ಯಮಿ ಅಮರ್ ಶೆಟ್ಟಿ (31) ಅವರ ಸಾವು ಸಂಭವಿಸಿದೆ ಎಂದು ಆರೋಪಿಸಲಾಗಿದ್ದ ಕೆ.ಪಿ. ಅಗ್ರಹಾರದ ಭಾಗ್ಯ ಕ್ಲಿನಿಕ್ ಅನ್ನು ಆರೋಗ್ಯ ಇಲಾಖೆ ಅಧಿಕಾರಿಗಳು, ಸೋಮವಾರ ಬಂದ್ ಮಾಡಿಸಿದ್ದಾರೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹೊಸಂಗಡಿಯ ಅಮರ್ ಶೆಟ್ಟಿ ಅವರು ಐಟಿಐ ಪದವೀಧರರು. ಅವಿವಾಹಿತರಾಗಿದ್ದ ಇವರು, ದುಬೈನಲ್ಲಿ ಆರು ವರ್ಷ ಕೆಲಸ ಮಾಡಿ ವರ್ಷದ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದರು. ನಗರದಲ್ಲಿ ಹೋಟೆಲ್ ಉದ್ಯಮ ಆರಂಭಿಸಿದ್ದರು. ಸ್ನೇಹಿತರ ಜತೆಗೆ ನೆಲೆಸಿದ್ದರು.

ಜ್ವರದಿಂದ ಬಳಲುತ್ತಿದ್ದ ಅಮರ್ ಶೆಟ್ಟಿ ಅವರು, ಆಗಸ್ಟ್ 13ರಂದು ಕೆ.ಪಿ. ಅಗ್ರಹಾರದ 4ನೇ ಕ್ರಾಸ್‌ನಲ್ಲಿರುವ ಭಾಗ್ಯ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು. ಅಲ್ಲಿನ ವೈದ್ಯರು, ಚುಚ್ಚುಮದ್ದು ನೀಡಿದ್ದರು. ನಂತರ, ಮಾತ್ರೆಗಳನ್ನು ಬರೆದುಕೊಟ್ಟಿದ್ದರು. ಮನೆಗೆ ತೆರಳಿ ವಿಶ್ರಾಂತಿ ಪಡೆದುಕೊಳ್ಳುತ್ತಿದ್ದ ವೇಳೆ ಅವರಿಗೆ ಚುಚ್ಚುಮದ್ದು ನೀಡಿದ್ದ ಜಾಗದಲ್ಲಿ ಊತ ಕಾಣಿಸಿಕೊಂಡು ನೋವಿನಿಂದ ನರಳಲು ಆರಂಭಿಸಿದ್ದರು. ಅದಾದ ಮೇಲೆ ರಾಜಾಜಿನಗರದ ಮತ್ತೊಂದು ಕ್ಲಿನಿಕ್‌ಗೆ ತೆರಳಿ ಚಿಕಿತ್ಸೆ ಪಡೆದುಕೊಂಡಿದ್ದರು. ನೋವು ಕಡಿಮೆ ಆಗಿರಲಿಲ್ಲ. ಅಲ್ಲಿಂದ ಕಿಮ್ಸ್‌ಗೆ ದಾಖಲಾಗಿದ್ದರು. ಆಗಸ್ಟ್ 18ರಂದು ಅವರು ಮೃತಪಟ್ಟಿದ್ದರು.

ಚುಚ್ಚುಮದ್ದು ವ್ಯತಿರಿಕ್ತ ಪರಿಣಾಮ ಬೀರಿದ್ದರಿಂದ ಅಮರ್ ಆರೋಗ್ಯ ಹದಗೆಟ್ಟಿತ್ತು. ಇವರ ಸಾವಿಗೆ ಭಾಗ್ಯ ಕ್ಲಿನಿಕ್ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ಕುಟುಂಬಸ್ಥರು ಕೆಪಿ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಆರೋಗ್ಯ ಸಚಿವರು, ಇಲಾಖೆ ಆಯುಕ್ತರು ಹಾಗೂ ವಸಂತನಗರ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ಗೂ ದೂರು ನೀಡಿದ್ದರು. ದೂರು ಆಧರಿಸಿ ಇಲಾಖೆ ಅಧಿಕಾರಿಗಳು ಕ್ಲಿನಿಕ್‌ನ ಬಾಗಿಲು ಬಂದ್ ಮಾಡಿಸಿದ್ದಾರೆ.

‘ಸದ್ಯ ಕ್ಲಿನಿಕ್ ಅನ್ನು ಬಂದ್ ಮಾಡಿಸಲಾಗಿದೆ. ವೈದ್ಯರು ನಿರ್ಲಕ್ಷ್ಯ ವಹಿಸಿರುವುದು ಗೊತ್ತಾಗಿದೆ. ಹಿರಿಯ ಅಧಿಕಾರಿಗಳ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಕ್ರಮಕ್ಕೆ ಆಗ್ರಹ

‘ಕ್ಲಿನಿಕ್ ಮಾತ್ರ ಮುಚ್ಚಿಸಲಾಗಿದೆ. ಉದ್ಯಮಿ ಸಾವಿಗೆ ಕಾರಣವಾದ ವೈದ್ಯನ ವಿರುದ್ಧವೂ ಕ್ರಮ ಕೈಗೊಳ್ಳಬೇಕು’ ಎಂದು ಕುಟುಂಬಸ್ಥರು ಆಗ್ರಹಿಸಿದ್ದಾರೆ.

ಗಲಾಟೆ: ವಿದ್ಯಾರ್ಥಿಗೆ ಚಾಕು ಇರಿತ

ಬೆಂಗಳೂರು: ಗಂಗಮ್ಮನಗುಡಿ ಪೊಲೀಸ್ ಠಾಣಾ ವ್ಯಾಪ್ತಿಯ ಐಟಿಐ ಕಾಲೇಜಿನ ಪ್ರಯೋಗಾಲಯದಲ್ಲಿ ನಡೆದಿದ್ದ ಗಲಾಟೆಯಿಂದ ಆಕ್ರೋಶಗೊಂಡ ವಿದ್ಯಾರ್ಥಿಯೊಬ್ಬ ಸಹಪಾಠಿಗೆ ಚಾಕುವಿನಿಂದ ಇರಿದು ಹಲ್ಲೆ ನಡೆಸಿದ್ದಾನೆ.

ಕೆರೆಗುಡ್ಡದಹಳ್ಳಿ ನಿವಾಸಿ ಫಾಸಿ ಅಹಮದ್ ಇರಿತಕ್ಕೆ ಒಳಗಾದ ವಿದ್ಯಾರ್ಥಿ.

ಫಾಸಿ ಅಹಮದ್ ಮತ್ತು ಆರೋಪಿತರು ಐಟಿಐ ವ್ಯಾಸಂಗ ಮಾಡುತ್ತಿದ್ದರು. ಆ.28ರಂದು ಮಧ್ಯಾಹ್ನ 2 ಗಂಟೆ ವೇಳೆಯಲ್ಲಿ ಇಬ್ಬರು ಪ್ರಯೋಗಾಲಯದಲ್ಲಿ ಇದ್ದರು. ಆಗ ಆರೋಪಿತ ವಿದ್ಯಾರ್ಥಿಯೊಬ್ಬ ಅಹಮದ್‌ಗೆ ಸೇರಿದ ಲೋಹದ ತುಂಡು ತೆಗೆದುಕೊಂಡಿದ್ದ. ಈ ವಿಚಾರಕ್ಕೆ ಗಲಾಟೆ ನಡೆದಿತ್ತು.

ನಂತರ, ಆಕ್ರೋಶಗೊಂಡಿದ್ದ ಆರೋಪಿತ ವಿದ್ಯಾರ್ಥಿ, ಅಂದು ಸಂಜೆಯೇ ವಿಶ್ವೇಶ್ವರಯ್ಯ ಪಾರ್ಕ್ ಬಳಿ ಫಾಸಿ ಅಹಮದ್ ನಡೆದು ತೆರಳುತ್ತಿದ್ದಾಗ ತನ್ನ ಸ್ನೇಹಿತರ ಜತೆಗೆ ಸೇರಿಕೊಂಡು ಅಡ್ಡಗಟ್ಟಿ ಗಲಾಟೆ ನಡೆಸಿದ್ದಾನೆ. ಮಾತಿನ ಚಕಮಕಿ ನಡೆದು ತಂದಿದ್ದ ಚಾಕುವಿನಿಂದ ಅಹಮದ್‌ಗೆ ಇರಿದು ಪರಾರಿಯಾಗಿದ್ದ. ‘ಇರಿತಕ್ಕೆ ಒಳಗಾದ ವಿದ್ಯಾರ್ಥಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅಪಾಯದಿಂದ ಪಾರಾಗಿದ್ದಾರೆ. ಆರೋಪಿತ ಇಬ್ಬರು ವಿದ್ಯಾರ್ಥಿಗಳು ಬಾಲಕರಾಗಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ವಿದ್ಯಾರ್ಥಿ ಮೇಲೆ ಹರಿದ ಬಸ್

ಕುಣಿಗಲ್: ತಾಲ್ಲೂಕಿನ ಹೇರೂರು ಗ್ರಾಮದ ಬಳಿ ಸೋಮವಾರ ಬಿಜಿಎಸ್ ಶಾಲಾ ಬಸ್‌ನಿಂದ ಬಿದ್ದ ವಿದ್ಯಾರ್ಥಿ ಮೇಲೆ ಹಿಂಬದಿ ಚಕ್ರ ಹರಿದು ಮೃತಪಟ್ಟಿದ್ದಾನೆ.

ಕಟ್ಟಿಗೆಹಳ್ಳಿ ರಾಮಕೃಷ್ಣ ಪುತ್ರ ಮೋಹಿತ್ (9) ಮೃತ ವಿದ್ಯಾರ್ಥಿ. ಶಾಲೆ ಮುಗಿದ ನಂತರ ಶಾಲಾ ವಾಹನದಲ್ಲಿ ಗ್ರಾಮಕ್ಕೆ ಹಿಂತಿರುಗುವ ವೇಳೆ ಬಾಗಿಲು ಕಳಚಿ ಕೆಳಗೆ ಬಿದ್ದಿದ್ದಾನೆ. ಈ ವೇಳೆ ತಲೆ ಮೇಲೆ ಹಿಂಬದಿ ಚಕ್ರ ಹರಿದಿದೆ. ಬಸ್ ಚಾಲಕ ಪರಾರಿಯಾಗಿದ್ದಾನೆ.

ಶಾಲಾ ಆಡಳಿತ ಮಂಡಳಿ ಮತ್ತು ಚಾಲಕನ ನಿರ್ಲಕ್ಷ್ಯ ಖಂಡಿಸಿ ಪೋಷಕರು, ಗ್ರಾಮಸ್ಥರು ಶಾಲೆ ಮುಂಭಾಗ ಪ್ರತಿಭಟಿಸಿದರು.

ಫ್ಲೆಕ್ಸ್ ಕಟ್ಟುವಾಗ ವಿದ್ಯುತ್ ಸ್ಪರ್ಶ

ಮಧುಗಿರಿ (ತುಮಕೂರು): ಪಟ್ಟಣದಲ್ಲಿ ಸೋಮವಾರ ಫ್ಲೆಕ್ಸ್ ಕಟ್ಟುವಾಗ ವಿದ್ಯುತ್ ಸ್ಪರ್ಶಿಸಿ ಇಬ್ಬರು ಗಾಯಗೊಂಡಿದ್ದು, ಒಬ್ಬರ ಸ್ಥಿತಿ ಗಂಭೀರವಾಗಿದೆ.

ಸೆ. 6ರಂದು ಮಧುಗಿರಿಯಲ್ಲಿ ಕ್ಷೀರ ಭಾಗ್ಯ ಯೋಜನೆಯ ದಶಮಾನೋತ್ಸವ ಕಾರ್ಯಕ್ರಮ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ. ಪಟ್ಟಣದ ರಾಜೀವ್ ಗಾಂಧಿ ಕ್ರೀಡಾಂಗಣದ ರಸ್ತೆಯಲ್ಲಿ ಮುಖ್ಯಮಂತ್ರಿಗೆ ಸ್ವಾಗತ ಕೋರಿ ವಿದ್ಯುತ್ ಕಂಬದ ಬಳಿ ಫ್ಲೆಕ್ಸ್ ಕಟ್ಟುತ್ತಿದ್ದರು. ಈ ಸಮಯದಲ್ಲಿ ತಾಲ್ಲೂಕಿನ ಪೆಮ್ಮಯ್ಯನಪಾಳ್ಯದ ಶಂಕರ್ (40), ಪಟ್ಟಣದ ಕೆ.ಆರ್.ಬಡಾವಣೆ ನಿವಾಸಿ ಹಿಮಾಚಲಗೆ (42) ವಿದ್ಯುತ್ ತಂತಿ ತಗುಲಿದೆ.

ಕಮ್ಮನಹಳ್ಳಿಯ ಹೋಟೆಲ್‌ನಲ್ಲಿ ಟೀ ಕುಡಿಯುತ್ತಿದ್ದ ವೇಳೆ ಎದುರಾಳಿ ಗುಂಪಿನಿಂದ ಕೃತ್ಯ

ಡಿಎಂಕೆ ಮುಖಂಡನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ಡಿಎಂಕೆ ಪಕ್ಷದ ಮಧುರೈ ಮಂಡಲ ಅಧ್ಯಕ್ಷ, ರೌಡಿಶೀಟರ್ ವಿ.ಕೆ.ಗುರುಸ್ವಾಮಿ ಮೇಲೆ ಕಾರಿನಲ್ಲಿ ಬಂದ ಐವರು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ.

ಗುರುಸ್ವಾಮಿ

ಗುರುಸ್ವಾಮಿ ಅವರ ಸ್ಥಿತಿ ಗಂಭೀರವಾಗಿದ್ದು, ನಗರದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಗುರುಸ್ವಾಮಿ ಅವರು ಕರುಣಾನಿಧಿ ಅವರ ಪುತ್ರ ಅಳಗಿರಿ ಆಪ್ತ ಎನ್ನಲಾಗಿದೆ.

ಬಾಣಸವಾಡಿ ಪೊಲೀಸ್ ಠಾಣಾ ವ್ಯಾಪ್ತಿಯ ಕಮ್ಮನಹಳ್ಳಿಯ ಸುಖಸಾಗರ್ ಹೋಟೆಲ್‌ನಲ್ಲಿ ಟೀ ಕುಡಿಯುತ್ತಿದ್ದ ವೇಳೆ ತಮಿಳುನಾಡಿನಿಂದ ಕಾರಿನಲ್ಲಿ ಹಿಂಬಾಲಿಸಿಕೊಂಡು ಬಂದಿದ್ದ ಐವರು ಹೋಟೆಲ್ ಒಳಗೆ ನುಗ್ಗಿ ಲಾಂಗ್‌ಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ.

‘ಗುರುಸ್ವಾಮಿ ಅವರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಗುರುಸ್ವಾಮಿ ಹಾಗೂ ಎದುರಾಳಿ ಗುಂಪಿನ ನಡುವೆ ಕಳೆದ 35 ವರ್ಷಗಳಿಂದ ವೈಷಮ್ಯವಿತ್ತು. ಗುರುಸ್ವಾಮಿ ಅವರನ್ನು ಕೊಲೆ ಮಾಡಲು ಹಲವು ಬಾರಿ ಪ್ರಯತ್ನಿಸಲಾಗಿತ್ತು. ಸೋಮವಾರ ಹಿಂಬಾಲಿಸಿಕೊಂಡು ಬಂದು ಕೃತ್ಯ ಎಸಗಲಾಗಿದ್ದು, ಹೋಟೆಲ್‌ನ ಸಿಸಿ ಟಿವಿ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಗುರುಸ್ವಾಮಿ ಮೇಲೂ ಸಾಕಷ್ಟು ಕ್ರಿಮಿನಲ್ ಪ್ರಕರಣಗಳಿವೆ. ರೌಡಿಪಟ್ಟಿಯಲ್ಲೂ ಅವರ ಹೆಸರಿತ್ತು. ಜಾಮೀನಿನ ಮೇಲೆ ಜೈಲಿನಿಂದ ಇತ್ತೀಚೆಗೆ ಬಿಡುಗಡೆಯಾಗಿದ್ದರು. ಜೀವ ಬೆದರಿಕೆಯಿದ್ದ ಕಾರಣಕ್ಕೆ ಮಧುರೈನಲ್ಲಿ ಬಹಿರಂಗವಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ಸಾರ್ವಜನಿಕರ ಕಾರ್ಯಕ್ರಮಕ್ಕೂ ಅವರು ಹೋಗುತ್ತಿರಲಿಲ್ಲ. ಇವರ ವಿರೋಧಿ ಗುಂಪಿನ ಸದಸ್ಯರೇ ದಾಳಿ ನಡೆಸಿರುವ ಅನುಮಾನವಿದೆ. ರಿಯಲ್ ಎಸ್ಟೇಟ್ ಹಾಗೂ ರಾಜಕೀಯ ಕಾರಣಕ್ಕೆ ಎರಡು ಗುಂಪುಗಳ ನಡುವೆ ವೈಷಮ್ಯವಿತ್ತು’ ಎಂದು ಪೊಲೀಸರು ಹೇಳಿದರು.

‘ಮುರುಗನ್, ಕಾಳಿ ಮುತ್ತು, ಪಾಂಡಿ ಅವರು ಗುರುಸ್ವಾಮಿ ವಿರೋಧಿ ಗುಂಪಿನಲ್ಲಿದ್ದರು. ಹಲ್ಲೆಗೊಳಗಾದ ವ್ಯಕ್ತಿ ವಿರುದ್ಧ ತಮಿಳುನಾಡಿನ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ 20ಕ್ಕೂ ಹೆಚ್ಚು ಪ್ರಕರಣ ದಾಖಲಾಗಿವೆ. 2002ರಲ್ಲಿ ಚಿನ್ನು ಮುನುಸ್ವಾಮಿ ಎಂಬುವರ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವ ಮಾಹಿತಿ ಇದೆ. ಯಾವ ಗುಂಪಿನವರು ಹಲ್ಲೆ ನಡೆಸಿದ್ದಾರೆ ಎಂಬುದರ ಮಾಹಿತಿ ಕಲೆ ಹಾಕಲು ತಮಿಳುನಾಡಿಗೆ ಪೊಲೀಸ್ ತಂಡ ಕಳುಹಿಸಲಾಗಿದೆ. ಮಧುರೈ ಪೊಲೀಸರೂ ನಗರಕ್ಕೆ ಬಂದಿದ್ದಾರೆ’ ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಆತ್ಮಹತ್ಯೆ ಮಾಡಿಕೊಂಡವನೇ ಆರೋಪಿ

ಬೆಂಗಳೂರು: ಉದ್ಯಮಿ ಗಿರಿಜಾ ಎಂಬುವವರ ಮನೆಯಲ್ಲಿ ಇತ್ತೀಚೆಗೆ ನಡೆದಿದ್ದ ಚಿನ್ನಾಭರಣ ಹಾಗೂ ನಗದು ಕಳವು ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚುವಲ್ಲಿ ಪುಲಕೇಶಿನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ತಮ್ಮ ಮೇಲೆ ಆರೋಪ ಕೇಳಿಬಂದಿದ್ದಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದ ಕಾರು ಚಾಲಕ ಜಿಮೋನ್ ವರ್ಗೀಸ್ ಅವರೇ ಆರೋಪಿ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

‘ಠಾಣಾ ವ್ಯಾಪ್ತಿಯ ಗಿರಿಜಾ ಅವರ ಮನೆಯಲ್ಲಿ ₹ 2.50 ಕೋಟಿ ಮೊತ್ತದ ಚಿನ್ನಾಭರಣ, ನಗದು ಹಾಗೂ ವಿದೇಶಿ ಕರೆನ್ಸಿಯ ಕಳವು ನಡೆದಿತ್ತು. ಮನೆಯ ಮಾಲೀಕರು, ಕಾರು ಚಾಲಕ ಸೇರಿದಂತೆ ಕೆಲವರ ವಿರುದ್ಧ ಆಗಸ್ಟ್ 13ರಂದು ದೂರು ನೀಡಿದ್ದರು. ದೂರು ಆಧರಿಸಿ ಪೊಲೀಸರು ಚಾಲಕನಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿದ್ದರು. ಮಾಲೀಕರು ನನ್ನ ಮೇಲೆ ಸುಳ್ಳು ದೂರು ನೀಡಿ ಅವಮಾನಿಸಿದ್ದಾರೆ ಎಂದು ಮಲಯಾಳಂ ಭಾಷೆಯಲ್ಲಿ ಡೆತ್‌ನೋಟು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದ’ ಎಂದು ಎಂದು ಪೊಲೀಸರು ಹೇಳಿದರು.

‘ಕಳವು ನಡೆದಿದ್ದ ಮನೆಯಲ್ಲಿ ಪರಿಶೀಲನೆ ನಡೆಸುವಾಗ ಕೆಲವು ಸಾಕ್ಷ್ಯಗಳು ಲಭಿಸಿದ್ದವು. ಅದನ್ನು ಆಧರಿಸಿ ಚಾಲಕನನ್ನು ವಶಕ್ಕೆ ಪಡೆದುಕೊಳ್ಳುವ ಷ್ಟರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ. ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಂದು ದೂರು ದಾಖಲಿಸಿಕೊಂಡು ತನಿಖೆ ನಡೆಸಲಾಯಿತು. ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು’ ಎಂದು ತಿಳಿಸಿದರು.

‘ವಿಶೇಷ ಪೊಲೀಸ್ ತಂಡವು ಕೇರಳದಲ್ಲಿದ್ದ ಆರೋಪಿಯ ಪತ್ನಿ ಮನೆಗೆ ತೆರಳಿ ವಿಚಾರಣೆ ನಡೆಸಿದಾಗ ಪತಿಯೇ ಮನೆಗೆ ಬಂದು ಚಿನ್ನಾಭರಣ ಹಾಗೂ ನಗದು ಕೊಟ್ಟು ಹೋಗಿರುವುದಾಗಿ ಹೇಳಿಕೆ ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಸದ್ಯ ₹1.50 ಕೋಟಿ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ. ಉಳಿದ ಆಭರಣಗಳನ್ನು ಕೇರಳ ಬ್ಯಾಂಕ್‌ನಲ್ಲಿ ಅಡಮಾನ ಇಡಲಾಗಿತ್ತು. ಅದನ್ನು ವಶಕ್ಕೆ ಪಡೆದುಕೊಳ್ಳುವ ಪ್ರಕ್ರಿಯೆಗಳು ನಡೆಯುತ್ತಿವೆ. ವಿದೇಶಿ ಕರೆನ್ಸಿ ಸಹ ಪತ್ತೆಯಾಗಿದ್ದು ಅದನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೂರ್ವ ವಿಭಾಗ ಡಿಸಿಪಿ ಭೀಮಾಶಂಕರ್ ಗುಳೇದ್ ತಿಳಿಸಿದರು.

ಫೇಸ್‌ಬುಕ್ ಜಾಹೀರಾತು ನಂಬಿ ಹಣ ಕಳೆದುಕೊಂಡ ಯುವತಿ

ಬೆಂಗಳೂರು: ಪಾರ್ಟ್‌ಟೈಮ್ ಉದ್ಯೋಗಕ್ಕೆ ಸಂಬಂಧಿಸಿದಂತೆ ಫೇಸ್‌ಬುಕ್ ಖಾತೆಯಲ್ಲಿ ಬಂದಿದ್ದ ಜಾಹೀರಾತು ನಂಬಿ ಯುವತಿಯೊಬ್ಬರು ₹ 12 ಸಾವಿರ ಕಳೆದುಕೊಂಡಿದ್ದು, ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಫೇಸ್‌ಬುಕ್‌ನಲ್ಲಿದ್ದ ಮೊಬೈಲ್ ಸಂಖ್ಯೆಗೆ ಯುವತಿ ಕರೆ ಮಾಡಿದಾಗ ವ್ಯಕ್ತಿಯೊಬ್ಬ ಹಿಂದಿ ಭಾಷೆಯಲ್ಲಿ ಮಾತನಾಡಿದ್ದ. ಉದ್ಯೋಗ ಬೇಕಿದ್ದರೆ ಸ್ಕ್ಯಾನರ್ ಮೂಲಕ ₹ 750 ಮುಂಗಡ ಹಣ, ಆಧಾರ್ ಕಾರ್ಡ್ ಹಾಗೂ ಪಾಸ್‌ಪೋರ್ಟ್ ಅಳತೆ ಫೋಟೊ ನೀಡುವಂತೆ ಸೂಚಿಸಿದ್ದ. ಅದನ್ನೇ ನಂಬಿದ್ದ ಯುವತಿ ಆತ ಹೇಳಿದಂತೆ ಮಾಡಿದ್ದರು. ಬಳಿಕ ಹಂತ ಹಂತವಾಗಿ ಒಟ್ಟು ₹ 12,949 ಅನ್ನು ಗೂಗಲ್ ಪೇ ಮೂಲಕ ಪಡೆದುಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ಕೆಲಸ ಕೊಡದಿದ್ದಾಗ ಹಣ ವಾಪಸ್ ನೀಡುವಂತೆ ಯುವತಿ ಕೇಳಿಕೊಂಡಿದ್ದರು. ಆದರೆ, ಹಣ ನೀಡದೆ ವಂಚಿಸಲಾಗಿದೆ. ಆರೋಪಿ ಪತ್ತೆಗೆ ತನಿಖೆ ನಡೆಯುತ್ತಿದೆ’ ಎಂದು ಪೊಲೀಸರು ಹೇಳಿದರು.

ರಾಜ್ಯಪಾಲರ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ

ಬೆಂಗಳೂರು: ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರ ಹೆಸರು ಹಾಗೂ ಫೋಟೊ ಬಳಸಿಕೊಂಡು ನಕಲಿ ಫೇಸ್‌ಬುಕ್ ಖಾತೆ ಸೃಷ್ಟಿಸಲಾಗಿದ್ದು ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯಪಾಲರ ಹೆಸರು ದುರುಪಯೋಗ ಮಾಡಿಕೊಳ್ಳಲಾಗಿದೆ ಎಂದು ಆರೋಪಿಸಿ ವಿಶೇಷ ಕಾರ್ಯದರ್ಶಿ ಆಗಸ್ಟ್ 31ರಂದು ದೂರು ನೀಡಿದ್ದಾರೆ. ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾದಕ ವಸ್ತು: 7 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಓಂ ಪ್ರಕಾಶ್

ಪ್ರೇಮ್‌ರಾಮ್

ನೇಮಿಚಂದ್

ಮಲ್ಲೇಶ್

ಬೆಂಗಳೂರು: ಎರಡು ಪತ್ಯೇಕ ಮಾದಕ ವಸ್ತುಗಳ ಪೂರೈಕೆ ಪ್ರಕರಣದಲ್ಲಿ ಯಲಹಂಕ ಹಾಗೂ ಕೊಡಿಗೇಹಳ್ಳಿ ಪೊಲೀಸರು ಏಳು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ಒಡಿಶಾದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಒಡಿಶಾದ ಮೂವರು ಆರೋಪಿಗಳನ್ನು ಯಲಹಂಕ ಉಪನಗರ ಪೊಲೀಸರು ಬಂಧಿಸಿದ್ದಾರೆ.

ಒಡಿಶಾದ ಸುಧೀರ್ ರಾಣಾ(32), ಸಂತೋಷ್ ರಾಣಾ(28) ಮತ್ತು ಕ್ಯಾಬನ್ ಬಾಗ್(38) ಬಂಧಿತ ಆರೋಪಿಗಳು.

ಆರೋಪಿಗಳಿಂದ ₹ 11 ಲಕ್ಷ ಮೌಲ್ಯದ 21.14 ಕೆ.ಜಿ ಗಾಂಜಾ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಒಡಿಶಾದಿಂದ ಭಾರಿ ಪ್ರಮಾಣದಲ್ಲಿ ಮಾದಕ ವಸ್ತು ತಂದು ಬೆಂಗಳೂರಿನ ಯುವಕರು ಹಾಗೂ ವಿದ್ಯಾರ್ಥಿಗಳಿಗೆ ಪೂರೈಕೆ ಮಾಡುತ್ತಿದ್ದಾರೆ ಎಂಬ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಈ ಮಾಹಿತಿ ಆಧರಿಸಿ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ಆನ್‌ಲೈನ್ ವ್ಯವಹಾರ: ಆನ್‌ಲೈನ್ ಮೂಲಕ ಹಣಕಾಸು ವ್ಯವಹಾರ ನಡೆಸಿ ಲೋಕೇಷನ್ ಕಳುಹಿಸಿ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದ ರಾಜಸ್ಥಾನದ ಮೂವರು ಸೇರಿದಂತೆ ನಾಲ್ವರು ಆರೋಪಿಗಳನ್ನು ಕೊಡಿಗೇಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ನೇಮಿಚಂದ್(40), ಓಂಪ್ರಕಾಶ್(35), ಪ್ರೇಮರಾಜ್(40) ಮತ್ತು ಬೆಂಗಳೂರಿನ ಥಣಿಸಂದ್ರ ನಿವಾಸಿ ಮಲ್ಲೇಶ್(35) ಬಂಧಿತರು.

ಆರೋಪಿಗಳಿಂದ ₹ 3 ಲಕ್ಷ ಮೌಲ್ಯದ 61 ಗ್ರಾಂ ತೂಕದ ಹೆರಾಯಿನ್, ಮೂರು ಮೊಬೈಲ್, ಒಂದು ಕಾರು ಜಪ್ತಿ ಮಾಡಿಕೊಳ್ಳಲಾಗಿದೆ.

ಕಾಲೇಜು ವಿದ್ಯಾರ್ಥಿಗಳು, ಐ.ಟಿ ಕಂಪನಿಯ ಉದ್ಯೋಗಿಗಳಿಗೆ ಆರೋಪಿಗಳು ಮಾದಕ ವಸ್ತು ಪೂರೈಸುತ್ತಿದ್ದರು. ಕೆಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ರಾಜಸ್ಥಾನದ ಆರೋಪಿಗಳು ನಗರದಲ್ಲಿ ಸಣ್ಣ-ಪುಟ್ಟ ಕೆಲಸ ಮಾಡಿಕೊಂಡಿದ್ದರು. ಇನ್ನು ಮಲ್ಲೇಶ್ ಕೂಡ ಆರೋಪಿಗಳಿಗೆ ಪರಿಚಯಸ್ಥನಾಗಿದ್ದ. ರಾಜಸ್ಥಾನದಲ್ಲಿ ಕೆಲವು ವ್ಯಕ್ತಿಗಳನ್ನು ಪರಿಚಯಸಿಕೊಂಡು, ಅಲ್ಲಿಂದ ಮಾದಕ ವಸ್ತುಗಳನ್ನು ನಗರಕ್ಕೆ ತರಿಸಿಕೊಳ್ಳುತ್ತಿದ್ದರು ಎಂದು ಪೊಲೀಸರು ಹೇಳಿದರು.

‘ಗ್ರಾಹಕರಿಂದ ಆನ್‌ಲೈನ್ ಮೂಲಕ ಮೊದಲೇ ಹಣವನ್ನು ಪಡೆದುಕೊಳ್ಳುತ್ತಿದ್ದರು. ಅದಾದ ಮೇಲೆ ನಿರ್ಜನ ಪ್ರದೇಶದಲ್ಲಿ ಮಾದಕ ವಸ್ತುವಿನ ಪೊಟ್ಟಣ ಇರಿಸಿ, ಲೋಕೇಷನ್ ಕಳಿಸುತ್ತಿದ್ದರು. ಆ ಸ್ಥಳಕ್ಕೆ ಗ್ರಾಹಕರು ಬಂದು ಮಾದಕ ವಸ್ತು ಕೊಂಡೊಯ್ಯುತ್ತಿದ್ದರು’ ಎಂದು ತಿಳಿಸಿದರು.

ಬಿಹಾರದ ಡ್ರಗ್ಸ್ ಪೆಡ್ಲರ್ ಬಂಧನ

ಬೆಂಗಳೂರು: ನ್ಯಾಯಾಲಯದಿಂದ ಜಾಮೀನು ಪಡೆದು ಹೊರಬಂದ ಮೇಲೂ ತನ್ನ ಸಹಚರರ ಮೂಲಕ ಮಾದಕ ವಸ್ತುಗಳ ಪೂರೈಕೆ ದಂಧೆಯಲ್ಲಿ ತೊಡಗಿದ್ದ, ಬಿಹಾರದ ಪೆಡ್ಲರ್ ಅಖಿಲೇಶ್ ಕುಮಾರ್‌ನನ್ನು ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಎಎನ್‌ಡ್ಬ್ಲ್ಯು ಅಧಿಕಾರಿಗಳು ಬಂಧಿಸಿದ್ದಾರೆ.

ಅಖಿಲೇಶ್

ಈತನ ವಿರುದ್ಧ ವೈಟ್‌ಫೀಲ್ಡ್, ಆಡುಗೋಡಿ, ಕಾಟನ್‌ಪೇಟೆ ಮತ್ತು ಚಾಮರಾಜಪೇಟೆ ಪೊಲೀಸ್ ಠಾಣೆಗಳಲ್ಲಿ ಒಟ್ಟು 6 ಪ್ರಕರಣಗಳು ದಾಖಲಾಗಿದ್ದವು.

ಆರೋಪಿ ಜಾಮೀನು ಪಡೆದು ಇತ್ತೀಚೆಗಷ್ಟೇ ಜೈಲಿನಿಂದ ಬಿಡುಗಡೆಯಾಗಿದ್ದ. ನಂತರ, ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ತನ್ನ ಸಹಚರರ ಮೂಲಕ ಮಾದಕ ವಸ್ತುಗಳ ಪೂರೈಕೆಯಲ್ಲಿ ತೊಡಗಿದ್ದ. 2018ರಿಂದಲೂ ಆರೋಪಿ ಈ ದಂಧೆಯಲ್ಲಿ ತೊಡಗಿದ್ದ ಎಂದು ಮೂಲಗಳು ತಿಳಿಸಿವೆ.

ಕಾರು ಡಿಕ್ಕಿ: ತುಂಡಾದ ಬೈಕ್ ಸವಾರರ ಕಾಲು

ಚಿಂತಾಮಣಿ: ಚಿಂತಾಮಣಿ-ಮದನಪಲ್ಲಿ ರಸ್ತೆಯ ಐಮರೆಡ್ಡಿಹಳ್ಳಿ ಗೇಟ್ ಬಳಿ ಭಾನುವಾರ ಸಂಜೆ ಬೈಕ್‌ಗೆ ಕಾರು ಡಿಕ್ಕಿ ಹೊಡೆದು ಬೈಕ್ ಸವಾರರಿಬ್ಬರ ಕಾಲು ತುಂಡಾಗಿವೆ.

ಗಾಯಗೊಂಡಿರುವ ಆಂಧ್ರಪ್ರದೇಶದ ಮದನಪಲ್ಲಿ ಸಮೀಪದ ಚಿತ್ತಪರ್ತಿ ಗ್ರಾಮದ ಸೋಮಶೇಖರ್ ಮತ್ತು ಶ್ರೀಕಾಂತ್ ಅವರನ್ನು ಬೆಂಗಳೂರಿನ ಸತ್ಯಸಾಯಿ ಆಸ್ಪತ್ರೆಗೆ ರವಾನಿಸಲಾಗಿದೆ.

ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂಬಂಧಿಕರ ಆರೋಗ್ಯ ವಿಚಾರಿಸಲು ಗ್ರಾಮದಿಂದ ಬೆಂಗಳೂರಿಗೆ ತೆರಳುತ್ತಿದ್ದಾಗ ಮದನಪಲ್ಲಿ ಕಡೆಯಿಂದ ಬೆಂಗಳೂರಿನ ಕಡೆಗೆ ಬರುತ್ತಿದ್ದ ಕಾರು ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಚಾಲಕ ಕಾರು ನಿಲ್ಲಿಸದೆ ಪರಾರಿಯಾಗಿದ್ದಾನೆ.

ಪೌಷ್ಟಿಕ ಆಹಾರ ಸೇವಿಸಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
(ಕರ್ನಾಟಕ ಸರ್ಕಾರ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಆಡಳಿತ ಕಛೇರಿ, ರಾ.ಹೆ-75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ-563133,
ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ-ಮೇ:eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ:- 08152-200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/1580/2023-24/ದಿನಾಂಕ:01-09-2023

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:01/2023-24/ದಿನಾಂಕ:01-09-2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ 01 ಕಾಮಗಾರಿಗೆ ಕೆ.ಡಬ್ಲ್ಯೂ-2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮವಳಿ ಅನ್ವಯ 3ನೇ ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿಗೆದಾರರಿಂದ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 50.00 ಲಕ್ಷಗಳಾಗಿದ್ದು, ನಿಗಧಿತ ಇ.ಎಂ.ಡಿ ಮೊತ್ತವನ್ನು ಇ-ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ-ಪ್ರಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ ಮೂಲಕ ದಿನಾಂಕ: www.eproc.karnataka.gov.in ಮೂಲಕ ದಿನಾಂಕ:04/09/2023 ರಿಂದ 14/09/2023 ರವರೆಗೆ ಪಡೆಯಬಹುದು (Download), ಆರ್ಥಿಕ ಬಿಡ್ ತೆರೆಯುವ ದಿನಾಂಕ:15/09/2023ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳನ್ನು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ರಾಮನಗರ ವಿಭಾಗ, ಸಂಚಾರ ಶಾಖೆ,
ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ-562159.

ಸಂಖ್ಯೆ:ಕರಾಸಾ.ರಾನವಿ.ಸಂ.ವಾ/1440/1441/1442/23-24 ದಿನಾಂಕ: 30-08-2023

“ಇ-ಟೆಂಡರ್ ಪ್ರಕಟಣೆ ಸಂಖ್ಯೆ. 07 & ಸಂಧಾನ ಪ್ರಕಟಣೆ ಸಂಖ್ಯೆ. 08 & 09/2023-24”

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ **ಚನ್ನಪಟ್ಟಣ, ಕೋಡಂಬಳ್ಳಿ, ಆನೇಕಲ್, ಕೋಡಿಹಳ್ಳಿ, ಕನಕಪುರ ಹಾಗೂ ಮಾಗಡಿ** ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ / ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಮತ್ತು ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಗ್ಲೋಸೈನ್ / ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ದಿನಾಂಕ: **21-09-2023 ರಂದು 15.00 ಗಂಟೆಗೆ ವಿಭಾಗೀಯ ಕಛೇರಿಯಲ್ಲಿ** ಅರ್ಜಿದಾರರು / ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು ದಿನಾಂಕ: **31-08-2023 ರಿಂದ ದಿನಾಂಕ: 20-09-2023 ರ 15.00 ಗಂಟೆಗಳವರೆಗೆ ಪಡೆಯಬಹುದು** ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ **ಕನಕಪುರ, ಚನ್ನಪಟ್ಟಣ, ಮಾಗಡಿ ಹಾಗೂ ಆನೇಕಲ್** ಬಸ್ ಘಟಕ / ನಿಲ್ದಾಣಗಳಲ್ಲಿ ಖಾಲಿಯಿರುವ / ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ / ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಇ-ಟೆಂಡರ್ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ದಿನಾಂಕ: **27-09-2023 ರಂದು 11.00 ಗಂಟೆಗೆ ಇ-ಟೆಂಡರ್ ನಡೆಸಲು / ತೆರೆಯಲು ಸಮಯವನ್ನು ನಿಗದಿಪಡಿಸಲಾಗಿರುತ್ತದೆ.** ದಿನಾಂಕ: **04-09-2023 ರಿಂದ** ಇ-ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://www.kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ: **25-09-2023 ರಂದು 17.00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ.** ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ. ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ - 562159** ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: **7760990852.**

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ರಾಮನಗರ ವಿಭಾಗ, ರಾಮನಗರ

ವಾಸಾಸಂಇ/ವಾ.ಪ್ರ/1150/ಅಡ್ವರ್ಟೋರ್/2023-24

ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿಮಿಟೆಡ್
chamundeswari
CIN: U15435KA1970PLC001974
ನೋಂದಾಯಿತ ಕಚೇರಿ: ನಂ. 88/5, ರಿಚ್‌ಮಂಡ್ ರೋಡ್, ಬೆಂಗಳೂರು - 560 025
Phone no: 080 - 2500 2500 Fax: 080 – 2500 2510
Email: complianceofficer@chamundisugars.com Web: www.chamundeswarisugars.in

ಷೇರುದಾರರಿಗೆ ಸೂಚನೆ

ಕಂಪನಿಯ ಸದಸ್ಯರು **ಐವತ್ತನೇಯ ವಾರ್ಷಿಕ ಸಾಮಾನ್ಯ ಸಭೆ** (AGM) ಗುರುವಾರ, 28 ಸೆಪ್ಟೆಂಬರ್, 2023 ರಂದು ಬೆಳಗೆ 11.00 A.M IST ಗೆ, ವಿಡಿಯೋ ಕಾನ್ಫರೆನ್ಸಿಂಗ್ ("VC") / ಇತರೆ ಆಡಿಯೋ-ವಿಷುಯಲ್ ಮೀನ್ಸ್ ("OAVM") ಮೂಲಕ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಕಂಪನಿಗಳ ಕಾಯ್ದೆ 2013 ರ ಅನ್ವಯವಾಗುವ ಎಲ್ಲಾ ನಿಯಮಗಳು ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅನುಸಾರವಾಗಿ ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 10/2022, ದಿನಾಂಕ 28.12.2022 ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 11/2022 ದಿನಾಂಕ 28.12.2022 ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ("MCA") ಹೊರಡಿಸಿದ ಎಲ್ಲಾ ಇತರ ಸುತ್ತೋಲೆಗಳು AGM ಗೆ ಕರೆ ಮಾಡುವ ಸೂಚನೆಯಲ್ಲಿ ವ್ಯವಹಾರವನ್ನು ವಹಿವಾಟು ಮಾಡಲು, ಸದಸ್ಯರು VC/OAVM ಮೂಲಕ AGM ಗೆ ಹಾಜರಾಗಬಹುದು.

ಅನ್ವಯವಾಗುವ ಸುತ್ತೋಲೆಯ ಪ್ರಕಾರ ಆರ್ಥಿಕ ವರ್ಷ 2022-23 ಕ್ಕೆ ಸಂಬಂಧ ಪಟ್ಟಂತೆ ಕ್ರೋಡೀಕೃತ ಹಾಗೂ ಪ್ರತ್ಯೇಕ ಆರ್ಥಿಕ ತಖ್ತೆಗಳು ಆಡಳಿತ ಮಂಡಳಿಯ ವರದಿ ಮತ್ತಿತರ ದಾಖಲೆಗಳನ್ನು 01ನೇ ಸೆಪ್ಟೆಂಬರ್, 2023ರ ದಿನಾಂಕದಂದು ಸದಸ್ಯರುಗಳ ನೋಂದಣಿ ಪುಸ್ತಕದಲ್ಲಿರುವ ಸದಸ್ಯರುಗಳಿಗೆ, ಹಾಗೂ ಇ-ಮೇಲ್ ವಿಳಾಸವನ್ನು ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್ರೊಂದಿಗೆ ನೋಂದಾಯಿಸಿಕೊಂಡಿರುವ ಷೇರುದಾರರಿಗೆ, ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವನ್ನು ಕಳುಹಿಸಲಾಗಿದೆ. ಈ ಮೇಲ್ಕಂಡ ದಾಖಲಾತಿಗಳು ಕಂಪನಿಯ ಅಂತರ್ಜಾಲ ವಿಳಾಸ www.chamundeswarisugars.in ನಲ್ಲೂ ಲಭ್ಯವಿರುತ್ತದೆ.

ವಿದ್ಯುನ್ಮಾನ ಮತಚಲಾವಣೆ (e-voting) ಹಾಗೂ ವಾರ್ಷಿಕ ಮಹಾಸಭೆಯಲ್ಲಿ ವಿದ್ಯುನ್ಮಾನ ಮತಚಲಾವಣೆ (e-voting) ಬಗ್ಗೆ ಮಾರ್ಗಸೂಚಿ.

ವಾರ್ಷಿಕ ಮಹಾಸಭೆಯಲ್ಲಿ ಅಂಗೀಕರಿಸಬೇಕಾದ ವಿಷಯಗಳ ಮೇಲೆ ವಿದ್ಯುನ್ಮಾನದ ಮೂಲಕ ಮತಚಲಾಯಿಸುವ (e-voting) ಅವಕಾಶವನ್ನು ಕಲ್ಪಿಸಲಾಗಿದ್ದು ಸದಸ್ಯರುಗಳು ಎನ್.ಎಸ್.ಡಿ.ಎಲ್. ನ ವಿದ್ಯುನ್ಮಾನ ಮತಚಲಾವಣೆ (ರಿಮೋಟ್ ಇ-ಮತಚಲಾವಣೆ) ವ್ಯವಸ್ಥೆಯನ್ನು ಈ ಕೆಳಗೆ ನಮೂದಿಸಿರುವ ದಿನಾಂಕಗಳಿಂದ ಚಲಾಯಿಸಬಹುದಾಗಿರುತ್ತದೆ.

ಇದಲ್ಲದೆ ದೂರ ಸಂವೇದಿ ಮುಖಾಂತರ ಮತಚಲಾಯಿಸದೇ ಇರುವ ಸದಸ್ಯರು ವಾರ್ಷಿಕ ಮಹಾಸಭೆಯ ವೇಳೆಯಲ್ಲಿ (ರಿಮೋಟ್ ಇ-ಮತಚಲಾವಣೆ) http://www.evoting.nsdl.com ಮೂಲಕ ಮತ ಚಲಾಯಿಸಬಹುದಾಗಿರುತ್ತದೆ.

ಎನ್.ಎಸ್.ಡಿ.ಎಲ್. ಇವರನ್ನು ವಿದ್ಯುನ್ಮಾನ ಮತಚಲಾವಣೆಗಾಗಿ ನೇಮಿಸಲಾಗಿದೆ.

ಮತಚಲಾವಣೆ ಕುರಿತಂತೆ ಮಾಹಿತಿ ಮತ್ತು ಮಾರ್ಗಸೂಚಿಗಳನ್ನು ಇ-ಅಂಚೆಯ ಮೂಲಕ ಈಗಾಗಲೇ ಕಳುಹಿಸಿದ್ದು ಇದರಲ್ಲಿ ಯೂಸರ್ ಐಡಿ ಮತ್ತು ಪಾಸ್ವರ್ಡ್ ಅನ್ನು ನೀಡಲಾಗಿದೆ. ಸಂವೇದಿ / ಶ್ರಾವ್ಯ ಮತ್ತು ದೃಶ್ಯ ಮಾಧ್ಯಮಗಳ ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಇದೇ ದಾಖಲೆಗಳನ್ನು ಉಪಯೋಗಿಸತಕ್ಕದ್ದು.

ಇ-ಮೇಲ್ ವಿಳಾಸವನ್ನು ನೀಡದೆ ಇರುವ ದೂರ ಸಂಪರ್ಕ ಇ-ಮತಚಲಾವಣೆ, (e-voting) ಡಿ-ಮ್ಯಾಟ್ ರೂಪದಲ್ಲಿ, ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರುಗಳಿಗೆ ವಿದ್ಯುನ್ಮಾನ ಮತಚಲಾವಣೆ ಮೂಲಕ, ಮಹಾಸಭೆಯ ಸಮಯದಲ್ಲಿ ಮತ ಚಲಾವಣೆ ಮಾಡುವ ಬಗ್ಗೆ ಮಹಾಸಭೆಯ ತಿಳುವಳಿಕೆ ಪತ್ರದಲ್ಲಿ ವಿವರಗಳನ್ನು ನೀಡಲಾಗಿದ್ದು ಇದೇ ವಿವರಗಳನ್ನು ಅಂತರ್ಜಾಲ ವಿಳಾಸ www.chamundeswarisugars.in ಹಾಗೂ ಎನ್.ಎಸ್.ಡಿ.ಎಲ್. ವಿಳಾಸ http://www.evoting.nsdl.com ರಲ್ಲಿ ಪಡೆಯಬಹುದಾಗಿರುತ್ತದೆ.

ಇ- ವಿದ್ಯುನ್ಮಾನ ಮತಚಲಾವಣೆ (e-voting) ವ್ಯವಸ್ಥೆಯು ಈ ಕೆಳಕಂಡಂತೆ ಇರುತ್ತದೆ.

ವಿದ್ಯುನ್ಮಾನ ಮತಚಲಾವಣೆಯ ಪ್ರಾರಂಭ	ಸೋಮವಾರ ದಿನಾಂಕ 25.09.2023 ಬೆಳಗ್ಗೆ 9:00 ಗಂಟೆಯಿಂದ
ವಿದ್ಯುನ್ಮಾನ ಮತಚಲಾವಣೆಯು ಅಂತ್ಯಗೊಳ್ಳುವ ಸಮಯ:	ಬುಧವಾರ ದಿನಾಂಕ 27.09.2023 ಸಂಜೆ 5:00 ಗಂಟೆಯವರೆಗೆ

ಈ ಮೇಲ್ಕಂಡ ಮತಚಲಾವಣೆ ಮತ ದಿನಾಂಕ ಹಾಗೂ ಸಮಯಗಳ ನಂತರ ವಿದ್ಯುನ್ಮಾನ ಮತಚಲಾವಣೆ (e-voting) ಮಾಡಲು ಅವಕಾಶವಿರುವುದಿಲ್ಲ ಹಾಗೂ ಎನ್.ಎಸ್.ಡಿ.ಎಲ್. ಈ ವ್ಯವಸ್ಥೆಯನ್ನು ಆ ಸಮಯದ ನಂತರ ಸ್ಥಗಿತಗೊಳಿಸುತ್ತದೆ.

ದಿನಾಂಕ 22.09.2023 ರ ಶುಕ್ರವಾರ ಒಳಗೆ ಸದಸ್ಯರುಗಳ ನೊಂದಣಿ ಪುಸ್ತಕ ಅಥವಾ ಫಲಾನುಭವಿಯಾಗಿರುವ ವಾರಸುದಾರರ ಪುಸ್ತಕದಲ್ಲಿ ನೊಂದಣಿಯಾಗಿರುವವರು ಮತ್ತು ಸಂವೇದಿ ವಿದ್ಯುನ್ಮಾನ ಮತಚಲಾವಣೆ, ವಾರ್ಷಿಕ ಮಹಾಸಭೆಯಲ್ಲಿದ್ದಾಗ http://www.evoting.nsdl.com ಮುಖಾಂತರ ಮತಚಲಾಯಿಸಬಹುದಾಗಿ ರುತ್ತದೆ.

ಇ-ಮೇಲ್ ವಿಳಾಸ ನೊಂದಣಿ/ ಅಪ್ಡೇಟ್ ಮಾಡುವ ವಿಧಾನ

1. ಡಿ-ಮ್ಯಾಟ್ ರೂಪದಲ್ಲಿ ಷೇರನ್ನು ಹೊಂದಿರುವ ಸದಸ್ಯರು ತಮ್ಮ ಇ-ಮೇಲ್ ವಿಳಾಸವನ್ನು ನೊಂದಣಿಮಾಡದೆ ಅಥವಾ ಅಪ್ಡೇಟ್ ಮಾಡಿಸದೆ ಇದ್ದ ಪಕ್ಷದಲ್ಲಿ ಕೊಂಡಿ (ಲಿಂಕ್) https://www/integratedindia.in/email updation.aspx ಮೂಲಕ ಮಾಡಬಹುದಾಗಿದೆ.
2. ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವನ್ನು ರವಾನಿಸಿದ ನಂತರ ಷೇರುದಾರರಾಗಿದ್ದು ಕಟ್-ಆಫ್ ದಿನಾಂಕ ದೊಳಗೆ ಷೇರನ್ನು ಹೊಂದಿದ್ದ ಪಕ್ಷದಲ್ಲಿ ಯುಸರ್ ಐಡಿ ಪಾಸ್ವರ್ಡ್ ಅನ್ನು ಮಹಾಸಭೆಯ ತಿಳುವಳಿಕೆ ಪತ್ರದಲ್ಲಿ ತಿಳಿಸಿರುವಂತೆ ಕಂಪನಿಯ ಅಂತರ್ಜಾಲ ವಿಳಾಸ ಹಾಗೂ NSDL ವಿಳಾಸ http://www.evoting.nsdl.com ದಲ್ಲಿ ಪಡೆಯಬಹುದಾಗಿದೆ.
3. ಅಂತಹ ಸದಸ್ಯರು ಮಹಾಸಭೆಯ ತಿಳುವಳಿಕೆ ಪತ್ರದಲ್ಲಿ ನೀಡಿರುವ ವಿದ್ಯುನ್ಮಾನ ಮತಚಲಾವಣೆ ಮಾರ್ಗಸೂಚಿಗಳನ್ವಯ ಮತ ಚಲಾಯಿಸಬಹುದು.

ಸಂವೇದಿ ವಿದ್ಯುನ್ಮಾನಗಳ ಮೂಲಕ ಮತಚಲಾಯಿಸಿರುವ ಸದಸ್ಯ(ರು) ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಬಹುದು. ಆದರೆ ಮತ್ತೆ ಮಹಾಸಭೆಯಲ್ಲಿ ಮತ ಚಲಾಯಿಸಲು ಅವಕಾಶವಿರುವುದಿಲ್ಲ.

ವಿದ್ಯುನ್ಮಾನ ಮತ ಚಲಾವಣೆಯ (e-voting) ವಿಷಯದಲ್ಲಿ ಅನುಮಾನಗಳೇನಾದರು ಇದ್ದರೆ ಸದಸ್ಯರುಗಳು, ಪದೇ ಪದೇ ಕೇಳಲಾಗುವ ಪ್ರಶ್ನೆಗಳ ವಿಭಾಗ - http://www.evoting.nsdl.com ವಿದ್ಯುನ್ಮಾನ ಮತಚಲಾವಣೆ (e-voting) ಇದರ ಸಹಾಯ ವಿಭಾಗದಿಂದ ಅಥವಾ helpdesk.evoting@nsdl.in ನಿಂದ ಪಡೆಯಬಹುದು.

ವಿದ್ಯುನ್ಮಾನ ವಿಧಾನದಿಂದ ಮತಚಲಾಯಿಸುವ ಬಗ್ಗೆ ಏನಾದರು ಕುಂದು ಕೊರತೆ ಅಥವಾ ಪ್ರಶ್ನೆಗಳಿದ್ದರೆ ಅಂತಹ ಸದಸ್ಯರು **M/s Integrated Registry Management Services Private Limited** ಇವರನ್ನು ಇ-ಮೇಲ್ ಐಡಿ giri@integratedindia.in ಮೂಲಕ ಸಂಪರ್ಕಿಸಬಹುದು.

ಮಂಡಳಿಯ ಆದೇಶದ ಮೇರೆಗೆ
ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿ. ಪರವಾಗಿ
ಸಹಿ/-
ಪ್ರಿಯಾ ಅರ್ವತ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 05ನೇ ಸೆಪ್ಟೆಂಬರ್ 2023

Srila Prabhupada's ISKCON BANGALORE
ಅಂತಾರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಘ
HUMBLY DEDICATED TO SRILA PRABHUPADA FOUNDER-ACHARYA OF ISKCON

ಶ್ರೀ ಕೃಷ್ಣ ಜನ್ಮಾಷ್ಟಮಿ
ಸೆಪ್ಟೆಂಬರ್ 6 ಮತ್ತು 7 - 2023

ದರ್ಶನ ಸಮಯ
ಸೆಪ್ಟೆಂಬರ್ 6, 2023 | ಬೆಳಗ್ಗೆ 8 ರಿಂದ ರಾತ್ರಿ 10
ಸೆಪ್ಟೆಂಬರ್ 7, 2023 | ಬೆಳಗ್ಗೆ 8 ರಿಂದ ಮಧ್ಯರಾತ್ರಿ 12

ಎರಡೂ ಕಡೆ

ಹರೇ ಕೃಷ್ಣ ಗಿರಿ, ರಾಜಾಜಿನಗರ

ವೈಕುಂಠ ಗಿರಿ, ಕನಕಪುರ ರಸ್ತೆ

ಕಾರ್ಯಕ್ರಮದ ಪ್ರಾಯೋಜಕರು
ಕೆನರಾ ಬ್ಯಾಂಕ್ Canara Bank

ಜಾಹೀರಾತು

ದುರ್ಗದ ರಾಜೇಗೌಡರ ! ಅಮೃತ ಕಳಸವನ್ನೇ ಕಿತ್ತುಕೊಂಡು ಹೋದ ದೇಶವಂತ

ನನ್ನ ಪ್ರೀತಿಯ ಪುತ್ರ ಮತ್ತು ಜೀವವೇ ಆಗಿದ್ದ ದೇಶವಂತಗೌಡ ಪಂಚಭೂತಗಳಲ್ಲಿ ಲೀನವಾಗಿ ಇಂದಿಗೆ ಒಂದು ವರ್ಷ ಕಳೆದಿದೆ. ಸಾವು ಭೀಕರ, ಭಯಂಕರವಾದ ಸಿಡಿಲ ಸ್ಫೋಟ. ದೇಶವಂತಗೌಡನ ಘೋರ ಸಾವಿನ ಹೊಡೆತದಿಂದ ನಾನಿನ್ನು ಸುಧಾರಿಸಿಕೊಂಡಿಲ್ಲ. ಅಪಾರ ಸ್ನೇಹಿತರು ಮತ್ತು ಬಂಧುಗಳನ್ನು ಹೊಂದಿದ್ದ ದೇಶವಂತಗೌಡ ಇಂಗ್ಲೀಷ್ ಎಂ.ಎ ಓದುತ್ತಿದ್ದಾಗ; ಹಲವಾರು ಹುಡುಗಿಯರು ಅವನ ಹಿಂದೆ ಬಿದ್ದಿದ್ದರು. ಆದರೆ ಯಾರನ್ನೂ ದೇಶವಂತಗೌಡ ಲಗ್ನ ಮಾಡಿಕೊಳ್ಳಲಿಲ್ಲ. ಸಾಕಷ್ಟು ಸಂಬಂಧಿಗಳು, ಆತ್ಮೀಯರು, ಸ್ನೇಹಿತರು ಇದ್ದರೂ ದೇಶವಂತಗೌಡನ ಲಗ್ನದ ಬಗ್ಗೆ ಯಾರೂ ಸಹಕಾರ ನೀಡಲಿಲ್ಲ. ಲಗ್ನವಾಗಲಿಲ್ಲ ಎಂಬ ಬೇಗುಧಿಯಲ್ಲಿ ದೇಶವಂತಗೌಡ ಸಾಕಷ್ಟು ತಲೆಕೆಡಿಸಿಕೊಂಡದ್ದು ಸತ್ಯ. ಒಂದಲ್ಲ ಒಂದು ಕಾರಣದಿಂದ ಆತನ ಲಗ್ನ ಮುಂದೆ ಮುಂದೆ ಸಾಗುತ್ತಿತ್ತು. ಸಂವೇಧನಾಶೀಲನಾಗಿದ್ದ ದೇಶವಂತ; ಪ್ರತಿದಿನ ಬೀದಿ ನಾಯಿಗಳಿಗೆ ಬಿಸ್ಕತ್ ಹಾಕುತ್ತಿದ್ದನು ಹಾಗೂ ಗಾಯಗೊಂಡ ನಾಯಿಗಳಿಗೆ ಚಿಕಿತ್ಸೆ ಕೊಡಿಸುತ್ತಿದ್ದನು. ಕೋಲೆಬಸವ, ಕೋತಿ ಕುಣಿಸುವವರು ಮತ್ತು ಬುಡುಬುಡಿಕೆಯವರು ಬಂದಾಗ ಸೌಜನ್ಯದಿಂದ ಕಂಡು ಹಣ ಕೊಡಿಸುತ್ತಿದ್ದನು. ಗುಜರಾತಿನ ಅರಬ್ಬಿ ಸಮುದ್ರದ ದಂಡೆಯ ಸೋಮನಾಥ, ಮಧ್ಯಪ್ರದೇಶದ ಉಜ್ಜನಿಯ ಮಹಾಕಾಲ, ತಿರುವನಂತಪುರದ ಅನಂತಪದ್ಮನಾಭನನ್ನು ಪೂಜಿಸಿ ಬಂದೆವು. ಬೆಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್ ಸಾಹಿತ್ಯದ ಎಂ.ಎ ಪದವೀಧರ, ಕ್ರಿಕೆಟ್ ಆಟಗಾರ ನನ್ನ ಪ್ರೀತಿಯ ಮಗ ದೇಶವಂತಗೌಡ ವಿಧಿಯ ಆಟಕ್ಕೆ ಸಿಕ್ಕಿ ಹಠಾತ್ ನಿಧನ ಹೊಂದಿದ್ದು ನಮ್ಮ ಕುಟುಂಬವು ಚೇತರಿಸಿಕೊಳ್ಳಲಾಗದಂತಹ ಶತಮಾನಗಳ ಘೋರ ದುರಂತ. ಭೂಮಿ ಆಕಾಶದೆತ್ತರದ ಘೋರ ಸಿಡಿಲು ನಮ್ಮನ್ನು ಅಪ್ಪಳಿಸಿತು.

ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡೆ ಮತ್ತು ರಾಜಕೀಯ ವಿದ್ಯಮಾನಗಳ ಮಂಥನಕಾರನಾಗಿದ್ದ ದೇಶವಂತಗೌಡ; ವಿಧಿ, ದೈವ, ಆಯಸ್ಸು, ಕಾಲನ ಸಂಚು ಆತನ ವಿರುದ್ಧ ಸಂಚುಮಾಡಿದ್ದು; ನನ್ನ ದುರಾದೃಷ್ಟವೋ, ವಿಧಿಯ ಆಟವೋ, ಬದುಕಿನ ಮಾಟವೋ ನನ್ನ ವಿವೇಚನೆಗೆ ನಿಲುಕುತ್ತಿಲ್ಲ. ದೇಶವಂತಗೌಡನ ಘೋರ ಸಾವು ಈ ಶತಮಾನದ ನಮ್ಮ ಬದುಕಿನ ಮಹಾನ್ ದುರಂತದ ಸ್ಫೋಟ. ನನ್ನ ಬದುಕಿನ ಘೋರಾತಿ ಘೋರ ಸಿಡಿಲು. ಇದ್ದ ಒಬ್ಬನೇ ಮಗನನ್ನು ಕಳೆದುಕೊಂಡು ಆದಿ ಅಂತ್ಯವಿಲ್ಲದ, ಅನಾಥ ಪ್ರಜ್ಞೆಯ ಜರ್ಜರಿತ ಹೊಡೆತದಲ್ಲಿ ನಾನು ನುಚ್ಚುನೂರಾಗಿದ್ದೇನೆ. ವಿಧಿಯ ಕ್ರೌರ್ಯದ ಅಟ್ಟಹಾಸ ಯಾರ ಹಿಡಿತಕ್ಕೂ ಸಿಕ್ಕದ ದಕ್ಕದ ಮಾಯಾಜಿಂಕೆ. ಮಗ ದೇಶವಂತಗೌಡನಿಲ್ಲದ ಬದುಕು ಘೋರ ಸಂಕಟ, ದು:ಖ ದುಮ್ಮಾನಗಳ ವೇದನೆ. ಪುತ್ರ ಶೋಕ ನಿರಂತರ ಭಯಾನಕ. ದೇಶವಂತಗೌಡ ನಮ್ಮನ್ನೆಲ್ಲಾ ವಂಚಿಸಿ ತೊರೆದುಹೋದನೋ; ದೇಶವಂತಗೌಡನಿಗೆ ನಾವೇ ವಂಚಿಸಿದೆವೋ ನನಗೆ ಅರ್ಥವಾಗುತ್ತಿಲ್ಲ. ತಂದೆ ಮತ್ತು ಮಗನ ನಡುವಿನ ಅಭಿನಾವ ಸಂಬಂಧ ನಮ್ಮಿಬ್ಬರ ಬಾಳ ಭವಿಷ್ಯವನ್ನೇ ಕಳೆದುಕೊಂಡ ಏಕಾಂಗಿಯಾದ ತಬ್ಬಲಿ. ಇದು ಅರಿಯದ ತಿಳಿಯಲಾಗದ ನಿಗೂಢದ ವಿಸ್ಮಯ. ದೇಶವಂತಗೌಡನನ್ನು ಕಳೆದುಕೊಂಡ ನಮ್ಮ ಕುಟುಂಬ ಹಾಗೂ ಹುಲಿಯೂರು ದುರ್ಗ ಪ್ರಾಂತ್ಯದ ಜನರು ದಿಗ್ಮೂಢರಾಗಿದ್ದಾರೆ. ನನ್ನ ಪತ್ನಿ ಮತ್ತು ಪುತ್ರಿ ಧೀಮಂತಿಕ ದೇಶವಂತನನ್ನು ಕಳೆದುಕೊಂಡ ಶೋಕದಿಂದ ಇನ್ನೂ ಹೊರಬಂದಿಲ್ಲ.

ನನ್ನ ವಿಶ್ವಮಾನ್ಯ ಕವನ, ಕಾವ್ಯ, ಮಂಥನ, ಸುಜ್ಞಾನ ಮತ್ತು ವೈಚಾರಿಕ ವಿವೇಚನೆ ನನಗೆ ಸಮಾಧಾನ ಹೇಳಲಾರವು. ನಾನು ನಂಬಿ ಪೂಜಿಸಿ ಆರಾಧಿಸಿಕೊಂಡು ಬಂದ ಭೂಮಂಡಲದ ಪಂಚಭೂತಗಳು ನನ್ನ ವಿರುದ್ಧ ನಡೆಸಿದ ಶತಮಾನಗಳ ಸಂಚು. ಭುಗಿಲೆದ್ದ ಬದುಕು ಅಲ್ಲೋಲ ಕಲ್ಲೋಲಗಳು ನನ್ನ ಬಾಳ ಭವಿಷ್ಯವನ್ನೇ ಹಾಳುಮಾಡಿತು. ಬರಿದಾದ ನಮ್ಮ ಮನೆ ಮನಸ್ಸುಗಳು ಬಿರಿದ ಹೃದಯ ಅನಾಥ ಪ್ರಜ್ಞೆಯ ಕತ್ತಲಿನ ಕಾರ್ಮೋಡವಾಗಿದೆ. ಬಡವರು, ಅಮಾಯಕರು, ದಿಕ್ಕುದೆಸೆಯಿಲ್ಲದ ದುರ್ಬಲರ ಬಗ್ಗೆ ಧ್ವನಿ ಎತ್ತಿ ರಾಷ್ಟ್ರೀಯ ಮಟ್ಟದಲ್ಲಿ ಜಾಗೃತ ಸಾಹಿತ್ಯ ಬರೆದವನು ನಾನು. ದು:ಖ ದುಮ್ಮಾನ ಪುತ್ರ ಶೋಕದ ಕರಾಳತೆಯಲ್ಲಿ ದಿಕ್ಕುತಪ್ಪಿದ ಗಾಳಿಪಟದಂತಾಗಿದ್ದೇನೆ. ದ್ರೋಹ, ವಂಚನೆ, ಪಿತೂರಿ ಕ್ರೌರ್ಯಗಳ ಭುಗಿಲ ಚಕ್ರವ್ಯೂಹ ನನ್ನ ವಿರುದ್ಧ ನಡೆಸಿದ ಸಂಚು ಯಾವ ಘಟ್ಟದಲ್ಲೂ, ಇನ್ನಾವ ಮಟ್ಟದಲ್ಲೂ ಸಮಾಧಾನ ಹೇಳುವ ಸಾಕ್ಷೀಕರಣವಿಲ್ಲ. ದೇಶವಂತಗೌಡನ ಹಠಾತ್ ಸಾವು ಶತಮಾನಗಳ ಮಹಾನ್ ಆಘಾತ. ಘೋರ ಬಡಿತ ಚೇತರಿಸಿಕೊಳ್ಳಲಾಗದಂತಹ ಅಲ್ಲೋಲ ಕಲ್ಲೋಲ. ದೇಶವಂತಗೌಡ ಅತಿಯಾಗಿ ಪೂಜಿಸುತ್ತಿದ್ದ ಬೆಂಗಳೂರು ಹೊರವಲಯದ ವಿಶ್ವಧರ್ಮ ದೇವಾಲಯದ ಸನ್ನಿಧಿಯಲ್ಲಿ ಪಂಚಭೂತಗಳಲ್ಲಿ ಲೀನಗೊಂಡನು. ಆತನ ವಿಚಾರಧಾರೆ, ಭವ್ಯ ಕನಸ್ಸುಗಳು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ವಿಚಾರ ಲಹರಿಗಳು; ನನ್ನ ವಿಶ್ವಮಾನ್ಯತೆಯ ಬರವಣಿಗೆಯನ್ನು ಪ್ರಶ್ನಿಸಿ ದಾಳಿ ಮಾಡುತ್ತಿವೆ. ಭವ್ಯ ಕನಸ್ಸುಗಳನ್ನು ಹೊತ್ತು ಬಂದವನು ನಿರಾಶೆಯಲ್ಲಿ ವಿಶ್ವಧರ್ಮ ಗುಡಿಯ ಆವರಣದಲ್ಲಿ ಬೆಂಕಿಯಲ್ಲಿ ಬೂದಿಯಾದದ್ದು ನನ್ನ ಬೌದ್ಧಿಕ, ಜಾಗತಿಕ, ಸಾಂಸ್ಕೃತಿಕ ವಿವೇಚನೆಯ ಅಸ್ತಿತ್ವವನ್ನೇ ಧ್ವಂಸ ಮಾಡಿದವು. ಬ್ರಹ್ಮಾಂಡದ ದಿವ್ಯಚೇತನ ನನ್ನ ಮಾನಸಿಕ ತಳಮಳಕ್ಕೆ ಸಾಂತ್ವಾನ ನೀಡಲಿಲ್ಲ. ಎಲ್ಲರನ್ನೂ ಎಲ್ಲವನ್ನೂ ಕಳೆದುಕೊಂಡ ತಬ್ಬಲಿ. ಮಕ್ಕಳ ಮುಂದೆ ತಂದೆ ತಾಯಿಗಳು ಸಾಯಬೇಕೆ ಪರಂತು; ತಂದೆ ತಾಯಿಗಳ ಮುಂದೆ ಮಕ್ಕಳು ಸಾಯಬಾರದು.

ದೇಶವಂತಗೌಡನಿಲ್ಲದ ಬದುಕು ನನಗೆ ಅರಗಿಸಿಕೊಳ್ಳಲಾಗದಂತಹ ದು:ಖ ಸಾಗರ. 36 ವರ್ಷಗಳ ರಕ್ತ, ಮಾಂಸ, ಉಸಿರು, ಜೀವ ಮತ್ತು ಚೇತನವಾಗಿದ್ದ ದೇಶವಂತಗೌಡ; ದೈಹಿಕ ಸಾವಾಗದೆ ಭೌದ್ಧಿಕವಾಗಿ ನನ್ನ ಅಮೃತ ಕಳಸವನ್ನೇ ಕಿತ್ತುಕೊಂಡು ಹೋದ. ಧೀಮಂತ ಮತ್ತು ದೇಶವಂತಗೌಡರನ್ನು ಈ ವಯಸ್ಸಿನಲ್ಲಿ ಕಳೆದುಕೊಂಡು ನಾನು ಬದುಕುವುದು ಮಹಾಸಂಕಟದ ಅಗ್ನಿಕುಂಡ. ದೇಶವಂತಗೌಡನಿಗೆ ಶಾಂತಿ ಸಿಗಲಿ, ಭೂಮಂಡಲದ ವೈವಿಧ್ಯಗಳಲ್ಲಿ ಬದುಕಿರಲಿ ಎಂಬ ಭ್ರಮೆಯ ಭಾವುಕತೆ ನನ್ನನ್ನು ನಾಗಿಣಿಯಾಗಿ ಬಡಿಯುತ್ತಿದೆ. ವಿಧಿ ದೈವ ಆಯಸ್ಸು ಕಾಲನ ಸಂಚಿನ ಮಾಯಾಲೋಕದಲ್ಲಿ ಇರೆಂಬತ್ತು ಕೋಟಿಯ ಜೀವ ರಾಶಿಗಳಲ್ಲಿ; ಸಾಧ್ಯವಾದರೆ ನಾನು ಮತ್ತು ದೇಶವಂತ ಭೇಟಿ ಆಗುತ್ತೇವೆ ಎಂಬ ಭರವಸೆ ಇಲ್ಲ. ದೇಶವಂತ! ನಿನ್ನಲ್ಲಿರುವ ಅಗಾಧ ಶಕ್ತಿ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಂಥನ, ಬದಲಾವಣೆಯ ಪರ್ವ; ಭವ್ಯ ಕನಸ್ಸುಗಳು ಎಂದೆಂದೂ ಶಾಶ್ವತ ಮತ್ತು ಅಮರ. ಈ ಮೌಲ್ಯಗಳು ನಮ್ಮ ಮನಮನದಲ್ಲೂ, ಗುಡಿ ಮನೆಗಳಲ್ಲೂ ನಿರಂತರವಾಗಿ ಧ್ವನಿಸುವುದನ್ನ ನನ್ನ ಮಾನಸಿಕ ಪ್ರಜ್ಞೆ ಸೆರೆಹಿಡಿಯುತ್ತಲೇ ಇದೆ. ಇದು ಕರ್ತಾರ ಕಮ್ಮಟನ; ಹರವಿರಂಚರ ವಿಧಿ ಬರಹ. ದೇಶವಂತ ಯಾವ ಯುಗದಲಿ ಮಣ್ಣಿನಲಿ ನಮ್ಮ ಸಮಾಗಮ. ಸೆಪ್ಟೆಂಬರ್ ತಿಂಗಳ 5ರ ಮಂಗಳವಾರ ಕ್ರೆಸೆಂಟ್ ರಸ್ತೆಯ ನಮ್ಮ ಧೀಮಂತಗೌಡ ಕುಟೀರದಲ್ಲಿ ಶ್ರದ್ಧಾಂಜಲಿ ಪೂಜೆ ಮತ್ತು ದೇಶವಂತನ ಕುರಿತಾದ ಭಜನೆಯನ್ನ ಏರ್ಪಡಿಸಿದ್ದೇವೆ.

ದುರ್ಗದ ರಾಜೇಗೌಡ
ಜಾಗತಿಕ ಬರಹಗಾರ
ಮಾನವ ಹಕ್ಕುಗಳ ಪ್ರತಿಪಾದಕ
ಮೊಬೈಲ್ : 9740929960

ಅನಂತನಾಗ್ ಉತ್ಸವ 13ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಿದ್ಯಾಭವನ ಮತ್ತು ಸುಚಿತ್ರ ಫಿಲಂ ಸೊಸೈಟಿಯಿಂದ 'ಅನಂತನಾಗ್ ಉತ್ಸವ' ಚಲನಚಿತ್ರೋತ್ಸವ, ವಿಚಾರಸಂಕಿರಣ, ಅಭಿನಂದನೆ ಕಾರ್ಯಕ್ರಮವನ್ನು ಸೆ.13ರಿಂದ 15 ರವರೆಗೆ ಹಮ್ಮಿಕೊಳ್ಳಲಾಗಿದೆ. 'ಪ್ರಜಾವಾಣಿ' ಮಾಧ್ಯಮ ಸಹಯೋಗ ನೀಡಿದೆ.

ಭಾರತೀಯ ವಿದ್ಯಾಭವನ ಮತ್ತು ಸುಚಿತ್ರ ಫಿಲಂ ಸೊಸೈಟಿಯಲ್ಲಿ ಈ ಕಾರ್ಯಕ್ರಮಗಳು ನಡೆಯಲಿವೆ. ಅನಂತ್‌ನಾಗ್ ಚಿತ್ರೋತ್ಸವವನ್ನು ಸುಚಿತ್ರ ಫಿಲಂ ಆ್ಯಂಡ್ ಕಲ್ಚರಲ್ ಅಕಾಡೆಮಿ ಅಧ್ಯಕ್ಷ ಪ್ರಕಾಶ ಬೆಳವಾಡಿ ಮತ್ತು ಭಾರತೀಯ ವಿದ್ಯಾಭವನ ನಿರ್ದೇಶಕ ಎಚ್.ಎನ್. ಸುರೇಶ್ ಉದ್ಘಾಟಿಸಲಿದ್ದಾರೆ. ವಿಚಾರ ಸಂಕಿರಣದಲ್ಲಿ ಸುಚಿತ್ರ ಫಿಲಂ ಸೊಸೈಟಿ ಅಧ್ಯಕ್ಷ ಎನ್. ನರಹರಿ ರಾವ್, ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಸದಾಶಿವ ಶೆಣೈ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಕಾರ್ಯದರ್ಶಿ ಸುಂದರ ರಾಜ್, ಕಲಾವಿದ ರಮೇಶ್ ಭಟ್ ಭಾಗವಹಿಸುವರು.

ಸೆ.15ರಂದು ಸಂಜೆ 5ಕ್ಕೆ ಅನಂತನಾಗ್ ಅವರಿಗೆ ಅಭಿನಂದನೆ ಸಮಾರಂಭ ಮತ್ತು ಮುಕ್ತಾಯ ಕಾರ್ಯಕ್ರಮ ನಡೆಯಲಿವೆ. ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ. ಹರೀಶ್ ಅಧ್ಯಕ್ಷತೆ ವಹಿಸುವರು. ಮಾಧ್ಯಮ ಭಾರತಿ ನಿರ್ದೇಶಕ ಎನ್.ಎಸ್. ಶ್ರೀಧರಮೂರ್ತಿ ಅಭಿನಂದನಾ ಭಾಷಣ ಮಾಡಲಿದ್ದಾರೆ.

ಭಾರತೀಯ ವಿದ್ಯಾಭವನದಲ್ಲಿ ಸೆ. 13ರಂದು ಬೆಳಿಗ್ಗೆ 11.30ಕ್ಕೆ 'ಅಂಕುರ್', ಸೆ.14ರಂದು ಬೆಳಿಗ್ಗೆ 10.30ಕ್ಕೆ 'ಬರ', ಮಧ್ಯಾಹ್ನ 3ಕ್ಕೆ 'ಹಂಸಗೀತೆ', ಸೆ.15ರಂದು ಬೆಳಿಗ್ಗೆ 10.30ಕ್ಕೆ 'ಸ್ಟಂಬಲ್' ಚಲನಚಿತ್ರಗಳ ಪ್ರದರ್ಶನ ನಡೆಯಲಿವೆ. ಸಂಜೆ 4ಕ್ಕೆ ಸ್ಮಿತಾ ಕಾರ್ತಿಕ್ ತಂಡದಿಂದ ಅನಂತ್‌ನಾಗ್ ಚಿತ್ರಗಳಿಂದ ಆಯ್ದ ಗೀತೆಗಳ ಗಾಯನ ಹಮ್ಮಿಕೊಳ್ಳಲಾಗಿದೆ.

ಸುಚಿತ್ರ ಫಿಲಂ ಸೊಸೈಟಿಯಲ್ಲಿ ಸೆ. 13ರಂದು ಮಧ್ಯಾಹ್ನ 3ಕ್ಕೆ 'ಹಂಸಗೀತೆ', ಸಂಜೆ 6.30ಕ್ಕೆ 'ಸ್ವಾತಿ ತಿರುನಾಳ್', ಸೆ.14ರಂದು ಮಧ್ಯಾಹ್ನ 3ಕ್ಕೆ 'ಅಂಕುರ್', 'ಸ್ಟಂಬಲ್' ಚಿತ್ರಗಳು ಪ್ರದರ್ಶನಗೊಳ್ಳಲಿವೆ ಎಂದು ಸಂಘಟಕರು ತಿಳಿಸಿದ್ದಾರೆ.

ಮಂಗಳೂರಿನ ನಂತೂರಿನಲ್ಲಿ ನೂತನವಾಗಿ ಉದ್ಘಾಟನೆಗೊಂಡ ಅನಿರ್ವೇದ ಫೌಂಡೇಶನ್‌ನಲ್ಲಿ ಚಿತ್ರನಟ ಅನಂತ್‌ನಾಗ್ ಅವರ 75ನೇ ಹುಟ್ಟು ಹಬ್ಬ ಆಚರಿಸಲಾಯಿತು.

ಅಂಗವಿಕಲ ಮಕ್ಕಳ ಜೊತೆ ಜನ್ಮದಿನ

ಮಂಗಳೂರು: ನಟ ಅನಂತ ನಾಗ್ ಅವರು ಕದ್ರಿ ಶಿವಬಾಗ್‌ನಲ್ಲಿರುವ ಅನಿರ್ವೇದ ಫೌಂಡೇಶನ್‌ನ ನೂತನ ಕಟ್ಟಡ ಉದ್ಘಾಟಿಸಿ, ಅಂಗವಿಕಲ ಮಕ್ಕಳ ಜೊತೆ ತಮ್ಮ 75ನೇ ಜನ್ಮದಿನ ಆಚರಿಸಿಕೊಂಡರು. ಮಕ್ಕಳೊಂದಿಗೆ ಕೇಕ್ ಕತ್ತರಿಸಿದ ಬಳಿಕ, ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಂಡ ಅನಂತನಾಗ್, 'ಮಕ್ಕಳಲ್ಲಿಯೇ ದೇವರನ್ನು ಕಾಣಬೇಕೆಂಬ ಚಿಂತನೆಯನ್ನು ಆನಂದಾಶ್ರಮದಲ್ಲಿ ತಮ್ಮ ಗುರುಗಳು ಹೇಳಿಕೊಟ್ಟಿದ್ದರು' ಎಂದರು.

ಕೆಆರ್‌ಎಸ್‌ಗೆ ಮುತ್ತಿಗೆ ಯತ್ನ; ಬಂಧನ, ಬಿಡುಗಡೆ

ಮಂಡ್ಯ: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಸೋಮವಾರ ಕೆಆರ್‌ಎಸ್ ಅಣೆಕಟ್ಟೆಗೆ ನುಗ್ಗಲು ಯತ್ನಿಸಿದ ರೈತ ಸಂಘದ (ರೈತಬಣ) ಸದಸ್ಯರನ್ನು ಪೊಲೀಸರು ಬಂಧಿಸಿ, ಬಳಿಕ ಬಿಡುಗಡೆ ಮಾಡಿದರು.

ಅಣೆಕಟ್ಟೆ ದಕ್ಷಿಣ ದ್ವಾರದ ಬಳಿ ಖಾಲಿ ಕೊಡಗಳೊಂದಿಗೆ ಪ್ರತಿಭಟಿಸಿದ ಅವರು ಅಣೆಕಟ್ಟೆಗೆ ನುಗ್ಗಲು ಯತ್ನಿಸಿದರು. ಆಗ ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಮುಖಂಡರನ್ನು ಪೊಲೀಸರು ಕೆಆರ್‌ಎಸ್ ಠಾಣೆಗೆ ಕರೆದೊಯ್ದರು.

ಇಂಗಲಗುಪ್ಪೆ ಇ.ಎನ್.ಕೃಷ್ಣೇಗೌಡ, ಹೆಮ್ಮಿಗೆ ಚಂದ್ರಶೇಖರ್, ರಾಳೇನಹಳ್ಳಿ ರಮೇಶ್ ಅವರನ್ನು ಪೊಲೀಸರು ಮುಚ್ಚಳಿಕೆ ಬರೆಸಿಕೊಂಡು ಬಿಡುಗಡೆ ಮಾಡಿದರು.

ಬಿಸ್ಲೆರಿ ನೀರಿನಲ್ಲಿ ಗದ್ದೆ ನಾಟಿ: ಮಂಡ್ಯ ರಕ್ಷಣಾ ವೇದಿಕೆ ಸದಸ್ಯರು ಶ್ರೀರಂಗಪಟ್ಟಣ ತಾಲ್ಲೂಕು ಹನುಮಂತ ನಗರದ ಬಳಿಯ ಒಣ ಭೂಮಿಯಲ್ಲಿ ಬಿಸ್ಲೆರಿ ಬಾಟಲಿ ನೀರು ಸುರಿದು ಭತ್ತದ ಪೈರು ಮಾಡಿ ಮಾಡಿದರು. ಕೋರ್ಟ್‌ನಲ್ಲಿ ರಾಜ್ಯದ ಪರ ತೀರ್ಪು ಬರಲೆಂದು ಪ್ರಾರ್ಥಿಸಿ ಕರ್ನಾಟಕ ಕಸ್ತೂರಿ ಜನಪರ ವೇದಿಕೆ ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಮುಂದಿರುವ ಕಾವೇರಿ ಪ್ರತಿಮೆಗೆ ನೀರು, ಹಾಲು, ಮೊಸರು, ಜೇನುತುಪ್ಪ, ಕುಂಕುಮದ ಅಭಿಷೇಕ ಮಾಡಿದರು.

ಇಸ್ಕಾನ್: ಶ್ರೀಕೃಷ್ಣ ಜನ್ಮಾಷ್ಟಮಿ ನಾಳೆ

ಬೆಂಗಳೂರು: ಶ್ರೀಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಇದೇ 6ರಂದು ಕುಮಾರಸ್ವಾಮಿ ಬಡಾವಣೆಯಲ್ಲಿರುವ 'ಇಸ್ಕಾನ್' ದಕ್ಷಿಣ ದೇವಸ್ಥಾನದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಬೆಳಿಗ್ಗೆ 8ರಿಂದ ರಾತ್ರಿ 10 ಗಂಟೆಯವರೆಗೂ ಅಭಿಷೇಕ, ಉಯ್ಯಾಲೆ ಸೇವೆ, ಕೀರ್ತನೆ, ಅರ್ಚನೆ, ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಇತರೆ ಸೇವೆಗಳನ್ನು ಇರಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 90366 53824 ಸಂಪರ್ಕಿಸಿ.

BOOK YOUR TICKETS NOW

PVR - INOX CINEMAS {REX | NEXUS | ORION | VAISHNAVI | VEGA CITY | REGALIA | MARKETCITY | BHARTIYA | GT | AURA | SPIRIT | VR | UPTOWN | GLOBAL | FALCON CITY | MANTRI | CENTRAL | GARUDA | YELAHANKA | SWAGATH | BROOKFIELD | LIDO | NEXUS NEIGHBOURHOOD | SBR | RMZ | TUMKUR S MALL | MYSORE GARUDA - NEXUS - SATYAM - CENTRO | MANGALORE NEXUS | MANIPAL} | CINEPOLIS CINEMAS {MEENAKSHI | ETA | ORION EAST | LULU | SJR | MANGALORE} | GOPALAN CINEMAS {ARCADE | LEGACY | GRAND | SIGNATURE | INNOVATION} | INNOVATIVE {MARATHHALLI} | KINO CINEMA {SEEGEHALLI} | CINEPHILE {HSR LAYOUT} | ROCKLINE {JALAHALLI} | MUKTA A2 CINEMAS {UTTARAHALLI} | MIRAJ CINEMAS {SUNKADAKATTE} | DRC CINEMAS {MYSORE} | VISION CINEMAS {MYSORE} | BHARATH CINEMAS {MANGALORE | MANIPAL | KUNDAPUR | PADUBIDRE | PUTTUR | SHIMOGA} | CINE GALAXY {SURATKAL} | MOVIE TIME {DAVANGERE | BELLARY} | SANTHOSH THEATRE {K.G.ROAD} | ABHINAY {K.G.ROAD} | URVASHI THEATRE {BANGALORE} | MUKUNDA THEATRE {MARUTI SEVANAGAR} | SAMPIGE THEATRE {MALLESHWARAM} | CAUVERY THEATRE {SANKEY ROAD} | VEERESH THEATRE {MAGADI ROAD} | SWAGATH SHANKARNAG {M.G.RAOD} | SWAGATH POORNIMA {J.C.RAOD} | AMRUTH THEATRE {LINGARAJPURAM} | HMT THEATRE {JALAHALLI} | RENUKA PRASANNA THEATRE {J. P. NAGAR} | RAVI THEATRE {EEGIPURA} | VICTORY CINEMAS {KAMAKSHIPALYA} | VAIBHAV {SANJAYNAGAR} | BALAJI {TAVAREKERE} | LAKSHMI {TAVAREKERE} | SRINIVASA {S.G. PALYA} | ARUNA {SRIRAMPURA} | TULASI {MARATHHALLI} | VENKATESHWARA {KENGERI} | SRINIVASA {GOWDANAPALYA} | ESHWARI {KATTRIGUPPE} | RAVI {EJIPURA} | BALAJI {DOMMASANDRA} | LAKSHMI {GOTTIGERE} | ROBIN {KENGERI} | VAJRESHWARI {ULLALA} | PRUTHVI {NAGAWARA} | BALAJI {VANNARPET} | TIRUMALA {AGARA} | MANASA {KONANKUNTE} | SANDHYA {MADIWALA} | BRUNDA {HONGASANDRA} | MARUTI {RAJGOPALNAGAR} | RAJ MURALI {KODIGEHALLI} | SRINIVASA {KADUGUDI} | VINAYAKA {HARINAGAR} | VINAYAKA {MYSORE ROAD} | VIJAYALAKSHMI {GARUDACHARPALYA} | RADHAKRISHNA {R.T. NAGAR} | PUSHPANJALI {B.N. PURA} | VENKATESHWARA {K.R. PURAM} | VENKATESHWARA {GOLARHATTI} | V.R.CINEMAS {MALLATHAHALLI} | KRISHNA {BOMMANAHALLI} | SIDDHALINGESHWARA {J.P. NAGAR} | GOVARDHAN {YESHWANTHPUR} | CHANDRODAYA {VIDYAPEETA CIRCLE} | ANJAN {MAGADI RD} | VAINIDHI {SINGAPURAR} | BALAJI {MAGADI} | BENAKA {MALUR} | VANI {KANAKAPURA} | SHARADA {KOLAR} | JAI BHARAT {TUMKUR} | TRIMURTHY {TIPTUR} | ADARSHA {CHINTAMANI} | VARADARAJA {MULBAGILU} | SANGAM {MYSORE} | TIBBADEVI | WOODLAND | BALAJI DELUXE | JAYALAKSHMI {MANDYA} | SHREE GURU {HASSAN} | BALAJI {CHANNARAYAPATNA} | KRISHNA {KOLLEGALA} | MARUTI {BELLUR CROSS} | SLN {HOLENARSIPURA} | LAL BAHADUR {PANDAVAPURA} | MALLIKARJUNA {SHIMOGA} | MANJUNATHA | SRILEKHA {CHIKMAGALUR} | SATYA {BHADRAVATHI} | MALTHESH {SHIKARIPURA} | VIJAYALAKSHMI {KADUR} | VINAYAKA {TARIKERE} | SP CINEMAS {MANGALORE} | ROOPAVANI | KALPANA {UDUPI} | PLANET {KARKALA} | SHANKAR {BAINDUR} | VASANTHA {DAVANGERE} | BASAVESHWARA {CHITRADURGA} | RAGHAVENDRA {BELLARY} | NATRAJ | SARASWATHI {HOSPET} | JYOTHI {HOSADURGA}.

FARNAZ

ಅಂಗನವಾಡಿ ಕೇಂದ್ರಕ್ಕೆ ಕಟ್ಟಡದ ಮಾಲೀಕ ಬೀಗ ಹಾಕಿದ್ದರಿಂದ ಮಕ್ಕಳನ್ನು ಕಾರ್ಯಕರ್ತೆ ನಾಗಲಕ್ಷ್ಮಿ ಅವರ ಮನೆ ಆವರಣದಲ್ಲಿ ಕೂರಿಸಿ ಪಾಠ ಮಾಡಲಾಯಿತು.

ಬಾಡಿಗೆ ಬಾಕಿ: ಅಂಗನವಾಡಿಗೆ ಬೀಗ

ಪ್ರಜಾವಾಣಿ ವಾರ್ತೆ

ಮಾಲೂರು: ಪಟ್ಟಣದ ಲಾಯದ ಬೀದಿಯ ಅಂಗನವಾಡಿ ಕೇಂದ್ರದ ಕಟ್ಟಡದ ಮಾಲೀಕರಿಗೆ ಶಿಶುಪಾಲನ ಅಭಿವೃದ್ಧಿ ಇಲಾಖೆ ಒಂಬತ್ತು ತಿಂಗಳ ಬಾಡಿಗೆ ಪಾವತಿಸದ ಕಾರಣ ಕಟ್ಟಡದ ಮಾಲಿಕ ಬೀಗ ಹಾಕಿದ್ದಾರೆ.

ಹಾಗಾಗಿ ಸೋಮವಾರ ಅಂಗನವಾಡಿ ಕಾರ್ಯಕರ್ತೆ ನಾಗಲಕ್ಷ್ಮಿ ಅವರ ಮನೆಯ ಆವರಣದಲ್ಲಿ ಮಕ್ಕಳಿಗೆ ಪಾಠ ಮಾಡಿ, ಅಲ್ಲಿಯೇ ಬಿಸಿಯೂಟ ಬಡಿಸಿದರು.

ಪಟ್ಟಣದಲ್ಲಿ ಒಟ್ಟು 16 ಅಂಗನವಾಡಿ ಕೇಂದ್ರ ಕಾರ್ಯ ನಿರ್ವಹಿಸುತ್ತಿವೆ. ಕೆಲವು ಅಂಗನವಾಡಿ ಕಟ್ಟಡಗಳಿಗೆ ಸ್ವಂತ ಕಟ್ಟಡ ಇಲ್ಲದೆ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿದೆ.

ಜನವರಿ ತಿಂಗಳಿನಿಂದ ಸೆಪ್ಟಂಬರ್ ವರೆಗಿನ ಬಾಡಿಗೆ ಇಲಾಖೆಯು ಪಾವತಿಸದ ಕಾರಣ ಅಂಗನವಾಡಿ ಕೇಂದ್ರಕ್ಕೆ ಕಟ್ಟಡಗಳ ಮಾಲೀಕ ಬೀಗ ಜಡಿದಿದ್ದಾರೆ. ಇದರಿಂದ ಮಕ್ಕಳು ಬೀದಿಯಲ್ಲಿ ನಿಲ್ಲಬೇಕಾಯಿತು.

ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಬಾಡಿಗೆ ಪಾವತಿಸಲು ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆ ಬಿಲ್ ಕಳಿಸಲಾಗಿದೆ. ಸರ್ಕಾರದಿಂದ ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆಅನುದಾನ ಬಿಡುಗಡೆಯಾದ ನಂತರ ಬಾಡಿಗೆ ಕಟ್ಟಡದಲ್ಲಿರುವ ಎಲ್ಲ ಅಂಗನ ವಾಡಿ ಕೇಂದ್ರಗಳಿಗೆ ಬಾಡಿಗೆ ಪಾವತಿಸಲಾಗುವುದು. ಅಲ್ಲಿಯವರೆಗೆ ಲಾಯದ ಬೀದಿಯ ಅಂಗನವಾಡಿ ಕೇಂದ್ರದ ಕಟ್ಟಡದ ಮಾಲೀಕರ ಮನವೊಲಿಸಿ ಅಂಗನವಾಡಿ ಕೇಂದ್ರ ನಡೆಸಲಾಗುವುದು ಎಂದು ಶಿಶು ಪಾಲನ ಅಭಿವೃದ್ಧಿ ಅಧಿಕಾರಿ ಬೈರಾರೆಡ್ಡಿ ಪ್ರತಿಕ್ರಿಯಿಸಿದ್ದಾರೆ.

6ರಂದು ಮಾಂಸ ಮಾರಾಟ ನಿಷೇಧ

ಬೆಂಗಳೂರು: ಕೃಷ್ಣ ಜನ್ಮಾಷ್ಟಮಿ ಹಿನ್ನೆಲೆಯಲ್ಲಿ ಬಿಬಿಎಂಪಿ ವ್ಯಾಪ್ತಿಯ ಕಸಾಯಿ ಖಾನೆಯಲ್ಲಿ ಪ್ರಾಣಿವಧೆ, ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಪುಣೆ ರೇಸ್

ಕಿಂಗ್ಸ್ ರಾನ್ಸಮ್ ಗೆಲ್ಲುವ ನಿರೀಕ್ಷೆ

ಇದಾರ್ ಗೋಲ್ಡ್ ಟ್ರೋಫಿ ಮಂಗಳವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಿಂಗ್ಸ್ ರಾನ್ಸಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಜೆರುಸಲೆಮ್ 4, ಆಲ್ಫಾ ಡೊಮಿನೊ 3, ವಿಲ್ಲಿ ವೊಂಕಾ 1
2ನೇ ರೇಸ್: ದಿ ಜನರಲ್ 1, ಡೆಮಾಕ್ರಸಿ 3, ಬಬ್ಲಿ ಬಾಯ್ 2
3ನೇ ರೇಸ್: ದಿ ಗಾಡ್‌ಫಾದರ್ 1, ಆಕ್ಸಲ್‌ರಾಡ್ 5, ಚೆನಿವಿಕ್ಸ್ ಟ್ರೆಂಚ್ 3
4ನೇ ರೇಸ್: ಐರಿಷ್ ಗೋಲ್ಡ್ 5, ಫೈಟಾನ್ 4, ಐರಿಷ್‌ಮೋರ್ 10
5ನೇ ರೇಸ್: ಕಿಂಗ್ಸ್ ರಾನ್ಸಮ್ 1, ಡಿಫ್ 2, ಡೇಂಜರಸ್ 4
6ನೇ ರೇಸ್: ಪ್ರೈಡ್ಸ್ ಏಂಜೆಲ್ 7, ಗೋಲ್ಡನ್ ನೀಲ್ 3, ಇನ್ ಕಂಟೆನ್‌ಷನ್ 5
7ನೇ ರೇಸ್: ಚೀಫ್ಟನ್ 1, ಗ್ಯಾಲಪಿಂಗ್ ಗ್ಲೋರಿ 6, ಮಾಲ್‌ಬೋರೊ ಮ್ಯಾನ್ 2

ಉತ್ತಮ ಬೆಟ್: ದಿ ಗಾಡ್‌ಫಾದರ್
ಜಾಕ್‌ಪಾಟ್ 3,4,5,6,7 ಟ್ರಿಬಲ್ 4,5,6

ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್ (ರಿ)



5-9-1910 to 21-4-1976

ಸಂಸ್ಥಾಪಕರ ದಿನ

ಪ್ರೊ. ಎನ್. ಅನಂತಾಚಾರ್
ಸಂಸ್ಥಾಪಕರು, ಎ. ಪಿ. ಎಸ್. ವಿದ್ಯಾ ಸಂಸ್ಥೆಗಳು
ಎನ್.ಆರ್. ಕಾಲೋನಿ, ಬೆಂಗಳೂರು-560 019.

ಶಿಕ್ಷಕರ ದಿನಾಚರಣೆಯ
ಈ ಶುಭ ಸಂದರ್ಭದಲ್ಲಿ ನಮ್ಮ
ಸಂಸ್ಥಾಪಕರ 113ನೆಯ ಜನ್ಮ ದಿನೋತ್ಸವದ ಸ್ಮರಣೆಗಾಗಿ
ಟ್ರಸ್ಟಿಗಳು, ಟ್ರಸ್ಟಿನ ಸದಸ್ಯರು, ಅಧ್ಯಾಪಕ-ಅಧ್ಯಾಪಕೇತರ ವರ್ಗದವರು, ವಿದ್ಯಾರ್ಥಿಗಳು ಹಾಗೂ ಹಳೆಯ ವಿದ್ಯಾರ್ಥಿಗಳು ಭಾವಪೂರ್ಣ ಗೌರವವನ್ನು ಸಮರ್ಪಿಸುತ್ತಿದ್ದಾರೆ.

ಸಿಎ. ಡಾ|| ವಿಷ್ಣು ಭರತ್ ಅಲಂಪಲ್ಲಿ
ಅಧ್ಯಕ್ಷರು

ಪ್ರೊ: ಎ. ಪ್ರಕಾಶ್
ಪ್ರಧಾನ ಕಾರ್ಯದರ್ಶಿಗಳು

EUREKA FORBES
Aquaguard®

ಎಚ್ಚರಿಕೆ!

ಅನಧಿಕೃತ ಫಿಲ್ಟರ್‌ಗಳನ್ನು ಮತ್ತು ಎಎಮ್‌ಸಿಯನ್ನು ಮಾರಾಟ ಮಾಡಲು ಸುರೇಖಾ ಫೋರ್ಬ್ಸ್ ಇವರು ಯುರೇಖಾ ಫೋರ್ಬ್ಸ್ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ.

ನಕಲಿ ವಾಟರ್ ಪ್ಯೂರಿಫಯರ್ ಫಿಲ್ಟರ್‌ಗಳು ನೀರನ್ನು ಶುದ್ಧೀಕರಿಸಲು ವಿಫಲವಾಗುತ್ತವೆ ಮತ್ತು ನಿಮ್ಮ ಕುಟುಂಬದ ಆರೋಗ್ಯಕ್ಕೆ ಅಪಾಯಕಾರಿಯಾಗಿವೆ.

ಅಸಲಿ ಅಕ್ವಾಗಾರ್ಡ್ ಎಎಮ್‌ಸಿ ಖರೀದಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ.

ವಿದ್ಯುತ್ ಪರಿವರ್ತಕ ಉದ್ಘಾಟನೆ ಇಂದು

ಬೆಂಗಳೂರು: ದೇಶದಲ್ಲೇ ಪ್ರಪ್ರಥಮ ಬಾರಿಗೆ, ಮಲ್ಲೇಶ್ವರದಲ್ಲಿ ನಿರ್ಮಿಸಿರುವ 500 ಕೆವಿಎ ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕ ಕೇಂದ್ರದ ಉದ್ಘಾಟನೆ ಸೆ.5ರಂದು ನಡೆಯಲಿದೆ.

ಬೆಸ್ಕಾಂ, ಬಿಬಿಎಂಪಿ ಸಹಭಾಗಿತ್ವದಲ್ಲಿ ಈ ಕೇಂದ್ರವನ್ನು ನಿರ್ಮಿಸಲಾಗಿದೆ. ಇಂಧನ ಸಚಿವ ಕೆ. ಜೆ. ಜಾರ್ಜ್ ಅವರು ಈ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ.

ನಗರದಲ್ಲಿ ಮೇಲ್ಮಾರ್ಗದ ಎಚ್‌ಟಿ ವಿದ್ಯುತ್ ತಂತಿಗಳನ್ನು ಭೂಗತವಾಗಿ ಪರಿವರ್ತಿಸುವ ಯೋಜನೆಯನ್ನು ಬೆಸ್ಕಾಂ ಈಗಾಗಲೇ ಕಾರ್ಯಗತಗೊಳಿಸಿದೆ. ನೆಲದಡಿಯಲ್ಲಿ ಕೇಬಲ್ ಹಾಗೂ ವಿದ್ಯುತ್ ಪರಿವರ್ತಕ ವ್ಯವಸ್ಥೆಯು ಸುರಕ್ಷತೆ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಕೆಗೆ ಸಹಕಾರಿಯಾಗಲಿದೆ.

ಒಟ್ಟು ₹1.97 ಕೋಟಿ ವೆಚ್ಚದಲ್ಲಿ ಈ ಪರಿವರ್ತಕ ಕೇಂದ್ರವನ್ನು (ಟಿಸಿ) ಯನ್ನು ನಿರ್ಮಿಸಲಾಗಿದ್ದು. ಈ ಪೈಕಿ ಸಿವಿಲ್ ಕಾಮಗಾರಿಗೆ ₹64 ಲಕ್ಷ ವೆಚ್ಚ ತಗಲಿದ್ದು, ಎಲೆಕ್ಟ್ರಿಕಲ್ ಕಾಮಗಾರಿಗೆ ₹1.33 ಕೋಟಿ ವೆಚ್ಚವಾಗಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಉದ್ಘಾಟನೆ ಬೆಳಿಗ್ಗೆ 11ಕ್ಕೆ ಮಲ್ಲೇಶ್ವರದ 15ನೇ ಅಡ್ಡ ರಸ್ತೆಯಲ್ಲಿ ಆಯೋಜಿಸಲಾಗಿದ್ದು, ಮಲ್ಲೇಶ್ವರ ಕ್ಷೇತ್ರದ ಶಾಸಕ ಡಾ. ಸಿ.ಎನ್. ಅಶ್ವಥ್ ನಾರಾಯಣ್ ಭಾಗವಹಿಸಲಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ: ಫಲ ನೀಡಿದ ವೇಗಮಿತಿಗೆ ಕಡಿವಾಣ ನಿರ್ಧಾರ

ತಗ್ಗಿದ ಅಪಘಾತ: ಇಳಿದ ಸಾವು

ಪ್ರಜಾವಾಣಿ ವಾರ್ತೆ

ರಾಮನಗರ: ಅಪಘಾತಗಳಿಂದಾಗಿ ಗಮನ ಸೆಳೆದಿದ್ದ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ದ್ವಿಚಕ್ರ ಸೇರಿದಂತೆ ನಿರ್ದಿಷ್ಟ ವಾಹನಗಳ ಸಂಚಾರ ನಿಷೇಧ ಹಾಗೂ ವೇಗದ ಮಿತಿಯನ್ನು ಗಂಟೆಗೆ 100 ಕಿ.ಮೀ. ಗಿಳಿಸಿದ ಬೆನ್ನಲ್ಲೇ ಅಪಘಾತಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಿದೆ.

ಮೂರು ತಿಂಗಳ ಹಿಂದೆಯಷ್ಟೇ ಎರಡಂಕಿ ಇರುತ್ತಿದ್ದ ಪ್ರತಿ ತಿಂಗಳ ಅಪಘಾತ ಸಂಖ್ಯೆ ಇದೀಗ ಒಂದಂಕಿಗೆ ಇಳಿಕೆಯಾಗಿರುವ ಕುರಿತು, ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರು ಟ್ವೀಟ್ ಮಾಡಿದ್ದಾರೆ.

'ಅಪಘಾತಗಳ ತಡೆ ನಿಟ್ಟಿನಲ್ಲಿ ಹೆದ್ದಾರಿಯಲ್ಲಿ ಕೈಗೊಂಡ ಗಸ್ತು, ಅತಿ ವೇಗದ ಮೇಲೆ ನಿಗಾ, ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಪೊಲೀಸರ ಸತತ ಕಾರ್ಯಾಚರಣೆಯ ಕಾರಣದಿಂದಾಗಿ ಅಪಘಾತಗಳು ಹಾಗೂ ಸಾವಿನ ಪ್ರಕರಣಗಳು ತಗ್ಗಿವೆ. ಮೇ ತಿಂಗಳಲ್ಲಿ 29 ಇದ್ದ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ, ಜೂನ್‌ನಲ್ಲಿ 28ಕ್ಕೆ, ಜುಲೈನಲ್ಲಿ 8 ಹಾಗೂ ಆಗಸ್ಟ್‌ನಲ್ಲಿ 6ಕ್ಕೆ ಇಳಿಕೆಯಾಗಿದೆ' ಎಂದು ಅಲೋಕ್ ಕುಮಾರ್ ಟ್ವೀಟ್ ಮಾಡಿದ್ದಾರೆ.

'ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸತತ ಕಾರ್ಯಾಚರಣೆಯೇ ಅಪಘಾತ ಮತ್ತು ಸಾವಿನ ಸಂಖ್ಯೆ ಇಳಿಕೆಗೆ ಕಾರಣ. ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯೇ ಅಪಘಾತಗಳಿಗೆ ಕಾರಣವಾಗಿದೆ. ಹೆದ್ದಾರಿಯಲ್ಲಿ ಇದಕ್ಕೆ ಅವಕಾಶವಿಲ್ಲದಂತೆ, ಹದ್ದಿನ ಕಣ್ಣಿಟ್ಟು ಸಾವಿನ ಸಂಖ್ಯೆಯನ್ನು ಶೂನ್ಯಕ್ಕೆ ಇಳಿಸಲು ಇಲಾಖೆಯು ಶ್ರಮಿಸುತ್ತಿದೆ' ಎಂದು ಹೇಳಿದ್ದಾರೆ.



ರಾಜ್ಯದಲ್ಲೂ ಇಳಿಮುಖ: 'ಎಕ್ಸ್‌ಪ್ರೆಸ್ ಹೆದ್ದಾರಿ ಮಾತ್ರವಲ್ಲದೆ, ರಾಜ್ಯದಾದ್ಯಂತ ಅಪಘಾತಕ್ಕೆ ಸಂಬಂಧಿಸಿದ ಸಾವಿನ ಪ್ರಕರಣಗಳು ಸಹ ಸ್ವಲ್ಪಮಟ್ಟಿಗೆ ಇಳಿಮುಖವಾಗುತ್ತಿವೆ. ರಾಜ್ಯದಾದ್ಯಂತ 2023ನೇ ವರ್ಷದ ಮೊದಲ ಆರು ತಿಂಗಳುಗಳಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಒಟ್ಟು 5,830 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ರಾಜ್ಯದ ಪ್ರಮುಖ ರಸ್ತೆಗಳಲ್ಲಿ ಅಪಘಾತಗಳ ತಡೆಗೆ ಹೆಚ್ಚಿನ ಕ್ರಮ ಕೈಗೊಳ್ಳಲಾಗಿದೆ' ಎಂದು ಗಮನ ಸೆಳೆದಿದ್ದಾರೆ.

ಬೆಂಗಳೂರು –ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ

ಹೆದ್ದಾರಿಯು ವಾಹನಗಳ ಸಂಚಾರಕ್ಕೆ ಮುಕ್ತವಾದ ಬಳಿಕ, ಒಂಬತ್ತು ತಿಂಗಳಲ್ಲಿ 158 ಸಾವು ಸಂಭವಿಸಿದ್ದರ ಕುರಿತು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ ವರದಿಯು, ಹೆಚ್ಚಿನ ಗಮನ ಸೆಳೆದಿತ್ತು. ಅದರ ಬೆನ್ನಲ್ಲೇ, ಹೆದ್ದಾರಿಯ ಸುರಕ್ಷತೆ ಮತ್ತು ಸಂಚಾರ ನಿಯಮ ಪಾಲನೆ ಕುರಿತು ವ್ಯಾಪಕ ಚರ್ಚೆಯಾಗಿತ್ತು.

ಅಪಘಾತಗಳ ಹೆಚ್ಚಳವನ್ನು ಗಂಭೀರವಾಗಿ ಪರಿಗಣಿಸಿದ್ದ ಪೊಲೀಸ್ ಇಲಾಖೆಯು ಗಸ್ತು, ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಕಾರ್ಯಾಚರಣೆ, ಜಾಗೃತಿ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಂಡಿತ್ತು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೂಡ ಹೆದ್ದಾರಿಯಲ್ಲಿ ದ್ವಿಚಕ್ರ ಹಾಗೂ ಕೆಲ ನಿರ್ದಿಷ್ಟ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಿತ್ತು. ಹೆದ್ದಾರಿ ಗಸ್ತು ಆರಂಭಿಸುವ ಜೊತೆಗೆ, ನಿಯಮ ಉಲ್ಲಂಘನೆ ಮೇಲೆ ಕಣ್ಣಿಡಲು ಆರು ಕೃತಕ ಬುದ್ಧಿಮತ್ತೆ (ಎಐ) ಕ್ಯಾಮೆರಾಗಳನ್ನು ಕೆಲವೆಡೆ ಅಳವಡಿಸಿದೆ.

ಸಾವಿನ ಇಳಿಕೆ

ರಾಜ್ಯಮಟ್ಟದಲ್ಲಿ ಅಪಘಾತಗಳ ಸಾವಿನ ಸಂಖ್ಯೆ ಸ್ವಲ್ಪ ಇಳಿದಿದೆ. ಮೇ ತಿಂಗಳಲ್ಲಿ ಅಪಘಾತಕ್ಕೆ 1,094 ಜನ ಮೃತಪಟ್ಟಿದ್ದರೆ, ಜೂನ್‌ನಲ್ಲಿ 965, ಜುಲೈನಲ್ಲಿ 807 ಹಾಗೂ ಆಗಸ್ಟ್‌ನಲ್ಲಿ 795 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಯಲ್ಲೇ ಹೆಚ್ಚು ಸಾವು ಸಂಭವಿಸಿವೆ

ಅಲೋಕ್ ಕುಮಾರ್, ಎಡಿಜಿಪಿ, ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗ

ಸುದ್ದಿ 2 ನಿಮಿಷ

ಸನಾತನ ಧರ್ಮದ ಅವಹೇಳನ: ಬ್ರಾಹ್ಮಣ ಮಹಾಸಭಾ ಖಂಡನೆ

ಬೆಂಗಳೂರು: ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಸನಾತನ ಧರ್ಮದ ಅವಹೇಳನ ಮಾಡಿರುವುದನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಖಂಡಿಸಿದೆ.

ಸನಾತನ ಧರ್ಮ ಡೆಂಗಿ, ಕಾಲರಾ, ಕೋವಿಡ್ ಇದ್ದಂತೆ. ಆ ರೋಗಗಳನ್ನು ನಾಶ ಮಾಡಿದಂತೆ ಸನಾತನ ಧರ್ಮವನ್ನೂ ನಾಶ ಮಾಡಬೇಕು ಎಂಬ ಹೇಳಿಕೆ ವಿವೇಚನೆ ಕಳೆದುಕೊಂಡ ಮತ್ತು ಅಹಂಕಾರದ ಪರಮಾವಧಿ ಎಂದು ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಉಪಾಧ್ಯಕ್ಷ ಕೆ.ಎನ್. ಛಾಯಾಪತಿ ಹೇಳಿದ್ದಾರೆ.

ಸಾವಿರಾರು ವರ್ಷಗಳಿಂದ ನೂರಾರು ದಾಳಿಕೋರರು, ಮತಾಂಧರು ಅಕ್ರಮಣಕಾರರಾಗಿ ಬಂದು ನಾಶ ಮಾಡಲು ಪ್ರಯತ್ನಿಸಿದರೂ ನಾಶವಾಗದ ಮೃತ್ಯುಂಜಯ ಧರ್ಮವೇ ಭಾರತೀಯ ಸನಾತನ ಧರ್ಮ. ಹಿಂದೊಮ್ಮೆ ಜಗತ್ತಿಗೇ ಗುರುವಾಗಿದ್ದ, ಇಂದೂ ಆ ಮಟ್ಟಕ್ಕೆ ಏರುತ್ತಿರುವ ಈ ಧರ್ಮದ ಬಗ್ಗೆ ಪ್ರಚಾರಕ್ಕಾಗಿ ಉದಯನಿಧಿ ಸ್ಟಾಲಿನ್ ಅವಹೇಳನ ಮಾಡಿದ್ದಾರೆ ಎಂದು ಖಂಡಿಸಿದ್ದಾರೆ.

ಬಿಬಿಎಂಪಿ ಸಂಘದ ಅಧ್ಯಕ್ಷರಾಗಿ ಅಮೃತ್‌ರಾಜ್ ಅವಿರೋಧ ಆಯ್ಕೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷರಾಗಿ ಎ.ಅಮೃತ್ ರಾಜ್ ಅವಿರೋಧ ಆಯ್ಕೆಯಾಗಿದ್ದಾರೆ.

ಬಿಬಿಎಂಪಿ ಕೇಂದ್ರ ಕಚೇರಿ ನೌಕರರ ಭವನದಲ್ಲಿ ಸಂಘಕ್ಕೆ ನೂತನವಾಗಿ ಆಯ್ಕೆಯಾದ 17ನಿರ್ದೇಶಕರಿಗೆ ಚುನಾವಣಾಧಿಕಾರಿ ಚಂದ್ರಶೇಖರ್ ಪ್ರಮಾಣ ಪತ್ರ ವಿವರಿಸಿದರು. ನಂತರ ಪದಾಧಿಕಾರಿಗಳ ಆಯ್ಕೆ ಅವಿರೋಧವಾಗಿ ನಡೆಯಿತು.

ಎ.ಅಮೃತ್ ರಾಜ್ ಮಾತನಾಡಿ, 'ಅಧಿಕಾರಿ ಮತ್ತು ನೌಕರರು ನಮ್ಮ ತಂಡದ ಸಾಧನೆ ಮತ್ತು ನೂತನ ಕಾರ್ಯಯೋಜನೆ ನಂಬಿಕೆ, ಪ್ರೀತಿ ವಿಶ್ವಾಸದಿಂದ ನಮ್ಮ ತಂಡದ 17 ನಿರ್ದೇಶಕರಿಗೆ ಅತ್ಯಧಿಕ ಮತ ನೀಡಿ ಗೆಲುವು ಸಾಧಿಸುವಂತೆ ಮಾಡಿದ್ದಾರೆ' ಎಂದು ಹೇಳಿದರು.

'ನವೆಂಬರ್‌ನಲ್ಲಿ ಕನ್ನಡ ರಾಜ್ಯೋತ್ಸವದ ಹಬ್ಬವನ್ನು ನೇಪಾಳದಲ್ಲಿ ಹಮ್ಮಿಕೊಳ್ಳಲಾಗಿದ್ದು, ಮೈಸೂರು ಸಂಸ್ಥಾನದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ' ಎಂದರು.

ಪದಾಧಿಕಾರಿಗಳು: ಉಪಾಧ್ಯಕ್ಷರು– ಡಿ.ರಾಮಚಂದ್ರ, ಡಾ.ಶೋಭಾ, ಪ್ರಧಾನ ಕಾರ್ಯದರ್ಶಿ– ಕೆ.ಜಿ.ರವಿ, ಖಜಾಂಚಿ– ಸೋಮಶೇಖರ್ ಎನ್.ಎಸ್, ಕಾರ್ಯಾಧ್ಯಕ್ಷ–ಬಿ.ರುದ್ರೇಶ್, ಜಂಟಿ ಕಾರ್ಯದರ್ಶಿ– ಎಚ್.ಕೆ.ತಿಪ್ಪೇಶ್, ಕೆ.ನರಸಿಂಹ, ಸಂಘಟನಾ ಕಾರ್ಯದರ್ಶಿ– ಎಸ್.ಜಿ.ಸುರೇಶ್, ಕೆ.ಮಂಜೇಗೌಡ, ಸಂಚಾಲಕರು– ಆರ್. ರೇಣುಕಾಂಬ.

ಜಿ 20 ಪ್ರದರ್ಶನ: ಕೃಷ್ಣ ದೇವರಾಯರ ಬಗ್ಗೆ ವಿವರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನವದೆಹಲಿಯಲ್ಲಿ ನಡೆಯಲಿರುವ ಜಿ 20 ಶೃಂಗಸಭೆಯ ಅಂಗವಾಗಿ ಕೇಂದ್ರ ಸಂಸ್ಕೃತಿ ಸಚಿವಾಲಯವು 'ಮದರ್ ಆಫ್ ಡೆಮಾಕ್ರಸಿ' ಹೆಸರಿನ ಪ್ರದರ್ಶನ ಆಯೋಜಿಸಿದೆ. ಇದರಲ್ಲಿ ನೃತ್ಯಗಾರ್ತಿಯ ಪ್ರತಿಕೃತಿ, ಎ.ಐ (ಕೃತಕ ಬುದ್ಧಿಮತ್ತೆ) ನಿರೂಪಕಿ ಮತ್ತು ಭಾರತದ ಪ್ರಜಾಪ್ರಭುತ್ವದ ಇತಿಹಾಸವನ್ನು ಬಿಂಬಿಸಲಾಗುತ್ತದೆ. ಜತೆಗೆ, ವಿಜಯನಗರ ಸಾಮ್ರಾಜ್ಯದ ಕೃಷ್ಣ ದೇವರಾಯರ ಬಗ್ಗೆಯೂ ವಿವರಣೆ ಇರಲಿದೆ.

ನೃತ್ಯಬಾಲೆಯ ಪ್ರತಿಕೃತಿಯು ಐದು ಅಡಿ ಎತ್ತರವಿದ್ದು, ಪ್ರದರ್ಶನ ಸಭಾಂಗಣದ ವೇದಿಕೆಯ ಮಧ್ಯದಲ್ಲಿ ತಿರುಗುವಂತೆ ಇರಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜನತಂತ್ರದ ಇತಿಹಾಸವನ್ನು 26 ಫಲಕಗಳ ಮೂಲಕ ಪ್ರದರ್ಶಿಸಲಾಗುವುದು ಎಂದು ಹೇಳಿದ್ದಾರೆ.

ಪ್ರಾತಿನಿಧಿಕ ಚಿತ್ರ

ಸಿಂಧು-ಸರಸ್ವತಿ ನಾಗರಿಕತೆ, ವೈದಿಕ ಯುಗ, ರಾಮಾಯಣ, ಮಹಾಭಾರತ, ಮಹಾ ಜನಪದ ಮತ್ತು ಗಣತಂತ್ರ, ಜೈನ ಧರ್ಮ ಮತ್ತು ಬೌದ್ಧ ಧರ್ಮಗಳ ಉಗಮ, ಕೌಟಿಲ್ಯ ಮತ್ತು ಅರ್ಥಶಾಸ್ತ್ರ, ಭಾರತದಲ್ಲಿ ಮೆಗಾಸ್ತನೀಸ್, ಚಕ್ರವರ್ತಿ ಅಶೋಕ, ಫಾ ಹಸೀನ್ ಅವರ ಯಾತ್ರೆ, ಖಲೀಂಪುರದ ತಾಮ್ರ ಶಾಸನಗಳು ಮತ್ತು ತಮಿಳುನಾಡಿನ ಉತ್ತಿರಮೇರೂರ್‌ನ ಕುರಿತು ಪ್ರದರ್ಶನದಲ್ಲಿ ವಿವರಣೆ ಇರಲಿದೆ.

ವಿಜಯನಗರದ ಕೃಷ್ಣದೇವರಾಯ, ಮೊಘಲ್ ಚಕ್ರವರ್ತಿ ಅಕ್ಬರ್, ಮರಾಠ ರಾಜ ಛತ್ರಪತಿ ಶಿವಾಜಿ, ಭಾರತದ ಸ್ಥಳೀಯ ಸ್ವಆಡಳಿತ ಮಾದರಿ, ಭಾರತದ ಸಂವಿಧಾನ ಮತ್ತು ಭಾರತದಲ್ಲಿನ ಚುನಾವಣೆಗಳ ಬಗ್ಗೆಯೂ ಪ್ರದರ್ಶನ ಇರಲಿದೆ.

ಒಟ್ಟಾರೆಯಾಗಿ, ಭಾರತದ 7,000 ವರ್ಷಗಳ ಪ್ರಜಾಪ್ರಭುತ್ವದ ಇತಿಹಾಸವನ್ನು ಇಲ್ಲಿ ತೆರೆದಿಡಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಇತಿಹಾಸ ಮತ್ತು ಸಂಪ್ರದಾಯವನ್ನು ವಿವರಿಸುವ ಮೂಲಕ ಎಐ ನಿರೂಪಕಿಯು ಜಿ 20 ಪ್ರತಿನಿಧಿಗಳು ಮತ್ತು ನಾಯಕರನ್ನು ಸ್ವಾಗತಿಸಲಿದ್ದಾರೆ ಎಂದು ತಿಳಿಸಿದ್ದಾರೆ.

'ಸಿಂಧು-ಸರಸ್ವತಿ ನಾಗರಿಕತೆಗಳ ಯೋಜಿತ ಮತ್ತು ಸಂಘಟಿತ ನಗರಗಳೊಂದಿಗೆ ಪ್ರವರ್ಧಮಾನಕ್ಕೆ ಬಂದ ದೇಶ ನಮ್ಮದು. ಭಾರತದಲ್ಲಿ ಪ್ರಜಾಪ್ರಭುತ್ವವು ಅತ್ಯಂತ ಹಳೆಯ ಪರಿಕಲ್ಪನೆಯಾಗಿದೆ. ಬೇರೆಲ್ಲ ನಾಗರಿಕತೆಗಳು ಆಗಷ್ಟೇ ಉದಯವಾಗುತ್ತಿದ್ದಾಗ, ಭಾರತವು ಪ್ರಬುದ್ಧ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಸ್ಥಾಪಿಸಿತ್ತು. ಭಾರತೀಯ ನೀತಿಯ ಪ್ರಕಾರ ಪ್ರಜಾಪ್ರಭುತ್ವವು ಸ್ವಾತಂತ್ರ್ಯ, ಸ್ವೀಕಾರಾರ್ಹತೆ, ಸಮಾನತೆ ಮತ್ತು ಸಮಾಜದಲ್ಲಿ ಒಳಗೊಳ್ಳುವಿಕೆಯ ಮೌಲ್ಯಗಳನ್ನು ಹೊಂದಿದೆ. ನಾಗರಿಕರಿಗೆ ಗುಣಮಟ್ಟದ ಮತ್ತು ಘನತೆಯ ಜೀವನವನ್ನು ನಡೆಸಲು ಅನುವು ಮಾಡಿಕೊಡುತ್ತದೆ' ಎಂದು ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

1.30 ಲಕ್ಷ ಭದ್ರತಾ ಸಿಬ್ಬಂದಿ ನಿಯೋಜನೆ: ಜಿ 20 ಶೃಂಗಸಭೆಗೆ ಕೇಂದ್ರ ಸರ್ಕಾರವು ಬಿಗಿಭದ್ರತೆ ಕೈಗೊಂಡಿದ್ದು, 1.30 ಲಕ್ಷ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದೆ.

ಆಯಾಕಟ್ಟಿನ ಸ್ಥಳಗಳಲ್ಲಿ 45 ಸಾವಿರ ದೆಹಲಿ ಪೊಲೀಸರು ಮತ್ತು ಕೇಂದ್ರ ರಕ್ಷಣಾ ಪಡೆಯ ಸಿಬ್ಬಂದಿ ಮೊಕ್ಕಾಂ ಹೂಡಿದ್ದಾರೆ. ಜೊತೆಗೆ, ರಾಷ್ಟ್ರೀಯ ಭದ್ರತಾ ಪಡೆಯೂ ಭದ್ರತೆಯ ಹೊಣೆ ಹೊತ್ತಿದೆ.

ಶೃಂಗಸಭೆ ನಡೆಯುವ ಎರಡು ದಿನಗಳ ಕಾಲ ನವದೆಹಲಿಯ ಗಡಿ ಭಾಗಗಳ ಮೇಲೆ ಸಿಬ್ಬಂದಿಯು ಹದ್ದಿನ ಕಣ್ಣಿಟ್ಟಿದ್ದಾರೆ.

'ಗಣ್ಯರು ವಾಸ್ತವ್ಯ ಹೂಡಿರುವ ಹೋಟೆಲ್‌ಗಳ ಭದ್ರತೆಯ ಉಸ್ತುವಾರಿಯ ನೇತೃತ್ವವನ್ನು ಡಿಸಿಪಿ ದರ್ಜೆಯ ಪೊಲೀಸ್ ಅಧಿಕಾರಿಗಳು ಹೊತ್ತಿದ್ದಾರೆ' ಎಂದು ವಿಶೇಷ ಆಯುಕ್ತ (ಭದ್ರತೆ) ಮಧುಪ್ ತಿವಾರಿ ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
My clients **Mr.SRINATH.D.S.** and **Mr.VISHWANATH.S.** are intending to purchase the Schedule Property. Any person claiming any right inrespect of the Schedule Property may claim or file objection with all supportive documents, with the undersigned within 10 days from the date of publication, failing which my client will proceed with the purchase of Schedule Property and any claim / objection made thereafter shall not be binding on my client.
SCHEDULE PROPERTY
All that Piece and parcel of Residential Property bearing Municipal Number 8, 5th Temple Street, Kodandaramapura, Malleshwaram, Bangalore-560003 measuring East to West: 45 ft and North to South: 24 ft totally measuring 1080 Sq ft., along with a constructed house thereon and bounded on the: **East by** Road, **West by:** Property belongs to Mr. Shamanna, **North by** Property belongs to Mr.Krishnappa, **South by** Property belongs to Mr.Chinnaswamy.
K. RAMA MOHAN, Advocate, No.112/A, 5th Cross, 7th Main, Srinivasanagar, BSKI Stage, Banglaore-560 050

BUSINESS

Business Offers

Finance

NRI'S INVESTMENT
And Finance Available On Low Interest Against Properties, Land& Building,Sites,Flats,Converted& Agriculture Lands
Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PERSONAL

Change of Name

I, KIRTANGIRI NIRAVGIRI GOSWAMI will now be known as KIRTAN N GOSWAMI R/o #105 Akshay Shell Brindavan, Attur Layout, Yelahanka, Bangalore- 560064 vide affidavit dated 4/7/2023, before notary Ravikumar, Bangalore.

I, RAJANI .H alias SUPRIYA .H, residing at #205/3 2nd floor, 28th cross 2nd block Rajajinagar, Bangalore-560010, have changed my name to RAJANI .H vide affidavit dated 22.08.2023 before Notary Onkarappa N.R., Bangalore.

CHANGE OF NAME
I, **BASAVARAJA,** R/at.# 115, 3rd Floor, Steps Wind Flower, 7th Cross Road, Vasanthapura Bus Stop, Maruthi Layout, Subramanyapura, Bengaluru- 61 have changed my name to
BASAVARAJA G
vide affidavit dt. 04/09/2023 before Notary Subbu Swamy, Bangalore. Henceforth I shall be called **BASAVARAJA G** only

I, **ZARIN** TAJ #65, 8th Main, Madarsab Layout, A Cross, Old Gurappanpalya, Bengaluru-29, have changed my name to ZAREENA TAJ vide affidavit dated-04/09/2023

I, **SURENDRA** Residing at 15, 6th E main, 6th E cross Gruhalakshmi Layout, Nelagadaranahalli Bangalore-73 have changed my name as SURENDRA KANCHAN vide affidavit dated-4/9/2023 before Notary M.Devaraja Bangalore

'ಅನುದಾನಿತ ಶಾಲೆಗಳ ನಿವೃತ್ತ ಶಿಕ್ಷಕರಿಗೆ ಪಿಂಚಣಿ ಸೌಲಭ್ಯ ಕಲ್ಪಿಸಿ'

ಪಿಂಚಣಿ ವಂಚಿತರ ವೇದಿಕೆಯ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತಿಯಾಗಿರುವ ಅನುದಾನಿತ ಶಾಲಾ–ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಪಿಂಚಣಿ ಸೌಲಭ್ಯ ಕಲ್ಪಿಸುವಂತೆ '2006ರ ಪೂರ್ವದ ಕರ್ನಾಟಕ ರಾಜ್ಯ ಅನುದಾನಿತರ ಶಾಲಾ–ಕಾಲೇಜುಗಳ ಪಿಂಚಣಿ ವಂಚಿತರ ವೇದಿಕೆ' ಒತ್ತಾಯಿಸಿದೆ.

'ವಯೋ ನಿವೃತ್ತಿ ನಂತರ ಪಿಂಚಣಿ ರಹಿತವಾಗಿ ಜೀವನ ಸಾಗಿಸುವ ಪರಿಸ್ಥಿತಿ ಸೃಷ್ಟಿಯಾಗಿದೆ. ಅನುದಾನಿತ ಶಾಲೆಗಳ ನಿವೃತ್ತ ಶಿಕ್ಷಕರನ್ನು ಉಪವಾಸಗೆಡಿಸಿ ಶಿಕ್ಷಕರ ದಿನಾಚರಣೆ ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ' ಎಂದು ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಡಾ.ಜಿ.ಆರ್. ಹೆಬ್ಬೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ರಾಜ್ಯದಲ್ಲಿ ಜಾರಿಗೊಳಿಸಿರುವ ನೂತನ ಪಿಂಚಣಿ ಯೋಜನೆಯೇ (ಎನ್‌ಪಿಎಸ್) ಇದಕ್ಕೆ ಕಾರಣವಾಗಿದೆ. ಎನ್‌ಪಿಎಸ್ ನಮಗೆ ಅನ್ವಯಿಸುವು ದಿಲ್ಲ ಮತ್ತು ಸಂಬಂಧವೇ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

'2006ರ ಏಪ್ರಿಲ್ 1ರ ಪೂರ್ವ ದಲ್ಲಿ ಅನುದಾನ ರಹಿತವಾಗಿ ನೇಮ ಕಾತಿಯಾಗಿ ವೇತನ ಪಡೆದು ಸುಮಾರು 10 ವರ್ಷಗಳಿಂದ ಪಿಂಚಣಿ ಇಲ್ಲದೆಯೇ ಊಟ ಮತ್ತು ಔಷಧ ಖರೀದಿಗೂ ಹಣವಿಲ್ಲದೇ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಹಳೆ ಪಿಂಚಣಿ ವ್ಯವಸ್ಥೆಗೆ ಸೇರಿದ್ದೇವೆ. ಶಾಲೆಗಳ ಶಾಶ್ವತ ಅನುದಾನ ರಹಿತ ಅವಧಿಯ ಸೇವೆಯನ್ನು ಪರಿಗಣಿಸಿದರೆ ಮಾತ್ರ ವಯೋನಿವೃತ್ತಿ ಪಿಂಚಣಿ ಪಡೆಯಲು ಸಾಧ್ಯ' ಎಂದು ತಿಳಿಸಿದ್ದಾರೆ.

'ಈ ಹೊಸ ಪಿಂಚಣಿ ವ್ಯವಸ್ಥೆ ಯಲ್ಲಿ ಉದ್ಯೋಗದಾತನಿಂದ ಶೇ 10 ರಷ್ಟು ಮತ್ತು ಸರ್ಕಾರ ಶೇ 14ರಷ್ಟು ಹಣ ಕೊಡಬೇಕು. ಈ ಮೊತ್ತವನ್ನು ಸರ್ಕಾರ ಬೇರೊಂದು ಕಡೆಗೆ ಹೂಡಿಕೆ ಮಾಡಿ ಅದರಿಂದ ಪಿಂಚಣಿ ನೀಡುತ್ತದೆ. ಈ ವ್ಯವಸ್ಥೆ 2006ರ ಏ.1ರಿಂದ ಜಾರಿಯಾಗಿದೆ. ಆದರೆ, ಶಿಕ್ಷಣ ಇಲಾಖೆಯಲ್ಲಿ ಅನುದಾನಿತ ಹಾಗೂ ಅನುದಾನರಹಿತ ಎಂಬ ವ್ಯವಸ್ಥೆ ಇರುವುದರಿಂದ ಈ ಸಮಸ್ಯೆ ಎದು ರಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮ ಸೇವೆಯನ್ನು ಪರಿಗಣಿಸಿ ವಯೋನಿವೃತ್ತಿ ಪಿಂಚಣಿ ಬಿಡುಗಡೆಗೊಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಸುಮಾರು ಐದು ಸಾವಿರ ಜನರಿಗೆ ಪಿಂಚಣಿ ಸಮಸ್ಯೆಯಾಗಿದೆ. ಪಿಂಚಣಿ ಇಲ್ಲದೆಯೇ ನಿಕೃಷ್ಟವಾಗಿ ಜೀವನ ನಡೆಸುತ್ತಿದ್ದೇವೆ. ಜತೆಗೆ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದೇವೆ. ಔಷಧಿ ಪಡೆಯಲು ಹಣವಿಲ್ಲ, ಬಿಪಿಎಲ್ ಕಾರ್ಡ್ ಸಹ ಸಿಗುತ್ತಿಲ್ಲ. ಶಿಕ್ಷಕರಾದ ನಮಗೆ ಭಿಕ್ಷೆ ಬೇಡಲು ಆಗುತ್ತಿಲ್ಲ' ಎಂದು ತಿಳಿಸಿದ್ದಾರೆ.

ಹೈಕೋರ್ಟ್‌ಗೆ ಬಿಬಿಎಂಪಿ ವರದಿ: 24 ಕೆರೆಗಳ ಒತ್ತುವರಿ ತೆರವು

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ 202 ಕೆರೆಗಳು ಇದ್ದು, ಇವುಗಳ ಪೈಕಿ 24 ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ. ಈ ಪೈಕಿ ಬಳಕೆಯಾಗದ 19 ಕೆರೆಗಳಿವೆ' ಎಂದು ಬಿಬಿಎಂಪಿ ಹೈಕೋರ್ಟ್‌ಗೆ ತಿಳಿಸಿದೆ.

ರಾಜಕಾಲುವೆ ಮತ್ತು ಕೆರೆಗಳ ಒತ್ತುವರಿ ತೆರವು ಕುರಿತಂತೆ, 'ಸಿಟಿಜನ್ ಆ್ಯಕ್ಷನ್ ಗ್ರೂಪ್' ಕಾರ್ಯದರ್ಶಿ ನೊಮಿತಾ ಚಾಂಡಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲ ಎಸ್.ಎಚ್.ಪ್ರಶಾಂತ್, 'ಕೆರೆಗಳ ಒತ್ತುವರಿಗೆ ಸಂಬಂಧಿಸಿದಂತೆ ಬಿಬಿಎಂಪಿ ವೇಳಾಪಟ್ಟಿ ರೂಪಿಸಿದ್ದು, ಇದರ ಅನುಸಾರ ಮಾಹಿತಿ ಸ್ವೀಕರಿಸಿದ ಏಳು ದಿನಗಳ ಒಳಗಾಗಿ ಸಕ್ಷಮ ಪ್ರಾಧಿಕಾರದಲ್ಲಿ ದೂರು ದಾಖಲಿಸಲು ಅವಕಾಶ ನೀಡಲಾಗಿದೆ' ಎಂದರು.

ಭರ್ತಿಗೆ ಆದೇಶ: 'ಕಾರ್ಯಕಾರಿ ಎಂಜಿನಿಯರ್ ವ್ಯಾಪ್ತಿ ಹೆಚ್ಚಿನದಾಗಿದ್ದು, ಅವರ ಅಧೀನದಲ್ಲಿ ಸಹಾಯಕ ಕಾರ್ಯಕಾರಿ ಎಂಜಿನಿಯರ್ ಮತ್ತು ಸಹಾಯಕ ಎಂಜಿನಿಯರ್‌ಗಳ ಶೇ 50ರಷ್ಟು ಹುದ್ದೆ ಖಾಲಿ ಇವೆ ಎಂಬ ಬಿಬಿಎಂಪಿ ವಕೀಲರ ಹೇಳಿಕೆಯನ್ನು ಪರಿಗಣಿಸಿದ ನ್ಯಾಯಪೀಠ, 'ಹುದ್ದೆ ಖಾಲಿ ಇದ್ದರೆ, ಭರ್ತಿ ಮಾಡಲು ಮುಂದಾಗಿ' ಎಂದು ಆದೇಶಿಸಿತು.

ವರದಿಯಲ್ಲಿ ಏನಿದೆ?: 'ರಾಜಕಾಲುವೆ ಒತ್ತುವರಿ ಒತ್ತುವರಿ ಪತ್ತೆಗೆ 20 ದಿನ, ತಹಶೀಲ್ದಾರ್ ಎದುರು ದೂರು ದಾಖಲಿಸಲು ಐದು ದಿನ, ಸಮೀಕ್ಷೆಗೆ ಆದೇಶಿಸಲು ಮತ್ತು ಗುರುತು ಮಾಡಲು ಐದು ದಿನ, ಸಮೀಕ್ಷೆಗೆ 50 ದಿನ, ಬಳಿಕ 10 ದಿನ ಸಮೀಕ್ಷೆ ರಚನೆ ಮಾಡಲಾಗುವುದು. ಬಳಿಕ ಒತ್ತುವರಿದಾರರಿಗೆ ಹತ್ತು ದಿನಗಳಲ್ಲಿ ನೋಟಿಸ್ ಜಾರಿಗೊಳಿಸಿ ಅವರಿಂದ ಪ್ರತಿಕ್ರಿಯೆ ಪಡೆಯಲು ಏಳು ದಿನ, ನಂತರ 10 ದಿನಗಳ ಬಳಿಕ ತಹಶೀಲ್ದಾರ್ ಅವರಿಂದ ಅಂತಿಮ ಆದೇಶಕ್ಕೆ ಕಾಲಮಿತಿ ನಿಗದಿ ಮಾಡಲಾಗಿದೆ' ಎಂದು ಅನುಪಾಲನಾ ವರದಿಯಲ್ಲಿ ತಿಳಿಸಲಾಗಿದೆ.

'ಸಕ್ಷಮ ಪ್ರಾಧಿಕಾರವು ತಹಶೀಲ್ದಾರ್ ಕಡೆಯಿಂದ ಏಳು ದಿನಗಳಲ್ಲಿ ಸಮೀಕ್ಷೆ ನಡೆಸಿ, 15 ದಿನಗಳ ಕಾಲಾವಕಾಶ ನೀಡಿ ಒತ್ತುವರಿಗೆ ತೆರವಿಗೆ ನೋಟಿಸ್ ಜಾರಿ ಮಾಡುತ್ತದೆ. ಮೇಲ್ಮನವಿ ಸಲ್ಲಿಸಲು 30 ದಿನಗಳ ಕಾಲಮಿತಿ ನಿಗದಿಗೊಳಿಸಲಾಗಿದೆ' ಎಂದು ವಿವರಿಸಲಾಗಿದೆ.

ಶಿಕ್ಷಕರ ದಿನಾಚರಣೆ ವಿಶೇಷ

ಅತಿಥಿಗಳು: ಡಾ. ಶರಣಪ್ರಕಾಶ್ ಪಾಟೀಲ, ಆಯೋಜನೆ ಮತ್ತು ಸ್ಥಳ: ಸ್ಪರ್ಶ ಫೌಂಡೇಷನ್, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 8.45

ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅತಿಥಿಗಳು: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಪ್ರಾಸ್ತಾವಿಕ ನುಡಿ: ಎಸ್. ಮಧು ಬಂಗಾರಪ್ಪ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಬೆಳಿಗ್ಗೆ 10

ಅತಿಥಿ: ಎಸ್. ಶ್ರೀನಿವಾಸನ್, ಅಧ್ಯಕ್ಷತೆ: ಕೆ. ನಾರಾಯಣ್ ಗೌಡ, ಸನ್ಮಾನ: ಡಾ.ಎಸ್. ಚಂದ್ರಶೇಖರ್ ಶೆಟ್ಟಿ, ಡಾ.ಆರ್.ಎನ್. ಶ್ರೀನಿವಾಸ ಗೌಡ, ಸ್ಥಳ: ಕಾನೂನು ಕಾಲೇಜು, (ಹಳೆ ಕಟ್ಟಡ), ಅರಮನೆ ರಸ್ತೆ, ಬೆಳಿಗ್ಗೆ 10

ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿ: ಡಾ. ಶರಣಪ್ರಕಾಶ್ ಪಾಟೀಲ, ಅಧ್ಯಕ್ಷತೆ: ಡಾ. ಎಂ.ಕೆ. ರಮೇಶ್, ಸನ್ಮಾನಿತರು: ಡಾ. ಗಚ್ಚಿಮನಿ ಎನ್. ಜಿ., ಡಾ. ಪ್ರಭಾವತಿ, ಡಾ. ಸುಷ್ಮಾ ಆರ್. ಗಲಗಲಿ, ಡಾ. ಅರುಣ, ಡಾ. ವಿಜಯಲಕ್ಷ್ಮಿ ಬಿ. ಮರಮಕಲ್, ಡಾ. ನಿತೀನ ಮಾಹುರಕರ, ಡಾ. ಎನ್. ನಾರಾಯಣಪ್ಪ, ಜಸಿಂತಾ ಡಿಸೋಜ, ಆಯೋಜನೆ ಮತ್ತು ಸ್ಥಳ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, ಬೆಳಿಗ್ಗೆ 11


ನಿರ್ಮಲಾನಂದ ನಾಥ ಸ್ವಾಮೀಜಿ

ಅತಿಥಿಗಳು: ಜಯಕರ ಎಸ್.ಎಂ., ಡಾ.ಸಿ. ಎನ್. ಮಂಜುನಾಥ್, ಶೇಕ್ ಲತೀಫ್, ಶ್ರೀನಿವಾಸ್ ಚೌಡಪ್ಪ, ಅಜಿತ್ ಕುಮಾರ್ ಹೆಗಡೆ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ, ಎಚ್.ಎನ್. ಸಭಾಂಗಣ, ಜ್ಞಾನಭಾರತಿ ಆವರಣ, ಮಧ್ಯಾಹ್ನ 12.30

ಮಂಜುನಾಥ್

ಅತಿಥಿ: ಜಿ. ಪರಮೇಶ್ವರ್, ಅಧ್ಯಕ್ಷತೆ: ವಿಷ್ಣು ಭರತ್ ಅಲಂಪಲ್ಲಿ, ಸ್ಥಳ: ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್, ಬಸವನಗುಡಿ, ಸಂಜೆ 4.30

ನಗರದಲ್ಲಿ ಇಂದು

'ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ'ಯ ಸಂಸ್ಥಾಪನ ದಿನ: ಉಪನ್ಯಾಸ: ಹಿಮಾಂಶು ಪಾಠಕ್, ಆಯೋಜನೆ ಮತ್ತು ಸ್ಥಳ: ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಹೆಸರಘಟ್ಟ, ಬೆಳಿಗ್ಗೆ 10

'ಜನಪದ ದೀಪಾರಾಧನೆ' ಪ್ರಶಸ್ತಿ ಪ್ರದಾನ, ಧ್ವನಿಸಾಂದ್ರಿಕೆ ಹಾಗೂ ಪುಸ್ತಕ ಬಿಡುಗಡೆ: ಎನ್. ಸಂತೋಷ್ ಹೆಗ್ಡೆ, 'ಕುವೆಂಪು ದೀಪ' ಪ್ರಶಸ್ತಿ ಪ್ರದಾನ: ಎನ್.ಆರ್. ನಾಯಕ, ಶಾಂತಿ ನಾಯಕ, ಪುರಸ್ಕೃತರು: ನರಹಳ್ಳಿ ಬಾಲಸುಬ್ರಹ್ಮಣ್ಯ, 'ಕಾರಂತ ದೀಪ' ಪ್ರಶಸ್ತಿ ಪುರಸ್ಕೃತರು: ಸಿ. ನಾಗಭೂಷಣ, 'ಕಲಾದೀಪ ಪ್ರಶಸ್ತಿ' ಪುರಸ್ಕೃತರು: ಎಚ್.ಎನ್. ಸುರೇಶ್, 'ದೇವಮ್ಮ ರಾಮನಾಯಕ ದೀಪ ಪ್ರಶಸ್ತಿ' ಪುರಸ್ಕೃತರು: ಚಂದ್ರಕಾಂತ ಮುಕುಂದ ಆಚಾರಿ, 'ವಿದ್ಯಾರ್ಥಿ ದೀಪ ಪ್ರಶಸ್ತಿ' ಪುರಸ್ಕೃತರು: ಶ್ರೀನಿಧಿ ಪ್ರಕಾಶ್ ಗೌಡ, ಆಯೋಜನೆ: ಜಾನಪದ ವಿಶ್ವ ಪ್ರತಿಷ್ಠಾನ, ಸ್ಥಳ: ಕೆ.ಆರ್.ಜಿ. ಹಾಲ್, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10ರಿಂದ

'ಮಹಿಳಾ ಮಾನವ ಹಕ್ಕುಗಳು ಹಾಗೂ ಲಿಂಗ ಸಮಾನತೆ' ವಿಚಾರಸಂಕಿರಣ: ಶಾಂತಿ ಧೈರ್ಯಂ ಅವರ 'ಏಸಿಯಾ ಫೆಸಿಫಿಕ್ ಜರ್ನಿ' ಪುಸ್ತಕ ಬಿಡುಗಡೆ: ಅತಿಥಿಗಳು: ವೈ.ಎಸ್.ಆರ್. ಮೂರ್ತಿ, ಫಾದರ್ ಅಗಸ್ಟಿನ್, ರೂತ್ ಮನೋರಮಾ, ಆಯೋಜನೆ: ವುಮೆನ್ಸ್ ವಾಯ್ಸ್, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಲ್ಯಾಂಗ್‌ಫೋರ್ಡ್ ರಸ್ತೆ, ಬೆಳಿಗ್ಗೆ 11ರಿಂದ

ಶಾಂತನು ಗುಪ್ತಾ ಅವರ 'ಅಜಯ್ ಟು ಯೋಗಿ ಆದಿತ್ಯನಾಥ್' ಪುಸ್ತಕ ಬಿಡುಗಡೆ: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಜಫರ್ ಇಸ್ಲಾಂ, ನಿರ್ಮಲಾನಂದನಾಥ ಸ್ವಾಮೀಜಿ, ಜಯೇಂದ್ರಪುರಿ ಸ್ವಾಮೀಜಿ, ಟಿ.ವಿ. ಮೋಹನದಾಸ್ ಪೈ, ಆಯೋಜನೆ: ಇತಿಹಾಸ ಅಕಾಡೆಮಿ, ಸ್ಥಳ: ಆರ್. ವಿ. ದಂತ ವೈದ್ಯಕೀಯ ಕಾಲೇಜಿನ ಸಭಾಂಗಣ, ಜೆ.ಪಿ. ನಗರ, ಮಧ್ಯಾಹ್ನ 2.30

ಜಾನಪದ ಸಂಭ್ರಮ: ಉದ್ಘಾಟನೆ: ಶಿವರಾಜು, ಅಧ್ಯಕ್ಷತೆ: ಅಪ್ಪಗೆರೆ ತಿಮ್ಮರಾಜು, ಪ್ರಾಸ್ತಾವಿಕ ನುಡಿ: ಕೆ. ನಾಗರಾಜ, ಆಯೋಜನೆ: ಆರಂಭ ಟ್ರಸ್ಟ್, ಚರಿತ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

'ಗೌರಿ'ಯ ನೆನಪಿನಲ್ಲಿ ಒಂದು ಸಂವಾದ: 'ಸರ್ವಾಧಿಕಾರದ ಕಾಲದಲ್ಲಿ ಭಾರತವನ್ನು ಮರುಕಟ್ಟುವ ಕಲ್ಪನೆ': ಭಾಗವಹಿಸುವವರು: ಸಿದ್ದರಾಮಯ್ಯ, ರಾಕೇಶ್ ಟಿಕಾಯತ್, ಏಂಜೆಲಾ ರಂಗದ್, ಪ್ರಕಾಶ್ ರೈ, ಶೈಲಜ ಟೀಚರ್, ಸುಪ್ರಿಯಾ ಶ್ರೀನಟೆ, ಯಾಸೀನ್ ಮಲ್ಪೆ, ಆಯೋಜನೆ: ಗೌರಿ ಸ್ಮಾರಕ ಟ್ರಸ್ಟ್, ಸ್ಥಳ: ಟೌನ್ ಹಾಲ್, ಸಂಜೆ 5


ಪ್ರಕಾಶ್ ರೈ

'ಮಹಾಲಕ್ಷ್ಮಿ ವೈಭವಮ್' ತೆಲುಗಿನಲ್ಲಿ ಪ್ರವಚನ ಯಜ್ಞ: ಷಣ್ಮುಖ ಶರ್ಮ, ಆಯೋಜನೆ: ಋಷಿಪೀಠಂ ಸತ್ಸಂಗ, ಸ್ಥಳ: ನ್ಯೂ ಹಾರಿಜೋನ್ ಕಾಲೇಜ್ ಆಫ್ ಎಂಜಿನಿಯರಿಂಗ್, ಮಾರತ್ತಹಳ್ಳಿ, ಸಂಜೆ 6ರಿಂದ

ಪ್ರವಚನ ವಾಹಿನಿ: 'ಆರೋಗ್ಯ-ಅಧ್ಯಾತ್ಮ' ಕುರಿತು ಉಪನ್ಯಾಸ: ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಹವಾನಿಯಂತ್ರಣ ರಹಿತ ಬಸ್‌ಗಳಿಗೆ ಆದ್ಯತೆ ನೀಡುತ್ತಿರುವ ದೂರದೂರಿನ ಪಯಣಿಗರು

ಕೆಎಸ್‌ಆರ್‌ಟಿಸಿಗೆ 40 ಹೊಸ ಸ್ಲೀಪರ್ ಬಸ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ದೂರದ ಜಿಲ್ಲೆಗಳಿಗೆ ಹೋಗುವ ಪ್ರಯಾಣಿಕರು ಹವಾ ನಿಯಂತ್ರಣ ರಹಿತ ಸ್ಲೀಪರ್ ಬಸ್‌ಗಳಿಗೆ ಆದ್ಯತೆ ನೀಡುತ್ತಿರುವುದರಿಂದ ಈ ಬಸ್‌ಗಳನ್ನು ಹೆಚ್ಚಿಸಲು ಕೆಎಸ್‌ಆರ್‌ಟಿಸಿ ಮುಂದಾಗಿದೆ.

ಹವಾನಿಯಂತ್ರಣವಲ್ಲದ ಸ್ಲೀಪರ್ ಬಸ್‌ಗಳಿಗಾಗಿ ವಾರದ ಒಳಗೆ 40 ಟ್ರಕ್‌ಗಳು ಬೆಂಗಳೂರಿಗೆ ಬರಲಿವೆ. ಒಂದು ತಿಂಗಳ ಒಳಗೆ ಈ ಟ್ರಕ್‌ಗಳು ಬಾಡಿ ಕಟ್ಟಿಸಿಕೊಂಡು ಸಂಚಾರಕ್ಕೆ ಸಿದ್ಧವಾಗಲಿವೆ.

'ಕೆಲವೇ ದಿನಗಳಲ್ಲಿ ಬೆಂಗಳೂರಿಗೆ ಬರಲಿರುವ ಲೈಲೆಂಡ್ ಟ್ರಕ್‌ಗಳಿಗೆ ಲೈಲೆಂಡ್ ಕಂಪನಿಯವರೇ ನಾನ್ ಎಸಿ ಸ್ಲೀಪರ್ ಬಸ್‌ನ ಬಾಡಿ ಕಟ್ಟುವ ಕೆಲಸ ಮಾಡಲಿದ್ದಾರೆ. ಪ್ರತಿ ಬಸ್‌ಗೆ ₹ 46 ಲಕ್ಷ ವೆಚ್ಚವಾಗಲಿದೆ. ನಮ್ಮ ನಿಗಮವೇ ವೆಚ್ಚವನ್ನು ಭರಿಸಲಿದೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬು ಕುಮಾರ್ ಮಾಹಿತಿ ನೀಡಿದರು.

ಮಂಗಳೂರು, ಉಡುಪಿ, ಕಾರವಾರ, ಬೆಳಗಾವಿ, ಹುಬ್ಬಳ್ಳಿ, ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ, ಯಾದಗಿರಿ ಹೀಗೆ ಬೇರೆ ಬೇರೆ ಊರಿಗೆ ಹೋಗುವ ಪ್ರಯಾಣಿಕರು ಕೆಎಸ್‌ಆರ್‌ಟಿಸಿಯ ಹವಾನಿಯಂತ್ರಿತ ಸ್ಲೀಪರ್ ಬಸ್‌ಗಳಿಗಿಂತ ಈ ಬಸ್‌ಗಳನ್ನೇ ಹೆಚ್ಚು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಪ್ರಜಾವಾಣಿ ವಿಶೇಷ

ಕೆಎಸ್‌ಆರ್‌ಟಿಸಿ ಹವಾನಿಯಂತ್ರಣ ರಹಿತ ಸ್ಲೀಪರ್ ಬಸ್ (ಸಾಂದರ್ಭಿಕ ಚಿತ್ರ)

ಅನುದಾನ ಮಂಜೂರು: ಸಾರಿಗೆಯ ನಾಲ್ಕು ನಿಗಮಗಳಲ್ಲಿ ಬಸ್ ಖರೀದಿಸಲು ವಿಶೇಷ ಬಂಡವಾಳ ನೆರವು ಅಡಿ ರಾಜ್ಯ ಸರ್ಕಾರವು ಆಗಸ್ಟ್‌ನಲ್ಲಿ ಅನುದಾನ ಮಂಜೂರು ಮಾಡಿತ್ತು.

ಕೆಎಸ್‌ಆರ್ ಟಿಸಿಗೆ ₹ 100 ಕೋಟಿ, ಬಿಎಂಟಿಸಿಗೆ ₹ 150 ಕೋಟಿ, ಎನ್‌ಡಬ್ಲ್ಯುಕೆಆರ್‌ಟಿಸಿಗೆ ₹ 150 ಕೋಟಿ, ಕೆಕೆಆರ್‌ಟಿಸಿಗೆ ₹ 100 ಕೋಟಿ ಮಂಜೂರಾಗಿತ್ತು.

ಬೇರೆ ನಿಗಮಗಳಲ್ಲಿಯೂ ಖರೀದಿ: ವಾಯವ್ಯ ಕರ್ನಾಟಕ ಸಾರಿಗೆ ನಿಗಮ (ಎನ್‌ಡಬ್ಲ್ಯುಕೆಆರ್‌ಟಿಸಿ) ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ನಿಗಮಗಳು (ಕೆಕೆಆರ್‌ಟಿಸಿ) ಕೂಡ ಹವಾನಿಯಂತ್ರಣ ರಹಿತ ಸ್ಲೀಪರ್ ಬಸ್‌ಗಳ ಖರೀದಿಗೆ ಮುಂದಾಗಿವೆ.

ಎನ್‌ಡಬ್ಲ್ಯುಕೆಆರ್‌ಟಿಸಿ 20 ಹಾಗೂ ಕೆಕೆಆರ್‌ಟಿಸಿ 6 ಬಸ್‌ಗಳನ್ನು ಖರೀದಿಸಲಿವೆ. ಇದಲ್ಲದೇ ಈ ವರ್ಷವೇ ಕೆಎಸ್‌ಆರ್‌ಟಿಸಿ 4, ಎನ್‌ಡಬ್ಲ್ಯುಕೆಆರ್‌ಟಿಸಿ 4 ಹವಾನಿಯಂತ್ರಿತ ಸ್ಲೀಪರ್‌ಗಳನ್ನು ಕೂಡ ಖರೀದಿಸಲು ಯೋಜನೆ ರೂಪಿಸಿವೆ.

'10 ವರ್ಷಗಳಿಂದ ಬಸ್ ಹೆಚ್ಚಾಗಿರಲಿಲ್ಲ'

10 ವರ್ಷಗಳಿಂದ ಬಸ್ ಇದ್ದಷ್ಟೇ ಇವೆ. ಪ್ರಯಾಣಿಕರ ಸಂಖ್ಯೆ ಏರಿದೆ. ಅದಕ್ಕೆ ಅನುಗುಣವಾಗಿ ಬಸ್ ಖರೀದಿಸುವ ಉದ್ದೇಶವನ್ನು ಸಾರಿಗೆ ಇಲಾಖೆ ಹೊಂದಿದೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ ಈ ನಾಲ್ಕು ನಿಗಮಗಳಲ್ಲಿ ಬೇರೆ ಬೇರೆ ರೀತಿಯ ಒಟ್ಟು 4 ಸಾವಿರ ಬಸ್‌ಗಳನ್ನು ಖರೀದಿಸುವ ಗುರಿ ಇದೆ.

ಬಿಎಂಟಿಸಿಯಲ್ಲಿ ಈ ಆರ್ಥಿಕ ವರ್ಷ ಮುಗಿಯುವುದರ ಒಳಗೆ 921 ಎಲೆಕ್ಟ್ರಿಕ್ ಹೊಸ ಬಸ್‌ಗಳು ರಸ್ತೆಗೆ ಇಳಿಯಲಿವೆ. ಕೆಎಸ್‌ಆರ್‌ಟಿಸಿಯಲ್ಲಿ ಪ್ರೊಟೊಟೈಪ್ 200 ಬಸ್‌ಗಳ ಖರೀದಿ ಪ್ರಕ್ರಿಯೆ ಒಂದು ತಿಂಗಳ ಒಳಗೆ ಮುಗಿಯಲಿದೆ. ಬಳಿಕ ಮತ್ತೆ 300 ಬಸ್ ಖರೀದಿಸಲಾಗುವುದು. ವಿವಿಧ ನಿಗಮಗಳಲ್ಲಿ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಹವಾನಿಯಂತ್ರಣ ರಹಿತ ಬಸ್ ಖರೀದಿ ನಡೆಯುತ್ತಿದೆ.

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಬರಲಿದೆ ಡಬಲ್ ಡೆಕ್ಕರ್ ಬಸ್!

10 ಡಬಲ್ ಡೆಕ್ಕರ್ ಬಸ್‌ಗಳನ್ನು ಖರೀದಿಸಲು ಬಿಬಿಎಂಪಿ ಮುಂದಾಗಿದೆ. ಡಬಲ್ ಡೆಕ್ಕರ್ ಬಸ್‌ಗಳು ಬಂದರೆ ಅವರು ಆಕರ್ಷಣೆಯ ಕೇಂದ್ರಗಳಾಗಲಿವೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

'ಎರಡು ವಾರಗಳಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಲು ಚಿಂತನೆ ನಡೆಸಲಾಗಿದೆ. 1970-80ರ ದಶಕಗಳಲ್ಲಿ ಬೆಂಗಳೂರಿನಲ್ಲಿ ಡಬಲ್ ಡೆಕ್ಕರ್ ಬಸ್‌ಗಳು ಓಡಾಡುತ್ತಿದ್ದವು. ಈಗಿನ ಪೀಳಿಗೆ ಅವುಗಳನ್ನು ನೋಡಿಲ್ಲ. ಈ ಕೊರತೆ ಒಂದು ವರ್ಷದೊಳಗೆ ನೀಗುವ ಸಾಧ್ಯತೆ ಇದೆ' ಎಂದು ಮಾಹಿತಿ ನೀಡಿದ್ದಾರೆ.

ಕೆಎಸ್‌ಆರ್‌ಟಿಸಿಯಲ್ಲೂ ಡಬಲ್ ಡೆಕ್ಕರ್: 'ಬಿಬಿಎಂಪಿಗೆ ಡಬಲ್ ಡೆಕ್ಕರ್ ಬಸ್‌ಗಳು ಬಂದ ಮೇಲೆ ಅದರ ಸಾಧಕ ಬಾಧಕಗಳನ್ನು ನೋಡಲಾಗುವುದು. ಆನಂತರ ಮೈಸೂರಿನಂಥ ನಗರಗಳಲ್ಲಿ ಡಬಲ್ ಡೆಕ್ಕರ್ ಬಸ್‌ಗಳನ್ನು ಇಳಿಸಲು ಚಿಂತಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಡಬಲ್ ಡೆಕ್ಕರ್ ಬಸ್

ಪ್ರಯಾಣಿಕರ ನಿರೀಕ್ಷೆಗೆ ತಕ್ಕಂತೆ ಸೌಲಭ್ಯ ನೀಡಬೇಕು, ಪ್ರಯಾಣಿಕರ ಪ್ರಮಾಣಕ್ಕೆ ಅನುಗುಣವಾಗಿ ಬಸ್ ಸಂಖ್ಯೆ ಹೆಚ್ಚಿಸಬೇಕು. ಅದಕ್ಕಾಗಿ ಬಸ್ ಖರೀದಿಸಲಾಗುತ್ತಿದೆ

ವಿ. ಅನ್ಬುಕುಮಾರ್, ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಆರ್‌ಟಿಸಿ

'ಬಿಎಂಟಿಸಿಯಲ್ಲಿ ಶೇ 8ರಷ್ಟು ಕ್ಯುಆರ್ ಕೋಡ್ ಬಳಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇರುವ ದೇವನಹಳ್ಳಿ ಸಂಪರ್ಕಿಸುವ ಬಿಎಂಟಿಸಿ ಬಸ್‌ಗಳಲ್ಲಿ ಈಗಾಗಲೇ ಕ್ಯುಆರ್ ಕೋಡ್ ಬಳಕೆಯಲ್ಲಿದೆ. ಆ ಬಸ್‌ಗಳಲ್ಲಿ ಸಂಚರಿಸುವ ಪ್ರಯಾಣಿಕರಲ್ಲಿ ಶೇ 8ರಷ್ಟು ಮಂದಿ ಕ್ಯುಆರ್ ಕೋಡ್ ಬಳಸುತ್ತಿದ್ದಾರೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕಲಾಸಿಪಾಳ್ಯದ ಬಿಎಂಟಿಸಿ ಬಸ್ ನಿಲ್ದಾಣಕ್ಕೆ ಸೋಮವಾರ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಸೇರಿ ಅಧಿಕಾರಿಗಳೊಂದಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದರು.

ಬಿಎಂಟಿಸಿಯಲ್ಲೇ ಮೊದಲು ಕ್ಯುಆರ್‌ಕೋಡ್ ಆರಂಭವಾಗಿರುವುದು. ಈಗ ಎನ್‌ಡಬ್ಲ್ಯುಕೆಎಸ್‌ಆರ್‌ಟಿಸಿಯಲ್ಲಿ ಈ ವ್ಯವಸ್ಥೆ ಜಾರಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಖಾಸಗಿ ಬಸ್‌ಗಳಿಗೆ ಜಿಪಿಎಸ್ ಅಳವಡಿಸಬೇಕು ಎಂಬುದು ರಾಜ್ಯ ಸರ್ಕಾರ ಮಾಡಿದ ನಿಯಮವಲ್ಲ. ಕೇಂದ್ರ ಸರ್ಕಾರ ರೂಪಿಸಿದ ನಿಯಮ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸೆ.26ರಂದು ಬಿಎಂಟಿಸಿ ರಜತ-ಮಹೋತ್ಸವ ಹಮ್ಮಿಕೊಳ್ಳಲಾಗಿದೆ. ಅನುಕಂಪದ ಆಧಾರದಲ್ಲಿ 150 ಜನರಿಗೆ ಉದ್ಯೋಗ ನೀಡುವುದು, ಉತ್ತಮ ಚಾಲಕ, ನಿರ್ವಾಹಕ, ತಾಂತ್ರಿಕ ಸಿಬ್ಬಂದಿಯನ್ನು ಗೌರವಿಸುವುದು ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಈ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

'ಕಲಾಸಿಪಾಳ್ಯ ಬಸ್ ನಿಲ್ದಾಣಕ್ಕೆ ಭೇಟಿ ನೀಡಿ ಎಂದು ಸಾರ್ವಜನಿಕರು ಕೋರಿದ್ದರಿಂದ ಬಂದು ಪರಿಶೀಲಿಸಿದ್ದೇನೆ. ಉತ್ತಮ ಸೌಲಭ್ಯಗಳಿವೆ. ಇನ್ನೂ ಕೆಲವು ಸಣ್ಣಪುಟ್ಟ ಕೆಲಸಗಳು ಆಗಬೇಕಿವೆ. ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು.

ಕೆಎಸ್‌ಆರ್‌ಟಿಸಿಗೆ ಮತ್ತೆರಡು ಪ್ರಶಸ್ತಿ

ಬೆಂಗಳೂರು: ಕಾಮಕಾಜಿ ಬಿ 2 ಬಿ ಮೀಡಿಯಾ ಪ್ರತಿಷ್ಠಾಪಿಸಿರುವ 15ನೇ ಆವೃತ್ತಿಯ ಎಕ್ಸ್‌ಪ್ರೆಸ್ ಲಾಜಿಸ್ಟಿಕ್ ಹಾಗೂ ಸಪ್ಲೈ ಚೈನ್ ಲೀಡರ್‌ಶಿಪ್ ಪ್ರಶಸ್ತಿಗೆ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿದೆ

ಅತ್ಯುತ್ತಮ ಉದ್ಯೋಗದಾತ ಹಾಗೂ ಅತ್ಯುತ್ತಮ ಸುರಕ್ಷಾ ಉಪಕ್ರಮ ಅನುಷ್ಠಾನ ವರ್ಗಗಳಲ್ಲಿ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿದೆ ಸೆ.24ರಂದು ಮುಂಬಯಿಯ ತಾಜ್ ಲ್ಯಾಂಡ್ಸ್ ಎಂಡ್‌ನಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ಇತ್ತೀಚೆಗಷ್ಟೇ ಏಷ್ಯಾದ ಅತ್ಯುತ್ತಮ ಉದ್ಯೋಗದಾತ ಬ್ರ್ಯಾಂಡ್ ಪ್ರಶಸ್ತಿಯನ್ನು ಕೆಎಸ್‌ಆರ್‌ಟಿಸಿ ಪಡೆದಿತ್ತು. ವಿ ಕನೆಕ್ಟ್ ಇಂಡಿಯಾ ಮೀಡಿಯಾ ಆ್ಯಂಡ್ ರಿಸರ್ಚ್ ನೀಡುವ 'ಏಷ್ಯಾ ಬೆಸ್ಟ್ ಕ್ವಾಲಿಟಿ' ಪ್ರಶಸ್ತಿಗೂ ಆಯ್ಕೆಯಾಗಿತ್ತು.

2.53 ಹೆಕ್ಟೇರ್ ಅರಣ್ಯ ಬಳಕೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಂಗಳೂರು-ಬೆಂಗಳೂರು ನಡುವಿನ ರಾಷ್ಟ್ರೀಯ ಹೆದ್ದಾರಿಯ ಅಡ್ಡಹೊಳೆಯಿಂದ ಬಂಟ್ವಾಳ ಕ್ರಾಸ್‌ವರೆಗೆ ಚತುಷ್ಪಥ ಕಾಮಗಾರಿಗೆ 2.53 ಹೆಕ್ಟೇರ್ ಅರಣ್ಯ ಬಳಕೆಗೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ಅನುಮತಿ ನೀಡಿದೆ.

ಈ ಯೋಜನೆಗೆ ಅರಣ್ಯ ಸಂರಕ್ಷಣಾ ಕಾಯ್ದೆ 1980ರಡಿ ರೇಖ್ಯಾ ಗ್ರಾಮದಲ್ಲಿ 2.53 ಎಕರೆ ಅರಣ್ಯ ಬಳಕೆಗೆ ಒಪ್ಪಿಗೆ ನೀಡುವಂತೆ ಕೋರಿ ಕರ್ನಾಟಕ ಸರ್ಕಾರವು 2021ರ ಸೆಪ್ಟೆಂಬರ್, 2022ರ ಮಾರ್ಚ್ ಹಾಗೂ 2023ರ ಮೇ ತಿಂಗಳಲ್ಲಿ ಸಚಿವಾಲಯಕ್ಕೆ ಪತ್ರ ಬರೆದಿತ್ತು. ಜೂನ್ 26ರಂದು ನಡೆದ ಪ್ರಾದೇಶಿಕ ಉನ್ನತಾಧಿಕಾರ ಸಮಿತಿಯ (ಆರ್‌ಇಸಿ) ಸಭೆಯಲ್ಲಿ ಈ ಪ್ರಸ್ತಾವನೆ ಬಗ್ಗೆ ಚರ್ಚಿಸಲಾಗಿತ್ತು. ಇದೀಗ ಸಚಿವಾಲಯವು ಪ್ರಸ್ತಾವನೆಗೆ ಒಪ್ಪಿಗೆ ನೀಡಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ದಕ್ಷಿಣ ಕನ್ನಡ ಜಿಲ್ಲೆಯ ಮಲಂತಿಗೆ ಗ್ರಾಮದಲ್ಲಿ 5.10 ಹೆಕ್ಟೇರ್ ಪ್ರದೇಶದಲ್ಲಿ ಕಡ್ಡಾಯವಾಗಿ ಅರಣ್ಯೀಕರಣ ಮಾಡಬೇಕು. ಜತೆಗೆ, ಅರಣ್ಯ ಬಳಕೆಗೆ ಅನುಮತಿ ನೀಡಿರುವ ಪ್ರದೇಶದಲ್ಲಿ ಕನಿಷ್ಠ ಸಂಖ್ಯೆಯ ಮರಗಳನ್ನು ಕಡಿಯಬೇಕು ಎಂದೂ ಸಚಿವಾಲಯವು ಸೂಚಿಸಿದೆ. ಈ ಅನುಮೋದನೆಯು ಐದು ವರ್ಷಗಳಿಗೆ ಸೀಮಿತವಾಗಿರುತ್ತದೆ ಎಂದೂ ಸ್ಪಷ್ಟಪಡಿಸಿದೆ.

ಮಂಗಳೂರು–ಬೆಂಗಳೂರು ನಡುವೆ ಹೆಚ್ಚುವರಿ ವಿಮಾನ

ಮಂಗಳೂರು: ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ಸೆ.7ರಿಂದ ಹೆಚ್ಚುವರಿ ವಿಮಾನಗಳು ಸಂಚಾರ ನಡೆಸಲಿವೆ.

ವಾರದ ದಿನಗಳು ಹಾಗೂ ಭಾನುವಾರ 5 ಮತ್ತು ಶನಿವಾರ 6 ವಿಮಾನಗಳು ಮಂಗಳೂರು- ಬೆಂಗಳೂರು ನಡುವೆ ಸಂಚರಿಸಲಿವೆ. ಪ್ರಸ್ತುತ ಎಲ್ಲ ದಿನಗಳಲ್ಲಿ ನಾಲ್ಕು ಇಂಡಿಗೊ ವಿಮಾನಗಳು ಮಂಗಳೂರು-ಬೆಂಗಳೂರು ನಡುವೆ ಸಂಚರಿಸುತ್ತಿವೆ. ಸೆ.7ರಿಂದ ಸಂಚರಿಸಲಿರುವ ಐದನೇ ದೈನಂದಿನ (6E 6858) ವಿಮಾನವು ಮಂಗಳೂರಿಗೆ ಬೆಳಿಗ್ಗೆ 8.35 ಕ್ಕೆ ಬರಲಿದ್ದು, 6E 5347 ಸಂಖ್ಯೆಯ ವಿಮಾನ 9.10ಕ್ಕೆ ಬೆಂಗಳೂರಿಗೆ ಹೊರಡಲಿದೆ. ಅ. 28ರವರೆಗೆ ಈ ಸೌಲಭ್ಯ ಇರಲಿದೆ ಎಂದು ಮೂಲಗಳು ತಿಳಿಸಿವೆ.

ಐಐಎಚ್‌ಆರ್: ರೈತ ಸೌಲಭ್ಯ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಭಾರತೀಯ ಕೃಷಿ ಅಧ್ಯಯನ ಪರಿಷತ್-ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ (ಐಸಿಎಆರ್-ಐಐಎಚ್‌ಆರ್) ರೈತರು ಮತ್ತು ತೋಟಗಾರಿಕಾ ಬೆಳೆಗಾರರ ಅನುಕೂಲಕ್ಕಾಗಿ 8 ಬಗೆಯ ಸೌಲಭ್ಯ ಕೇಂದ್ರಗಳನ್ನು ಉದ್ಘಾಟಿಸಲಾಯಿತು.

ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಮಹಾ ನಿರ್ದೇಶಕ ಹಿಮಾಂಶು ಪಾಠಕ್ ಈ ಕೇಂದ್ರಗಳನ್ನು ಉದ್ಘಾಟಿಸಿದರು.

ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಸುಮಾರು 330 ಮಿಲಿಯನ್ ಮೆಟ್ರಿಕ್ ಟನ್‌ಗಳಾಗಿದೆ. ತೋಟಗಾರಿಕಾ ಬೆಳೆಗಳ ಉತ್ಪಾದನೆ ಸುಮಾರು 350 ಮಿಲಿಯನ್ ಮೆಟ್ರಿಕ್ ಟನ್. ಈ ಮೂಲಕ ದೇಶದ ಜನರ ಆಹಾರ ಭದ್ರತೆಯಲ್ಲದೆ ಪೋಷಕಾಂಶ ಭದ್ರತೆಗೂ ಖಾತ್ರಿಪಡಿಸಿಕೊಳ್ಳಲಾಗಿದೆ. ಇದಲ್ಲದೆ ತೋಟಗಾರಿಕಾ ಉತ್ಪನ್ನಗಳ ರಫ್ತಿನಿಂದ ದೇಶದ ರೈತರ ಆದಾಯ ಹೆಚ್ಚಿಸಲು ಸಹಕಾರಿಯಾಗಿದೆ ಎಂದು ಹಿಮಾಂಶು ಪಾಠಕ್ ತಿಳಿಸಿದರು.

ಸೌಲಭ್ಯ ಕೇಂದ್ರಗಳು ವಿದ್ಯಾರ್ಥಿಗಳ, ರೈತರ, ನವೋದ್ಯಮಿಗಳ ಹಾಗೂ ತೋಟಗಾರಿಕೆಯ ಇತರ ಪಾಲುದಾರರಿಗೆ ಅಮೂಲ್ಯವಾಗಿದ್ದು ತನ್ಮೂಲಕ ದೇಶದ ಪ್ರಗತಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಸ್ನಾತಕೋತ್ತರ ವಿದ್ಯಾರ್ಥಿಗಳ ಭೋಜನಾಲಯ, ಸಸ್ಯ ಆರೋಗ್ಯ ಚಿಕಿತ್ಸಾಲಯ, ಸಸ್ಯ ಮಾಲ್(ನರ್ಸರಿ), ಕರ್ನಾಟಕ ವಿದೇಶಿ ಹಣ್ಣುಗಳ ಬೆಳೆಗಾರರ ಸಂಘದ ಘಟಕ, ಕಮಲಂ (ಡ್ರ್ಯಾಗನ್) ಹಣ್ಣಿನ ಶ್ರೇಷ್ಠತೆಯ ಕೇಂದ್ರ, ಕೃಷಿ ವ್ಯಾಪಾರ ಪೋಷಣ ಕೇಂದ್ರ, ಅಣಬೆ ಬೀಜೋತ್ಪಾದನೆ ಹಾಗೂ ಬೆಳೆಗಾರರ ಸಾಮರ್ಥ್ಯ ಅಭಿವೃದ್ಧಿ ಕೇಂದ್ರ, ಎಚ್‌ಎಎಲ್ ಸಹಭಾಗಿತ್ವದೊಂದಿಗೆ ಬೀಜ ಉತ್ಪಾದನಾ ಕೇಂದ್ರ ಉದ್ಘಾಟನೆಗೊಂಡವು.

ಐಐಎಚ್‌ಆರ್ ನಿರ್ದೇಶಕ ಸಂಜಯ್ ಕುಮಾರ್ ಸಿಂಗ್, ಎಚ್‌ಎಎಲ್ ಕಾರ್ಯನಿರ್ವಾಹಕ ನಿರ್ದೇಶಕ ವಿ.ಎಸ್. ಶ್ರೀನಿವಾಸ್, ಕೆಇಎಫ್‌ಎ ಅಧ್ಯಕ್ಷ ಎಸ್.ಡಿ. ಬಾಬು ಸಿದ್ದಕುಮಾರ್, ಜಂಟಿ ಕೃಷಿ ನಿರ್ದೇಶಕಿ ದೀಪಜ, ಡಾ.ವಿ.ಬಿ. ಪಾಟೀಲ್ ಇದ್ದರು.

ಜಯನಗರ–ಆರ್.ವಿ. ರಸ್ತೆ ಮೆಟ್ರೊ ನಿಲ್ದಾಣಗಳ ಮಧ್ಯೆ ನಾಳೆ ಆರಂಭ

ಶೀಘ್ರದಲ್ಲೇ 'ಮೆಟ್ರೊ ಮಿತ್ರ' ಆಟೊ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ನಿಲ್ದಾಣಗಳಿಂದ ಕೊನೇ ಮೈಲಿವರೆಗೆ ಮೀಟರ್ ಹಾಕಿ ಆಟೊ ಸಂಚರಿಸುವ 'ಮೆಟ್ರೊ ಮಿತ್ರ'ವನ್ನು ಆಟೊ ರಿಕ್ಷಾ ಚಾಲಕರ ಒಕ್ಕೂಟ (ಎಆರ್‌ಡಿಯು) ಆರಂಭಿಸುತ್ತಿದೆ. ಸೆ. 6ರಂದು ಮಧ್ಯಾಹ್ನ 3ಕ್ಕೆ ಚಾಲನೆಗೊಳ್ಳಲಿದೆ.

ಜಯನಗರ ಮೆಟ್ರೊ ನಿಲ್ದಾಣದಿಂದ ಆರ್.ವಿ. ರಸ್ತೆ ಮೆಟ್ರೊ ನಿಲ್ದಾಣದವರೆಗೆ ಪ್ರಾಯೋಗಿಕವಾಗಿ 'ಮೆಟ್ರೊ ಮಿತ್ರ' ಇರಲಿದೆ. ಇಲ್ಲಿ ಯಶಸ್ವಿಯಾದರೆ ಎಲ್ಲ ಮೆಟ್ರೊ ನಿಲ್ದಾಣಗಳಿಗೆ ವಿಸ್ತರಿ ಸುವ ಗುರಿಯನ್ನು ಎಆರ್‌ಡಿಯು ಇಟ್ಟುಕೊಂಡಿದೆ. ಈ ಆ್ಯಪ್ ಪರಿಣಾಮಕಾರಿಯಾಗಿ ಜಾರಿಯಾದರೆ ಜನಸ್ನೇಹಿಯಾಗಲಿದೆ. ಮೆಟ್ರೊ ನಿಲ್ದಾಣದ ಬಳಿ ಒಂದೊಂದು ಆಟೊಗಳು ಒಂದೊಂದು ದರ ಹೇಳುವುದು ತಪ್ಪಲಿದೆ. ಅಲ್ಲಿಗೆ ಬರುವುದಿಲ್ಲ, ಒಮ್ಮೆ ಆ್ಯಪ್ ಸ್ಕ್ಯಾನ್ ಮಾಡಿದ ಮೇಲೆ ಇಲ್ಲಿಗೆ ಬರುವುದಿಲ್ಲ ಎಂದು ನಕಾರಾತ್ಮಕ ಉತ್ತರವನ್ನೂ ನೀಡುವಂತಿಲ್ಲ. ಆಟೊಗಳು ಜನಸ್ನೇಹಿಯಾಗಿ ಇರುವಂತೆ ಆ್ಯಪ್ ಮಾಡಲಿದೆ.

ಚಾಲಕರ ಆ್ಯಪ್: 'ಮೆಟ್ರೊ ಮಿತ್ರ' ಗ್ರಾಹಕರ ಆ್ಯಪ್ ಅಲ್ಲ, ಆಟೊ ಚಾಲಕರ ಆ್ಯಪ್. ಅದರಲ್ಲಿ ಗೂಗಲ್ ಮ್ಯಾಪ್, ರದ್ದುಪಡಿಸುವ ಆಯ್ಕೆಗಳೆಲ್ಲ ಇರುವುದಿಲ್ಲ. ಆಟೊದಲ್ಲಿ ಸ್ಕ್ಯಾನರ್ ಇರುತ್ತದೆ. ಜನರು ಅದನ್ನು ಸ್ಕ್ಯಾನ್ ಮಾಡಿ ಪ್ರಯಾಣಿಸಬಹುದು. ಮೀಟರ್ ಹಾಕಿಸಿಯೇ ಆಟೊಗಳು ಓಡಲಿವೆ. ಮೀಟರ್ ದರದ ಜೊತೆಗೆ ಹೆಚ್ಚುವರಿಯಾಗಿ ₹ 10 ನೀಡಬೇಕಾಗುತ್ತದೆ.

ಚಾಲಕರಿಗೆ ಜಾಗೃತಿ: ಒಂದೆರಡು ಗಂಟೆಯಲ್ಲೇ ದುಡಿಮೆಯ ಹಣ ಬರಬೇಕು ಎಂದು ಬಯಸುವ ಮನಸ್ಥಿತಿಯನ್ನು ಬದಲಾಯಿಸಬೇಕಿದೆ. ಆಟೊ ಚಾಲಕರು ಕೂಡ ದಿನಕ್ಕೆ 8 ಗಂಟೆ ದುಡಿಮೆ ಮಾಡಬೇಕು. ಸರಿಯಾಗಿ ಸಮವಸ್ತ್ರ ಧರಿಸಿ, ನಿಯತ್ತಾಗಿ ದುಡಿಮೆ ಮಾಡುವ ಚಾಲಕರನ್ನು 'ಮೆಟ್ರೊ ಮಿತ್ರ'ದ ಅಡಿಯಲ್ಲಿ ತರಲಾಗುವುದು. ನಮ್ಮ ಯೂನಿಯನ್ ಅಡಿಯಲ್ಲಿ ಇರುವವರಷ್ಟೇ ಅಲ್ಲ, ಯಾವುದೇ ಸಂಘಟನೆಯ ಆಟೊಗಳೂ ಮೆಟ್ರೊ ಮಿತ್ರ ಬಳಸ ಬಹುದು ಎಂದು ಎಆರ್‌ಡಿಯು ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

ರುದ್ರಮೂರ್ತಿ

ಮೆಟ್ರೊ ರೈಲು ನಿಲ್ದಾಣಗಳಲ್ಲಿ ₹ 40-₹ 50ಕ್ಕೆ ಆಟೊ ಬಾಡಿಗೆಗೆ ಸಿಗುತ್ತದೆ ಎಂದು ಗೊತ್ತಾದರೆ ಪ್ರಯಾಣಿಕರು ಬೇರೆ ಆ್ಯಪ್ ಬಳಸುವುದು, ಬೇರೆ ವಾಹನ ಬಳಸುವುದು ಕಡಿಮೆ ಮಾಡಿ 'ಮೆಟ್ರೊ ಮಿತ್ರ' ಆಟೊಗಳಿಗೇ ಬರುತ್ತಾರೆ. ಆ ನಂಬಿಕೆಯನ್ನು ಪ್ರಯಾಣಿಕರಲ್ಲಿ ಬರುವಂತೆ ಮಾಡಬೇಕಿದೆ ಎಂದರು.

ಚಾಟ್‌ಪಾಟ್‌ನಲ್ಲೂ 'ಮೆಟ್ರೊ ಮಿತ್ರ'

ಮೆಟ್ರೊ ರೈಲಿನ ಟಿಕೆಟ್ ಬುಕ್ ಮಾಡುವ ಚಾಟ್‌ಪಾಟ್‌ನಲ್ಲಿಯೂ 'ಮೆಟ್ರೊ ಮಿತ್ರ' ಇರಲಿದೆ. ಅಲ್ಲೇ ಬುಕ್ಕಿಂಗ್ ಮಾಡುವ ಅವಕಾಶ ಸಿಗಲಿದೆ. ಈ ಪ್ರಕ್ರಿಯೆ ನಡೆಯುತ್ತಿದೆ. ಅದು ಪೂರ್ಣಗೊಳ್ಳುವವರೆಗೆ ಆಟೊದಲ್ಲಷ್ಟೇ 'ಮೆಟ್ರೊ ಮಿತ್ರ' ಸ್ಕ್ಯಾನರ್ ಇರಲಿದೆ ಎಂದು ರುದ್ರಮೂರ್ತಿ ತಿಳಿಸಿದರು.

ಆಟೊ ಚಾಲಕರ ಕಲ್ಯಾಣ ನಿಧಿ ಆರಂಭಿಸುವ ಉದ್ದೇಶ ಕೂಡ ಇದೆ. ಪ್ರತಿ ಬಾರಿ ಬಾಡಿಗೆಗೆ ಹೋದಾಗ ಆ ಬಾಡಿಗೆ ದರದಲ್ಲಿ ₹ 2.5 ಈ ನಿಧಿಗೆ ನೀಡಬೇಕಾಗುತ್ತದೆ. ದಿನಕ್ಕೆ 10 ಟ್ರಿಪ್‌ಗಳ ವರೆಗೆ ಮಾತ್ರ ಇರಲಿದೆ ಎಂದು ಮಾಹಿತಿ ನೀಡಿದರು.

'ಒಳ್ಳೆಯ ಯೋಜನೆಗೆ ಬೆಂಬಲ ಬೇಕು'

ಎಆರ್‌ಡಿಯು 'ಮೆಟ್ರೊ ಮಿತ್ರ' ಎಂಬ ಒಳ್ಳೆಯ ಯೋಜನೆಯನ್ನು ತಂದಿದೆ. ಇದಕ್ಕೆ ಆಟೊ ಚಾಲಕರ ಬೆಂಬಲ ಮೊದಲು ಬೇಕಾಗುತ್ತದೆ. ಬೆಂಬಲ ನೀಡಬೇಕಿದ್ದರೆ ಮೀಟರ್ ಹಾಕಿ ಬಾಡಿಗೆ ಮಾಡುವ ಮನಸ್ಥಿತಿ ಇರಬೇಕು. ಪ್ರಯಾಣಿಕರಲ್ಲಿ ನಂಬಿಕೆ ಹುಟ್ಟಿಸಬೇಕು. ಆಗ ಯಶಸ್ವಿಯಾಗಲು ಸಾಧ್ಯ. ಎಲ್ಲ ಮೆಟ್ರೊಗಳಿಂದ ಕೊನೇ ಮೈಲಿವರೆಗೆ ಸೇವೆ ನೀಡಲು ಸಾಧ್ಯವಾಗಬೇಕು. ಎಆರ್‌ಡಿಯು ಜೊತೆಗೆ ನಾವೂ ಕೈಜೋಡಿಸಿದ್ದೇವೆ.

ಶ್ರೀನಿವಾಸ್ ಅಲವಿಲ್ಲಿ, ನಾಗರಿಕ ಕಾರ್ಯಕರ್ತ

'ಬಿ ಪ್ಯಾಕ್' ನಡೆಸಿದ 'ಸ್ವಂತ 2 ಸಾರ್ವಜನಿಕ ಸಾರಿಗೆ' ಸಮೀಕ್ಷೆಯಲ್ಲಿ ಬಹಿರಂಗ

ಮೆಟ್ರೊದಲ್ಲಿ ಸಂಚಾರ: ಶೇ 95 ಮಂದಿ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್, ಎಲೆಕ್ಟ್ರಾನಿಕ್ ಸಿಟಿಗೆ ಮೆಟ್ರೊ ರೈಲು ಈ ತಿಂಗಳಲ್ಲಿ ಸಂಚರಿಸಲಿದೆ. ಹೀಗಾಗಿ, ಈ ಬಗ್ಗೆ ನಡೆಸಿದ ಸಮೀಕ್ಷೆಯಲ್ಲಿ, 'ಸ್ವಂತ ವಾಹನದ ಬದಲು ಮೆಟ್ರೊದಲ್ಲಿ ಸಂಚರಿಸಲು ಸಿದ್ಧ' ಎಂದು ಶೇ 95ರಷ್ಟು ಜನರು ಸಮೀಕ್ಷೆಯಲ್ಲಿ ಹೇಳಿಕೊಂಡಿದ್ದಾರೆ. 'ಮೆಟ್ರೊ ನಿಲ್ದಾಣಗಳಿಗೆ ಸರಿಯಾದ ಬಸ್ ಸಂಪರ್ಕ ಇರಬೇಕು' ಎಂದೂ ತಿಳಿಸಿದ್ದಾರೆ.

ಜುಲೈಯಲ್ಲಿ 'ಬಿ ಪ್ಯಾಕ್' ನಡೆಸಿದ್ದ 'ಸ್ವಂತ 2 ಸಾರ್ವಜನಿಕ ಸಾರಿಗೆ' ಸಮೀಕ್ಷೆಯನ್ನು ಸೋಮವಾರ ಬಿಡುಗಡೆ ಮಾಡಲಾಯಿತು.

ವೈಟ್‌ಫೀಲ್ಡ್, ಮಹದೇವಪುರ, ಎಲೆಕ್ಟ್ರಾನಿಕ್ ಸಿಟಿ ಮತ್ತು ಹೊರ ವರ್ತುಲ ರಸ್ತೆ ಪ್ರದೇಶದ ಪ್ರಯಾಣಿಕರು ಮತ್ತು ನಿವಾಸಿಗಳು ಈ ಸಮೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು ಎಂದು 'ಬಿ ಪ್ಯಾಕ್' ಸಿಇಒ ರೇವತಿ ಅಶೋಕ್ ಮಾಹಿತಿ ನೀಡಿದರು.

ವೈಟ್‌ಫೀಲ್ಡ್, ಎಲೆಕ್ಟ್ರಾನಿಕ್ ಸಿಟಿ ಸುತ್ತಮುತ್ತ 10 ಲಕ್ಷಕ್ಕೂ ಅಧಿಕ ಉದ್ಯೋಗಿಗಳು ನೆಲೆಸಿದ್ದಾರೆ. ಸಮೀಕ್ಷೆಯಲ್ಲಿ 3,855 ಜನರು ಪಾಲ್ಗೊಂಡಿದ್ದರು. ಅದರಲ್ಲಿ ಶೇ 60ರಷ್ಟು ಜನರು ನಿತ್ಯದ ಪ್ರಯಾಣಕ್ಕಾಗಿ ಕಾರು, ಬೈಕ್ ಬಳಸುತ್ತಿದ್ದಾರೆ. ಈಗಿನ ವಾಹನ ದಟ್ಟಣೆಯಲ್ಲಿ ನಿಗದಿತ ಸ್ಥಳ ತಲುಪಲು ಗಂಟೆಗಟ್ಟಲೆ ಹಿಡಿಯುತ್ತದೆ. ಮೆಟ್ರೊ ಮೂಲಕ ಬೇಗ ತಲುಪಲು ಸಾಧ್ಯ ಇರುವುದರಿಂದ ಮೆಟ್ರೊ ರೈಲು ಆರಂಭವಾದಾಗ ಖಾಸಗಿ ವಾಹನ ಬದಲು ಅದನ್ನು ಆಯ್ಕೆ ಮಾಡಿಕೊಳ್ಳುವುದಾಗಿ ಹೇಳಿದ್ದಾರೆ. ಮೆಟ್ರೊ, ಬಿಎಂಟಿಸಿ ಉತ್ತಮ ಸೇವೆ ನೀಡಬೇಕು ಎಂದು ನಿರೀಕ್ಷಿಸಿದ್ದಾರೆ ಎಂದರು.

'ಸ್ವಂತ 2 ಸಾರ್ವಜನಿಕ ಸಾರಿಗೆ' ಅಭಿಯಾನ ನಡೆಸಲು ಹಲವರು ಪಾಲುದಾರರಾಗಿದ್ದರು. ಐಟಿ ಕಂಪನಿಗಳು, ಹೊರ ವರ್ತುಲ ರಸ್ತೆ ಕಂಪನಿಗಳ ಸಂಘ (ಓರ್ಕಾ), ಎಲೆಕ್ಟ್ರಾನಿಕ್ ಸಿಟಿ ಪ್ರದೇಶದ ಕಂಪನಿಗಳು, ವೈಟ್‌ಫೀಲ್ಡ್‌ನ ಇಂಡಸ್ಟ್ರಿಯಲ್ ಅಸೋಸಿಯೇಶನ್, ಇಂಟರ್‌ನ್ಯಾಷನಲ್ ಟೆಕ್‌ಪಾರ್ಕ್, ಆಟೊ ರಿಕ್ಷಾ ಚಾಲಕರ ಯೂನಿಯನ್ (ಎಆರ್‌ಡಿಯು), ಆದರ್ಶ ಆಟೊ ಯೂನಿಯನ್ ಅಲ್ಲದೇ ಇತರ 27 ಸಂಘಟನೆಗಳು ಭಾಗಿಯಾಗಿದ್ದವು' ಎಂದು ಡಬ್ಲ್ಯುಆರ್‌ಐ ಇಂಡಿಯಾದ ಫೆಲೊ ಶ್ರೀನಿವಾಸ್ ಅಲವಿಲ್ಲಿ ಮಾಹಿತಿ ನೀಡಿದರು.

'ಸಾರ್ವಜನಿಕ ಸಾರಿಗೆ ಸಂಪರ್ಕವನ್ನು ಜನರು ಬಳಸಿದರೆ ಬೆಂಗಳೂರು ನಿಜವಾಗಿಯೂ ಬ್ರ್ಯಾಂಡ್ ಬೆಂಗಳೂರು ಆಗಲಿದೆ. ಶೇ 22ರಷ್ಟು ಜನರು ಸೈಕಲ್ ಬಳಸುತ್ತಿದ್ದಾರೆ. ಅವರಿಗೆ ಸೈಕಲ್‌ಪಾತ್ ಮತ್ತು ಮೆಟ್ರೊ ನಿಲ್ದಾಣಗಳ ಬಳಿ ಸೈಕಲ್ ನಿಲ್ದಾಣ ನಿರ್ಮಿಸಿಕೊಡಬೇಕು. ನಿಗದಿತ ದರದಲ್ಲಿ ಆಟೊ ಸೇವೆ ಸಿಗಬೇಕು. ಜನರು ವಾರಕ್ಕೆ ಕನಿಷ್ಠ ಎರಡು ದಿನವಾದರೂ ಖಾಸಗಿ ವಾಹನ ಬಿಟ್ಟು ಮೆಟ್ರೊ, ಸಾರ್ವಜನಿಕ ಸಾರಿಗೆ ಬಳಸಬೇಕೆಂದು ಸರ್ಕಾರವೇ ಜಾಗೃತಿ ಮೂಡಿಸಬೇಕು' ಎಂದು ಒತ್ತಾಯಿಸಿದರು.

ಜುಲೈಯಲ್ಲಿ 'ಬಿ ಪ್ಯಾಕ್' ನಡೆಸಿದ್ದ 'ಸ್ವಂತ 2 ಸಾರ್ವಜನಿಕ ಸಾರಿಗೆ' ಎಂಬ ಸಮೀಕ್ಷೆಯನ್ನು ಸೋಮವಾರ ಬಿಡುಗಡೆ ಮಾಡಲಾಯಿತು. ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಶನ್ ಪ್ರಧಾನ ಕಾರ್ಯದರ್ಶಿ ವಿಕ್ರಮ್ ರೈ, ಎಆರ್‌ಡಿಯು ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ, ಡಬ್ಲ್ಯುಆರ್‌ಐ ಫೆಲೊ ಶ್ರೀನಿವಾಸ್ ಅಲಿವಲ್ಲಿ, ಬಿ ಪ್ಯಾಕ್ ಸಿಇಒ ರೇವತಿ ಅಶೋಕ್, ಓರ್ಕಾ ಅಧ್ಯಕ್ಷ ಮಾನಸ್‌ದಾಸ್ ಇದ್ದರು.

'ಬೆಂಗಳೂರು- ಚೆನ್ನೈ ಎಕ್ಸ್‌ಪ್ರೆಸ್ ವೇ' ತ್ವರಿತಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆದಷ್ಟು ಬೇಗ ಬೆಂಗಳೂರು- ಚೆನ್ನೈ ಎಕ್ಸ್‌ಪ್ರೆಸ್ ವೇ (ಎನ್‌ಇ-7) ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಬೇಕು' ಎಂದು ನಗರಾಭಿವೃದ್ಧಿ ಮತ್ತು ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ ನಿರ್ಮಾಣದ ಪ್ರಗತಿ, ರಾಷ್ಟ್ರೀಯ ಹೆದ್ದಾರಿ-75ರ ನಿರ್ವಹಣೆ ಮತ್ತು ಅದರಲ್ಲಿರುವ ಲೋಪಗಳಿಗೆ ಸಂಬಂಧಿಸಿದಂತೆ ಸೋಮವಾರ ಸಭೆ ನಡೆಸಿದರು.

ಕೋಲಾರ ಜಿಲ್ಲೆಯಲ್ಲಿ ಹಾದು ಹೋಗುವ 56 ಕಿ.ಮೀ ವ್ಯಾಪ್ತಿಯ ಈ ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮೂರು ಸ್ಥಳಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬ ಆಗುತ್ತಿರುವುದರಿಂದ ನಿರ್ಮಾಣ ಕಾರ್ಯಕ್ಕೆ ಅಡ್ಡಿಯಾಗಿದೆ ಎಂದು ಎಕ್ಸ್‌ಪ್ರೆಸ್ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ಸಭೆಯಲ್ಲಿ ಹೇಳಿದರು.

ತಕ್ಷಣ ಕೋಲಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಕರೆ ಮಾಡಿದ ಸಚಿವರು, ಹೆದ್ದಾರಿ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಳ್ಳಲು ಜಮೀನಿನ ಮಾಲೀಕರು ಅಡ್ಡಿಪಡಿಸುತ್ತಿದ್ದು, ತೆರವುಗೊಳಿಸಲು ಹೆದ್ದಾರಿ ಪ್ರಾಧಿಕಾರಕ್ಕೆ ಅವಕಾಶ ಮಾಡಿಕೊಡಬೇಕು ಎಂದರು.

ಕೋಲಾರ ಜಿಲ್ಲಾಧಿಕಾರಿ ಅಕ್ರಂ ಪಾಷ, ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ ಯೋಜನಾ ನಿರ್ದೇಶಕರಾದ ಅರ್ಚನಾ, ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ ರಘುನಂದನ್, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಕಚೇರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮಾರ್ಗ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಕೊಳತ್ತೂರು ಗ್ರಾಮದಿಂದ ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ ಆರಂಭವಾಗಿ ಚೆನ್ನೈನ ಶ್ರೀಪೆರಂಬದೂರ್‌ವರೆಗೂ ಸಾಗಲಿದೆ. ಒಟ್ಟು 285 ಕಿ.ಮೀ ಉದ್ದದ ಈ ರಸ್ತೆ, ರಾಜ್ಯದಲ್ಲಿ 77.23 ಕಿ.ಮೀ, ಆಂಧ್ರಪ್ರದೇಶದಲ್ಲಿ 91 ಕಿ.ಮೀ, ತಮಿಳುನಾಡಿನಲ್ಲಿ 116.60 ಕಿ.ಮೀ ಸಾಗಲಿದೆ.

ಯೋಜನೆಯ ವೆಚ್ಚ ಅಂದಾಜು ₹ 40 ಸಾವಿರ ಕೋಟಿ ಆಗಲಿದ್ದು, ಕೇಂದ್ರದ ಪಾಲು ಶೇ 40, ಸರ್ಕಾರ- ಸಾರ್ವಜನಿಕ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಶೇ 60ರಷ್ಟು ಇರಲಿದೆ. ಕೋಲಾರ ಜಿಲ್ಲೆಯಲ್ಲಿ ಮಾಲೂರು, ಬಂಗಾರಪೇಟೆ, ಕೆ.ಜಿ.ಎಫ್ ಮತ್ತು ಬೇತಮಂಗಲ ಮೂಲಕ ಈ ಎಕ್ಸ್‌ಪ್ರೆಸ್ ವೇ ಹಾದು ಹೋಗಲಿದೆ.

Azadi Ka Amrit Mahotsav | G20 ಭಾರತ 2023 INDIA

ಕೋಲಾರ ಜಿಲ್ಲೆಯ ಜನತೆಗೆ ಸುರಕ್ಷಿತ, ಅನುಕೂಲಕರ ಮತ್ತು ಆರಾಮದಾಯಕ ಪ್ರಯಾಣದ ಸೌಕರ್ಯ

"ರೈಲ್ವೆ ಸೇರಿದಂತೆ ಸಾವಿರಾರು ಮೂಲಸೌಕರ್ಯ ಯೋಜನೆಗಳ ಮೇಲೆ ನಮ್ಮ ಸರ್ಕಾರ ಅಭೂತಪೂರ್ವ ಹೂಡಿಕೆಗಳನ್ನು ಮಾಡುತ್ತಿದೆ."
- ನರೇಂದ್ರ ಮೋದಿ, ಪ್ರಧಾನ ಮಂತ್ರಿಗಳು

ಉದ್ಘಾಟನೆ

ಬಂಗಾರಪೇಟೆ ರೈಲು ನಿಲ್ದಾಣದಲ್ಲಿ 3 ಎಸ್ಕಲೇಟರ್‌ಗಳು
(ರೂ. 3.35 ಕೋಟಿ ವೆಚ್ಚದಲ್ಲಿ)



ಪ್ರಯೋಜನಗಳು:
- ದಿವ್ಯಾಂಗರು ಮತ್ತು ಹಿರಿಯ ನಾಗರಿಕರು ಸೇರಿದಂತೆ ಪ್ರಯಾಣಿಕರಿಗೆ ಪ್ರವೇಶವು ಮತ್ತಷ್ಟು ಸುಲಭವಾಗಲಿದೆ
- ಸಾರ್ವಜನಿಕರ ಬಹುಕಾಲದ ಬೇಡಿಕೆಯ ಈಡೇರಿಕೆ
- ಪ್ಲಾಟ್‌ಫಾರ್ಮ್ ಸಂಖ್ಯೆ 3 ಮತ್ತು 4 ರಿಂದ ಹೊರಾಂಗಣ ಪ್ರದೇಶಕ್ಕೆ ತಡೆರಹಿತ ಪ್ರವೇಶದಿಂದ ಅಂದಾಜು 26,000 ದೈನಂದಿನ ಪ್ರಯಾಣಿಕರು ಪ್ರಯೋಜನ ಪಡೆಯಲಿದ್ದಾರೆ

ಸ್ಥಳ: ಬಂಗಾರಪೇಟೆ ರೈಲು ನಿಲ್ದಾಣ
ದಿನಾಂಕ: 05.09.2023 | ಸಮಯ: ಬೆಳಗ್ಗೆ 10.30 ಗಂಟೆ

ರಾಷ್ಟ್ರಕ್ಕೆ ಸಮರ್ಪಣೆ

ಉನ್ನತೀಕರಿಸಿದ ಬಿಇಎಂಎಲ್ ನಗರ ಹಾಲ್ಟ್ ಸ್ಟೇಷನ್
(ರೂ. 80 ಲಕ್ಷ ವೆಚ್ಚದಲ್ಲಿ)

ಪ್ರಯೋಜನಗಳು:
- ಆಧುನಿಕ ಸೌಲಭ್ಯಗಳೊಂದಿಗೆ ರೂ. 80 ಲಕ್ಷ ವೆಚ್ಚದಲ್ಲಿ ಹಾಲ್ಟ್ ನಿಲ್ದಾಣವನ್ನು ನವೀಕರಿಸಲಾಗಿದೆ (ಶೌಚಾಲಯಗಳನ್ನು ಹೊಂದಿದ ನಿರೀಕ್ಷಣಾ ಕೊಠಡಿ, ಟಿಕೆಟ್ ಬುಕಿಂಗ್ ಕಚೇರಿಗಳನ್ನು ನಿರ್ಮಿಸಲಾಗಿದೆ)
- ರೈಲಿಂಗ್ ಹೊಂದಿರುವ ರಾಂಪ್ ದಿವ್ಯಾಂಗರು ಮತ್ತು ಹಿರಿಯ ನಾಗರಿಕರಿಗೆ ಪ್ರವೇಶವನ್ನು ಸುಲಭಗೊಳಿಸುತ್ತದೆ
- ಆಕರ್ಷಕ ಮುಂಭಾಗ ಮತ್ತು ಸುಂದರವಾದ ಭೂದೃಶ್ಯ ವಿನ್ಯಾಸವು ಪ್ರಯಾಣಿಕರ ಆನಂದವನ್ನು ಹೆಚ್ಚಿಸುತ್ತದೆ

ಸ್ಥಳ: ಬಿಇಎಂಎಲ್ ನಗರ ಹಾಲ್ಟ್ ನಿಲ್ದಾಣ
ದಿನಾಂಕ: 05.09.2023 | ಸಮಯ: ಮಧ್ಯಾಹ್ನ 12.30 ಗಂಟೆ

ನಿಮಗೆ ಹೃತ್ಪೂರ್ವಕ ಸ್ವಾಗತ

ಇವರಿಂದ
ಎಸ್ ಮುನಿಸ್ವಾಮಿ
ಸಂಸದರು, ಕೋಲಾರ

PUB/358/AAV/PRB/SWR/2023-24

www.swr.indianrailways.gov.in | South Western Railways - SWR | SWRRLY
southwesternrailway_swr | SWRRLY | southwesternrailway

ನೈಋತ್ಯ ರೈಲ್ವೆ

134 ತಾಲ್ಲೂಕುಗಳಲ್ಲಿ ಮತ್ತೊಮ್ಮೆ ಜಂಟಿ ಸಮೀಕ್ಷೆ: ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

62 ತಾಲ್ಲೂಕುಗಳಲ್ಲಿ ತೀವ್ರ ಬರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ಕೊರತೆ ಮತ್ತು ಬಿತ್ತನೆ ಪ್ರಮಾಣ ಕುಂಠಿತವಾಗಿರುವುದನ್ನು ಆಧರಿಸಿ 113 ತಾಲ್ಲೂಕುಗಳಲ್ಲಿ ಜಂಟಿ ಸಮೀಕ್ಷೆ ನಡೆಸಲಾಗಿತ್ತು. ಈ ಪೈಕಿ 62 ತಾಲ್ಲೂಕುಗಳು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಬರವನ್ನು ಎದುರಿಸುತ್ತಿವೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಬರ ಕುರಿತಂತೆ ಸೋಮವಾರ ನಡೆದ ಸಂಪುಟ ಉಪಸಮಿತಿ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಯಾವುದೇ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಬೇಕಾದರೆ ಶೇ 60ರಷ್ಟು ಮಳೆ ಕೊರತೆ ಇರಬೇಕು ಮತ್ತು ಮೂರು ವಾರ ಶುಷ್ಕ ವಾತಾವರಣ ಇರಬೇಕು. ಆದರೆ, 51ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಪರಿಸ್ಥಿತಿ ಬಿಗಡಾಯಿಸಿದೆ. ಮೊದಲ ಜಂಟಿ ಸಮೀಕ್ಷೆ ಬಳಿಕ ಬೆಳೆ ಪರಿಸ್ಥಿತಿ ಮತ್ತೆ ಕುಸಿದಿದೆ ಎಂದು ಅಧಿಕಾರಿಗಳು, ಜನಪ್ರತಿನಿಧಿಗಳು, ರೈತರು ದೂರಿದ್ದಾರೆ. ಹೀಗಾಗಿ ಮತ್ತೊಮ್ಮೆ ಬೆಳೆ ಸಮೀಕ್ಷೆ ನಡೆಸಲು ಅವರು ಒತ್ತಾಯಿಸಿದ್ದಾರೆ ಎಂದು ಹೇಳಿದರು.

51 ತಾಲ್ಲೂಕುಗಳಲ್ಲದೇ ಇನ್ನೂ 83 ತಾಲ್ಲೂಕುಗಳಲ್ಲಿ ಬೆಳೆ ಸಮೀಕ್ಷೆ ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಕೇಂದ್ರದ ಮಾನದಂಡಗಳು ಕಠಿಣವಾಗಿರುವುದರಿಂದ ಜನರ ನಿರೀಕ್ಷೆಗೆ ತಕ್ಕಂತೆ ಬರ ಘೋಷಣೆ ಮಾಡಲು ಸಾಧ್ಯವಾಗಲ್ಲ. ಈ ಕಾರಣಕ್ಕಾಗಿಯೇ ಮಾನದಂಡ ಬದಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿಗೆ ಪತ್ರ ಬರೆದಿದ್ದಾರೆ ಎಂದು ತಿಳಿಸಿದರು.

'ಮುಂಬರುವ ಸಚಿವ ಸಂಪುಟದಲ್ಲಿ ಬರ ತಾಲ್ಲೂಕುಗಳು ಎಷ್ಟು ಎಂಬ ಸಂಖ್ಯೆ ಘೋಷಣೆ ಆದ ನಂತರ ಒಂದು ವಾರದಲ್ಲಿ ಕೇಂದ್ರಕ್ಕೆ ಮನವಿ ಪತ್ರ ಸಲ್ಲಿಸಲಾಗುವುದು' ಎಂದು ಹೇಳಿದರು.

ರಾಜ್ಯದಲ್ಲಿ ದಕ್ಷಿಣ ಒಳನಾಡಿನ ತಾಲ್ಲೂಕುಗಳಲ್ಲಿ ಬರದ ತೀವ್ರತೆ ಹೆಚ್ಚಾಗಿದೆ. ಅದನ್ನು ಹೊರತುಪಡಿಸಿ ಮಲೆನಾಡು ಮತ್ತು ಉತ್ತರ ಒಳನಾಡಿನಲ್ಲೂ ಪರಿಸ್ಥಿತಿ ಬಿಗಡಾಯಿಸಿದೆ. 62 ತಾಲ್ಲೂಕುಗಳಲ್ಲಿ ಬೆಳೆ ಕ್ಷೀಣಿಸಿದೆ. ಆದರೆ, ಕೃಷಿ ಇಲಾಖೆ ಪ್ರಕಾರ ಇನ್ನೂ ಹೆಚ್ಚಿನ ತಾಲ್ಲೂಕುಗಳಲ್ಲಿ ಬೆಳೆ ಪ್ರಮಾಣ ಕ್ಷೀಣಿಸಿದೆ. ಬೆಳೆ ಸಮೀಕ್ಷೆ ಅತ್ಯಂತ ವೈಜ್ಞಾನಿಕವಾಗಿ ನಡೆಸಲಾಗುತ್ತಿದೆ. ಜಿಪಿಎಸ್ ಅಳವಡಿಕೆ ಆಗಿರುವ ಮೊಬೈಲ್ ಆ್ಯಪ್ ಮೂಲಕವೇ ಸಮೀಕ್ಷೆ ನಡೆಸಲಾಗುತ್ತಿದೆ. ಸ್ಥಳಕ್ಕೆ ಹೋಗಿ ನಿಂತು ಆ್ಯಪ್ ಚಾಲೂ ಮಾಡಿದರೆ ಮಾತ್ರ ಸಮೀಕ್ಷೆ ನಡೆಸಲು ಸಾಧ್ಯ ಎಂದು ಸಚಿವರು ವಿವರಿಸಿದರು.

ಮುಂದಿನ ದಿನಗಳಲ್ಲಿ ಮಳೆ ಬಂದರೂ ಬರಪೀಡಿತ ತಾಲ್ಲೂಕುಗಳನ್ನು ಪಟ್ಟಿಯಿಂದ ಕೈಬಿಡುವುದಿಲ್ಲ. ಮಳೆಯಿಂದ ಬೆಳೆ ಕೈಗೆ ಬಂತು ಹೇಳಲು ಆಗುವುದಿಲ್ಲ. ಆದ್ದರಿಂದ ರೈತರು ಆತಂಕಕ್ಕೆ ಒಳಗಾಗಬೇಕಾಗಿಲ್ಲ ಎಂದು ಅವರು ಭರವಸೆ ನೀಡಿದರು.

ಬರ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ₹520 ಕೋಟಿ ಇದೆ. ಅಲ್ಲದೇ, ಕುಡಿಯುವ ನೀರು ಪೂರೈಕೆಗಾಗಿ ಜಿಲ್ಲಾ ಪಂಚಾಯಿತಿಗಳ ಸಿಇಒಗಳಿಗೆ ತಲಾ ₹1 ಕೋಟಿ ಒದಗಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಇದ್ದರು.

'ಬರಪೀಡಿತ ತಾಲ್ಲೂಕುಗಳಿಗೆ ಹಣದ ಬದಲು 10 ಕೆ.ಜಿ ಅಕ್ಕಿ'

ಬೆಂಗಳೂರು: 'ಬರಪೀಡಿತ ತಾಲ್ಲೂಕುಗಳ ಫಲಾನುಭವಿಗಳಿಗೆ ಹಣದ ಬದಲು 10 ಕೆ.ಜಿ. ಅಕ್ಕಿ ನೀಡಲಾಗುವುದು' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಬರಪೀಡಿತ ತಾಲ್ಲೂಕುಗಳನ್ನು ಘೋಷಿಸುತ್ತಿದ್ದಂತೆ, ಆ ತಾಲ್ಲೂಕುಗಳಲ್ಲಿ 10 ಕೆ.ಜಿ. ಅಕ್ಕಿ ಪೂರೈಕೆ ಮಾಡುತ್ತೇವೆ' ಎಂದರು.

'ಪಡಿತರಚೀಟಿದಾರರಿಗೆ 10 ಕೆ.ಜಿ. ಅಕ್ಕಿ ಪೂರೈಸುವ ಬಗ್ಗೆ ವಾರದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು. ಆಂಧ್ರಪ್ರದೇಶ, ತೆಲಂಗಾಣ ಮತ್ತು ಛತ್ತೀಸಗಢ ಸರ್ಕಾರಗಳು ಅಕ್ಕಿ ಕೊಡಲು ಮುಂದೆ ಬಂದಿವೆ. ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಬೆಲೆ ನಿಗದಿ ವಿಚಾರವಾಗಿ ಮಾತುಕತೆ ನಡೆಯುತ್ತಿದೆ' ಎಂದು ಹೇಳಿದರು.

'ಜುಲೈ ತಿಂಗಳಿನಲ್ಲಿ 97 ಲಕ್ಷ ಕಾರ್ಡ್‌ದಾರರಿಗೆ ಡಿಬಿಟಿ (ನೇರ ನಗದು ವರ್ಗಾವಣೆ) ಮಾಡಿದ್ದೇವೆ. ಆಗಸ್ಟ್ ತಿಂಗಳಲ್ಲಿ 3.69 ಕೋಟಿ ಜನರಿಗೆ ₹ 606 ಕೋಟಿ ಬಿಡುಗಡೆ ಮಾಡಿದ್ದೇವೆ. 21 ಲಕ್ಷ ಜನರಿಗೆ ಬ್ಯಾಂಕ್ ಖಾತೆ ಇಲ್ಲ. ಎರಡು ಲಕ್ಷ ಜನರಿಗೆ ನಾವೇ ಬ್ಯಾಂಕ್ ಖಾತೆ ಮಾಡಿದ್ದೇವೆ. 14 ಲಕ್ಷ ಜನರಿಗೆ ಬ್ಯಾಂಕ್ ಖಾತೆ ಮಾಡಿಸುತ್ತಿದ್ದೇವೆ' ಎಂದೂ ಹೇಳಿದರು.

ರಾಜ್ಯದಲ್ಲಿ ಮಳೆಯ ಕೊರತೆ (ಶೇಕಡಾ)	
ಜೂನ್	56
ಜುಲೈ	ಉತ್ತಮ ಮಳೆ
ಆಗಸ್ಟ್	76

* ಜೂನ್ 1ರಿಂದ ಸೆಪ್ಟೆಂಬರ್ 4 ರವರೆಗೆ 526 ಮಿ.ಮೀ ಮಳೆಯಾಗಿದೆ (ವಾಡಿಕೆ ಮಳೆ ಪ್ರಮಾಣ 711), ಶೇ 26 ರಷ್ಟು ಕೊರತೆ

ಘೋಷಣೆ ಬಳಿಕದ ಕ್ರಮಗಳು

- ವಿಧಾನಸಭಾ ಕ್ಷೇತ್ರದ ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚನೆ
- ಕುಡಿಯುವ ನೀರು ಕೊರತೆ ಕಂಡು ಬಂದ ವಸತಿ ಪ್ರದೇಶಗಳಲ್ಲಿ ಟ್ಯಾಂಕರ್ ಮೂಲಕ ಅಥವಾ ಬಾಡಿಗೆ ಕೊಳವೆಬಾವಿಗಳ ಮೂಲಕ ತುರ್ತು ಕುಡಿಯುವ ನೀರಿನ ಪೂರೈಕೆ
- ಕುಡಿಯುವ ನೀರಿನ ಖರ್ಚು–ವೆಚ್ಚ ಎಸ್‌ಡಿಆರ್‌ಎಫ್‌ನಿಂದ ಭರಿಸಲಾಗುವುದು
- ಸದ್ಯಕ್ಕೆ ಮೇವು ಲಭ್ಯವಿದ್ದು, ಮುಂದಿನ ದಿನಗಳಲ್ಲಿ ಮೇವಿನ ಕೊರತೆ ನಿಭಾಯಿಸಲು ನೀರಿನ ವ್ಯವಸ್ಥೆ ಇರುವ ರೈತರಿಗೆ ಮೇವು ಬಿತ್ತನೆ ಬೀಜದ ಕಿಟ್ ವಿತರಿಸಲಾಗುವುದು. ಇದಕ್ಕಾಗಿ ಪಶುಸಂಗೋಪನೆ ಇಲಾಖೆಗೆ ₹20 ಕೋಟಿ ವಿತರಿಸಲಾಗುವುದು
- ನರೇಗಾ ಅಡಿ 13 ಕೋಟಿ ಮಾನವ ದಿನಗಳು ಇದ್ದು, ಮಾನವ ದಿನಗಳನ್ನು ಹೆಚ್ಚು ಮಾಡುವಂತೆ ಕೇಂದ್ರಕ್ಕೆ ಮನವಿ ಮಾಡಲಾಗುವುದು

ರಾಜ್ಯದ 196 ತಾಲ್ಲೂಕುಗಳಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲ. ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಈ ಎಲ್ಲ ವಿಷಯವನ್ನು ಚರ್ಚೆ ಮಾಡಲಾಗುವುದು
ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಕೇಂದ್ರದ ಮಾನದಂಡ ನೋಡಿದರೆ ಬರ ಘೋಷಿಸುವಂತಿಲ್ಲ. ಆದ್ದರಿಂದ ಸಿ.ಎಂ ಕೇಂದ್ರಕ್ಕೆ ಪತ್ರ ಬರೆದಿದ್ದಾರೆ. ಹೆಚ್ಚಿನ ಪರಿಹಾರಕ್ಕೆ ಒತ್ತಾಯ ಮಾಡುತ್ತೇವೆ
ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

ಅನುಭವ ಮಂಟಪ 23ರಿಂದ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲಿಸುವ ಗುರಿಯೊಂದಿಗೆ ಕರ್ನಾಟಕ–ಮಹಾರಾಷ್ಟ್ರ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ 'ಅಖಿಲ ಭಾರತ ಅನುಭವ ಮಂಟಪ' ಎಂಬ ಹೊಸ ಚಳವಳಿ ಆರಂಭಿಸಲು ಸಿದ್ಧತೆ ನಡೆದಿದೆ.

ರಾಜ್ಯದಲ್ಲಿ ಸಿಟಿಜನ್ಸ್ ಫಾರ್ ಡೆಮಾಕ್ರಸಿ, ಜನಾಂದೋಲನಗಳ ಮಹಾ ಮೈತ್ರಿ, ಜನತಂತ್ರ ಪ್ರಯೋಗ ಶಾಲೆ, ಜನ ಸಂಗ್ರಾಮ ಪರಿಷತ್, ವಿವಿಧ ರೈತ, ಕಾರ್ಮಿಕ, ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಸಹಭಾಗಿತ್ವದಲ್ಲಿ ಈ ಚಳವಳಿ ನಡೆಯಲಿದೆ. ಈ ಚಳವಳಿಯ ರೂಪುರೇಷೆಗಳನ್ನು ಅಂತಿಮಗೊಳಿಸುವುದಕ್ಕಾಗಿ ಸೆಪ್ಟೆಂಬರ್ 23ರಿಂದ 25ರವರೆಗೆ ನಗರದ ಗಾಂಧಿ ಭವನದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ.

'ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನರು ಬಿಜೆಪಿಯನ್ನು ಸೋಲಿಸಿರುವುದು ನಮ್ಮ ಮುಂದಿದೆ. ಲೋಕಸಭಾ ಚುನಾವಣೆಯಲ್ಲೂ ಬಿಜೆಪಿ ಸೋಲಿಸಲು ಅಂತಹ ಸಂಘಟಿತ ಹೋರಾಟವನ್ನು ಕಟ್ಟಬೇಕಿದೆ. ಅದಕ್ಕೆ ಪೂರಕವಾಗಿ ಅಖಿಲ ಭಾರತ ಅನುಭವ ಮಂಟಪ ಆರಂಭಿಸಲು ನಿರ್ಧರಿಸಲಾಗಿದೆ' ಎಂದು ಹೋರಾಟದ ನೇತೃತ್ವ ವಹಿಸಲಿರುವ ಸಿಟಿಜನ್ಸ್ ಫಾರ್ ಡೆಮಾಕ್ರಸಿಯ ಅಧ್ಯಕ್ಷ ಎಸ್.ಆರ್. ಹಿರೇಮಠ ತಿಳಿಸಿದ್ದಾರೆ.

ಬಿಜೆಪಿಯನ್ನು ಲೋಕಸಭಾ ಚುನಾವಣೆಯಲ್ಲಿ ಸೋಲಿಸುವುದು ಅಲ್ಪಾವಧಿಯ ಗುರಿ. ದೇಶದಲ್ಲಿ ಸಂವಿಧಾನದ ಮೌಲ್ಯಗಳ ತಳಹದಿಯ ಮೇಲೆ ಪ್ರಬಲವಾದ ಸಾಂಸ್ಕೃತಿಕ ಚಳವಳಿಯೊಂದನ್ನು ಕಟ್ಟುವುದು ಈ ಚಳವಳಿಯ ದೀರ್ಘಾವಧಿ ಗುರಿ ಆಗಿದೆ ಎಂದು ಮಾಹಿತಿ ನೀಡಿದ್ದಾರೆ.

ಸುದ್ದಿ 2 ನಿಮಿಷ

ಕಾಡಾನೆ ದಾಳಿ; ಅರಣ್ಯ ಇಲಾಖೆ ಸಿಬ್ಬಂದಿ ಸಾವು

ಸುಂಟಿಕೊಪ್ಪ (ಕೊಡಗು ಜಿಲ್ಲೆ): ಜನರು ಮತ್ತು ವಾಹನಗಳ ಮೇಲೆ ನಿರಂತರವಾಗಿ ದಾಳಿ ನಡೆಸಿ ಆತಂಕ ಸೃಷ್ಟಿಸಿದ್ದ ಕಾಡಾನೆಯೊಂದನ್ನು ಕಾಡಿಗಟ್ಟುವ ವೇಳೆ ಆನೆ ದಾಳಿಗೆ ಸಿಲುಕಿ ಅರಣ್ಯ ಇಲಾಖೆಯ ಸಿಬ್ಬಂದಿ ಗಿರೀಶ್ (35) ಸೋಮವಾರ ಮೃತಪಟ್ಟರು.

ಕಳೆದ ಹಲವು ದಿನಗಳಿಂದ ಕೆದಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆದಕಲ್, 'ಡಿ' ಬ್ಲಾಕ್, ಕಾರೆಕೊಲ್ಲಿ ಸೇರಿದಂತೆ ಇತರೆಡೆ ಒಂಟಿಸಲಗ ಉಪಟಳ ನೀಡುತ್ತಿತ್ತು. ಸೋಮವಾರ ಬೆಳಿಗ್ಗೆ 'ಡಿ' ಬ್ಲಾಕ್‌ಗೆ ಕೆಲಸಕ್ಕೆ ತೆರಳುತ್ತಿದ್ದ ಮುರುಗೇಶ್ ಅವರ ಮೇಲೆ ದಾಳಿ ನಡೆಸಿ ಗಾಯಗೊಳಿಸಿತು. ನಂತರ, ಸಮೀಪದಲ್ಲಿ ಬೈಕ್‌ನಲ್ಲಿ ತೆರಳುತ್ತಿದ್ದ ಹೊರೂರು ಗ್ರಾಮದ ನಿವಾಸಿ ಮಹೇಶ್ ಅವರ ಮೇಲೂ ದಾಳಿಗೆ ಯತ್ನಿಸಿತು. ಅವರು ಬೈಕ್ ಬಿಟ್ಟು ಕಾಡಿನೊಳಗೆ ಓಡಿ ತಪ್ಪಿಸಿಕೊಂಡರು. ಆನೆಯು ಬೈಕನ್ನು ತುಳಿದು, ಸಮೀಪದ ದೇವರಕಾಡಿನೊಳಕ್ಕೆ ನುಗ್ಗಿತು.

ವಿಷಯ ತಿಳಿದು ಸ್ಥಳಕ್ಕೆ ಬಂದ ಆನೆ ಕಾರ್ಯಪಡೆಯ 30 ಸಿಬ್ಬಂದಿ, ಆನೆಯನ್ನು ಕಾಡಿಗಟ್ಟುವ ಕಾರ್ಯಾಚರಣೆ ಆರಂಭಿಸಿದರು. ಆಗ, ಗಿರೀಶ್ ಅವರ ಮೇಲೆ ದಾಳಿ ನಡೆಸಿದ ಆನೆಯು ತೀವ್ರವಾಗಿ ಗಾಯಗೊಳಿಸಿತು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಆನೆ ಕಾರ್ಯಪಡೆ ಡಿಸಿಎಫ್ ಪೂವಯ್ಯ ತಿಳಿಸಿದರು.

ಈ ಆನೆಯು ಕೆದಕಲ್ ವ್ಯಾಪ್ತಿಯಲ್ಲಿ ಸಂಚರಿಸುತ್ತಿದ್ದು, ಆ ಭಾಗದ ಜನರಲ್ಲಿ ಆತಂಕ ಮೂಡಿಸಿದೆ.

ಅತಿ ಹಿಂದುಳಿದ ವರ್ಗಗಳ ಸಭೆ 9ಕ್ಕೆ

ಬೆಂಗಳೂರು: 'ರಾಜ್ಯದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಅವಕಾಶ ವಂಚಿತ ಈಡಿಗ ಮತ್ತು ಅತಿ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗಾಗಿ ಹೋರಾಟ ರೂಪಿಸುವ ಕುರಿತು ಚರ್ಚಿಸಲು ಇದೇ 9ರಂದು ಬೆಳಿಗ್ಗೆ 10ಕ್ಕೆ ಸಮಾನ ಮನಸ್ಕರ ಪೂರ್ವಭಾವಿ ಸಭೆಯನ್ನು ನಗರದ ಅರಮನೆ ಮೈದಾನದ ವೈಟ್ ಪೆಟಲ್ಸ್‌ನಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ಸ್ವಾಗತ ಸಮಿತಿ ಅಧ್ಯಕ್ಷ ಎಚ್.ಆರ್. ಶ್ರೀನಾಥ್ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದರೂ ಈ ಸಮುದಾಯಗಳ ಪರಿಸ್ಥಿತಿ ಶೋಚನೀಯವಾಗಿದೆ. ಈ ವರ್ಗದಲ್ಲಿ ಪ್ರಬಲವಾಗಿರುವ ಬೆರಳೆಣಿಕೆಯ ಸಮುದಾಯಗಳು ಇತರೆ ಅತಿ ಹಿಂದುಳಿದ ಸಮುದಾಯಗಳ ಅವಕಾಶಗಳನ್ನೂ ಕಬಳಿಸುತ್ತಿವೆ' ಎಂದು ದೂರಿದರು.

'ಅವಕಾಶ ವಂಚಿತ ಸಮುದಾಯಗಳು ಸಂಘಟಿತರಾಗಬೇಕು. ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಮತ್ತು ರಾಜಕೀಯವಾಗಿ ತಮಗೆ ಆಗುವ ಅನ್ಯಾಯವನ್ನು ಖಂಡಿಸಬೇಕು. ಮೀಸಲಾತಿ ಮತ್ತು ಪ್ರಾತಿನಿಧ್ಯದ ವಿಚಾರದಲ್ಲಿ ಅವಕಾಶ ವಂಚಿತ ಸಮುದಾಯಗಳ ಹಿತವನ್ನು ರಕ್ಷಿಸುವುದಕ್ಕೆ ರಾಜಿ ಇಲ್ಲದ ಹೋರಾಟ ಮಾಡಬೇಕು. ಈ ಎಲ್ಲ ವಿಷಯಗಳ ಕುರಿತು ಚಿಂತನ- ಮಂಥನ ನಡೆಸಿ ನಿರ್ಣಯಗಳನ್ನು ಕೈಗೊಳ್ಳಲಾಗುವುದು' ಎಂದರು.

ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ: ಪ್ರದೀಪ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಬಿಜೆಪಿಯಲ್ಲಿ ನನಗಾದ ಅನ್ಯಾಯವನ್ನು ವರಿಷ್ಠರ ಗಮನಕ್ಕೆ ತಂದಿದ್ದೇನೆ ಹೊರತು ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ಪಕ್ಷವನ್ನು ಗೆಲ್ಲಿಸಿ, ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡಬೇಕಿದೆ' ಎಂದು ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಹೇಳಿದರು.

'ಸಹೋದರ ಜಗದೀಶ ಶೆಟ್ಟರ್ ರಾಜ್ಯದಲ್ಲಿ ಬಿಜೆಪಿ ಕಟ್ಟಿ ಬೆಳೆಸಿದವರು. ವಿಧಾನಸಭೆ ಚುನಾವಣೆ ವೇಳೆ ಅವರಿಗೆ ಅನ್ಯಾಯವಾಗಿ ಟಿಕೆಟ್ ತಪ್ಪಿಸಿದರು. ಕಲಘಟಗಿ ವಿಧಾನಸಭಾ ಕ್ಷೇತ್ರದಲ್ಲಿ ಮೂಲ ಬಿಜೆಪಿಯವರಿಗೆ ಕೊಡಲಿಲ್ಲ. ಅಲ್ಲಿ ಸ್ಪರ್ಧಿಸಲು ಬಸವರಾಜ ಕುಂದಗೋಳಮಠ ಮತ್ತು ನಾನು ಟಿಕೆಟ್ ಕೇಳಿದ್ದೆವು. ನಮಗೆ ಕೊಡಲಿಲ್ಲ. ಅಲ್ಲಿ ಬಿಜೆಪಿ ಸೋತಿತು. ನಮಗೆ ಟಿಕೆಟ್ ಸಿಕ್ಕಿದ್ದರೆ ಗೆಲ್ಲುತ್ತಿದ್ದೆವು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಬಿಜೆಪಿಯಲ್ಲಿ ಲಿಂಗಾಯತರಿಗೆ ಅನ್ಯಾಯವಾಗಿಲ್ಲ. ಹೊಸಬರಿಗೆ ಅವಕಾಶ ಕೊಡುವ ಕೆಲಸ ಮಾಡಿದೆ. ಜಗದೀಶ ಶೆಟ್ಟರ್ ಅವರನ್ನು ಬದಲಾಯಿಸಿ, ಲಿಂಗಾಯತ ಸಮುದಾಯದವನಾದ ನನಗೆ ಟಿಕೆಟ್ ನೀಡಿದೆ' ಎಂದು ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಹೇಳಿದ್ದಾರೆ.

ಅನುದಾನ ಬಳಕೆಗೆ ಫೆಬ್ರುವರಿ ಗಡುವು

ಎಂಟು ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದ ಸಿಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಬಜೆಟ್‌ನಲ್ಲಿ ಬಂಡವಾಳ ವೆಚ್ಚಕ್ಕಾಗಿ ಮೀಸಲಿಟ್ಟಿರುವ ₹ 54,374 ಕೋಟಿ ಅನುದಾನವನ್ನು 2024ರ ಫೆಬ್ರುವರಿ ತಿಂಗಳೊಳಗೆ ವೆಚ್ಚ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದರು.

ಲೋಕೋಪಯೋಗಿ, ಜಲ ಸಂಪನ್ಮೂಲ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸಣ್ಣ ನೀರಾವರಿ, ಸಮಾಜ ಕಲ್ಯಾಣ ಮತ್ತು ಯೋಜನಾ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯನ್ನು ಸೋಮವಾರ ನಡೆಸಿದ ಅವರು, ಬಂಡವಾಳ ವೆಚ್ಚಕ್ಕೆ ನಿಗದಿಪಡಿಸಿರುವ ಅನುದಾನದ ಬಳಕೆಗೆ ಗಡುವು ನೀಡಿದರು.

ಹಿಂದಿನ ಆರ್ಥಿಕ ವರ್ಷದಲ್ಲಿ ಬಂಡವಾಳ ವೆಚ್ಚಕ್ಕಾಗಿ ₹ 46,955 ಕೋಟಿ ಒದಗಿಸಲಾಗಿತ್ತು. ಪ್ರಸಕ್ತ ವರ್ಷ ಅದನ್ನು ₹ 54,374 ಕೋಟಿಗೆ ಹೆಚ್ಚಿಸಲಾಗಿದೆ. ಬಂಡವಾಳ ವೆಚ್ಚವು ಸಾರ್ವಜನಿಕ ಆಸ್ತಿಗಳ ಸೃಜನೆಗೆ ಪೂರಕವಾಗಿರುತ್ತದೆ. ಚುನಾವಣೆ ಮತ್ತು ಬಜೆಟ್ ಅನುಮೋದನೆ ವಿಳಂಬವಾಗಿರುವ ಕಾರಣದಿಂದ ವಿವಿಧ ಇಲಾಖೆಗಳಲ್ಲಿ ಪ್ರಗತಿ ಕುಂಠಿತವಾಗಿದೆ. ನಿಗದಿತ ಗುರಿಯಂತೆ ಪೂರ್ಣ ಪ್ರಮಾಣದ ಅನುದಾನ ಬಳಕೆಗೆ ಕ್ರಮ ಕೈಗೊಳ್ಳಬೇಕು ಎಂದರು.

ಜಲ ಸಂಪನ್ಮೂಲ ಇಲಾಖೆಯಲ್ಲಿ ₹ 1 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಅನುಮೋದಿತ ಕಾಮಗಾರಿಗಳಿವೆ. ಅವುಗಳಲ್ಲಿ ₹ 12,000 ಕೋಟಿ ಮೊತ್ತದ ಕಾಮಗಾರಿಗಳು ಇನ್ನೂ ಆರಂಭವಾಗಿಲ್ಲ. ಈ ಪ್ರಸ್ತಾವ ಗಳನ್ನು ಪರಿಶೀಲಿಸಿ, ಕಾಮಗಾರಿ ಗಳನ್ನು ಕೈಬಿಡುವ ಕುರಿತು ನೀರಾವರಿ ನಿಗಮಗಳ ಆಡಳಿತ ಮಂಡಳಿ ಸಭೆಗಳಲ್ಲಿ ಚರ್ಚಿಸಿ, ನಿರ್ಣಯ ಕೈಗೊಳ್ಳಬೇಕು ಎಂದು ಸೂಚಿಸಿದರು.

ಗ್ರಾಮೀಣ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಹೆಚ್ಚಳವಾಗಬೇಕು. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ ವರ್ಷ ಒದಗಿಸಿದ್ದ ₹ 2,000 ಕೋಟಿ ಅನುದಾನ ಬಾಕಿ ಇದೆ. ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ₹ 3,000 ಕೋಟಿ ಒದಗಿಸಲಾಗಿದೆ. ತ್ವರಿತವಾಗಿ ಕ್ರಿಯಾಯೋಜನೆಗೆ ಅನುಮೋದನೆ ನೀಡಿ, ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರಬೇಕು ಎಂದು ಮುಖ್ಯಮಂತ್ರಿ ನಿರ್ದೇಶನ ನೀಡಿದರು.

ಔಷಧಿ ಖರೀದಿಗೆ ಸೂಚನೆ: ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದಲ್ಲಿ ₹ 1,400 ಕೋಟಿ ಅನುದಾನ ಲಭ್ಯವಿದೆ. ಅಗತ್ಯವಿರುವ ಔಷಧಿ ಮತ್ತು ವೈದ್ಯಕೀಯ ಉಪಕರಣಗಳ ಖರೀದಿಸಬೇಕು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಭಾರತೀಯ ಸಾರ್ವಜನಿಕ ಆರೋಗ್ಯ ಗುಣಮಟ್ಟ ಮಾರ್ಗಸೂಚಿ ಅನುಸಾರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಬೇಕು ಎಂದು ಸೂಚಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಸತೀಶ ಜಾರಕಿಹೊಳಿ, ದಿನೇಶ್ ಗುಂಡೂರಾವ್, ಎಸ್.ಎಸ್. ಬೋಸರಾಜು, ಡಿ. ಸುಧಾಕರ್, ರಹೀಂ ಖಾನ್, ಭೈರತಿ ಸುರೇಶ್, ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ ಉಪಾಧ್ಯಕ್ಷ ರಾಜೀವ್ ಗೌಡ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಹಣಕಾಸು ಇಲಾಖೆ ಕಾರ್ಯದರ್ಶಿಗಳಾದ ಪಿ.ಸಿ. ಜಾಫರ್, ಎಂ.ಟಿ. ರೇಜು ಸಭೆಯಲ್ಲಿದ್ದರು.

ಶೇ 50ರಷ್ಟು ಬಿಲ್ ಪಾವತಿಗೆ ಕ್ರಮ

ಬೆಂಗಳೂರು: 'ಬಿಬಿಎಂಪಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಬಾಬ್ತು ಗುತ್ತಿಗೆದಾರರಿಗೆ ಬಾಕಿ ಬಿಲ್ ಮೊತ್ತದ ಶೇಕಡ 50ರಷ್ಟನ್ನು ಪಾವತಿಸಲು ನಿರ್ಧರಿಸಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪೂರ್ಣಗೊಂಡಿರುವ ಕಾಮಗಾರಿಗಳಲ್ಲಿ ಶೇ 50ರಷ್ಟು ಹಣ ಬಿಡುಗಡೆ ಮಾಡಲಾಗುವುದು. ಉಳಿದ ಮೊತ್ತವನ್ನು ತನಿಖಾ ಸಮಿತಿಗಳ ವರದಿ ಬಂದ ಬಳಿಕ ಪಾವತಿಸಲಾಗುವುದು' ಎಂದರು.

ಸಚಿವರ ಆಗ್ರಹ: ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಬಿಬಿಎಂಪಿ, ಬಿಡಿಎ ಸೇರಿದಂತೆ ವಿವಿಧ ಸಂಸ್ಥೆಗಳಲ್ಲಿ ಕಾಮಗಾರಿ ನಡೆಸಿರುವ ಗುತ್ತಿಗೆದಾರರಿಗೆ ಬಿಲ್ ತಡೆ ಹಿಡಿದಿರುವುದನ್ನು ಇಬ್ಬರು ಸಚಿವರು ಸಭೆಯಲ್ಲಿ ಆಕ್ಷೇಪಿಸಿದ್ದರು. ಅರ್ಹ ಗುತ್ತಿಗೆದಾರರಿಗೆ ಬಿಲ್ ಪಾವತಿಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದರು ಎಂದು ಮೂಲಗಳು ತಿಳಿಸಿವೆ.

'ತನಿಖೆ ಹೆಸರಿನಲ್ಲಿ ದೀರ್ಘ ಕಾಲ ಬಿಲ್ ತಡೆಹಿಡಿದರೆ ಕೆಟ್ಟ ಸಂದೇಶ ರವಾನೆಯಾಗುತ್ತದೆ. ಇದರಿಂದ ಸರ್ಕಾರದ ವರ್ಚಸ್ಸಿಗೆ ಧಕ್ಕೆಯಾಗು ತ್ತದೆ. ಪಕ್ಷಕ್ಕೂ ಹಾನಿಯಾಗುತ್ತದೆ. ತನಿಖೆ ಮುಂದುವರಿಸಿ, ಭಾಗಶಃ ಬಿಲ್ ಪಾವತಿಸಬೇಕು ಎಂಬುದಾಗಿ ಈ ಸಚಿವರು ಆಗ್ರಹಿಸಿದ್ದರು' ಎಂದು ಮೂಲಗಳು ಹೇಳಿವೆ.

ಆಯುಕ್ತರಾಗಿ ದಾಸ್ ಸೂರ್ಯವಂಶಿ

ಬೆಂಗಳೂರು: ಬೀದರ್ ಜಿಲ್ಲೆಯ ದಾಸ್ ಸೂರ್ಯವಂಶಿ ಅವರನ್ನು ರಾಜ್ಯ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತರನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

2023ರ ಸೆ. 1ರಂದು ಅವರು ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿಕ್ರಮ್ ಮತ್ತೊಮ್ಮೆ 'ಲ್ಯಾಂಡಿಂಗ್'!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರನಲ್ಲಿ ಕತ್ತಲು ಆವರಿಸಿದ ನಂತರ ಎಂಜಿನ್ ಉರಿಸುವ ಮೂಲಕ 'ವಿಕ್ರಮ್' ಲ್ಯಾಂಡರ್ ಅನ್ನು ನೆಲದಿಂದ ಮೇಲಕ್ಕೇರಿಸಿ ಕೊಂಚ ಪಕ್ಕಕ್ಕೆ ತೇಲಿಸಿ ಪುನಃ ಚಂದ್ರನಂಗಳದ ಮೇಲೆ ಸುರಕ್ಷಿತವಾಗಿ ಇಳಿಸಲಾಗಿದೆ.

ಸೋಮವಾರ ಬೆಳಿಗ್ಗೆ 8 ಗಂಟೆ ಸುಮಾರಿಗೆ ಈ ಸಣ್ಣ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿ ಬಳಿಕ ಚಂದ್ರಯಾನ–3 ರ ವಿಕ್ರಮ್‌ನಲ್ಲಿರುವ ಎಲ್ಲ ಉಪಕರಣಗಳನ್ನು 'ಸ್ಲೀಪ್‌ಮೋಡ್'ಗೆ ಹಾಕಲಾಗಿದೆ ಎಂದು ಇಸ್ರೊ 'ಎಕ್ಸ್'ನಲ್ಲಿ ಮಾಹಿತಿ ನೀಡಿದೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಇಸ್ರೊ ವಿಜ್ಞಾನಿಯೊಬ್ಬರು, 'ಇದೊಂದು ಸಣ್ಣ ಪರೀಕ್ಷೆಯಾಗಿದ್ದರೂ ಮಹತ್ವದ ಪರೀಕ್ಷೆಯಾಗಿದೆ. 40 ಸೆಂ.ಮೀ ನಷ್ಟು ಮೇಲಕ್ಕೆ ಎಬ್ಬಿಸಿ 30 ರಿಂದ 40 ಸೆಂ.ಮೀ ನಷ್ಟು ಪಕ್ಕಕ್ಕೇ ತೇಲಿಸಿ ಮತ್ತೊಂದು ಸ್ಥಳದಲ್ಲಿ ಇಳಿಸಲಾಗಿದೆ. ಇದಕ್ಕೆ ಹಾಪ್ ಟೆಸ್ಟ್ ಎನ್ನಲಾಗುತ್ತದೆ' ಎಂದು ವಿವರಿಸಿದರು.

'ಇದು ಸಣ್ಣ ಪರೀಕ್ಷೆ ಆಗಿದ್ದರೂ ಭವಿಷ್ಯದಲ್ಲಿ ಉಪಯೋಗಕ್ಕೆ ಬರುತ್ತದೆ. ಚಂದ್ರ ಅಥವಾ ಇತರ ಗ್ರಹಗಳಿಗೆ ಬಾಹ್ಯಾಕಾಶ ನೌಕೆ ಕಳಿಸಿ ಅದನ್ನು ಮತ್ತೆ ವಾಪಾಸ್ ಭೂಮಿಗೆ ತರುವ ಉದ್ದೇಶಕ್ಕೆ ನೆರವಾಗುತ್ತದೆ. ಗಗನಯಾನ ನಡೆಸುವ ಮಾನವರನ್ನು ಮತ್ತೆ ಭೂಮಿಗೆ ತರುವುದಕ್ಕೂ ಈ ಪರೀಕ್ಷೆ ಮುಖ್ಯವಾಗಿದೆ. ಈ ಪ್ರಯತ್ನ ಇಸ್ರೊ ವಿಜ್ಞಾನಿಗಳಲ್ಲಿ ವಿಶ್ವಾಸ ಮೂಡಿಸಿದೆ' ಎಂದು ಹೇಳಿದರು.

'ಲ್ಯಾಂಡರ್‌ನ ಉಪಕರಣಗಳನ್ನು ಸ್ವಿಚ್ ಆಫ್ ಮಾಡಿದ್ದರೂ ರಿಸೀವರ್ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿ ಇರಿಸಲಾಗಿದೆ. ಹಾಪ್ ಪರೀಕ್ಷೆಗೆ ಮೊದಲು ರ‍್ಯಾಂಪ್ ಅನ್ನು ಮಡಿಸಿಡಲಾಗಿದೆ. ಇದೇ 22 ರಂದು ಪುನಃ ಲ್ಯಾಂಡರ್ ಮತ್ತು ರೋವರ್‌ಗಳನ್ನು ನಿದ್ದೆಯಿಂದ 'ಎಬ್ಬಿಸುವ' ಕೆಲಸವೂ ನಡೆಯಲಿದೆ' ಎಂದು ಅವರು ವಿವರಿಸಿದರು. ಈ ಕುರಿತ ಚಿತ್ರಗಳು ಮತ್ತು ವಿಡಿಯೊವನ್ನೂ 'ಎಕ್ಸ್'ನಲ್ಲಿ ಹಂಚಿಕೊಂಡಿದೆ.

ನೀಲ ಮೇಘ ಶ್ಯಾಮ... ಶ್ರೀಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಕಲಾವಿದರೊಬ್ಬರು ಶ್ರೀಕೃಷ್ಣನ ಮೂರ್ತಿಗೆ ಅಂತಿಮ ಸ್ಪರ್ಶ ನೀಡಿದರು

ಪ್ರಜಾವಾಣಿ ಚಿತ್ರ: ರಂಜು ಪಿ

ಚುನಾವಣೆಯಲ್ಲಿ ₹ 2 ಸಾವಿರ ನಗದು, ಕೋಳಿ ಹಂಚಿದ ಆರೋಪ

ರೇವಣ್ಣಗೆ ಸಮನ್ಸ್ ಜಾರಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೊಳೆನರಸೀಪುರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಚ್.ಡಿ. ರೇವಣ್ಣ ಹಲವು ಅಕ್ರಮ ನಡೆಸಿ ಆಯ್ಕೆಯಾಗಿದ್ದಾರೆ. ಅವರ ಬೆಂಬಲಿಗರು ಅಣ್ಣೆಹಳ್ಳಿಯಲ್ಲಿ ಮತದಾರರಿಗೆ ತಲಾ 2 ಕೋಳಿ ಮತ್ತು ₹ 2 ಸಾವಿರ ನಗದು ಹಂಚಿ ಮತ ಹಾಕಿಸಿಕೊಂಡಿದ್ದಾರೆ ಎಂಬ ಆರೋಪವೂ ಸೇರಿದಂತೆ ವಿವಿಧ ಅಕ್ರಮ ನಡೆಸಿ ಗೆದ್ದಿರುವ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು' ಎಂದು ಕೋರಲಾದ ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ ರೇವಣ್ಣ ಅವರಿಗೆ ಸಮನ್ಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎಚ್.ಡಿ. ರೇವಣ್ಣ ವಿರುದ್ಧ ಬಿಜೆಪಿಯಿಂದ ಸ್ಪರ್ಧಿಸಿ ಪರಾಜಿತಗೊಂಡಿರುವ ಹೈಕೋರ್ಟ್ ವಕೀಲ ಜಿ.ದೇವರಾಜೇಗೌಡ ಸಲ್ಲಿಸಿರುವ ಈ ಅರ್ಜಿಯನ್ನು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಈ ಹಿಂದೆ ವಿಚಾರಣೆ ನಡೆಸಿದ್ದ ನ್ಯಾಯಪೀಠವು ರೇವಣ್ಣ ಅವರಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿತ್ತು. ಆದರೆ, ಪ್ರತಿವಾದಿ ರೇವಣ್ಣ ಸಮನ್ಸ್ ಸ್ವೀಕರಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ವಿಧಾನಸಭೆ ಕಾರ್ಯದರ್ಶಿಗಳ ಮೂಲಕ ಮತ್ತೊಂದು ಬಾರಿ ಸಮನ್ಸ್ ಜಾರಿಗೊಳಿಸಲು ಆದೇಶಿಸಲಾಗಿದ್ದು, ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಲಾಗಿದೆ.

ಅರ್ಜಿಯಲ್ಲಿ ಏನಿದೆ?: 'ಶಾಂತಿಗ್ರಾಮದ ಬಳಿ ಜನರಿಗೆ ದುಡ್ಡು, ಕೋಳಿಯ ಆಮಿಷವೊಡ್ಡುತ್ತಿದ್ದುದನ್ನು ತಡೆಯಲು ಹೋದಾಗ ರೇವಣ್ಣ ಅವರ ಬೆಂಬಲಿಗರು ನಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಬಗ್ಗೆ ಮಿಥುನ್, ಮೋಹನ್, ಮಂಜು ಮತ್ತು ಶಂಕರ್ ಸೇರಿ 30 ಮಂದಿ ವಿರುದ್ಧ ಚನ್ನರಾಯಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಆದೇಶಕ್ಕೆ ತಡೆ ಕೋರಿ ಪ್ರಜ್ವಲ್ ಮಧ್ಯಂತರ ಅರ್ಜಿ

ಬೆಂಗಳೂರು: ಹಾಸನ ಲೋಕಸಭಾ ಕ್ಷೇತ್ರದಿಂದ ತಮ್ಮ ಸಂಸದ ಆಯ್ಕೆಯನ್ನು ಅಸಿಂಧುಗೊಳಿಸಿರುವ ಆದೇಶಕ್ಕೆ ತಡೆ ನೀಡುವಂತೆ ಕೋರಿ ಪ್ರಜ್ವಲ್ ರೇವಣ್ಣ ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ.

'ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವವರೆಗೂ ಆದೇಶಕ್ಕೆ ತಡೆ ನೀಡಬೇಕು' ಎಂದು ಕೋರಿ ಸಲ್ಲಿಸಿರುವ ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

'ಚುನಾವಣೆಗೆ ಸ್ಪರ್ಧಿಸುವ ವೇಳೆ ಪ್ರಮಾಣ ಪತ್ರದಲ್ಲಿ ವಿವರಗಳನ್ನು ಮರೆಮಾಚಿದ್ದ ಮತ್ತು ಚುನಾವಣೆಯಲ್ಲಿ ಅಕ್ರಮ ಎಸಗಿದ ಆರೋಪದಡಿ ಪ್ರಜ್ವಲ್ ರೇವಣ್ಣ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಬಿಜೆಪಿಯ ಪರಾಜಿತ ಅಭ್ಯರ್ಥಿ ಎ.ಮಂಜು ಹಾಗೂ ಜಿ.ದೇವರಾಜೇಗೌಡ 2019ರಲ್ಲಿ ಹೈಕೋರ್ಟ್‌ಗೆ ಪ್ರತ್ಯೇಕ ಚುನಾವಣಾ ತಕರಾರು ಅರ್ಜಿಗಳನ್ನು ಸಲ್ಲಿಸಿದ್ದರು.

ವಲರ್ಮಥಿ ನಿಧನ

ಚೆನ್ನೈ: ಇಸ್ರೊ ಯೋಜನಾ ನಿರ್ದೇಶಕಿ ಎನ್. ವಲರ್ಮಥಿ (64) ಹೃದಯಾಘಾತದಿಂದ ಚೆನ್ನೈನಲ್ಲಿ ಭಾನುವಾರ ರಾತ್ರಿ ನಿಧನರಾಗಿದ್ದಾರೆ.

ಚಂದ್ರಯಾನ–3 ಸೇರಿದಂತೆ ಇಸ್ರೊದ ಹಲವು ಮಹತ್ವದ ರಾಕೆಟ್ ಉಡಾವಣೆ ಸಂದರ್ಭದಲ್ಲಿ ಕ್ಷಣಗಣನೆಗೆ ಧ್ವನಿಯಾಗಿ ವೀಕ್ಷಕ ವಿವರಣೆ ನೀಡುವ ಮೂಲಕ ಗಮನ ಸೆಳೆಯುತ್ತಿದ್ದರು.

ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಅವರು ಕಾರ್ಯನಿರ್ವಹಿಸುತ್ತಿದ್ದರು. ಕ್ಷಣಗಣನೆಯನ್ನು ಆರಂಭಿಸುತ್ತಿದ್ದ ಅವರು 'ಝೀರೊ' ಎಂದು ಹೇಳುತ್ತಿದ್ದಂತೆಯೇ ರಾಕೆಟ್ ನಭಕ್ಕೆ ನೆಗೆಯುತ್ತಿತ್ತು.

ತಮಿಳುನಾಡಿನ ಅರಿಯಲೂರಿನಲ್ಲಿ ಜನಿಸಿದ್ದ ಅವರು, ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದಿದ್ದರು.

ಹೊಸ ವಿ.ವಿ. ಮುಚ್ಚುವ ಪ್ರಸ್ತಾವ ಸದ್ಯಕ್ಕಿಲ್ಲ: ಸಚಿವ ಸುಧಾಕರ್

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ರಾಜ್ಯದಲ್ಲಿ ಹೊಸದಾಗಿ ಆರಂಭವಾಗಿರುವ ಎಂಟು ವಿ.ವಿ ಮುಚ್ಚುವ ಪ್ರಸ್ತಾವ ಸದ್ಯಕ್ಕೆ ಸರ್ಕಾರದ ಮುಂದಿಲ್ಲ. ಈಗಿರುವ ವಿ.ವಿ.ಗಳಿಗೆ ಹೊಸ ಚೈತನ್ಯ ತುಂಬುವ ದಿಸೆಯಲ್ಲಿ ಪ್ರಯತ್ನ ನಡೆದಿವೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಸೋಮವಾರ ಸುದ್ದಿಗಾರರೊಂ ದಿಗೆ ಮಾತನಾಡಿದ ಅವರು, 'ಈಗಾಗಲೇ ಇರುವ ಹಳೇ ವಿ.ವಿ.ಗಳು ಆರ್ಥಿಕ ಮುಗ್ಗಟ್ಟಿಗೆ ಸಿಲುಕಿವೆ. ಹೊಸ ವಿ.ವಿ. ಆರಂಭ ಮಾಡಲು ಸಾಕಷ್ಟು ತಯಾರಿ, ಆರ್ಥಿಕ ಸಂಪನ್ಮೂಲ ಬೇಕಾಗುತ್ತದೆ. ಹಿಂದಿನ ಬಿಜೆಪಿ ಸರ್ಕಾರ ಈ ಯಾವ ತಯಾರಿಯನ್ನೂ ಮಾಡಿಕೊಳ್ಳದೆ ಹಿತಾಸಕ್ತಿಗಾಗಿ ವಿ.ವಿ.ಗಳನ್ನು ಆರಂಭಿಸಿತು' ಎಂದು ದೂರಿದರು.

'ಈ ಕಾರಣಕ್ಕಾಗಿ ವಿ.ವಿ ಗಳಲ್ಲಿ ಪರಿಸ್ಥಿತಿ ಹೇಗಿದೆ? ಹೊಸ ವಿ.ವಿ. ಭವಿಷ್ಯ ಏನು ಎಂಬ ಬಗ್ಗೆ ಅಲ್ಲಿನ ಕುಲಪತಿಗಳಿಂದ ಅಭಿಪ್ರಾಯ ಪಡೆಯಲಾಗಿದೆ. ಅವಲೋಕಿಸಿ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಬಿಜೆಪಿಯ ಕೆಲವರು ಕಾಂಗ್ರೆಸ್ ಸೇರಲಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿದ ಅವರು, 'ಮಾಜಿ ಸಚಿವ ಡಾ.ಕೆ. ಸುಧಾಕರ್ ವಿರುದ್ಧ ಭ್ರಷ್ಟಾಚಾರದ ಆರೋಪಗಳಿವೆ. ಕೋವಿಡ್ ಸಾಮಗ್ರಿಗಳ ಖರೀದಿಯಲ್ಲಿ ಅವ್ಯವಹಾರ ಆರೋಪಗಳ ಬಗ್ಗೆ ಈಗಾಗಲೇ ತನಿಖೆ ನಡೆಯುತ್ತಿದೆ. ಕಳಂಕ ಹೊತ್ತಿರುವ ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವುದು ಅನು ಮಾನವಿದೆ. ಪಕ್ಷದ ವೇದಿಕೆಯಲ್ಲಿ ಇದರ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ' ಎಂದು ತಿಳಿಸಿದರು.

ಗ್ರಾಮ ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಕೆಗೆ ಪೈಪೋಟಿ

ಟಿಬೆಟಿಯನ್ನರಿಗೂ 'ಗ್ಯಾರಂಟಿ' ಭಾಗ್ಯ

• ಶಾಂತೇಶ ಬೆನಕನಕೊಪ್ಪ

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): ನಿರಾಶ್ರಿತರಾಗಿ ನೆಲೆಸಿರುವ ಟಿಬೆಟಿಯನ್ನರು ರಾಜ್ಯ ಸರ್ಕಾರದ 'ಗ್ಯಾರಂಟಿ' ಯೋಜನೆಗಳ ಪ್ರಯೋಜನ ಪಡೆಯಲು ಮುಗಿ ಬಿದ್ದಿದ್ದಾರೆ. ಟಿಬೆಟ್ ಮಹಿಳೆಯರು ಗ್ರಾಮ ಒನ್ ಸೇವಾ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಿಕೊಳ್ಳುತ್ತಿದ್ದಾರೆ.

'ಗೃಹಲಕ್ಷ್ಮಿ', 'ಗೃಹಜ್ಯೋತಿ'ಯ ಲಾಭ ಪಡೆಯಲು ಇ-ಕೆವೈಸಿ ಮಾಡಿಸಿಕೊಳ್ಳುತ್ತಿದ್ದಾರೆ. ಶಕ್ತಿ ಯೋಜನೆಯಡಿ ಟಿಬೆಟಿಯನ್ ಮಹಿಳೆಯರು ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ.

'ರಾಜ್ಯ ಸರ್ಕಾರದಿಂದ ಈವರೆಗೆ ಯಾವ ಯೋಜನೆಯ ಲಾಭವೂ ಸಿಕ್ಕಿರಲಿಲ್ಲ. ಇದೇ ಮೊದಲ ಬಾರಿಗೆ ಗೃಹಲಕ್ಷ್ಮಿಯಂತಹ ಯೋಜನೆಗೆ ಅರ್ಜಿ ಸಲ್ಲಿಸಲು ಖುಷಿಯಾಗುತ್ತಿದೆ' ಎಂದು ತಾಲ್ಲೂಕಿನ ಇಂದೂರಿನ ಗ್ರಾಮ ಒನ್ ಕೇಂದ್ರಕ್ಕೆ ಅರ್ಜಿ ಸಲ್ಲಿಸಿದ ಟಿಬೆಟಿಯನ್ ಮಹಿಳೆಯೊಬ್ಬರು ತಿಳಿಸಿದರು.

'ಗೃಹಲಕ್ಷ್ಮಿ ಯೋಜನೆಯ ಸಲುವಾಗಿ ಟಿಬೆಟಿಯನ್ನರು ಇ-ಕೆವೈಸಿ ಮಾಡಿಸಿಕೊಳ್ಳುತ್ತಿದ್ದಾರೆ. ಅವರ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ' ಎಂದು ಗ್ರಾಮ ಒನ್ ಕೇಂದ್ರದ ಸಿಬ್ಬಂದಿ ಮೊಹಮ್ಮದ್ ಕಾಶಿಂ ಹೇಳಿದರು.

'ನಂದಿಗಟ್ಟಾ, ಹುನಗುಂದ, ಇಂದೂರ ಗ್ರಾ.ಪಂ ವ್ಯಾಪ್ತಿಯ 200ರಷ್ಟು ಟಿಬೆಟಿಯನ್ನರು ಗೃಹಲಕ್ಷ್ಮಿ ಯೋಜನೆಗೆ ಹೆಸರು ನೋಂದಣಿ ಮಾಡಿಕೊಂಡಿರಬಹುದು. ಆಧಾರ್ ಜೋಡಣೆ ಆಗದಿರುವುದು ಸೇರಿ ಬೇರೆ ಬೇರೆ ಕಾರಣಗಳಿಂದ ನೋಂದಣಿಯಾಗಿರಲಿಲ್ಲ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ದೀಪಾ ಬಂಗೇರ ತಿಳಿಸಿದರು.

ಗೃಹಜ್ಯೋತಿಗೂ ಫಲಾನುಭವಿಗಳು

'317 ಟಿಬೆಟಿಯನ್ನರಿಂದ ಗೃಹಜ್ಯೋತಿಗೆ ಅರ್ಜಿ ಸಲ್ಲಿಕೆಯಾಗಿದ್ದು, 186 ಕುಟುಂಬ ಫಲಾನುಭವಿಯಾಗಿವೆ. 67 ಅರ್ಜಿ ತಿರಸ್ಕೃತಗೊಂಡಿವೆ. ಬೌದ್ಧ ಬಿಕ್ಕುಗಳು ಸೇರಿ ವಸತಿ ನಿಲಯ, ಮಂದಿರಗಳಲ್ಲಿ ವಾಸವಿರುವ ಕೆಲವರು ಗೃಹಜ್ಯೋತಿಗೆ ಅರ್ಜಿ ಸಲ್ಲಿಸಿದ್ದು ಗೊತ್ತಾಗಿದೆ. ತಪಾಸಣೆ ನಡೆಸಿ ಅಂಥವನ್ನು ತಿರಸ್ಕರಿಸಲಾಗಿದೆ' ಎಂದು ಹೆಸ್ಕಾಂ ಎಇಇ ವಿನಾಯಕ ಪೇಟ್ಕರ್ ತಿಳಿಸಿದರು.

'1,131 ಟಿಬೆಟಿಯನ್ನರ ಬಳಿ ಎಪಿಎಲ್ ಪಡಿತರ ಚೀಟಿ ಇದೆ. ಕೆಲವರು ಅಕ್ಕಿ ಪಡೆಯುತ್ತಾರೆ' ಎನ್ನುತ್ತಾರೆ ಆಹಾರ ನಿರೀಕ್ಷಕ ಹನಮಂತ ಹೆಬ್ಬಳ್ಳಿ.

ಗ್ಯಾರಂಟಿ ಯೋಜನೆಗಳ ಸದ್ಬಳಕೆಗೆ ಟಿಬೆಟಿಯನ್ ಕ್ಯಾಂಪ್‌ಗಳ ಜನರಲ್ಲಿ ತಿಳಿವಳಿಕೆ ಮೂಡಿಸಲಾಗಿದೆ. ಯೋಜನೆಯ ಲಾಭ ಸಿಗುತ್ತಿರುವುದು ಖುಷಿಯ ವಿಚಾರ
ಡೊಲ್ಮಾ ಸಿರಿಂಗ್
ಡೊಗುಲಿಂಗ್ ಸೆಟ್ಲಮೆಂಟ್ ಚೇರಮನ್

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	99.22	4,183	6,200
ಹಾರಂಗಿ	2,859	2,854.89	204	1,735
ಕಬಿನಿ	2284.00	2,273.69	794	1,000
ಹೇಮಾವತಿ	2,922	2,905.05	747	5,800
ಲಿಂಗನಮಕ್ಕಿ	1,819	1,787.50	2,971	5,959.67
ಸೂಪಾ (ಮೀ)	564	545.45	1,207.72	2926.46
ಮಾಣಿ	594	579.22	371	631
ತುಂಗಭದ್ರಾ	1,633	1,624.16	630	8,737
ಮಲಪ್ರಭಾ	2079.5	2,066.04	-	1,194
ಘಟಪ್ರಭಾ	2175	2,162.63	597	176
ಭದ್ರಾ	186	163.3	400	3,224
ಆಲಮಟ್ಟಿ (ಮೀ)	519.6	519.51	086	15,237
ನಾರಾಯಣಪುರ (ಮೀ)	492.25	489.26	17,433	7,865

* ನೆಲಮಟ್ಟದಿಂದ

ಸಂಜಯಗಾಂಧಿ ಟ್ರಾಮ ಸಂಸ್ಥೆ ಪ್ರಭಾರ ನಿರ್ದೇಶಕ ಡಾ. ಎಂ.ಆರ್. ನಿರಂಜನ್ ಗೌಡ ಅಮಾನತು

ಫೆಲೋಶಿಪ್ ಪರೀಕ್ಷೆಯಲ್ಲಿ 'ಅಕ್ರಮ' ದೃಢ

• ವರುಣ ಹೆಗಡೆ

ಬೆಂಗಳೂರು: ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯು ಫೆಲೋಶಿಪ್ ಹುದ್ದೆಗೆ ನಡೆಸಿದ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ತಿದ್ದುಪಡಿ ಮಾಡಿರುವುದು ದೃಢಪಟ್ಟಿದ್ದು, ಸಂಸ್ಥೆಯ ಪ್ರಭಾರ ನಿರ್ದೇಶಕ ಡಾ. ಎಂ.ಆರ್. ನಿರಂಜನ್ ಗೌಡ ಅವರನ್ನು ಅಮಾನತ್ತು ಮಾಡಲಾಗಿದೆ.

ಫೆಲೋಶಿಪ್ ಪರೀಕ್ಷೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಪ್ರಭಾರ ನಿರ್ದೇಶಕರ ನಡೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ವೈದ್ಯಕೀಯ ಶಿಕ್ಷಣ ಇಲಾಖೆಗೆ ಪತ್ರಗಳನ್ನು ಬರೆದಿದ್ದರು. ಫೆಲೋಶಿಪ್ ಹುದ್ದೆಗೆ ₹ 8 ಲಕ್ಷದಿಂದ ₹ 10 ಲಕ್ಷದವರೆಗೆ ಬೇಡಿಕೆ ಇಡಲಾಗಿದೆ ಎಂದು ಪತ್ರದಲ್ಲಿ ದೂರಿದ್ದರು. ಈ ಬಗ್ಗೆ ವೈದ್ಯಕೀಯ ಶಿಕ್ಷಣ ಇಲಾಖೆ ನಡೆಸಿದ ತನಿಖೆಯ ಬಳಿಕ ಪರೀಕ್ಷೆಯಲ್ಲಿ ಅಕ್ರಮ ನಡೆಸಿರುವುದು ದೃಢಪಟ್ಟಿದೆ. ಇದರಿಂದಾಗಿ ಇಲಾಖೆಯು ಪರೀಕ್ಷೆಯನ್ನು ಮತ್ತೊಮ್ಮೆ ನಡೆಸಿ, ಪ್ರಭಾರ ನಿರ್ದೇಶಕರ ಮೇಲೆ ಕ್ರಮ ಕೈಗೊಂಡಿದೆ.

'ಆರ್ಥೋಪೆಡಿಕ್ ಟ್ರಾಮಾ', 'ಆರ್ಥೋಪ್ಲಾಸ್ಟಿ', 'ಸ್ಪೈನ್ ಸರ್ಜರಿ', 'ಸ್ಪೋರ್ಟ್ಸ್ ಇಂಜುರಿ ಆ್ಯಂಡ್ ಆರ್ಥೋಸ್ಕೋಪಿ', 'ಮ್ಯಾಕ್ಸಿಲ್ಲೊ-ಫೆಸಿಯಲ್ ಟ್ರಾಮಾ', 'ಅಲ್ಟ್ರಾಸೌಂಡ್ ಆ್ಯಂಡ್ ಇಮ್ಯಾಜ್ ಗೈಡೆಡ್ ಅಡ್ವಾನ್ಸ್ಡ್ ನರ್ವ್ ಬ್ಲಾಕ್ಸ್' ವಿಭಾಗದಿಂದ ತಲಾ ನಾಲ್ಕು ಸೀಟುಗಳಂತೆ ಒಟ್ಟು 24 ಫೆಲೋಶಿಪ್ ಹುದ್ದೆಗಳಿದ್ದು, ಸಂಸ್ಥೆ ನಡೆಸಿದ ಪರೀಕ್ಷೆಗೆ ಸಂಬಂಧಿಸಿದಂತೆ ಪ್ರಶ್ನೆ ಪತ್ರಿಕೆ ತಿದ್ದುಪಡಿ ಮಾಡಲಾಗಿದೆ ಎಂದು ಪ್ರಾಧ್ಯಾಪಕರು ಸಹ ದೂರು ನೀಡಿದ್ದರು.

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಗೆ ಸದ್ಯ ಪೂರ್ಣಾವಧಿ ನಿರ್ದೇಶಕರಿಲ್ಲ. ವೈದ್ಯಕೀಯ ಅಧೀಕ್ಷಕರಾಗಿದ್ದ ಡಾ. ಎಂ.ಆರ್. ನಿರಂಜನ್ ಗೌಡ ಅವರು ಪ್ರಭಾರ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಬಿಎಂಸಿಆರ್‌ಐನಿಂದ ಪರೀಕ್ಷೆ: ಸಂಸ್ಥೆ ನಡೆಸಿದ ಪರೀಕ್ಷೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಪ್ರಮಾಣೀಕೃತಗೊಂಡಿತ್ತು. ಅಭ್ಯರ್ಥಿಗಳು ಹಾಗೂ ಪ್ರಾಧ್ಯಾಪಕರ ದೂರಿನ ಅನುಸಾರ ಇಲಾಖೆಯು ವಿಚಾರಣಾ ಆಯೋಗ ರಚಿಸಿ, ವರದಿ ಪಡೆದಿತ್ತು. 'ಪಶ್ನೆ ಪತ್ರಿಕೆ ತಯಾರಿಕೆಯ ಸಂಪೂರ್ಣ ಪ್ರಕ್ರಿಯೆಯು ಅನೈತಿಕ ಹಾಗೂ ಸ್ವೀಕಾರಾರ್ಹವಾದುದ್ದಲ್ಲ' ಎಂದು ವರದಿಯಲ್ಲಿ ತಿಳಿಸಲಾಗಿತ್ತು. ಇದರ ಆಧಾರದಲ್ಲಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಹೊಸದಾಗಿ ಪರೀಕ್ಷೆ ನಡೆಸುವಂತೆ ಬಿಎಂಸಿಆರ್‌ಐ ಡೀನ್ ಅವರಿಗೆ ಆ. 28ರಂದು ಸೂಚಿಸಿದ್ದರು. ಹೀಗಾಗಿ, ಆ. 30ರಂದು ಮತ್ತೊಮ್ಮೆ ಪರೀಕ್ಷೆ ನಡೆಸಲಾಗಿದೆ.

'ಪ್ರತಿ ಸೀಟಿಗೂ ಮುಂಗಡವಾಗಿ ಹಣ ಸಂಗ್ರಹಿಸಲಾಗುತ್ತಿದೆ ಎಂದು ತಿಳಿಸಿದ ಸಂಸ್ಥೆಯ ಸಿಬ್ಬಂದಿ, ಮುಂಗಡವಾಗಿ ಹಣ ನೀಡುವಂತೆ ಸೂಚಿಸಿದರು. ಪರೀಕ್ಷೆಯ ಮುಂಚಿತ ದಿನ ಉತ್ತರ ಪತ್ರಿಕೆ ಒದಗಿಸಲಾಗುತ್ತದೆ ಎಂದೂ ಹೇಳಿದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಕ್ರಮಕೈಗೊಳ್ಳಬೇಕು' ಎಂದು ಅಭ್ಯರ್ಥಿಯೊಬ್ಬರು ಇಲಾಖೆ ನಿರ್ದೇಶಕರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದರು. ಡಾ. ನಿರಂಜನ್ ಗೌಡ ಎಂ.ಆರ್. ಅವರು ದೂರವಾಣಿ ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

'ತಜ್ಞರಲ್ಲದವರಿಂದ ಪ್ರಶ್ನೆ ಪತ್ರಿಕೆ'

'ಪ್ರತಿ ವರ್ಷ ನಿಯಮಿತವಾಗಿ ಫೆಲೋಶಿಪ್ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಮೊದಲು ಸಂದರ್ಶನದ ಆಧಾರದಲ್ಲಿ ಆಯ್ಕೆ ನಡೆಯುತ್ತಿತ್ತು. ಈ ಬಾರಿ ಸಂಸ್ಥೆಯಲ್ಲಿ ಬಹು ಆಯ್ಕೆ ಮಾದರಿ ಪರೀಕ್ಷೆ ನಡೆಸಲಾಗಿತ್ತು. ವಿಭಾಗವಾರು ಉತ್ತರ ಸಹಿತ ಪ್ರಶ್ನೆ ಪತ್ರಿಕೆಗಳನ್ನು ನೀಡುವಂತೆ ನಿರ್ದೇಶಕರು ಸೂಚಿಸಿದರು. ಅರ್ಧದಷ್ಟು ಪ್ರಶ್ನೆಗಳನ್ನು ನಾವು ನೀಡಿದ ಪ್ರಶ್ನೆಗಳನ್ನು ಆಯ್ಕೆ ಮಾಡಿಕೊಂಡು, ಉಳಿದ ಪ್ರಶ್ನೆಗಳನ್ನು ಅವರೇ ಸಿದ್ಧಪಡಿಸುವುದಾಗಿ ಹೇಳಿದರು. ಅವರು ಪೆಥಾಲಾಜಿಸ್ಟ್ ಆಗಿದ್ದು, ಉಳಿದ ವಿಭಾಗಗಳ ಬಗ್ಗೆ ಪರಿಣತಿ ಇರುವುದಿಲ್ಲ. ಇದರಿಂದಾಗಿ ಇಲಾಖೆಗೆ ದೂರು ನೀಡಲಾಯಿತು' ಎಂದು ಪ್ರಾಧ್ಯಾಪಕರೊಬ್ಬರು ತಿಳಿಸಿದರು.

ಪ್ರಜಾವಾಣಿ ವಿಶೇಷ

ಫೆಲೋಶಿಪ್ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ದೃಢಪಟ್ಟಿದೆ. ಸಂಸ್ಥೆಯ ಪ್ರಭಾರ ನಿರ್ದೇಶಕರ ಮೇಲೆ ಕ್ರಮಕೈಗೊಂಡು, ಮತ್ತೊಮ್ಮೆ ಪರೀಕ್ಷೆ ನಡೆಸಲಾಗಿದೆ.
ಡಾ. ಸುಜಾತಾ ರಾಥೋಡ್,
ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ

ಮೌನ ಮೆರವಣಿಗೆ...

ದೀರ್ಘಕಾಲದಿಂದ ಬಾಕಿ ಉಳಿದಿರುವ ಸಮಸ್ಯೆಗಳನ್ನು ಇತ್ಯರ್ಥಪಡಿಸಬೇಕು ಮತ್ತು ಪ್ರಭಾರ ಕುಲಸಚಿವರನ್ನು ತೆಗೆದುಹಾಕಬೇಕು ಎಂದು ಆಗ್ರಹಿಸಿ, ನಿಮ್ಹಾನ್ಸ್ ನೌಕರರ ಸಂಘದ ನೇತೃತ್ವದಲ್ಲಿ ನಗರದ ನಿಮ್ಹಾನ್ಸ್ ಆಸ್ಪತ್ರೆಯ ಸಿಬ್ಬಂದಿ ಸೋಮವಾರ ಮೇಣದ ಬತ್ತಿ ಹಿಡಿದು ಮೌನ ಮೆರವಣಿಗೆ ನಡೆಸಿದರು. ಪ್ರಜಾವಾಣಿ ಚಿತ್ರ

ನಗರದಲ್ಲಿ 8 ಎಕರೆ ಒತ್ತುವರಿ ತೆರವು

ಬೆಂಗಳೂರು: ನಗರ ಜಿಲ್ಲೆಯ ಐದು ಕೆರೆಗಳು ಸೇರಿದಂತೆ ಸರ್ಕಾರಿ ಜಮೀನಿನಲ್ಲಿದ್ದ 8 ಎಕರೆ ಒತ್ತುವರಿಯನ್ನು ತೆರವು ಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎ. ದಯಾನಂದ ತಿಳಿಸಿದ್ದಾರೆ.

ಆಗಸ್ಟ್ 25ರಿಂದ ಸೆ.2ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಗಿದ್ದು, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಬೆಟ್ಟಹಳ್ಳಿ, ಕುದುರೆಗೆರೆ, ಹುಲ್ಲೇಗೌಡನಹಳ್ಳಿ, ಮುನಿಯನಪಾಳ್ಯದಲ್ಲಿ ಗೋಮಾಳದ ಒತ್ತುವರಿಯನ್ನು ತೆರವುಗೊಳಿಸಲಾಗಿದೆ.

ಪೂರ್ವ ತಾಲ್ಲೂಕಿನ ಬಿದರಹಳ್ಳಿ, ಮಂಡೂರು, ಕುರುಡು ಸೊಣ್ಣೇನಹಳ್ಳಿ, ಹಿರಂಡಹಳ್ಳಿ, ಯಲಹಂಕ ತಾಲ್ಲೂಕಿನ ಜಾಲ-1 ಹೋಬಳಿಯ ಬಿಲ್ಲಮಾರನ ಹಳ್ಳಿ, ಸಿಂಗಾಪುರ, ಹೆಸರಘಟ್ಟ ಹೋಬಳಿಯ ಬುಡುಮನಹಳ್ಳಿ, ಚೊಕ್ಕನಹಳ್ಳಿಯಲ್ಲಿ ಜಮೀನು ವಶಪಡಿಸಿಕೊಳ್ಳಲಾಗಿದೆ. ಒಟ್ಟು ₹12.79 ಕೋಟಿ ಮೌಲ್ಯದ ಸರ್ಕಾರಿ ಜಮೀನಿನ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಸಂಸದರ ಕಚೇರಿ ಎದುರು ಪ್ರತಿಭಟನೆ

ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರು ಸ್ಥಗಿತಗೊಳಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯಕ್ಕೆ ಪದೇಪದೇ ಅನ್ಯಾಯವಾಗುತ್ತಿದ್ದರೂ ರಾಜ್ಯದ ಸಂಸದರು ಮೌನವಾಗಿದ್ದಾರೆ ಎಂದು ಆರೋಪಿಸಿ, ಸಂಸದ ತೇಜಸ್ವಿ ಸೂರ್ಯ ಅವರ ಕಚೇರಿ ಎದುರು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕರ್ನಾಟಕ ಜಲ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ಕಚೇರಿ ಎದುರು ಪ್ರತಿಭಟನೆ ನಡೆಸಿ ಒತ್ತಾಯ ಪತ್ರ ಸಲ್ಲಿಸಿದರು.

ರಾಜ್ಯದಲ್ಲಿ ಬರಸ್ಥಿತಿ ತಲೆದೋರಿದೆ. ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ನೀರು ದಿನದಿಂದ ದಿನಕ್ಕೆ ಖಾಲಿಯಾಗುತ್ತಿದೆ. ಮಹದಾಯಿ ನದಿ ನೀರಿನ ವಿವಾದ ಕುರಿತು ಯಾವುದೇ ಗಂಭೀರ ಚಿಂತನೆ ನಡೆಯುತ್ತಿಲ್ಲ. ರಾಜ್ಯದ ಸಂಸದರು ಮೌನ ವಹಿಸಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ಹೊರಹಾಕಿದರು.

ಕಬಿನಿ, ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡು ರಾಜ್ಯಕ್ಕೆ ಹರಿಸುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಕಾವೇರಿ ಕೊಳ್ಳದ ಹೆಚ್ಚುವರಿ ನೀರನ್ನು ಸಂಕಷ್ಟ ಸಮಯದಲ್ಲಿ ಬಳಸಿಕೊಳ್ಳಲು ಸಮುದ್ರಕ್ಕೆ ಹರಿಯುವ ಹೆಚ್ಚುವರಿ ನೀರನ್ನು ಸಂಗ್ರಹಿಸಿಟ್ಟಿಕೊಳ್ಳಲು ಮೇಕೆದಾಟು ಜಲಾಶಯ ಯೋಜನೆ ಕೈಗೆತ್ತಿಕೊಳ್ಳಬೇಕು. ಕಬ್ಬು ಬೆಳೆಗಾರರಿಗೆ ಬರಬೇಕಾದ ಹಿಂದಿನ ವರ್ಷದ ಬಾಕಿ ಸಕ್ಕರೆ ಕಾರ್ಖಾನೆಗಳಿಂದ ಕೊಡಿಸಬೇಕು ಎಂದು ಆಗ್ರಹಿಸಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ಅಸಮರ್ಪಕ ವಿದ್ಯುತ್ ಪೂರೈಕೆಯಾಗುತ್ತಿದೆ. ಹಗಲು ವೇಳೆಯಲ್ಲಿ 12 ಗಂಟೆಗಳ ಕಾಲ ನಿರಂತರ ವಿದ್ಯುತ್ ಪೂರೈಸಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಆಧಾರ್ ಕಾರ್ಡ್ ಲಿಂಕ್ ಮಾಡುತ್ತಿರುವುದನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ಖಾತರಿ ಕಾನೂನು ಜಾರಿಗೆ ತರಬೇಕು. ಹತ್ತಾರು ವರ್ಷಗಳಿಂದ ಕೃಷಿ ಚಟುವಟಿಕೆ ನಡೆಸುತ್ತಿರುವ ಬಗರ್‌ಹುಕುಂ ಸಾಗುವಳಿ ರೈತರಿಗೆ ಸಾಗುವಳಿ ಪತ್ರ ವಿತರಿಸಬೇಕು ಎಂದು ಒತ್ತಾಯಿಸಿದರು.

ಸಂಸದ ತೇಜಸ್ವಿಸೂರ್ಯ ಅವರ ಕಚೇರಿ ಎದುರು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕರ್ನಾಟಕ ಜಲ ಸಂರಕ್ಷಣಾ ಸಮಿತಿ ಪದಾಧಿಕಾರಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

'ಅನಗತ್ಯ ಕೆಲಸಗಳಿಗೆ ಕೇಂದ್ರ ಆದ್ಯತೆ'

ಎಎಪಿ ರಾಜ್ಯ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಅಗತ್ಯವಿರುವುದನ್ನು ಬಿಟ್ಟು, ಉಳಿದ ಎಲ್ಲವನ್ನೂ ಮಾಡುತ್ತಿದೆ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಟೀಕಿಸಿದರು.

'ಒಂದು ದೇಶ, ಒಂದು ಪರಿಹಾರ' ಎಂದರೆ ಅದು ಬಿಜೆಪಿ ನಿರ್ಮೂಲನೆ. 'ಒಂದು ದೇಶ, ಒಂದೇ ಶಿಕ್ಷಣ' ಎನ್ನುವುದು ಅರವಿಂದ ಕೇಜ್ರಿವಾಲ್ ಅವರ ಕನಸು. ಚುನಾವಣೆ ಅನುಕೂಲಕ್ಕಾಗಿ ರಾಮಮಂದಿರ ಉದ್ಘಾಟನೆಯನ್ನು ಗಮನದಲ್ಲಿಟ್ಟುಕೊಂಡು ಕೆಲ ಕಾರ್ಯಕ್ರಮ ಕೇಂದ್ರ ರೂಪಿಸುತ್ತಿದೆ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

'ನಾವ್ಯಾರೂ ರಾಮನ ವಿರೋಧಿಗಳಲ್ಲ, ನಾವು ರಾಮ ಭಕ್ತರು. ಸಾವಿರಾರು ಕೋಟಿ ಹಣ ಖರ್ಚು ಮಾಡಿ ರಾಮಮಂದಿರ ನಿರ್ಮಾಣ ಮಾಡುವ ಬದಲು, ಎಲ್ಲಾ ಊರುಗಳ ದೇವಾಲಯಗಳನ್ನು ಉದ್ಧಾರ ಮಾಡಬೇಕು. ಚುನಾವಣಾ ವರ್ಷದಲ್ಲೇ ರಾಮಮಂದಿರ ಉದ್ಘಾಟನೆ ಮಾಡಲು ಹೊರಟಿರುವುದು ಜನರ ಭಾವನೆಗಳನ್ನು ಮತಗಳಾಗಿ ಪರಿವರ್ತಿಸಲು ಅಷ್ಟೆ. ಭಾವನಾತ್ಮಕ ವಿಚಾರ ಇಟ್ಟುಕೊಂಡು ಬಿಜೆಪಿ ಚುನಾವಣೆ ಎದುರಿಸುತ್ತಿದೆ' ಎಂದು ಆರೋಪಿಸಿದರು.

ಪಕ್ಷ ಸಂಘಟನೆಗೆ ಸೆ.10ರ ನಂತರ ಪ್ರವಾಸ ಹಮ್ಮಿಕೊಳ್ಳಲಾಗುವುದು. ಸದಸ್ಯತ್ವ ನೋಂದಣಿ ಹೆಚ್ಚಿಸಲಾಗುವುದು. ಹೋಬಳಿ ಕೇಂದ್ರಗಳಿಗೆ ಭೇಟಿ ನೀಡಿ, ವಾಸ್ತವ್ಯ ಮಾಡಿ ಜನಸಾಮಾನ್ಯರ ಸಮಸ್ಯೆ ಆಲಿಸಲಾಗುವುದು ಎಂದು ಮಾಹಿತಿ ನೀಡಿದರು.

ತೇಜಸ್ವಿನಿ ಅನಂತಕುಮಾರ್– ಡಿಕೆಶಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆ, ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥರೂ ಆಗಿರುವ ತೇಜಸ್ವಿನಿ ಅನಂತಕುಮಾರ್ ಅವರು ಕುಮಾರಕೃಪಾ ಅತಿಥಿ ಗೃಹದಲ್ಲಿ ಸೋಮವಾರ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, 'ನಾವಿಬ್ಬರೂ ಯಾವುದೇ ರಾಜಕೀಯ ವಿಚಾರಗಳನ್ನು ಚರ್ಚೆ ಮಾಡಿಲ್ಲ' ಎಂದರು.

'ರಾಜಕೀಯ ವಿಚಾರ ಮಾತನಾಡಿದ್ದೇವೆ ಎಂದು ಯಾರಾದರೂ ಹೇಳಿದ್ದರೆ ಅದು ಸುಳ್ಳು. ತೇಜಸ್ವಿನಿ ಅವರು ಅನಂತ್‌ಕುಮಾರ್ ಅವರ ಜನ್ಮದಿನ, ಅನ್ನಭಾಗ್ಯ ವಿಚಾರಗಳ ಬಗ್ಗೆ ನನ್ನ ಜತೆ ಚರ್ಚೆ ಮಾಡಿದರು. ರಾಜಕೀಯ ವಿಚಾರಗಳನ್ನು ಚರ್ಚೆ ಮಾಡಲಾಯಿತು ಎಂಬುದು ಸುಳ್ಳು ಸುದ್ದಿ' ಎಂದರು.

ಅದಕ್ಕೂ ಮೊದಲು ಡಿ.ಕೆ. ಶಿವಕುಮಾರ್ ಅವರ 'X' (ಟ್ವಿಟರ್) ಖಾತೆಯಿಂದ, ಇಬ್ಬರೂ ರಾಜಕೀಯ ಚರ್ಚೆ ನಡೆಸಿದರು ಎಂದು ಟ್ವೀಟ್ ಮಾಡಲಾಗಿತ್ತು. ಅದಕ್ಕೆ ಸ್ಪಷ್ಟನೆ ನೀಡಿದ ಶಿವಕುಮಾರ್, 'ನನ್ನ ಹೆಸರಲ್ಲಿ ಟ್ವೀಟ್ ಮಾಡಿದ್ದರೆ, ಮಾಡಿದವರನ್ನು ಕೂಡಲೇ ತೆಗೆದುಹಾಕ್ತೇನೆ' ಎಂದರು.

ಡಿ.ಕೆ. ಶಿವಕುಮಾರ್ ಅವರಿಗೆ ತೇಜಸ್ವಿನಿ ಅನಂತಕುಮಾರ್ ಹೂಗುಚ್ಛ ನೀಡಿದರು.

'ಮೇಕೆದಾಟುಗೆ ಯಾಕೆ ಆಗ್ರಹಿಸಲ್ಲ?'

ಬೆಂಗಳೂರು: 'ಕಾವೇರಿ ನೀರಿಗಾಗಿ ಹೋರಾಟ ಮಾಡುತ್ತಿರುವ ಸಂಘಟನೆಗಳು, ನಾವು (ಕಾಂಗ್ರೆಸ್) ಮೇಕೆದಾಟು ಯೋಜನೆಗೆ ಆಗ್ರಹಿಸಿ ಪಾದಯಾತ್ರೆ ಮಾಡಿದಾಗ ಎಲ್ಲಿಗೆ ಹೋಗಿದ್ದವು. ಮೇಕೆದಾಟು ಯೋಜನೆಗೆ ಅನುಮತಿ ನೀಡಿ ಎಂದು ಕೇಂದ್ರ ಸರ್ಕಾರವನ್ನು ಈ ಸಂಘಟನೆಗಳು ಯಾಕೆ ಆಗ್ರಹಿಸುತ್ತಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಕಾವೇರಿ ಸಮಸ್ಯೆಗೆ ಮೇಕೆದಾಟು ಯೋಜನೆ ಒಂದೇ ಪರಿಹಾರ. ಇದರಲ್ಲಿ ರಾಜಕಾರಣ ಮಾಡುವುದರಲ್ಲಿ ಪ್ರಯೋಜನ ಇಲ್ಲ' ಎಂದರು.

'ರಾಜ್ಯದ ರೈತರ ಹಿತರಕ್ಷಣೆಗೆ ನ್ಯಾಯಾಲಯದಲ್ಲಿ ಹೋರಾಟ ಮಾಡಲು ನಾವು ಬದ್ಧರಾಗಿದ್ದೇವೆ. ಈ ವಿಚಾರವಾಗಿ ಕಾನೂನು ತಜ್ಞರ ತಂಡದ ಜತೆ ಚರ್ಚೆ ಮಾಡಿದ್ದೇನೆ. ಅಣೆಕಟ್ಟುಗಳ ವಾಸ್ತವ ಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿದ್ದೇವೆ' ಎಂದೂ ಹೇಳಿದರು.

ದಾಬಸ್‌ಪೇಟೆ ಸಮೀಪದ ದೇವರಹೊಸಹಳ್ಳಿಯಲ್ಲಿರುವ ಭದ್ರಕಾಳಮ್ಮ, ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಸ್ವಚ್ಛತಾ ಕಾರ್ಯ ನಡೆಸಿದ ಸ್ವಯಂ ಜಾಗೃತಿ ಸೇವಾ ಟ್ರಸ್ಟ್ ಸದಸ್ಯರು

'ಸುಪ್ರೀಂ'ಗೆ ಕಾವೇರಿ ಅರ್ಜಿ: ದರ್ಶನ್ ಪುಟ್ಟಣ್ಣಯ್ಯ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕಾವೇರಿ ಅಚ್ಚುಕಟ್ಟು ಪ್ರದೇಶದ ಬರ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುವ ಉದ್ದೇಶದಿಂದ ರೈತರಿಂದಲೇ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು' ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಸೋಮವಾರ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬುಧವಾರ ವಿಚಾರಣೆಗೆ ಬರುವಂತೆ ಮಂಗಳವಾರ ಅರ್ಜಿ ಹಾಕಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಹಿರಿಯ ವಕೀಲ ರವಿವರ್ಮಕುಮಾರ್ ಅವರ ಮೂಲಕ ಅರ್ಜಿ ಸಲ್ಲಿಸಲಾಗುವುದು. ಪ್ರಸ್ತುತ ಸ್ಥಿತಿಗತಿಗಳ ವಾಸ್ತವ ಸ್ಥಿತಿ, ಆ ಕುರಿತು ಸಕಲ ದಾಖಲಾತಿಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾಗುವುದು' ಎಂದರು.

'ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು ಸ್ಥಳಕ್ಕೆ ಬಂದು ವಾಸ್ತವ ಸ್ಥಿತಿಯನ್ನು ಅಧ್ಯಯನ ಮಾಡಬೇಕು. ಕೆಆರ್‌ಎಸ್ ಜಲಾಶಯದಲ್ಲಿರುವ ನೀರಿನ ಮಾಹಿತಿ ಪಡೆಯಬೇಕು. ಮುಂದೆ ಮಳೆ ಬರುವುದಿಲ್ಲವಾದರೆ ಕುಡಿಯುವ ನೀರಿಗೆ ಏನು ಮಾಡಬೇಕು ಎಂದು ಪ್ರಶ್ನಿಸಲಾಗುವುದು' ಎಂದರು.

'ಐಸಿಸಿ ಸಭೆಯಲ್ಲಿ ಬೆಳೆಗಳಿಗೆ ನೀರು ಕೊಡಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದ್ದರು. ಅದರಂತೆ ರೈತರು ಈಗಾಗಲೇ ನಾಟಿ ಮಾಡಿದ್ದಾರೆ. ಈಗ ನೀರಿಲ್ಲ ಎನ್ನುತ್ತಿದ್ದು ಬೆಳೆ ನಷ್ಟ ಪರಿಹಾರ ಕೊಡಬೇಕು. ಈ ಎಲ್ಲಾ ಮಾಹಿತಿಯನ್ನು ನ್ಯಾಯಾಲಯದ ಗಮನಕ್ಕೆ ತರಲಾಗುವುದು' ಎಂದರು.

ದೇಗುಲ ಆವರಣದಲ್ಲಿ ಸ್ವಚ್ಛತಾ ಕಾರ್ಯ

ಬೆಂಗಳೂರು: ದಾಬಸ್‌ಪೇಟೆ ಸಮೀಪದ ದೇವರಹೊಸಹಳ್ಳಿಯಲ್ಲಿರುವ ಭದ್ರಕಾಳಮ್ಮ, ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಸ್ವಯಂ ಜಾಗೃತಿ ಸೇವಾ ಟ್ರಸ್ಟ್‌ನಿಂದ ಸ್ವಚ್ಛತಾ ಕಾರ್ಯ ನಡೆಯಿತು.

ಟ್ರಾವೆಲ್‌ಲೈಟ್ಸ್ ಇಂಡಿಯಾದ ಮಾಲೀಕ ಕುಶಾಲ್ ಅವರ ಸಹಯೋಗದಲ್ಲಿ ಸ್ವಯಂ ಜಾಗೃತಿ ಸೇವಾ ಟ್ರಸ್ಟ್‌ನ ಸದಸ್ಯರು ಭಾನುವಾರ ದೇವಸ್ಥಾನದ ಸುತ್ತಮುತ್ತ ಸ್ವಚ್ಛತಾ ಕಾರ್ಯದಲ್ಲಿ ನಡೆಸಿದರು. ಆವರಣದಲ್ಲಿದ್ದ ಪ್ಲಾಸ್ಟಿಕ್ ಹಾಗೂ ಇತರೆ ತ್ಯಾಜ್ಯವನ್ನು ತೆರವುಗೊಳಿಸಿದರು.

ಪರಿಸರ ಸಂರಕ್ಷಣೆಯ ಸಲುವಾಗಿ ಸುಮಾರು 250 ಗಿಡಗಳನ್ನು ನೆಡಲಾಯಿತು. ದೇವಸ್ಥಾನದ ಸುತ್ತಲೂ ಸ್ವಚ್ಛತಾ ಕಾರ್ಯ ಮಾಡಿ, ಭಕ್ತಾದಿಗಳಿಗೆ ಪರಿಸರ ಮಾಲಿನ್ಯದಿಂದಾಗುವ ಪರಿಣಾಮವನ್ನು ತಿಳಿಸಲಾಯಿತು.

ಸ್ವಯಂ ಜಾಗೃತಿ ಸೇವಾ ಟ್ರಸ್ಟ್ ರಾಜ್ಯ ಘಟಕದ ಅಧ್ಯಕ್ಷ ಅಜಯ್ ಕುಮಾರ್, ಸದಸ್ಯರಾದ ಸಂತೋಷ್ ಹಿಂಬಾಳೆ, ಮಲ್ಲೇಶ್ ಗೌಡ, ಪ್ರಚಾರ ಸಮಿತಿ ಅಧ್ಯಕ್ಷ ಶ್ರೀಕಾಂತ್ ಕನ್ನಡಿಗ, ಚರಣ್, ವಿನಾಯಕ, ಚೇತನ್, ರಾಜೇಶ್, ನಿಂಗರಾಜ್, ನವೀನ್, ಪ್ರವೀಣ್, ರಂಜಿತ್, ರಂಗರಾಜ್, ಮೋಹನ್ ಕುಮಾರ್, ಅರವಿಂದ್, ನವೀನ್, ಸಂತೋಷ್, ಪ್ರಸಾದ್ ಭಾಗವಹಿಸಿದ್ದರು.

ಅತಿಥಿ ಉಪನ್ಯಾಸಕರ ಕಾಯಂಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸುವುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಇದೇ 5ರಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಕ್ಕುಗಳ ಹೋರಾಟ ಸಮಿತಿ ಒತ್ತಾಯಿಸಿದೆ.

'ವಿಧಾನಸಭೆ ಚುನಾವಣೆ ಮುನ್ನ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸುವ ಭರವಸೆ ನೀಡಿತ್ತು. ಈ ಬಗ್ಗೆ ಕೂಡಲೇ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಬೇಕು. 2022–23ನೇ ಸಾಲಿನಲ್ಲಿ ಆಯ್ಕೆಗೊಂಡ ರಾಜ್ಯದ ಎಲ್ಲ ಅತಿಥಿ ಉಪನ್ಯಾಸಕರಿಗೆ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ಸೇವಾ ಅವಧಿ ಎಂದು ಪರಿಗಣಿಸಿ ಗೌರವಧನ ನೀಡಬೇಕು' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ಎಂ.ಬಿ. ನೂರ್ ಅಹಮ್ಮದ್ ತಿಳಿಸಿದರು.

ನೇಮಕ ಆದೇಶದಲ್ಲಿ ಅತಿಥಿ ಉಪನ್ಯಾಸಕರ ಶೋಷಣೆಗೆ ಕಾರಣವಾಗಿರುವ ಷರತ್ತುಗಳನ್ನು ತೆಗೆದು ಹಾಕಬೇಕು ಎಂಬುದು ಸೇರಿ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದರು.

ಸಮಿತಿ ಕಾರ್ಯಾಧ್ಯಕ್ಷ ಆರ್. ಶಂಕ್ರಾನಾಯ್ಕ ನೆಲ್ಲಿಹಂಕಲು, ಮಹಿಳಾ ಘಟಕದ ಅಧ್ಯಕ್ಷೆ ಶರಣಮ್ಮ ಪಾಟೀಲ್, ಮುನಿಯಪ್ಪ ಇದ್ದರು.

'ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು'

ಗದಗ: 'ಸಿದ್ದರಾಮಯ್ಯ ಪ್ರಧಾನಿಯಾಗಬೇಕು ಎಂಬುದು ಅವರ ಹಣೆಯಲ್ಲಿ ಬರೆದಿದ್ದರೆ ಅದನ್ನು ಯಾರಿಂದಲೂ ತಪ್ಪಿಸಲು ಆಗದು. ರಾಜಕೀಯ ಎಂಬುದು ಅವಕಾಶ. ಏನು ಬೇಕಾದರೂ ಆಗಬಹುದು' ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿದರು.

'ಎಚ್.ಡಿ.ದೇವೇಗೌಡ ಅವರು ಪ್ರಧಾನಿಯಾಗುವ ಕನಸು ಕಂಡಿರಲಿಲ್ಲ. ಹರದನಹಳ್ಳಿಯಲ್ಲಿ ಹುಟ್ಟಿ, ಪ್ರಜಾಪ್ರಭುತ್ವ ವ್ಯವಸ್ಥೆಯ ಎತ್ತರದ ಸ್ಥಾನಕ್ಕೆ ಏರಿದರು. ಅದಕ್ಕೆ ರಾಜಕೀಯ ಎಂಬುದು ಅವಕಾಶ' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು. ಈ ಹಿಂದೆಯೂ ಸಂಸದನಾಗಿದ್ದೆ. ಮತ್ತೊಮ್ಮೆ ಆಗಬೇಕು ಎಂಬ ಬಯಕೆ ಇದೆ. ಮೈಸೂರು ಕ್ಷೇತ್ರದಿಂದ ಸ್ಪರ್ಧಿಸುವೆ' ಎಂದರು.



ಎಚ್. ವಿಶ್ವನಾಥ್

ನೀರಿನ ಸಮಸ್ಯೆ: ಶಾಸಕರ ಭೇಟಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ಕ್ಷೇತ್ರದಲ್ಲಿ ತೀವ್ರಗೊಂಡಿರುವ ನೀರಿನ ಹಾಹಾಕಾರದಿಂದಾಗಿ ಜನರು ನೀರಿನ ಟ್ಯಾಂಕರ್‌ಗಳನ್ನು ಅವಲಂಬಿಸಿದ್ದಾರೆ.

ಸಾರ್ವಜನಿಕರ ದೂರಿನ ಮೇರೆಗೆ ಶಾಸಕ ಎಸ್. ಮುನಿರಾಜು ಅವರು ಜಲ ಮಂಡಳಿ ಅಧಿಕಾರಿಗಳೊಂದಿಗೆ ಹಲವು ಪ್ರದೇಶಗಳಿಗೆ ಭೇಟಿ ನೀಡಿ ನೀರಿನ ಸಮಸ್ಯೆ ಕುರಿತು ಚರ್ಚಿಸಿದರು. ಜನರ ಸಮಸ್ಯೆಗಳನ್ನು ಆಲಿಸಿ ಅಧಿಕಾರಿಗಳಿಗೆ ನೀರಿನ ಸಮಸ್ಯೆ ಬಗೆಹರಿಸಲು ಸೂಚಿಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಮುನಿರಾಜು ಅವರು, 'ಮಂಜುನಾಥ ನಗರ, ವಿನಾಯಕ ನಗರದಲ್ಲಿ ನೀರಿನ ಸಮಸ್ಯೆ ಇದ್ದ ಕಾರಣ ಜನರು ನೂರಾರು ಫೋನ್ ಕರೆಗಳನ್ನು ಮಾಡಿದ್ದರು. ಈ ಬಗ್ಗೆ ಅಧಿಕಾರಿಗಳೊಂದಿಗೆ ಪರಿಶೀಲಿಸಲಿಸಿದ್ದೇನೆ. ಈಗಾಗಲೇ ಬಿಡಬ್ಲ್ಯುಎಸ್‌ಎಸ್‌ಬಿ ಮುಖ್ಯ ಎಂಜಿನಿಯರ್ ಅವರಿಗೆ ನೀರಿನ ಸಮಸ್ಯೆ ಬಗ್ಗೆ ಚರ್ಚಿಸಿ ಅವರ ಗಮನಕ್ಕೆ ತಂದಿದ್ದೇನೆ' ಎಂದು ತಿಳಿಸಿದರು.

'ಬೆಂಗಳೂರು ನಗರ ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರಿಗೂ ಪತ್ರ ಬರೆಯಲಾಗುವುದು. ಇತ್ತೀಚೆಗೆ ಹಿರಿಯ ಅಧಿಕಾರಿಗಳ ಸಭೆ ಕರೆದು ಒಂದು ವಾರದಲ್ಲಿ ಬಗೆಹರಿಸಲು ಸೂಚಿಸಿದ್ದೇವೆ. ಈ ಹಿಂದೆ ಹತ್ತು ವರ್ಷಗಳಲ್ಲಿ ನೀರಿನ ಸಮಸ್ಯೆ ಇರಲಿಲ್ಲ. ನಾಲ್ಕೈದು ತಿಂಗಳಿಂದ ಮಾತ್ರ ನೀರಿನ ಸಮಸ್ಯೆ ಉಲ್ಬಣಿಸಿದೆ. ಶೀಘ್ರ ನೀರಿನ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಲಾಗುವುದು' ಎಂದರು.

ಶಾಸಕ ಎಸ್. ಮುನಿರಾಜು ಅವರು ಜಲ ಮಂಡಳಿ ಅಧಿಕಾರಿಗಳೊಂದಿಗೆ ಹಲವು ಪ್ರದೇಶಗಳಿಗೆ ಭೇಟಿ ನೀಡಿ ನೀರಿನ ಸಮಸ್ಯೆ ಕುರಿತು ಚರ್ಚಿಸಿದರು. ನಕ್ಷತ್ರ ಫೌಂಡೇಶನ್ ಅಧ್ಯಕ್ಷ ಭರತ್ ಸೌಂದರ್ಯ ಇದ್ದರು.

ಚಾಣಕ್ಯ ವಿ.ವಿ ಆಯೋಜಿಸಿದ್ದ 'ಚಾಣಕ್ಯ ತತ್ವಶಾಸ್ತ್ರ' ಕುರಿತ ಸಮ್ಮೇಳನ

'ಕೌಟಿಲ್ಯನ ತತ್ವ ಇಂದಿಗೂ ಪ್ರಸ್ತುತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೌಟಿಲ್ಯನ ಅರ್ಥಶಾಸ್ತ್ರದ ತತ್ವಗಳು 21ನೇ ಶತಮಾನಕ್ಕೆ ಅತ್ಯಂತ ಪ್ರಸ್ತುತವಾಗಲಿವೆ' ಎಂದು ಚಾಣಕ್ಯ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಲೀಡರ್‌ಶಿಪ್ (ಸಿಐಪಿಎಲ್) ಸಂಸ್ಥಾಪಕ– ನಿರ್ದೇಶಕ ರಾಧಾಕೃಷ್ಣನ್ ಪಿಳ್ಳೈ ಹೇಳಿದರು.

ದೇವನಹಳ್ಳಿಯಲ್ಲಿ ಚಾಣಕ್ಯ ವಿಶ್ವವಿದ್ಯಾಲಯ ಸೋಮವಾರ ಆಯೋಜಿಸಿದ್ದ 'ಚಾಣಕ್ಯ ತತ್ವಶಾಸ್ತ್ರ ಮತ್ತು ಸಿದ್ಧಾಂತಗಳು 21ನೇ ಶತಮಾನದಲ್ಲೂ ಪ್ರಸ್ತುತತೆ' ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ 'ಕೌಟಿಲ್ಯ ಅರ್ಥಶಾಸ್ತ್ರದಲ್ಲಿ ನಿರ್ವಹಣೆ' ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಕೌಟಿಲ್ಯ ಒಬ್ಬ ಯೋಜನಾಕಾರ, ಶಿಕ್ಷಕ, ಆರ್ಥಿಕ ತಜ್ಞ, ನಿರ್ವಹಣೆಗಾರನಾಗಿದ್ದು, ನಾಯಕತ್ವದ ಗುಣಗಳಿದ್ದವು. ಅವರ ನಾಯಕತ್ವದ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ. ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದಂತೆಯೂ ಕೌಟಿಲ್ಯ ಶಾಸ್ತ್ರದಲ್ಲಿ ಒತ್ತು ನೀಡಲಾಗಿದೆ. ಕೌಟಿಲ್ಯನ ಮೂರು ತತ್ವಗಳಲ್ಲಿ ಚರ್ಚೆ, ಸಂವಾದ, ಅನುಷ್ಠಾನಗಳಿದ್ದು, ಇವುಗಳನ್ನು ದಾಖಲೆಗಳನ್ನಾಗಿ ಮುಂದಿನ ಪೀಳಿಗೆಗೆ ತಲುಪಿಸುವುದು ಮುಖ್ಯ. ಇದು ಪ್ರಸ್ತುತ ಆಡಳಿತ ವ್ಯವಸ್ಥೆಗೂ ಅನ್ವಯವಾಗಲಿದೆ' ಎಂದರು.

ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಆ್ಯಂಡ್ ಎಕನಾಮಿಕ್ ಚೇಂಜಸ್, ಇಂಡಿಯನ್ ನಾಲೆಡ್ಜ್ ಸಿಸ್ಟಮ್ಸ್, ಶಿಕ್ಷಣ ಸಚಿವಾಲಯ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಯೂನಿವರ್ಸಿಟಿ, ಕೇಂದ್ರ ಸಂಸ್ಕತ ವಿಶ್ವವಿದ್ಯಾಲಯ ಸಹಯೋಗದೊಂದಿಗೆ ಚಾಣಕ್ಯ ವಿಶ್ವವಿದ್ಯಾಲಯ ಆಯೋಜಿಸಿದ್ದ 'ಚಾಣಕ್ಯನ ತತ್ವಗಳು ಮತ್ತು 21ನೇ ಶತಮಾನಕ್ಕೆ ಅವುಗಳ ಪ್ರಸ್ತುತತೆ' ಕುರಿತ ಸಮ್ಮೇಳನವನ್ನು ಮೂರು ದಿನ ಆಯೋಜಿಸಲಾಗಿದೆ.

ಅಮೆರಿಕದ ವರ್ಜಿನಿಯಾ ಜಿಎಂಯುನ ಪ್ರೊ. ಅವಿನಾಶ್ ಪಟವರ್ಧನ್ ಅವರು ಪ್ರಮುಖ ಭಾಷಣವನ್ನು ಮಂಡಿಸಿದರು. ಚಾಣಕ್ಯ ವಿವಿಯಲ್ಲಿ ಕಲಿತ ಯುವಕರು ಜಾಗತಿಕ ನಾಯಕರಾಗುವ ಕ್ಷಮತೆ ಹೊಂದಿದ್ದಾರೆ ಎಂದರು.

ಚಾಣಕ್ಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಯಶವಂತ ಡೊಂಗ್ರೆ ಮಾತನಡಿ, 'ಮೂರು ದಿನಗಳ ಸಮ್ಮೇಳನದಲ್ಲಿ 29 ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಾಗುವುದು' ಎಂದು ತಿಳಿಸಿದರು.

ಡೀನ್ ರಿಸರ್ಚ್ ಪ್ರೊ. ಎಚ್.ಎಸ್. ಅಶೋಕ್ ಇದ್ದರು.

ಸಮ್ಮೇಳನ: ಸೆ.5ರಿಂದ 7ರವರೆಗೆ ನಾಗರಬಾವಿಯಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯಲ್ಲಿ (ಐಎಸ್‌ಇಸಿ) ಸಮ್ಮೇಳನದ ಮುಂದುವರಿದ ಭಾಗ ನಡೆಯಲಿದೆ.

ಚಾಣಕ್ಯ ವಿಶ್ವವಿದ್ಯಾಲಯ ಆಯೋಜಿಸಿದ್ದ 'ಕೌಟಿಲ್ಯ ಅರ್ಥಶಾಸ್ತ್ರದಲ್ಲಿ ನಿರ್ವಹಣೆ' ಕುರಿತ ಗೋಷ್ಠಿಯಲ್ಲಿ ಚಾಣಕ್ಯ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಲೀಡರ್‌ಶಿಪ್ (ಸಿಐಪಿಎಲ್) ಸಂಸ್ಥಾಪಕ– ನಿರ್ದೇಶಕ ರಾಧಾಕೃಷ್ಣನ್ ಪಿಳ್ಳೈ ಅವರು ಮಾತನಾಡಿದರು.

ಪತ್ರಿಕಾ ವಿತರಕರ ಸೇವೆ ಅನನ್ಯ: ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಯಲಹಂಕ: 'ಜಗತ್ತಿನ ಪ್ರಚಲಿತ ವಿದ್ಯಮಾನಗಳನ್ನು ಅವಿರತವಾಗಿ ಜನರಿಗೆ ತಲುಪಿಸುವ ಕಾರ್ಯದಲ್ಲಿ ಪತ್ರಿಕಾ ವಿತರಕರ ಸೇವೆ ಅನನ್ಯ. ಪತ್ರಿಕೋದ್ಯಮದ ಅಭಿವೃದ್ಧಿಯಲ್ಲಿ ಇವರ ಕಾರ್ಯವು ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿದೆ' ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿದರು.

ಯಲಹಂಕ ದಿನಪತ್ರಿಕೆ ವಿತರಕರ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ದಿನಪತ್ರಿಕೆ ವಿತರಕರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

'ವಿತರಕರ ಜೀವನ ತುಂಬಾ ಕಷ್ಟಕರ. ಪತ್ರಿಕೋದ್ಯಮದ ಗಟ್ಟಿಯಾದ ಬೇರುಗಳಾಗಿದ್ದಾರೆ. ಅವರ ಪರಿಶ್ರಮದಿಂದಲೇ ಪತ್ರಿಕೋದ್ಯಮ ಉಳಿದಿದೆ' ಎಂದು ಶ್ಲಾಘಿಸಿದರು.

ಪಾಲಿಕೆ ಮಾಜಿ ಸದಸ್ಯ ಎಂ.ಸತೀಶ್ ಮಾತನಾಡಿ, 'ಜನರಿಗೆ ಮಾಹಿತಿ, ಮನರಂಜನೆ ನೀಡುವುದರ ಜೊತೆಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಪತ್ರಿಕಾ ವಿತರಕರೂ ಸಹ ಭಾಗಿಯಾಗಿದ್ದಾರೆ. ಬೆಳಿಗ್ಗೆಯೇ ಎದ್ದು, ಚಳಿ, ಮಳೆ, ಗಾಳಿ ಎನ್ನದೇ ಸಮಯಕ್ಕೆ ಸರಿಯಾಗಿ ಸಾರ್ವಜನಿಕರಿಗೆ ಪತ್ರಿಕೆಗಳನ್ನು ತಲುಪಿಸುವ ಕಾಯಕದಲ್ಲಿ ತೊಡಗಿರುವ ಇವರ ಕಾರ್ಯ ಶ್ಲಾಘನೀಯ' ಎಂದರು.

ಪತ್ರಿಕಾ ವಿತರಕರಾದ ಬಾಲಾಜಿ, ಉಮೇಶ್, ಮಂಜು, ಶಿಕ್ಷಕಿ ಯಶೋದಾ ಹಾಗೂ ಪತ್ರಿಕೆ ಸರಬರಾಜು ಮಾಡುವ ವಾಹನ ಚಾಲಕರನ್ನು ಸನ್ಮಾನಿಸಲಾಯಿತು. ಸಚಿನ್ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಅಖಿಲ ಭಾರತ ವೀರಶೈವ ಮಹಾಸಭಾದ ಯಲಹಂಕ ಘಟಕದ ಅಧ್ಯಕ್ಷೆ ಹೇಮಲತ ಚಿದಾನಂದ ಅವರು, ಪತ್ರಿಕೆ ಹಾಕುವ ಹುಡುಗನಿಗೆ ₹ 10 ಸಾವಿರ ಪ್ರೋತ್ಸಾಹ ಧನದ ಚೆಕ್ ವಿತರಿಸಿದರು. ಸಂಘದ ಪದಾಧಿಕಾರಿಗಳಾದ ಶಂಕರ್, ವೈ.ಸಿ. ವೀರಭದ್ರ, ಪ್ರದೀಪ್, ವೆಂಕಟೇಶಮೂರ್ತಿ, ವೀರೇಶ್, ಸೋನು, ಸಂತೋಷ್, ಆರಾಧ್ಯಾ, ಶಶಿ, ರವಿ, ನಾಗಾರ್ಜುನ್, ಕುಮಾರ್, ಮುತ್ತುರಾಜ್ ಇದ್ದರು.

ಯಲಹಂಕ ದಿನಪತ್ರಿಕೆ ವಿತರಕರ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ದಿನಪತ್ರಿಕೆ ವಿತರಕರ ದಿನಾಚರಣೆಯಲ್ಲಿ ಶಾಸಕ ಎಸ್.ಆರ್.ವಿಶ್ವನಾಥ್, ಪಾಲಿಕೆ ಮಾಜಿ ಸದಸ್ಯ ಎಂ.ಸತೀಶ್, ಅಖಿಲ ಭಾರತ ವೀರಶೈವ ಮಹಾಸಭಾದ ಯಲಹಂಕ ಘಟಕದ ಅಧ್ಯಕ್ಷೆ ಹೇಮಲತ ಚಿದಾನಂದ ಪಾಲ್ಗೊಂಡು ಶುಭ ಹಾರೈಸಿದರು.

ಕ್ಷೇಮ ಕುಶಲ

ಮಗುವಿನ ಹೃದಯದಲ್ಲಿ ರಂಧ್ರ...

ಹೃದ್ರೋಗಗಳು ಮಕ್ಕಳಿಗೂ ಬರಬಹುದೇ ಎಂದು ಅಚ್ಚರಿ ಪಡಬೇಕಿಲ್ಲ. ಆರಂಭದಲ್ಲಿಯೇ ಮಕ್ಕಳ ಹೃದ್ರೋಗದ ಸಮಸ್ಯೆಗಳನ್ನು ಗುರುತಿಸಿದರೆ ಪರಿಹಾರ ಕಂಡುಕೊಳ್ಳಲು ಸಾಧ್ಯ.

ಡಾ. ಕಿರಣ್ ವಿ. ಎಸ್.

ಹೃದಯದ ಕಾಯಿಲೆ ಎಂದರೆ ಕಣ್ಣ ಮುಂದೆ ಕೂದಲು ನರೆತ ವೃದ್ಧರ ಚಿತ್ರ ಬರುತ್ತಿತ್ತು. ಈಚೆಗೆ ಮೂವತ್ತರ ಹರೆಯದಲ್ಲೂ ಹೃದ್ರೋಗದಿಂದ ಬಳಲುತ್ತಿರುವವರನ್ನು ಕಾಣುತ್ತಿದ್ದೇವೆ. ಆದರೆ ಹೃದ್ರೋಗಗಳಿಗೆ ಚಿಕಿತ್ಸೆ ಮಾಡುವ ಪ್ರಮುಖ ಆಸ್ಪತ್ರೆಗಳಲ್ಲಿ 'ಮಕ್ಕಳ ಹೃದ್ರೋಗ ವಿಭಾಗ'ಗಳನ್ನು ಕಂಡವರು, 'ಮಕ್ಕಳಿಗೆ ಹೃದಯದ ಕಾಯಿಲೆ ಬರುತ್ತದೆಯೇ?' ಎಂದು ಅಚ್ಚರಿ ಪಡಬಹುದು.

ಮಕ್ಕಳಲ್ಲಿ ಕಾಣುವ ಹೃದಯದ ಸಮಸ್ಯೆಗಳು ವಿಶಿಷ್ಟವಾದವು. ಇವು ಹಿರಿಯರಲ್ಲಿ ಕಂಡುಬರುವ ಹೃದ್ರೋಗಗಳಿಗಿಂತ ಸಂಪೂರ್ಣ ಭಿನ್ನ. ವಯಸ್ಸಾದವರಲ್ಲಿ ಬಹುಮಟ್ಟಿಗೆ ಕಾಣುವುದು ಅಧಿಕ ರಕ್ತದೊತ್ತಡ, ಹೃದಯಕ್ಕೆ ರಕ್ತವನ್ನು ಪೂರೈಸುವ ಧಮನಿಗಳ ಅಡೆತಡೆ, ಹೃದಯದ ಮಾಂಸಖಂಡಗಳ ದೌರ್ಬಲ್ಯ ಮುಂತಾದುವು. ಆದರೆ, ಗರ್ಭಸ್ಥ ಶಿಶುವಿನ ಹೃದಯದ ರಚನೆಯಲ್ಲಿ ಆಗುವ ಜನ್ಮಜಾತದೋಷಗಳು ಮಗು ಹುಟ್ಟಿದ ಕೆಲಕಾಲದಲ್ಲಿ, ಇಲ್ಲವೇ ಎಳೆಯ ವಯಸ್ಸಿನಲ್ಲೇ ಕಾಣುತ್ತವೆ. ಹುಟ್ಟುವ ನೂರು ಮಕ್ಕಳಲ್ಲಿ ಒಂದು ಶಿಶುವಿಗೆ ಇಂತಹ ಜನ್ಮಜಾತ ಹೃದಯದ ಸಮಸ್ಯೆ ಇರುತ್ತದೆ ಎಂದು ಅಧ್ಯಯನಗಳು ತಿಳಿಸುತ್ತವೆ. ಹೃದಯ ಸರಳವಾದರೂ ಸಂಕೀರ್ಣವಾದ ಅಂಗ. ಆಕ್ಸಿಜನ್ ಪ್ರಮಾಣ ಕಡಿಮೆ ಇರುವ ಅಶುದ್ಧ ರಕ್ತವು ಶರೀರದ ಎಲ್ಲೆಡೆಯಿಂದ ಅಪಧಮನಿಗಳ ಮೂಲಕ ಹೃದಯದ ಬಲಭಾಗವನ್ನು ಸೇರಿ, ಅಲ್ಲಿಂದ ಶ್ವಾಸಕೋಶಗಳನ್ನು ತಲುಪುತ್ತದೆ. ಅಲ್ಲಿ ಉಸಿರಾಟದ ಆಕ್ಸಿಜನ್ ಬೆರೆತು, ರಕ್ತದಲ್ಲಿನ ಆಕ್ಸಿಜನ್ ಪ್ರಮಾಣ ಹೆಚ್ಚಾಗಿ, ರಕ್ತ ಶುದ್ಧವಾಗುತ್ತದೆ. ಈ ಆಕ್ಸಿಜನ್-ಯುಕ್ತ ಶುದ್ಧ ರಕ್ತವು ಹೃದಯದ ಎಡಭಾಗವನ್ನು ಸೇರಿ, ಅಭಿಧಮನಿಗಳ ಮೂಲಕ ಇಡೀ ಶರೀರಕ್ಕೆ ಸರಬರಾಜಾಗುತ್ತದೆ. ಅಶುದ್ಧ ಮತ್ತು ಶುದ್ಧ ರಕ್ತಗಳನ್ನು ಪ್ರತ್ಯೇಕಿಸಲು ಹೃದಯದ ಎಡ ಮತ್ತು ಬಲಭಾಗಗಳ ನಡುವೆ ಎರಡು ಗೋಡೆಗಳು ಇರುತ್ತವೆ. ರಕ್ತದ ಏಕಮುಖ ಸಂಚಾರವನ್ನು ನಿಯಂತ್ರಿಸಲು ಹೃದಯದಲ್ಲಿ ಸ್ವಯಂಚಾಲಿತ ಬಾಗಿಲಿನಂತಹ, ನಿಶ್ಚಿತ ಸಮಯಕ್ಕೆ ಸರಿಯಾಗಿ ತೆರೆದು, ಮುಚ್ಚಿಕೊಳ್ಳುವ ನಾಲ್ಕು ಕವಾಟಗಳು ಇರುತ್ತವೆ. ಶ್ವಾಸಕೋಶಗಳಿಗೆ ಮತ್ತು ಶರೀರಕ್ಕೆ ರಕ್ತ ಒಯ್ಯುವ ಸಲುವಾಗಿ ಬೇರೆ ಬೇರೆ ಧಮನಿಗಳು ಇರುತ್ತವೆ. ಹೀಗೆ, ಒಂದೇ ಹೃದಯದಲ್ಲಿ ಇದ್ದರೂ, ಅಶುದ್ಧ ಮತ್ತು ಶುದ್ಧ ರಕ್ತಗಳು ಪರಸ್ಪರ ಸಂಪರ್ಕಕ್ಕೆ ಬಾರದಂತೆ ವ್ಯವಸ್ಥೆ ಇರುತ್ತದೆ. ಅಶುದ್ಧ ಮತ್ತು ಶುದ್ಧ ರಕ್ತಗಳನ್ನು ಪ್ರತ್ಯೇಕಿಸುವ ಗೋಡೆಗಳಲ್ಲಿ ರಂಧ್ರವಿದ್ದರೆ ಎರಡೂ ಬದಿಯ ರಕ್ತ ಒಂದರ ಜತೆಗೊಂದು ಬೆರೆಯುತ್ತದೆ. ಈ ರೀತಿಯ ರಂಧ್ರಗಳು ಜನನದಿಂದಲೇ ಇರುವುದರಿಂದ, ಎಳೆಯ ವಯಸ್ಸಿನಲ್ಲೇ ಪತ್ತೆಯಾಗುತ್ತವೆ. ಹೃದಯದ ನಾಲ್ಕು ಕವಾಟಗಳ ಪೈಕಿ ಯಾವುದೋ ಒಂದು ಕವಾಟದ ರಚನೆಯಲ್ಲಿ ದೋಷವಿದ್ದರೆ, ಅದು ಸರಿಯಾಗಿ ಮುಚ್ಚದೆಯೋ, ತೆರೆಯದೆಯೋ ಇರಬಹುದು. ಆಗಲೂ ರಕ್ತಸಂಚಾರದಲ್ಲಿ ಏರುಪೇರಾಗುತ್ತದೆ. ರಕ್ತವನ್ನು ಒಯ್ಯುವ ರಕ್ತನಾಳಗಳ ರಚನೆಯಲ್ಲಿ ಏನಾದರೂ ಸಮಸ್ಯೆ ಇದ್ದರೂ, ರಕ್ತಸಂಚಾರಕ್ಕೆ ಅಡ್ಡಿಯಾಗುತ್ತದೆ. ಶರೀರಕ್ಕೆ ರಕ್ತವನ್ನು ಪೂರೈಸುವ ಸಂಪೂರ್ಣ ಜವಾಬ್ದಾರಿ ಹೃದಯದ್ದೇ ಆದ್ದರಿಂದ, ಇಡೀ ರಕ್ತಸಂಚಾರ ವ್ಯವಸ್ಥೆಯ ಯಾವುದೇ ಹಂತದಲ್ಲಿ ತೊಂದರೆಯಾದರೂ, ಅದರ ಪ್ರತ್ಯಕ್ಷ ಮತ್ತು ಪರೋಕ್ಷ ಪರಿಣಾಮ ಹೃದಯದ ಮೇಲೆಯೇ ಆಗುತ್ತದೆ. ಹೃದಯದ ಸಮಸ್ಯೆ ಸಣ್ಣ ಮಟ್ಟದಲ್ಲಿದ್ದರೆ ಶರೀರಕ್ಕೆ ಯಾವುದೇ ಹಾನಿಯಾಗದೇ ಇರಬಹುದು. ಅಂತಹ ಮಕ್ಕಳು ಇತರ ಮಕ್ಕಳಂತೆ ಆರಾಮವಾಗಿ, ಚಟುವಟಿಕೆಯಿಂದಲೇ ಇರುತ್ತಾರೆ. ಬೇರೆ ಯಾವುದೋ ಅನಾರೋಗ್ಯದ ಸಂದರ್ಭದಲ್ಲಿ ಅಂತಹ ಮಕ್ಕಳನ್ನು ವೈದ್ಯರ ಬಳಿ ಒಯ್ದಾಗ, ಅವರ ಹೃದಯವನ್ನು ಪರೀಕ್ಷಿಸುವ ವೈದ್ಯರಿಗೆ ವಿಭಿನ್ನ ಸದ್ದು ಕೇಳುತ್ತದೆ. ಹೃದಯದ ರಂಧ್ರ ಅಥವಾ ದೋಷಪೂರ್ಣ ಕವಾಟದ ಮೂಲಕ ಹರಿಯುವ ರಕ್ತ ಮರ್ಮರ್ ಸದ್ದನ್ನೋ, ಅಥವಾ ಕ್ಲಿಕ್ ಸದ್ದನ್ನೋ ಮಾಡುತ್ತದೆ. ಅನುಭವಿ ವೈದ್ಯರು ಇಂತಹ ಸದ್ದನ್ನು ಖಚಿತವಾಗಿ ಗ್ರಹಿಸಬಲ್ಲರು. ಆದರೆ, ಪ್ರತಿಯೊಂದು ವಿಭಿನ್ನ ಸದ್ದಿಗೂ ಹೃದಯದ ಆಂತರಿಕ ದೋಷವೇ ಕಾರಣ ಎನ್ನಲಾಗದು. ಕೆಲವೊಮ್ಮೆ ಸಾಮಾನ್ಯ ಮಕ್ಕಳಲ್ಲೂ ಮರ್ಮರ್ ಸದ್ದು ಕೇಳಿಸುತ್ತದೆ. ಹೀಗಾಗಿ, ಹೃದಯದ ಸದ್ದು ವಿಭಿನ್ನವಾಗಿದ್ದರೆ, ವೈದ್ಯರು ಮಕ್ಕಳ ಹೃದಯದ ತಪಾಸಣೆ ಮಾಡಿಸುತ್ತಾರೆ.

ಹೃದಯದ ಜನ್ಮಜಾತ ಸಮಸ್ಯೆ ತೀವ್ರವಾಗಿದ್ದರೆ, ಅಂತಹ ಮಕ್ಕಳಲ್ಲಿ ಉಸಿರಾಟದ ಸಮಸ್ಯೆ, ಚರ್ಮ ಮತ್ತು ಲೋಳೆಪದರ ನೀಲಿಗಟ್ಟುವುದು, ಪದೇ ಪದೇ ಕಾಯಿಲೆ ಬೀಳುವುದು, ತೂಕ ಸರಿಯಾಗಿ ಏರದಿರುವುದು, ಹಾಲೂಡಿಸುವಾಗ ಮಗು ವಿಪರೀತ ಬೆವರುವುದು, ಬಿಟ್ಟು ಬಿಟ್ಟು ಹಾಲು ಕುಡಿಯುವುದು, ಸರಿಯಾಗಿ ನಿದ್ರಿಸದಿರುವುದು ಮೊದಲಾದ ಗಂಭೀರ ಸಮಸ್ಯೆಗಳು ಕಾಣುತ್ತವೆ. ಶಿಶುವೈದ್ಯರ ಸಲಹೆ ಪಡೆದು, ಇಂತಹ ಮಕ್ಕಳನ್ನು ಸಾಧ್ಯವಾದಷ್ಟೂ ಬೇಗ ಮಕ್ಕಳ ಹೃದ್ರೋಗತಜ್ಞರಲ್ಲಿ ತಪಾಸಣೆ ಮಾಡಿಸಬೇಕು.

ಮಕ್ಕಳ ಜನ್ಮಜಾತ ಹೃದ್ರೋಗ ಸಮಸ್ಯೆಗಳು ಹಲವಾರು ಬಗೆಯವು. ಸರಳವಾದ ಸಣ್ಣ ರಂಧ್ರದಿಂದ ಹಿಡಿದು, ರಕ್ತನಾಳಗಳ ಅದಲಿ-ಬದಲಿ, ಹೃದಯದ ನಾಲ್ಕು ಕೋಣೆಗಳ ಪೈಕಿ ಒಂದು ಇಡೀ ಕೋಣೆಯೇ ಬೆಳವಣಿಗೆ ಆಗದಿರುವುದು, ಕವಾಟಗಳ ಅನುಪಸ್ಥಿತಿಯಂತಹ ಸಂಕೀರ್ಣ ಸಮಸ್ಯೆಗಳು ಇರುತ್ತವೆ. ಇಂತಹ ಪ್ರತಿಯೊಂದು ಸಮಸ್ಯೆಗೂ ಚಿಕಿತ್ಸೆ ಭಿನ್ನವಾಗಿರುತ್ತದೆ. 'ಒಂದು ಶಿಶುವಿನ ಹೃದಯದಂತೆ ಮತ್ತೊಂದು ಇರುವುದಿಲ್ಲ' ಎಂದು ಮಕ್ಕಳ ಹೃದ್ರೋಗತಜ್ಞರು ಅಭಿಪ್ರಾಯ ಪಡುತ್ತಾರೆ.

ಪ್ರಸ್ತುತ ವೈದ್ಯಕೀಯ ವಿಜ್ಞಾನ ಬಹಳ ಪ್ರಗತಿ ಸಾಧಿಸಿದೆ. ಬಹುತೇಕ ಜನ್ಮಜಾತ ಹೃದ್ರೋಗ ಸಮಸ್ಯೆಗಳಿಗೆ ಈಗ ಪ್ರಮಾಣವತ್ತಾದ ಚಿಕಿತ್ಸೆಗಳಿವೆ. ಗರ್ಭಸ್ಥ ಭ್ರೂಣದ ಹಂತದಲ್ಲಿಯೇ ಹೃದ್ರೋಗವನ್ನು ನಿರ್ದಿಷ್ಟವಾಗಿ ಪತ್ತೆ ಮಾಡಬಲ್ಲ ತಂತ್ರಜ್ಞಾನವಿದೆ. ಸರಿಯಾದ ವೇಳೆಗೆ ವೈದ್ಯಕೀಯ ನೆರವು ಪಡೆದರೆ ಯಾವುದೇ ಜನ್ಮಜಾತ ಹೃದ್ರೋಗವನ್ನಾದರೂ ಸುಧಾರಿಸಬಲ್ಲ ಚಿಕಿತ್ಸೆಗಳಿವೆ. ಈಗಷ್ಟೇ ಜನಿಸಿದ ಮಗುವಿನ ಹೃದಯಕ್ಕೂ ಶಸ್ತ್ರಚಿಕಿತ್ಸೆ ಮಾಡಿ, ಸಮಸ್ಯೆಯನ್ನು ನಿಗ್ರಹಿಸಬಲ್ಲ ತೀವ್ರ ನಿಗಾ ಘಟಕಗಳಿವೆ. ಇಂತಹ ಸಂಕೀರ್ಣ ಚಿಕಿತ್ಸೆಯನ್ನು ಸಮರ್ಥವಾಗಿ ಮಾಡಬಲ್ಲ ಹಲವಾರು ಆಸ್ಪತ್ರೆಗಳು ನಮ್ಮ ದೇಶದಲ್ಲಿವೆ. ಒಂದು ಕಾಲದಲ್ಲಿ ಇಡೀ ಕುಟುಂಬವನ್ನು ಭೀತಿಗೆ ದೂಡುತ್ತಿದ್ದ ಮಕ್ಕಳ ಹೃದ್ರೋಗ ಈಗ ಪೋಷಕರಿಗೆ ಆತಂಕದ ವಿಷಯವಾಗಬೇಕಿಲ್ಲ. ❖



ಮನೋರೋಗಕ್ಕೆ ಮದ್ದಿಲ್ಲವೇ?

ಡಾ. ವಿಜಯಲಕ್ಷ್ಮಿ ಪಿ.

ಮೊನ್ನೆ ಅಜ್ಜಿ ಯಾರದ್ದೊ ಬಗ್ಗೆ ಮಾತನಾಡುತ್ತ 'ಅವಳಿಗೆ ಏನೂ ಆಗಿಲ್ಲ, ಮನೋರೋಗ. ಮನೋರೋಗಕ್ಕೆ ಮದ್ದಿಲ್ಲ' ಎಂದರು.

ಅಷ್ಟರಲ್ಲಿ ಆಯುರ್ವೇದ ಪಂಡಿತ ತಾತ ಬಂದು ವಿಷಯ ಏನೆಂದು ಕೇಳಿ ತಿಳಿದು 'ಎಲ್ಲಾ ಮನೋರೋಗಕ್ಕೂ ಮದ್ದಿಲ್ಲಾಂತ ಅಲ್ಲ, ಶಾರೀರಕ ಬದಲಾವಣೆಗಳಿಂದ ಮನಸ್ಸಿನ ಮೇಲೆ ಆಗುವ ಪರಿಣಾಮಗಳಿಂದ ಆಗೋ ಮನೋ ವಿಕಾರಗಳಿಗೆ ಮದ್ದಿದೆ. ಆದರೆ ನಮ್ಮ ರಾಗದ್ವೇಷಗಳಿಂದ ಬರುವ ಮನೋ ವಿಕೃತಿಗಳನ್ನು ನಾವೇ ಪ್ರಯತ್ನಪೂರ್ವಕವಾಗಿ ಸರಿ ಮಾಡ್ಕೋ ಬೇಕೇ ಹೊರತು ಔಷಧಗಳಿಂದ ಸರಿ ಮಾಡಕ್ಕೆ ಆಗಲ್ಲ' ಎಂದು ವಿವರಿಸಿದರು.

ತಾತ ಮುಂದುವರೆದು ಹೇಳಿದರು: 'ನೋಡು ಮಗು ಯಾವುದೇ ಸಮಸ್ಯೆಗಾದರೂ ಪರಿಹಾರ ಇರತ್ತೆ. ಸಮಸ್ಯೇನ ಸಮಸ್ಯೆ ಅಂತ ತೊಗೊಂಡು ಬಗೆಹರಿಸಿಕೋ ಬೇಕು. ಅದನ್ನೇ ಒಂದು ಪ್ರಮಾದ ಅಂತ ಮಾಡಬಾರದು. ನಮ್ಮ ಅಶಿಸ್ತು, ವಿವೇಚನೆ ಇಲ್ಲದ ಜೀವನಶೈಲಿ, ಆಹಾರಸೇವನೆಗಳು ಎಷ್ಟೋ ರೋಗಗಳಿಗೆ ಕಾರಣ ಆಗತ್ತೆ; ಹಾಗೆ ಮನಸ್ಸಿನ ಮೇಲೂ ತನ್ನ ಪರಿಣಾಮವನ್ನ ತೋರಿಸುತ್ತದೆ. ಕೆಲವು ರೋಗಗಳ ಲಕ್ಷಣಗಳಾಗಿ, ಬಸುರಿ, ಬಾಣಂತನದಲ್ಲಿ ಆಗುವ ಕೆಲವು ಶಾರೀರಿಕ ಮತ್ತು ದೈನಂದಿನ ಚಟುವಟಿಕೆಗಳ, ಹಲವಾರು ಸಾಮಾಜಿಕ ಪರಿಸ್ಥಿತಿಗಳ ಕಾರಣದಿಂದ, ಅಥವಾ ಅಪಘಾತ, ಅಭಿಘಾತಗಳಿಂದಾಗಿ ಮನೋ ವಿಕೃತಿಗಳಂತೆ ತೋರುವ ಅನೇಕ ಲಕ್ಷಣಗಳು ಉತ್ಪತ್ತಿಯಾಗುತ್ತವೆ. ಆಗ ಶಾರೀರಿಕ ರೋಗಕ್ಕೆ ಚಿಕಿತ್ಸೆ ಮಾಡಿದ ಹಾಗೆ ಮನಸ್ಸಿಗೂ ಚಿಕಿತ್ಸೆ ಮಾಡಬಹುದು.ಆದರೆ ಮನಸ್ಸಿನ ಭಾವನೆಗಳೇ ರೋಗಕ್ಕೆ ಕಾರಣ ಆಗಿದ್ದರೆ, ಅದರ ಪರಿಹಾರ ನಮ್ಮಲ್ಲೇ ಇದೆ.

'ವಸ್ತುಗಳ ಮೇಲೆ ಅತಿಯಾದ ಆಸೆ, ಅದನ್ನು ಪಡೆದುಕೊಳ್ಳಲೇಬೇಕೆಂಬ ಎಂಬ ಹಠ, ಸಿಗದಿದ್ದಾಗ ಆಗುವ ಹತಾಶೆ-ನಿರಾಸೆಗಳು, ಸಿಗದಿದ್ದರೆ ಎಂಬ ಭಯ, ಸಿಕ್ಕಿದ್ದನ್ನು ಕಳೆದುಕೊಂಡರೆ ಎಂಬ ಭಯ, ಮುಂದೇನಾಗುವುದೋ ಎಂಬ ಭಯ – ಹೀಗೆ ಅನೇಕ ಸಂಗತಿಗಳು ನಮ್ಮನ್ನು ಕಾಡುತ್ತವೆ. ಇಂಥವು ಯಾವ ಕೆಲಸದಲ್ಲೂ ಉತ್ಸಾಹವಿರದಂತೆ ಮಾಡುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಮನಸ್ಸಿನ ಆಯಾಸ. ದೇಹಕ್ಕೆ ದಣಿವಾಗಿರದಿದ್ದರೂ ಮನಸ್ಸಿಗಾಗುವ ದಣಿವನ್ನು ದಣಿವು ಎಂದು ಪರಿಗಣಿಸಿ ಕೆಲಸಮಾಡದೆ ಕುಳಿತುಕೊಳ್ಳುವ ಮನೋಭಾವನೆಯೂ ನಿಯಂತ್ರಿಸಬೇಕಾದದ್ದೇ. ಇವುಗಳು ನಿಯಂತ್ರಣ ತಪ್ಪಿದರೆ ಉನ್ಮಾದವೇ ಮೊದಲಾದ ರೋಗಗಳಿಗೆ ಕಾರಣವಾಗಬಹುದು.

'ಈ ಮನೋಭಾವಗಳು ನಮ್ಮನ್ನು ಕಾಡದಿರಬೇಕೆಂದರೆ ಬಾಲ್ಯದಿಂದಲೇ ನಾವು ಕೆಲವೊಂದು ಸ್ವಭಾವಗಳನ್ನು ಬೆಳೆಸಿಕೊಳ್ಳಬೇಕು. ಅನ್ಯರ ಬಗ್ಗೆ ಅಹಿತಕರವಾದ ಭಾವನೆಗಳನ್ನು ಇಟ್ಟುಕೊಳ್ಳದಿರುವುದು; ವಾಸ್ತವಿಕತೆಯನ್ನು ಅರಿತು ನಡೆಯುವುದು; ನಮ್ಮ ಯೋಗ್ಯತೆಯನ್ನು ಅರಿತು ಆಸಕ್ತಿಯನ್ನು ಬೆಳೆಸಿಕೊಳ್ಳುವುದು; ಜೀವನದಲ್ಲಿ ಸಾಧಿಸಬೇಕಾದ ಗುರಿಯತ್ತ ದೃಷ್ಟಿಯನ್ನಿಟ್ಟು, ವಿವೇಚನೆಯಿಂದ ಹಂತಹಂತವಾಗಿ ಸಾಧಿಸುವ ಸ್ವಭಾವ; ತನ್ನ ಮತ್ತು ತನ್ನ ಪರಿಸರದಲ್ಲಿ ನಡೆಯುವ ಒಪ್ಪು ತಪ್ಪುಗಳನ್ನು ವಿವೇಚಿಸಿ, ಮುನ್ನಡೆಯುವ ಸ್ವಭಾವ; ಜೊತೆಗೆ, ನಮ್ಮ ನಿತ್ಯಕರ್ಮ, ದೈನಂದಿನ ಚಟುವಟಿಕೆಗಳನ್ನು ನಮ್ಮ ಶಕ್ತಿಗನುಗುಣವಾಗಿ ರೂಪಿಕೊಂಡು ಶಿಸ್ತಿನ ಜೀವನ ನಡೆಸುವುದು, ಸಮಾಜದ, ಪರಿಸರದ, ಜೊತೆಗಾರರ ಅಭಿವೃದ್ಧಿಯನ್ನು ನೋಡಿ ಅಸೂಯೆಪಡದೆ ಆನಂದಿಸುವುದು –ಇಂಥ ಭಾವಗಳನ್ನು ಪ್ರಯತ್ನಪೂರ್ವಕವಾಗಿ ರೂಢಿಸಿಕೊಂಡರೆ ಮನೋವಿಕೃತಿಗಳು ನಮ್ಮತ್ತ ಸುಳಿಯಲಾರವು.

'ಎಂದರೆ ಕಾಯಿಕ, ವಾಚಿಕ, ಮಾನಸಿಕ ಶುಭ್ರತೆಯು ಮನೋವಿಕಾರವನ್ನು ತಡೆಯಲು ಅತ್ಯಗತ್ಯ. ಶುಚಿ-ರುಚಿಯಾದ ಆಹಾರವನ್ನು, ಹಿತ ಮಿತವಾಗಿ ಸೇವಿಸುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಮಾದಕದ್ರವ್ಯಗಳ ಸೇವನೆ, ಮಾದಕತೆಯನ್ನು ಉತ್ಪನ್ನಮಾಡುವ ಪರಿಸರದಲ್ಲಿರುವುದು, ಅತಿಯಾದ ತಂಪುಪಾನೀಯ ಅಥವಾ ಉದ್ರೇಕಗೊಳಿಸುವ ಆಹಾರ ಸೇವನೆ- ಇಂಥವು ಯಾರನ್ನೂ ಸಾಮಾನ್ಯ ಸ್ಥಿತಿಯಿಂದ ವ್ಯಾಧಿಯ ಸ್ಥಿತಿಗೆ ಕೊಂಡೊಯ್ಯಬಲ್ಲವು. ಒರಟುಮಾತು, ಪರಿಸರವನ್ನು ಎದುರಿಸಲಾಗದೆ ಸುಳ್ಳಾಡುವುದು – ಇವು ವ್ಯಾಧಿಯತ್ತ ಹೊರಳಿಸಿದರೆ, ಶಾಂತವಾದ, ಹಿತವಾದ, ಅಭಿವೃದ್ಧಿಯ ಮಾತುಗಳು ಮನಸ್ಸನ್ನು ಶಾಂತಗೊಳಿಸುತ್ತವೆ. ಮನಸ್ಸನ್ನು ಶಾಂತಗೊಳಿಸಿ, ಬುದ್ಧಿವಿಕಾಸಕ್ಕೆ ಕಾರಣವಾಗುವ ವಿಷಯಗಳ ಅಧ್ಯಯನ, ಅನುಷ್ಠಾನಗಳಿಂದ ಮನೋವಿಕಾರಗಳು ದೂರವಾಗುತ್ತವೆ. ಜೊತೆಗೆ ನಿಯಮಿತ ವ್ಯಾಯಮ ನಮ್ಮ ಮನಸ್ಸನ್ನು ತಿಳಿಯಾಗಿಸುತ್ತದೆ. ಇದನ್ನೇ ಯೋಗಶಾಸ್ತ್ರ ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯಾ, ಅಪರಿಗ್ರಹ, ದಯೆ, ಆರ್ಜವ, ಕ್ಷಮೆ, ಧೃತಿ, ಮಿತಾಹಾರ, ಶೌಚ, ಸಂತೋಷ, ಸ್ವಾಧ್ಯಾಯ, ಈಶ್ವರಪ್ರಣಿಧಾನ – ಎಂದು ಹೇಳಿರುವುದು. ಇವುಗಳನ್ನು ಶಿಸ್ತಿನಿಂದ ಪಾಲಿಸಿದಾಗಲೂ ಕೆಲವೊಮ್ಮೆ ಮನಸ್ಸು ಸ್ತಿಮಿತಕ್ಕೆ ಬಾರದಿದ್ದರೆ, ತಿಳಿದವರು, ಮನಸ್ಸಿಗೆ ಹಿತ ನೀಡುವವರೊಡನೆ ಬೆರೆತು ಭಾವನೆಗಳನ್ನು ಹಂಚಿಕೊಳ್ಳಬೇಕು. ನಿತ್ಯ ಎಣ್ಣೆಯನ್ನು ಹಚ್ಚಿಕೊಂಡು ಸ್ನಾನ ಮಾಡುವುದು, ತುಪ್ಪವನ್ನು ನಿತ್ಯಾಹಾರದಲ್ಲಿ ಸೇವಿಸುವುದು, ನೆತ್ತಿಗೆ ಮತ್ತು ಅಂಗಾಲಿಗೆ ಮಲಗುವಾಗ ತುಪ್ಪವನ್ನು ಹಚ್ಚಿಕೊಳ್ಳುವುದು, ತಂಪಾದ ವಾತಾವರಣದಲ್ಲಿ ನಡೆದಾಡುವುದು, ಮನೆಗೆಲಸಗಳನ್ನು, ಇತರೆ ಕೆಲಸಗಳನ್ನು ಕರ್ತವ್ಯವೆಂದು ಮಾಡುವುದು ಮನೋವಿಕಾರಗಳಿಂದ ಹೊರಬರಲು ಕಾರಣವಾಗುತ್ತದೆ. ತನ್ನನ್ನು ತಾನು ನಿಯಂತ್ರಿಸಿಕೊಳ್ಳುವವನು ಎಂದಿಗೂ ಮನೋವಿಕೃತಿಯಿಂದ ಬಳಲಲಾರ'. ❖



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ:1

ಭಾರತಕ್ಕೆ ಯುರೋಪಿಯನ್ನರ ಆಗಮನ

I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

1) 1453ರಲ್ಲಿ ಆಟೋಮಾನ್ ಟರ್ಕರು .... ನಗರವನ್ನು ವಶಪಡಿಸಿಕೊಂಡರು

ಎ) ಕಾನ್‌ಸ್ಟಾಂಟಿನೋಪಲ್ ಬಿ) ರೋಮ್
ಸಿ) ಕಾಬೂಲ್ ಡಿ) ಕರಾಚಿ

ಉತ್ತರ:- (ಎ) ಕಾನ್‌ಸ್ಟಾಂಟಿನೋಪಲ್

2) 1510ರಲ್ಲಿ ವಿಜಯಪುರದ ಸುಲ್ತಾನನಿಂದ ಗೋವಾ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಮಾಡಿಕೊಂಡವನು ಯಾರು?

ಎ) ವಾಸ್ಕೋಡಗಾಮ ಬಿ) ಅಲ್ಫನ್ಸೋ ಅಲ್ಬುಕರ್ಕ್
ಸಿ) ಫ್ರಾನ್ಸಿಸ್ಕೋ ಡಿ ಅಲ್ಮೇಡ ಡಿ) ಮೇಲಿನ ಯಾರೂ ಅಲ್ಲ

ಉತ್ತರ:- (ಬಿ)ಅಲ್ಫನ್ಸೋ ಅಲ್ಬುಕರ್ಕ್

3) ಪ್ರಾಚೀನ ಕಾಲದಿಂದಲೂ ಭಾರತ ಹಾಗೂ ಯುರೋಪಿನ ನಡುವೆ ವಾಣಿಜ್ಯ ಸಂಬಂಧಗಳು ಬೆಸೆದುಕೊಂಡಿದ್ದವು. ಪ್ರಮುಖವಾಗಿ ಭಾರತದ ....ವಸ್ತುಗಳಿಗೆ ಯೂರೋಪಿನಲ್ಲಿ ತುಂಬಾ ಬೇಡಿಕೆಯಿತ್ತು.

ಎ) ಸಾಂಬಾರು ಪದಾರ್ಥದ ಬಿ) ಎಣ್ಣೆ ಪದಾರ್ಥದ
ಸಿ) ಚಿನ್ನದ ಪದಾರ್ಥದ ಡಿ) ಬಟ್ಟೆಯ ಪದಾರ್ಥದ

ಉತ್ತರ:- (ಎ) ಸಾಂಬಾರು ಪದಾರ್ಥದ

4) ....ಅಂತರರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ `ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ' ಪರಿಗಣಿಸಲ್ಪಟ್ಟಿತು.

ಎ) ಕಾನ್‌ಸ್ಟಾಂಟಿನೋಪಲ್ ಬಿ) ಲಂಡನ್
ಸಿ) ಪ್ಯಾರಿಸ್ ಡಿ) ಬರ್ಲಿನ್

ಉತ್ತರ:- (ಎ) ಕಾನ್‌ಸ್ಟಾಂಟಿನೋಪಲ್

5) ಭಾರತದಲ್ಲಿ ಫ್ರೆಂಚ್‌ರು ತಮ್ಮ ಮೊದಲ ಮಳಿಗೆಯನ್ನು ಎಲ್ಲಿ ತೆರೆದರು?

ಎ) ಮಸಲಿ ಪಟ್ಟಣಂ ಬಿ) ಸೂರತ್
ಸಿ) ವಿಶಾಖಾಪಟ್ಟಣಂ ಡಿ) ಕೊಚ್ಚಿನ್

ಉತ್ತರ:-(ಬಿ) ಸೂರತ್

6) ಪೋರ್ಚುಗೀಸರ ನಾವಿಕ ವಾಸ್ಕೊಡಗಾಮನು ಭಾರತದ ಪಶ್ಚಿಮ ಕಲ್ಲಿಕೋಟೆಗೆ ಮೊತ್ತಮೊದಲ ಬಾರಿ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದನು. ಅವನು ಭಾರತಕ್ಕೆ ಬಂದ ವರ್ಷ ಯಾವುದು?

ಎ) 1398 ಬಿ) 1488
ಸಿ) 1598 ಡಿ) 1498

ಉತ್ತರ:-(ಡಿ) 1498

II) ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.

1) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ...................................
2) ಭಾರತ ಹಾಗೂ ಯೂರೋಪ್ ನಡುವೆ ಹೊಸ ಜಲ ಮಾರ್ಗವನ್ನು.......................... ಕಂಡುಹಿಡಿದರು
3) ಭಾರತದಲ್ಲಿ ಫ್ರೆಂಚರ ರಾಜಧಾನಿ..........................
4) ರಾಬರ್ಟ್ ಕ್ಲೈವನು 1757ರಲ್ಲಿ ಸಿರಾಜ್-ಉದ್-ದೌಲನ ಮೇಲೆ...............................ಕದನ ಸಾರಿದನು

ಉತ್ತರ: (1) ಆಲ್ಫೋನ್ಸೊ-ಡಿ-ಅಲ್ಬುಕರ್ಕ್ (2) ಪೋರ್ಚುಗೀಸರು (3) ಪಾಂಡಿಚೇರಿ (4) ಪ್ಲಾಸಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಹಿಂದಿನ ಪ್ರಶ್ನೆಪತ್ರಿಕೆಯಿಂದ

ಈ ಹಿಂದೆ ವಾರ್ಷಿಕ ಪರೀಕ್ಷೆಗಳಲ್ಲಿ ಈ ಪಾಠದಿಂದ ಕೇಳಲಾದ ಪ್ರಶ್ನೆಗಳನ್ನು ನೋಡೋಣ

1) ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು ಸ್ಪಷ್ಟೀಕರಿಸಿ
(2019 ಮಾರ್ಚ್ ವಾರ್ಷಿಕ ಪರೀಕ್ಷೆ 2 ಅಂಕದ ಪ್ರಶ್ನೆ)

ಉತ್ತರ:- ಬಕ್ಸಾರ್ ಕದನದ ಪರಿಣಾಮ ಬಿಹಾರ, ಒಡಿಶಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲಿಷರ ವಶವಾದವು ಮೊಘಲ್ ಚಕ್ರವರ್ತಿ ಷಾ ಅಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು.

1765ರಲ್ಲಿ ಕಂಪನಿ ಗವರ್ನರ್ ಆಗಿ ನೇಮಕಗೊಂಡಿದ್ದ ರಾಬರ್ಟ್ ಕ್ಲೈವನು ದ್ವಿ-ಸರ್ಕಾರವನ್ನು ಜಾರಿಗೆ ತಂದನು. ಇದರ ಪ್ರಕಾರ ಇಂಗ್ಲಿಷರು ದಿವಾನಿ ಹಕ್ಕಿನಿಂದಾಗಿ ಭೂ ಕಂದಾಯವನ್ನು ವಸೂಲಿ ಮಾಡಿಕೊಂಡು ತಮ್ಮ ಸಂಪತ್ತನ್ನು ವೃದ್ಧಿಸಿಕೊಂಡರು. ಈ ರೀತಿ ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು.

2) 1453ರಲ್ಲಿ ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡವರು...............................

ಎ) ಅರಬರು ಬಿ) ಅಟೋಮನ್ ಟರ್ಕರು
ಸಿ) ಇಟಲಿ ಡಿ) ಪೋರ್ಚುಗೀಸರು

(2020 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

ಉತ್ತರ:-ಬಿ

3) ಬಂಗಾಳದಲ್ಲಿ ದ್ವಿಪ್ರಭುತ್ವವನ್ನು ಜಾರಿಗೆ ತಂದವನು ಯಾರು?

ಉತ್ತರ:- ರಾಬರ್ಟ್ ಕ್ಲೈವ್
(2020ರ ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

4) ಕಾನ್‌ಸ್ಟಾಂಟಿನೋಪಲ್‌ನ್ನು ವ್ಯಾಪಾರದ ದ್ವಾರವೆಂದು ಪರಿಗಣಿಸಲಾಗಿತ್ತು. ಏಕೆಂದರೆ ಅದು............

ಎ) ಅಂತರರಾಷ್ಟ್ರೀಯ ವ್ಯಾಪಾರ ಮಾರ್ಗಗಳ ಕೇಂದ್ರ
ಬಿ) ಅದೊಂದೇ ಜಲಮಾರ್ಗ
ಸಿ) ರೋಮನ್ ಸಾಮ್ರಾಜ್ಯದ ರಾಜಧಾನಿ
ಡಿ) ಯೂರೋಪಿಯನ್ ಸಂಪನ್ಮೂಲಗಳ ಏಕೈಕ ಮೂಲ

ಉತ್ತರ:- ಎ (2021 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

5) ಪ್ಲಾಸಿ ಕದನದ ಪರಿಣಾಮಗಳೇನು? (ಜೂನ್ 2017 ಪರೀಕ್ಷೆ)

ಉತ್ತರ:- ಪ್ಲಾಸಿ ಕದನದ ಪರಿಣಾಮಗಳು

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

(ಮುಂದುವರಿಯುವುದು....)

II PUC CHEMISTRY

Chapter 1
THE SOLID STATE

After studying this Unit, you will be able to
* describe general characteristics of solids state;
* distinguish between amorphous and crystalline solids;
* classify crystalline solids on the basis of the nature of binding forces;
* define crystal lattice and unit cell;
* explain close packing of particles;
* describe different types of voids and close packed structures;
* correlate the density of a substance with its unit cell properties;
* describe the imperfections in solids and their effect on properties;
* correlate the electrical and magnetic properties of solids and their structure.

Distinction between Crystalline and Amorphous Solids

Property	Crystalline solids	Amorphous solids
Shape	Definite characteristic geometrical shape	Irregular shape
Melting point	Melt at a sharp and characteristic temperature	Gradually soften over a range of temperature
Cleavage property	When cut with a sharp edged tool, they split into two pieces and the newly generated surfaces are plain and smooth They have a definite and characteristic heat of fusion	When cut with a sharp edged tool, they cut into two pieces with irregular surfaces
Heat of fusion	Anisotropic in nature True solids	They do not have definite heat of fusion
Anisotropy Nature	Long range order	Isotropic in nature Pseudo solids or super cooled liquids
Order in arrangement of constituent particles		Only short range order

Answere the following

1. What are solids?
Ans:- Solids are the substances which have definite shape and volume, that are non-compressible, rigid and have mechanical strength but have very slow diffusion.

2. Why are solids rigid?
Ans: Solids are rigid because the constituent particles are very closely packed. They do not have any translatory movement and can only oscillate about the mean position.

3. What are Crystalline solids?
Ans:- Crystalline solids have definite geometrical structures and sharp melting points. They shine in the presence of light. They are anisotropic because their mechanical and electrical properties depend on the direction along which they are measured. *Eg:-* Common salt, diamond, zinc, copper etc.,

4. What are amorphous solids?
Ans:- Amorphous solids have no definite geometrical shape and they have no sharp melting points. They do not shine in the presence of light and they are isotropic.

5. Mention the characteristic properties of solids.
Ans:- The characteristic properties of solids are -
(a) They have definite mass, volume and shape.
(b) The intermolecular distances are short.
(c) The intermolecular forces are strong.
(d) They are incompressible and rigid
(e) Their constituent particles (atoms, molecules or ions) have fixed positions and can only oscillate about their mean positions.

6. Why are liquids and gases categorised as fluids?
Ans:- Liquids and gases are categorised as fluids because of their ability to flow. The fluidity in both of these states is due to the fact that the molecules in them are free to move about.

7. What is isotropy?
Ans:- Isotropy is a property in which there is no long range order in them and arrangement is irregular along all the directions. Therefore, value of any physical property would be same along any direction. *Eg:-* Amorphous solids are isotropic in nature.

8. Differentiate between the crystalline and amorphous solids.
Ans:- The difference between the crystalline and amorphous solids are –

(Contd.............)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಚೂರಿ ಇರಿತ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಬೈಕಿನಲ್ಲಿ ಸ್ನೇಹಿತನನ್ನು ಕೂರಿಸಿಕೊಂಡು ಹೋಗುತ್ತಿದ್ದ ವ್ಯಕ್ತಿಗೆ ಕಳವಾರು ಗೇಟಿನ ಬಳಿ ಬಸ್ ನಿಲ್ದಾಣದ ಬಳಿ ಡ್ರ್ಯಾಗರ್ ನಿಂದ ಇರಿದು ಹಲ್ಲೆ ನಡೆಸಿದ ಕುರಿತು ಸುರತ್ಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಅಬ್ದುಲ್ ಸಫ್ವಾನ್ ಇರಿತಕ್ಕೊಳಗಾದವರು. ಕಳವಾರು ಬೆಂಕಿನಾಥೇಶ್ವರ ದೇವಸ್ಥಾನದ ಬಳಿಯ ಎಂಎಸ್‌ಇಜೆಡ್ ಕಾಲೊನಿಯ ಪ್ರಶಾಂತ್ ಅಲಿಯಾಸ್ ಪಚ್ಚು (28), ಕಳವಾರು ಆಶ್ರಯ ಕಾಲೊನಿಯ ಧನರಾಜ್ (23), ಕಳವಾರು ಚರ್ಚ್ ಬಳಿಯ ಸ್ಟೆಸನ್ ಡಿಸೋಜ (22) ಬಂಧಿತ ಆರೋಪಿಗಳು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಕಳವಾರಿನಲ್ಲಿ ಗುರುವಾರ ನಡೆದ ಗಲಾಟೆಗೆ (ಆ.31ರಂದು) ಸಂಬಂಧಿಸಿ ರಿಯಾಜ್ ಎಂಬಾತನ ವಿರುದ್ಧ ಸುರತ್ಕಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಎರಡು ಭಿನ್ನ ಕೋಮುಗಳಿಗೆ ಸಂಬಂಧಿಸಿದ ಈ ಗಲಾಟೆಯಿಂದ ಊರಿನ ಸೌಹಾರ್ದ ಹದಗೆಡಬಾರದು ಎಂಬ ಕಾರಣಕ್ಕೆ ಪೊಲೀಸರು ಕಳವಾರಿನಲ್ಲಿ ಭಾನುವಾರ ಶಾಂತಿ ಸಭೆ ನಡೆಸಿದ್ದರು. 'ಇದಾದ ಬಳಿಕ ಹೊತ್ತಿನಲ್ಲೇ ಅಬ್ದುಲ್ ಮೇಲೆ ಹಲ್ಲೆ ನಡೆದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನನ್ನನ್ನು ಆರೋಪಿಗಳು ಮಾತುಕತೆಗೆ ಕರೆದಿದ್ದರು. ಸ್ನೇಹಿತ ಮೊಹಮ್ಮದ್ ಸಫ್ವಾನ್ ಜೊತೆ ಭಾನುವಾರ ಸಂಜೆ 7.30ರ ಸುಮಾರಿಗೆ ಕಳವಾರು ಗೇಟಿನ ಬಳಿ ಬಸ್ ನಿಲ್ದಾಣದ ಬಳಿ ಬೈಕ್‌ನಲ್ಲಿ ಹೋಗುತ್ತಿದ್ದಾಗ, ಎದುರುಗಡೆಯಿಂದ ಬೈಕಿನಲ್ಲಿ ಬಂದ ಆರೋಪಿಗಳಾದ ಪ್ರಶಾಂತ್ ಮತ್ತು ಧನರಾಜ್ ನನ್ನನ್ನು ಅಡ್ಡಹಾಕಿ ಅವಾಚ್ಯವಾಗಿ ಬೈದರು. ಆರೋಪಿ ಧನರಾಜ್ ಯಾವುದೋ ಆಯುಧದಿಂದ ನನ್ನ ಕಣ್ಣಿಗೆ ಬಲವಾಗಿ ಗುದ್ದಿದ. ಇನ್ನೊಬ್ಬ ಆರೋಪಿ ಪ್ರಶಾಂತ ಚೂರಿಯಿಂದ ಬಲ ಕಂಕುಳಕ್ಕೆ ತಿವಿದ. ಸ್ಥಳಕ್ಕೆ ಬಂದ ಇತರ ಆರೋಪಿಗಳು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದರು. ಇನ್ನೊಬ್ಬ ಆರೋಪಿ ಕಳವಾರು ಗಣೇಶ ನನ್ನ ಬಲಗೈ ತೋಳಿಗೆ ಚೂರಿಯಿಂದ ಚುಚ್ಚಿದ್ದ, ಇನ್ನೊಬ್ಬ ಆರೋಪಿ ಯಜ್ಞೇಶ ನನ್ನ ಬೆನ್ನಿಗೆ ಚೂರಿಯಿಂದ ಚುಚ್ಚಿದ. ಗೆಳೆಯ ಮೊಹಮ್ಮದ್ ಸಫ್ವಾನ್ ನನ್ನ ರಕ್ಷಣೆಗೆ ಬಂದಾಗ ಆರೋಪಿಗಳಾದ ಪುನೀತ್, ಬಬ್ಬು, ಗಣೇಶ್, ಪ್ರದೀಪ್ ಮತ್ತು ಇತರರು ಅವನಿಗೆ ಹೊಡೆದು ದಬ್ಬಿದಾಗ ಹಿಡಿದುಕೊಂಡರು. ಅಲ್ಲಿ ಜನರು ಸೇರುವುದನ್ನು ಕಂಡ ಆರೋಪಿಗಳು, 'ಮುಂದಕ್ಕೆ ಎಲ್ಲಿಯಾದರೂ ಸಿಕ್ಕಿದರೆ, ನಿನ್ನನ್ನು ಕೊಲ್ಲದೆ ಬಿಡುವುದಿಲ್ಲ' ಎಂದು ಬೆದರಿಕೆ ಹಾಕಿ ಅಲ್ಲಿಂದ ತೆರಳಿದರು' ಎಂದು ಅಬ್ದುಲ್ ಸಫ್ವಾನ್ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ನಾನು ರಿಯಾಜ್‌ಗೆ ಬೆಂಬಲ ನೀಡುತ್ತಿದ್ದೇನೆಂದು ಭಾವಿಸಿ ಆರೋಪಿಗಳು, ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಅಬ್ದುಲ್ ಸಫ್ವಾನ್ ದೂರಿನಲ್ಲಿ ಆರೋಪಿಸಿದ್ದಾರೆ.

'ಹಳೆ ವಿವಾದ ಹಾಗೂ ವೈಯಕ್ತಿಕ ದ್ವೇಷದಿಂದ ಆರೋಪಿಗಳು ಅಬ್ದುಲ್ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಪೊಲೀಸ್ ಕಮಿಷನರ್ ಕುಲದೀಪ್ ಜೈನ್ ತಿಳಿಸಿದ್ದಾರೆ.

ಲಾರಿಗೆ ಕಾರು ಡಿಕ್ಕಿ: ನಾಲ್ವರ ಸಾವು

ಚಿತ್ರದುರ್ಗ: ನಿಂತಿದ್ದ ಲಾರಿಗೆ ಕಾರ್ ಡಿಕ್ಕಿ ಹೊಡೆದ ಪರಿಣಾಮ ಕಾರ್‌ನಲ್ಲಿದ್ದ ನಾಲ್ವರು ಮೃತಪಟ್ಟಿದ್ದು, ಮೂವರು ಮಕ್ಕಳು ಗಂಭೀರವಾಗಿ ಗಾಯಗೊಂಡ ಘಟನೆ ಸಮೀಪದ ಮಲ್ಲಾಪುರದ ಗೊಲ್ಲರಹಟ್ಟಿ ಬಳಿ ರಾಷ್ಟ್ರೀಯ ಹೆದ್ದಾರಿ-48ರಲ್ಲಿ ಸೋಮವಾರ ನಡೆದಿದೆ.

ತುಮಕೂರಿನ ಖಲೀಲ್ (42), ಪತ್ನಿ ಮಲ್ಲಿಕಾ ಷರೀಫ್ (37), ಪುತ್ರ ತಬ್ರೀಜ್ (13), ಮಲ್ಲಿಕಾ ಅವರ ಸೋದರ ಶಂಶುದ್ದೀನ್ (40) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ನರ್ಗೀಸ್, ರೆಹಾನ್ ಹಾಗೂ ರೆಹಮಾನ್ ಅವರನ್ನು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

'ತುಮಕೂರು ಕಡೆಗೆ ಹೊರಟಿದ್ದ ಕಾರ್ ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿ ಬದಿಯಲ್ಲಿ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಕಾರ್‌ನಲ್ಲಿ ಒಟ್ಟು ಏಳು ಜನ ಪ್ರಯಾಣ ಮಾಡುತ್ತಿದ್ದರು. ಲಾರಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ಮಾಹಿತಿ ನೀಡಿದ್ದಾರೆ.

ಮಲ್ಲಿಕಾ ಅವರು ಕುಟುಂಬಸಮೇತ ಬೆಳಗಾವಿಯಲ್ಲಿರುವ ತವರಿಗೆ ತೆರಳಿದ್ದರು. ಅಣ್ಣ ಶಂಶುದ್ದೀನ್ ಕಾರ್‌ನಲ್ಲಿ ಭಾನುವಾರ ಮಧ್ಯರಾತ್ರಿ ಬೆಳಗಾವಿಯಿಂದ ತುಮಕೂರಿಗೆ ಹೊರಟಿದ್ದರು. ಅಪಘಾತದಲ್ಲಿ ಕಾರ್ ಸಂಪೂರ್ಣ ನಜ್ಜುಗುಜ್ಜಾಗಿದೆ.

'ರಂಗಾಯಣ, ಅಕಾಡೆಮಿಗೆ ಶೀಘ್ರ ನೇಮಕ'

ಪ್ರಜಾವಾಣಿ ವಾರ್ತೆ

ಮೈಸೂರು: 'ಅಕಾಡೆಮಿ, ರಂಗಾಯಣಗಳ ಅಧ್ಯಕ್ಷರು, ನಿರ್ದೇಶಕರ ನೇಮಕಕ್ಕೆ ಶೀಘ್ರದಲ್ಲೇ ಸಮಿತಿ ರಚಿಸಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

'ಕರ್ನಾಟಕ ಸಂಭ್ರಮ–50' ಅಂಗವಾಗಿ ನ.1ರಿಂದ 2024ರ ನ.1ರವರೆಗೆ ವರ್ಷವಿಡೀ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಸೆ. 13 ಅಥವಾ 14ರಂದು ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ ನಡೆಸಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು' ಎಂದು ತಿಳಿಸಿದರು.

ಅತೃಪ್ತಿ ಇಲ್ಲ: ರಾಯರಡ್ಡಿ

ಪ್ರಜಾವಾಣಿ ವಾರ್ತೆ

ಬಸವರಾಜ ರಾಯರಡ್ಡಿ

ಧಾರವಾಡ: 'ಕಾಂಗ್ರೆಸ್‌ನಲ್ಲಿ ಅಸಮಾಧಾನ ಇಲ್ಲ. ಕುಂದುಕೊರತೆಗಳನ್ನು ಪಕ್ಷದವರ ಗಮನಕ್ಕೆ ತರುವುದನ್ನೇ ಅತೃಪ್ತಿ ಎಂದು ಪರಿಗಣಿಸುವುದು ಸಲ್ಲದು' ಎಂದು ಶಾಸಕ ಬಸವರಾಜ ರಾಯರಡ್ಡಿ ತಿಳಿಸಿದರು.

'ಮುಖ್ಯಮಂತ್ರಿಗೆ ಪತ್ರ ಬರೆದಿದ್ದನ್ನು ನಕರಾತ್ಮಕವಾಗಿ ಪರಿಗಣಿಸುವುದು ಸರಿಯಲ್ಲ. ನನಗೆ ಸಚಿವ ಸ್ಥಾನ ಸಿಕ್ಕಿಲ್ಲ ಎಂದು ಬೇಸರ ಇಲ್ಲ. ನಮ್ಮನ್ನು ಉಪಯೋಗ ಮಾಡಿಕೊಳ್ಳುತ್ತಿಲ್ಲ ಎಂಬ ಬೇಸರ ಇದೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ನಮ್ಮ ಕ್ಷೇತ್ರದ ಕೌಶಲ ಅಭಿವೃದ್ಧಿ ಕೇಂದ್ರ ವೀಕ್ಷಣೆಗೆ ಸಚಿವರಾದ ಎಂ.ಸಿ. ಸುಧಾಕರ ಮತ್ತು ಶರಣಪ್ರಕಾಶ ಪಾಟೀಲ ಅವರನ್ನು ಆಹ್ವಾನಿಸಿದ್ದೆ. ಹೀಗಾಗಿ, ಅವರು ಬಂದಿದ್ದಾರೆ. ನಮ್ಮ ಫಾರಂ ಹೌಸ್‌ನಲ್ಲಿ ತಂಗಿದ್ದಾರೆ. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯ ಇಲ್ಲ' ಎಂದು ಅವರು ತಿಳಿಸಿದರು.

'ಬರಗಾಲದಿಂದ ಕ್ಷೇತ್ರದಲ್ಲಿ ವಿದ್ಯುತ್ ಪರಿವರ್ತಕಗಳು ಹಾಳಾಗಿವೆ. ಸಮಸ್ಯೆ ಪರಿಹಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದೆ. ಮುಖ್ಯಮಂತ್ರಿಯವರು ಪತ್ರಕ್ಕೆ ಸ್ಪಂದಿಸಿ ತಕ್ಷಣವೇ ಅಧಿಕಾರಿಗಳ ಸಭೆ ನಡೆಸುವಂತೆ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರಿಗೆ ಸೂಚನೆ ನೀಡಿದ್ದಾರೆ. ಸಿದ್ದರಾಮಯ್ಯ ಅವರ ಜೊತೆ ಒಳ್ಳೆಯ ಸಂಬಂಧ ಇದೆ' ಎಂದರು.

ಸೌಜನ್ಯಾ ಹತ್ಯೆ: ಮರುತನಿಖೆಗೆ ಬಿಜೆಪಿ ಮನವಿ

ಬೆಂಗಳೂರು: ಸೌಜನ್ಯಾ ಹತ್ಯೆ ಪ್ರಕರಣದ ಮರು ತನಿಖೆ ನಡೆಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರಿಗೆ ಬಿಜೆಪಿ ನಿಯೋಗ ಮನವಿ ಮಾಡಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ನೇತೃತ್ವದ ನಿಯೋಗ ಸೋಮವಾರ ಮನವಿ ಪತ್ರ ಸಲ್ಲಿಸಿತು. ದಕ್ಷಿಣ ಕನ್ನಡ, ಉಡುಪಿಯ ಬಿಜೆಪಿ ಶಾಸಕರು ನಿಯೋಗದಲ್ಲಿ ಇದ್ದರು. ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ್, ಶಾಸಕರಾದ ವಿ.ಸುನಿಲ್‌ಕುಮಾರ್ ಸೇರಿದಂತೆ ಹಲವರು ಇದ್ದರು.

'ಭದ್ರಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಲು ಗಡುವು'

ಬೆಂಗಳೂರು: 'ಮುಂದಿನ ಒಂದು ವರ್ಷದಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಿ ರೈತರಿಗೆ ನೀರು ನೀಡಬೇಕು' ಎಂದು ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಸೂಚಿಸಿದರು.

ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಣ್ಣ ಚಿತ್ತಯ್ಯ, ಕಾನೂನು ಇಲಾಖೆಯ ಕಾರ್ಯದರ್ಶಿ ಜಗದೀಶ್, ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳ ಜೊತೆ ಸೋಮವಾರ ಅವರು ಪ್ರಗತಿ ಪರಿಶೀಲನೆ ನಡೆಸಿದರು.

'ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಗೆ ವೇಗ ನೀಡುವ ಸಂಬಂಧ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಶೀಘ್ರದಲ್ಲಿ ಆ ಭಾಗದ ಶಾಸಕರ, ಸಂಸದರ ಸಭೆ ಕರೆಯಲಾಗುವುದು. ಕೇಂದ್ರ ಸಚಿವ ಶೋಭಾ ಕರಂದ್ಲಾಜೆ, ನಾರಾಯಣ ಸ್ವಾಮಿ ಜೊತೆಗೂ ದೆಹಲಿಯಲ್ಲಿ ಸಭೆ ನಡೆಸುತ್ತೇನೆ' ಎಂದು ತಿಳಿಸಿದರು.

'₹21,473 ಕೋಟಿ ವೆಚ್ಚದ ಈ ಯೋಜನೆಗೆ ಈ ಸಾಲಿನಲ್ಲಿ ₹5,300 ಕೋಟಿ ನೀಡುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಕೇಂದ್ರ ಜಲಶಕ್ತಿ ಹಾಗೂ ಕೇಂದ್ರ ಆರ್ಥಿಕ ಇಲಾಖೆ ಅಧಿಕಾರಿಗಳ ಜೊತೆ ಪ್ರಧಾನಿ ನರೇಂದ್ರ ಮೋದಿ ಕಳೆದ ವಾರ ಸಭೆ ನಡೆಸಿದ್ದಾರೆ' ಎಂದು ಸಭೆಗೆ ಸಣ್ಣ ಚಿತ್ತಯ್ಯ ಮಾಹಿತಿ ನೀಡಿದರು.

ಅನ್ವರ್ ಬಾಷಾ ವಕ್ಫ್ ಮಂಡಳಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ



ಕೆ. ಅನ್ವರ್ ಬಾಷಾ

ಬೆಂಗಳೂರು: ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷರಾಗಿ ಚಿತ್ರದುರ್ಗ ನಗರದ ಕಾಂಗ್ರೆಸ್ ಮುಖಂಡ ಕೆ. ಅನ್ವರ್ ಬಾಷಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮಂಡಳಿಯ ಹಿಂದಿನ ಅಧ್ಯಕ್ಷ ಶಾಫಿ ಸಅದಿ ಜುಲೈನಲ್ಲಿ ರಾಜೀನಾಮೆ ನೀಡಿದ್ದರು. ತೆರವಾದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣೆ ನಡೆಯಿತು. ಮಂಡಳಿಯ ಚುನಾಯಿತ ಸದಸ್ಯರಾದ ಅನ್ವರ್ ಬಾಷಾ ಮಾತ್ರ ನಾಮಪತ್ರ ಸಲ್ಲಿಸಿದರು. ಹೀಗಾಗಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಿಸಿದರು.

ಶಾಫಿ ಸಅದಿ ಅವರ ಬಾಕಿ ಇರುವ ಅವಧಿಗೆ ಈಗ ಅಧ್ಯಕ್ಷರನ್ನು ಆಯ್ಕೆ ಮಾಡಲಾಗಿದೆ. ಅನ್ವರ್ ಬಾಷಾ ಒಂದೂವರೆ ವರ್ಷಗಳ ಕಾಲ ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷರಾಗಿರುತ್ತಾರೆ.

ಅನ್ವರ್ ಬಾಷಾ ಚಿತ್ರದುರ್ಗ ಜಿಲ್ಲಾ ವಕ್ಫ್ ಸಲಹಾ ಸಮಿತಿ ಅಧ್ಯಕ್ಷರಾಗಿ ಮೂರು ಬಾರಿ ಆಯ್ಕೆಯಾಗಿದ್ದರು. ಪ್ರಸ್ತುತ ಮಂಡಳಿಯ ಸದಸ್ಯರಾಗಿದ್ದು, ಮಂಡಳಿಯ ಆಯ್ಕೆ ಸಮಿತಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಕಾನೂನು ಪದವೀಧರರಾಗಿರುವ ಇವರು, ಲೋಕೋಪಯೋಗಿ ಇಲಾಖೆಯಲ್ಲಿ ಪ್ರಥಮ ದರ್ಜೆ ಗುತ್ತಿಗೆದಾರರೂ ಆಗಿದ್ದರು. ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಕಾಂಗ್ರೆಸ್‌ನಲ್ಲಿ ಸಕ್ರಿಯರಾಗಿದ್ದಾರೆ.

ಅನ್ವರ್ ಬಾಷಾ ಅವರನ್ನು ಸಚಿವರಾದ ಸಚಿವರು, ಶಾಸಕರು ಸೇರಿ ಹಲವರು ಅಭಿನಂದಿಸಿದ್ದಾರೆ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ

ವಾರಸುದಾರರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಗುವಿನ ಭಾವಚಿತ್ರ

ಮಗುವಿನ ವಿವರ: ಕ್ರ.ಸಂ.1)ಹೆಸರು: ನಾರಾಯಣ (ಸಂಸ್ಥೆಯಲ್ಲಿ ಇಟ್ಟಿರುವ ಹೆಸರು. 2)ವಯಸ್ಸು: 1 ವಾರದ ಮಗು 3)ಲಿಂಗ: ಗಂಡು. 4)ತೂಕ: 2.7 ಕೆ.ಜಿ 5)ಬಣ್ಣ: ಗೋಧಿ ಬಣ್ಣ 6)ಪತ್ತೆಯಾದ ದಿನಾಂಕ: 31.08.2023 7)ಪೊಲೀಸ್ ಠಾಣೆ: ಹಾಸನ ನಗರ ಪೊಲೀಸ್ ಠಾಣೆ. ಮೇಲೆ ತಿಳಿಸಿರುವ ಮಗುವಿನ ವಾರಸುದಾರರು ಇದ್ದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಕಲ್ಯಾಣ ಸಮಿತಿ, ಹಾಸನ ಇವರನ್ನು ಸಂಪರ್ಕಿಸಬಹುದಾಗಿದೆ. ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ

ವಾಸಾಸಂಇ/ಹಿಸನಿ/ಹಾಸನ/263/ಕೆಎಸ್‌ಎಂಸಿಎ/269/2023–24

ಸಾರ್ವಜನಿಕ ಆಸ್ಪತ್ರೆ ಜಯನಗರ

ವೈದ್ಯಕೀಯ ಅಧೀಕ್ಷಕರವರ ಕಛೇರಿ, ಜಯನಗರ, ಬೆಂಗಳೂರು – 560041

ಸಂಖ್ಯೆ: ಸಾಆಜ/ಭದ್ರತೆ/ಇ–ಟೆಂಡರ್/01/2023–24 ದಿನಾಂಕ: 01.09.2023

ಇ–ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಜಯನಗರ ಬೆಂಗಳೂರು, ಈ ಆಸ್ಪತ್ರೆಯ 2023–24ನೇ ಸಾಲಿಗೆ ಈ ಆಸ್ಪತ್ರೆಯಲ್ಲಿ ಭದ್ರತೆ ಸಿಬ್ಬಂದಿ– ಮಾನವ ಸಂಪನ್ಮೂಲಗಳ ನೋಂದಾಯಿತ ಸಂಸ್ಥೆಗಳಿಂದ ಸೇವೆ ಪಡೆಯಲು ಇ–ಟೆಂಡರ್ ಪ್ರಕಟಣೆ.

ಹೊರಗುತ್ತಿಗೆ ವಿವರ	ಅಂದಾಜು ಮೊತ್ತ
ಭದ್ರತೆ ಸಿಬ್ಬಂದಿ–17	ರೂ. 40,00,000.00

ಟೆಂಡರ್ ವಿವರ: (1) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ: 06.09.2023 ರಿಂದ. (2) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 20.09.2023, 4:00 ಗಂಟೆಯವರೆಗೆ. (3) ಟೆಂಡರ್‌ಗಳನ್ನು ತೆರೆಯುವ (Technical Bid) ದಿನಾಂಕ: 21.09.2023, 5:00 ಗಂಟೆಗೆ. (4) ಆರ್ಥಿಕ ಬಿಡ್ ತೆರೆಯುವ (Financial Bid) ದಿನಾಂಕ: 25.09.2023, 4:00 ಗಂಟೆಗೆ.

ಇ–ಟೆಂಡರುಗಳ ನಿಯಮ ಮತ್ತು ನಿಬಂಧನೆಗಳನ್ನು ಟೆಂಡರ್ ನಮೂನೆಯಲ್ಲಿ ಲಗತ್ತಿಸಲಾಗಿರುತ್ತದೆ. "E-Tender upload through this website: https//:eproc.karnataka.gov.in"

ಸಹಿ/–, ವೈದ್ಯಕೀಯ ಅಧೀಕ್ಷಕರು
ಸಾರ್ವಜನಿಕ ಆಸ್ಪತ್ರೆ ಜಯನಗರ

ವಾಸಾಸಂಇ/ವಾಪ್ರ/ಎಲ್‌ಸಿ/1161/2023–24

KARNATAKA STATE BOARD OF AUQAF

[Constituted by the Government of Karnataka under the Waqf Act, 1995 (CENTRAL ACT-43 OF 1995)]

'Darul Auqaf', #6, Cunningham Road, Bengaluru- 560 052. Tel.: 080-22264594 / 22264595, Fax : 080-22255663, Website : www.karwakf.org / e-mail : info@karwakf.org

No. KBW/MUZ/27/MGM/CBP/10-11 Date: 05.09.2023

Brief Tender Notification

E-Procurement tenders are invited from the interested parties for running and maintaince of Public Toilets situated in the premises of HazrathFakhi Shah WaliDargah, Murugmalla, Chintarnani Taluk, Chickballapur Dist.

EMD: Rs. 1,00,000/- (One Lakh Only) as EMD Amount through e-procurement portal. Last date of uploading the tender with details filled and attach the documents required along with E-payment receipt: 15.09.2023 Before 03:00pm. Bid Opening & evaluation Date & Time: 16.09.2023 Before 3:00pm. Time and Date of opening of tenders financial bid (cover- II): Will be Intimated. For further details Contact: 080-22264594 / 8197693232 or karwakf@karnataka.gov.in

Sd/-
Chief Executive Officer

DIPR/CP/JA/1159/2023-24

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

ಸಂಖ್ಯೆ :ಹೆಚ್.ಸಿ.ಇ.39(08)/2021 ಡಿ.ಇ 04/2022 ದಿನಾಂಕ:31.08.2023

ತಿಳುವಳಿಕೆ ಪತ್ರ

ಶ್ರೀ ಜಿ.ಲೋಕೇಶ, ದ್ವಿತೀಯ ದರ್ಜೆ ಸಹಾಯಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಇವರು ದಿನಾಂಕ: 19.07.2021 ರಿಂದ ಇಲ್ಲಿಯವರೆಗೆ ಕಛೇರಿಗೆ ಅನಧಿಕೃತವಾಗಿ ಗೈರು ಹಾಜರಾಗಿದ್ದು ಹಾಗೂ ಅವರ ವಿರುದ್ಧ ಹೊರಿಸಲಾದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ, ಸಾಬೀತಾಗಿರುತ್ತದೆಂದು ವಿಚಾರಣಾಧಿಕಾರಿಗಳು ದಿನಾಂಕ:19.05.2023 ರಂದು ಡಿ.ಇ. 04/2022 ಹೆಚ್.ಸಿ.ಇ.39(08)/2021ರಲ್ಲಿ ವರದಿ ನೀಡಿರುತ್ತಾರೆ. ಆ ವರದಿಯು ಶಿಸ್ತು ಪ್ರಾಧಿಕಾರದಿಂದ ಅನುಮೋದನೆಯಾಗಿರುತ್ತದೆ. ತದನಂತರ ಕಾರಣ ಕೇಳಿ ನೋಟೀಸ್‌ನ್ನು ದಿನಾಂಕ:03.06.2023ರಂದು ನೋಂದಾಯಿತ ಅಂಚೆಯ ಮೂಲಕ ಕಳುಹಿಸಲಾಗಿತ್ತು . ಆದರೆ ಸದರಿ ನೋಟೀಸ್‌ನ್ನು ಸ್ವೀಕರಿಸಿರುವುದಿಲ್ಲ. ಆದ್ದರಿಂದ ಶ್ರೀ ಜಿ.ಲೋಕೇಶ, ದ್ವಿತೀಯ ದರ್ಜೆ ಸಹಾಯಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಹಾಲಿ ವಾಸ ಮಂಡ್ಯಜಿಲ್ಲೆ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೂಡಲೇ ನಿಮ್ಮ ಉತ್ತರವನ್ನು ಪತ್ರ ಮುಖೇನ ಸಲ್ಲಿಸಲು ಹಾಗೂ ಕರ್ತವ್ಯಕ್ಕೆ ಹಾಜರಾಗಲು ತಿಳಿಸುತ್ತೇವೆ. ಇಲ್ಲವಾದಲ್ಲಿ ವಿಚಾರಣೆ ಪ್ರಕ್ರಿಯೆಯನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಗುವುದು.

ಸಹಿ/- (ಕೆ.ಎಸ್. ಭರತ್ ಕುಮಾರ್)
ವಿಲೇಖನಾಧಿಕಾರಿಗಳು
ಕ.ಉ.ನ್ಯಾ. ಬೆಂಗಳೂರು.

ವಾಸಾಸಂಇ/ಉನಿ-ಸಿ.ಪಿ/1169/ಎಂಸಿಎ/2023-24

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052. ದೂರವಾಣಿ: 080–22535901/02, ಸಹಾಯವಾಣಿ: 8277799990.
Email:directorgokdom@gmail.com Website: https://dom.karnataka.gov.in

ಅಧಿಸೂಚನೆ

- 2023–24ರ ಸಾಲಿನಲ್ಲಿ ಎಂ.ಫಿಲ್ ಮತ್ತು ಪಿಎಚ್.ಡಿಗೆ ನೋಂದಣಿಯಾಗಿ ವ್ಯಾಸಂಗ ಮಾಡುತ್ತಿರುವ ಅರ್ಹ ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್, ಪಾರ್ಸಿ) ವಿದ್ಯಾರ್ಥಿಗಳಿಗೆ ಫೆಲೋಶಿಪ್‌ಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- ಅರ್ಜಿದಾರರು https://sevasindhu.karnataka.gov.in/Sevasindhu/DepartmentServices ಈ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ M.Phil ಅಥವಾ Ph.D ಗಳಲ್ಲಿ ಯಾವುದಾದರೂ ಒಂದು ಕೋರ್ಸ್ ಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ
- ಅಭ್ಯರ್ಥಿಗಳು ಅರ್ಜಿಯ ಪ್ರತಿಯೊಂದಿಗೆ ಪೋರ್ಟಲ್‌ನಲ್ಲಿ ಸಲ್ಲಿಸಿದ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ವಿಶ್ವವಿದ್ಯಾಲಯವಿರುವ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
- ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡಲು ವಿವರವಾದ ಸೂಚನೆಗಳು/ ವಿಧಾನಗಳು ಮತ್ತು ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQs) ಇಲ್ಲಿ ಲಭ್ಯವಿದೆ. https://dom.karnataka.gov.in
- ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಜಿಲ್ಲೆಯ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಕಛೇರಿಗೆ ಸಂಪರ್ಕಿಸಿ
- ಕೊನೆಯ ದಿನಾಂಕ: 03–10–2023

ಸಹಿ/–
ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.

DIPR/CP/1157/Zen/2023-24

ಮಹಾನಗರ ಪಾಲಿಕೆ, ಕಲಬುರಗಿ

ದೂ.: 08472/ 278675 ಫ್ಯಾಕ್ಸ : 08472 / 260776 ಇ ಮೇಲ್– itstaff_ulb_gulbarga@yahoo.com

No: KMP/TS-01/SBLMA/01/2023-24 Date : 02-09-2023

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ

1) ಕಾಮಗಾರಿಯ ವಿವರ : 1) Operation and Maintenance of Food Courts, Play zone, Boating activities of Shri Sharan Basaveshwar Appa Lake situated at Jagat Circle Kalaburagi. For one Year, Extendable for further two years if satisfied. (Service Tender), 2) Operation and Maintenance of Lake Garden and Toilet blocks of Shri Sharan Basaveshwar Appa Lake situated at Jagat Circle Kalaburagi. For one Year, Extendable for further two years if satisfied. (Service Tender), 2) ಲೆಕ್ಕ ಶೀರ್ಷಿಕೆ: ಕಲಬುರಗಿ ಮಹಾನಗರ ಪಾಲಿಕೆಯು, Sharanabasaveshwar lake management authority (SBLMA) 2023–24 ನೇ ಸಾಲಿನ ಕಾಮಗಾರಿಗಳ, 3) ಗುತ್ತಿಗೆದಾರರ ಅರ್ಹತೆ : AS PER BID DOCUMENT, 4) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ : 13.09.2023 ಸಾಯಂಕಾಲ 4:00 ಗಂಟೆಯವರೆಗೆ, 5) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ ಫಾರಂ ಬೆಲೆ As per Karnataka Public Procurement Portal EMD ಗರಿಷ್ಠ ಮೊತ್ತ ರೂ.1,00,000.00, ಟೆಂಡರ ಫಾರಂ ಬೆಲೆ As per Karnataka Public Procurement Portal EMD ಕನಿಷ್ಠ ಮೊತ್ತ ರೂ. 30000.00, 6) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 14.09.2023 ಸಾಯಂಕಾಲ 4:30 ಗಂಟೆಗೆ, 7) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ : 16.09.2023 ಸಾಯಂಕಾಲ 4:30 ಗಂಟೆಗೆ, 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ ಹಾಗು https://kppp.karnataka.gov.in/ 9) ಅಂತರಜಾಲ ತಾಣದ ವಿಳಾಸ: https://kppp.karnataka.gov.in/

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/241/ಕೆ.ಎಸ್.ಎಂ.ಸಿ.&ಎ/2023–24

रजिस्ट्री सं.डी.एल - 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 01092023-248495
CG-DL-E-01092023-248495

असाधारण
EXTRAORDINARY

भाग- II - खण्ड- 3 - उप खण्ड- (ii)
PART II - Section -3 - Sub section (ii)

प्राधिकार से प्रकाशित
PUBLISHED BY AUTHORITY

सं. - 3715] नई दिल्ली, शुक्रवार, सितम्बर 01, 2023/भाद्र 2, 1945
No. 3715] NEW DELHI, FRIDAY, SEPTEMBER 01, 2023/BHADRA 2, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ

ಅಧಿಸೂಚನೆ

ನವದೆಹಲಿ, 1ನೇ ಸೆಪ್ಟೆಂಬರ್, 2023

ಎಸ್.ಓ. ನಂ. 3876(ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.150ಎ ರಲ್ಲಿ design Km 410.600 (Existing Km 413.740) to design Km 441.900 (Existing Km 447.610) (ಹಿರಿಯೂರು – ಹುಳಿಯಾರ್ ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ (ಅಗಲೀಕರಣ, ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–150ಎ, ಪಿ.ಡಬ್ಲ್ಯೂಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01, ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.150ಎ ರಲ್ಲಿ design Km 410.600 (Existing Km 413.740) to design Km 441.900 (Existing Km 447.610) (ಹಿರಿಯೂರು – ಹುಳಿಯಾರ್ ಸೆಕ್ಷನ್)ರವರೆಗೆ ರಸ್ತೆ ನಿರ್ಮಾಣ, ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ಚಿತ್ರದುರ್ಗ

ಕ್ರ. ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ. ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
ತಾಲ್ಲೂಕು : ಹೊಸದುರ್ಗ					
ಗ್ರಾಮ : ಚಿಕ್ಕಬ್ಯಾಲದಕೆರೆ					
1	13/1	ಖಾಸಗಿ	ಖುಷ್ಕಿ	202	0.0202
ಗ್ರಾಮ : ದೊಡ್ಡಬ್ಯಾಲದಕೆರೆ					
2	162	ಖಾಸಗಿ	ಖುಷ್ಕಿ/ NAK	5950	0.595
3	35/1	ಖಾಸಗಿ	ಖುಷ್ಕಿ	1010	0.101
4	35/6	ಖಾಸಗಿ	ಖುಷ್ಕಿ	4202	0.4202
5	36	ಸಾಮಾನ್ಯ (ಸರ್ಕಾರಿ / ಖಾಸಗಿ)	ಖುಷ್ಕಿ/ಖರಾಬು	750	0.075
6	37	ಸಾಮಾನ್ಯ (ಸರ್ಕಾರಿ / ಖಾಸಗಿ)	ಖುಷ್ಕಿ / ಖರಾಬು	550	0.055
7	39	ಖಾಸಗಿ	ಖುಷ್ಕಿ	125	0.0125
8	40/13	ಖಾಸಗಿ	ಖುಷ್ಕಿ	175	0.0175
9	40/14	ಖಾಸಗಿ	ಖುಷ್ಕಿ	175	0.0175
10	40/15	ಖಾಸಗಿ	ಖುಷ್ಕಿ	303	0.0303
11	40/8	ಖಾಸಗಿ	ಖುಷ್ಕಿ	202	0.0202
12	40/9	ಖಾಸಗಿ	ಖುಷ್ಕಿ	505	0.0505
13	98/1	ಖಾಸಗಿ	ಖುಷ್ಕಿ	1630	0.163
14	98/2	ಖಾಸಗಿ	ಖುಷ್ಕಿ	5050	0.505
ತಾಲ್ಲೂಕು : ಹಿರಿಯೂರು					
ಗ್ರಾಮ : ಉಡವಳ್ಳಿ					
15	6/1	ಖಾಸಗಿ	ತರಿ	303	0.0303
16	6/7	ಖಾಸಗಿ	ತರಿ	450	0.045
ಗ್ರಾಮ : ಇದ್ದಲಗೇನಹಳ್ಳಿ					
17	30/5	ಖಾಸಗಿ	NAK	1250	0.125
18	30/6	ಖಾಸಗಿ	NAK	25	0.0025
19	48/4	ಖಾಸಗಿ	ಖುಷ್ಕಿ	1380	0.138
				ಒಟ್ಟು	2.4237

[F. No. 12037/57/2016-KNT(P-6)/3A]
ಅಭಯ್ ಜೈನ್, ಉಪ ಕಾರ್ಯದರ್ಶಿಗಳು

STCI PRIMARY DEALER LIMITED

CIN U67110MH2006PLC165306 GST No. 27AAKCS6909H1ZY
Regd. Office: A/B1-801, A wing, 8th Floor, Marathon Innova, Marathon NextGen Compound, Off Ganpatrao Kadam Marg, Lower Parel (W), Mumbai - 400 013. www.stcipd.com

PUBLIC NOTICE

It has been brought to our notice that a Google Play Store app by name of "Windmill Money" has been created wherein it has been mentioned that the app is offered by our Company "STCI Primary Dealer Limited". This app has been created by impersonating the name of our Company and is a fraud app to mislead and defraud people in the name of our Company.

Our Company "STCI Primary Dealer Limited" has neither created any such app on Google Play Store, nor is it associated with the app creator. Our Company is neither into money lending business, nor offers any loan, nor acts as a loan aggregator, nor is into any kind of fintech lending activities. This fraudulent app has impersonated and misused the name of our Company "STCI Primary Dealer Limited".

Anyone dealing with the said app and / or availing of its services shall be doing so at his/her own risk, and our Company shall not be liable and responsible for any such dealings.

For STCI Primary Dealer Limited
Sd/-
Prasanna Patankar
Managing Director
DIN: 07658714

Date : September 04, 2023
Place : Mumbai

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ)ರವರ ಕಛೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು–570024. ಇಮೇಲ್: eewmccmys@gmail.com

ಸಂಖ್ಯೆ:ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ–05/2023–24 ದಿನಾಂಕ: 04.09.2023

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ನಗರ ಪಾಲಿಕೆ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ ಟಿಎನ್–07/2023–24, ದಿನಾಂಕ: 30.08.2023	150	05.09.2023 ಬೆಳಗ್ಗೆ 11.00 ಗಂಟೆಯ ನಂತರ	21.09.2023 ಸಂಜೆ 5.30ರ ಗಂಟೆಗೆ	22.09.2023 ಸಂಜೆ 5.30ರ ನಂತರ

ಅರ್ಹ ಗುತ್ತಿಗೆದಾರರು (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ(ಪೂ&ಪ) ರವರ ಕಛೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು(ಪೂರ್ವ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಸಹಿ/– ಕಾರ್ಯಪಾಲಕ ಅಭಿಯಂತರರು(ಪಶ್ಚಿಮ) ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/294/23-24

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. ದೂರವಾಣಿ: 080–22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–09/195/2023–24 ದಿನಾಂಕ: 02.09.2023

ಟೆಂಡರ್ ಆಹ್ವಾನ ಪ್ರಕಟಣೆ

(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಪಿ.ಡಬ್ಲ್ಯೂಡಿ ನಲ್ಲಿ ನೋಂದಾಯಿತ ದರ್ಜೆ–1 (ಸಿವಿಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿಲಕ್ಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಬಿಡದಿ ಶಾನಮಂಗಲ ಮತ್ತು ಹಾರೋಹಳ್ಳಿ ಕೈಗಾರಿಕಾ ಪ್ರದೇಶಗಳಿಗೆ ವೃಷಭಾವತಿ ನದಿ ನೀರು ಸರಬರಾಜಿಗಾಗಿ ಬೈರಮಂಗಲ ಕೆರೆ, ಬಿಡದಿ ಬಳಿ 10 ಎಂಎಲ್‌ಡಿ ತೃತೀಯ ಸಂಸ್ಕರಣಾ ಘಟಕ ಸ್ಥಾಪನೆ ಮಾಡುವುದು ಹಾಗೂ 10 ವರ್ಷಗಳ ಅವಧಿಗೆ ಕಾರ್ಯಚರಣೆ ಮತ್ತು ನಿರ್ವಹಣೆ ಮಾಡುವ ಕಾಮಗಾರಿ. (2ನೇ ಕರೆ)

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 05.10.2023 ಸಂಜೆ 4.30 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in. ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/1158/Zen/2023-24



ಸುಭಾಷಿತ

ಸಹನೆ ಮತ್ತು ಪ್ರೀತಿಯ ಮಹತ್ವ ಅರಿಯುವ ಅಮೂಲ್ಯವಾದ ಅವಕಾಶವನ್ನು ನಮ್ಮ ಶತ್ರುಗಳು ನಮಗೆ ಮಾಡಿಕೊಡುತ್ತಾರೆ. ಅವರಿಗೆ ನಾವು ಕೃತಜ್ಞರಾಗಿ ಇರಬೇಕಾಗುತ್ತದೆ. -ದಲೈಲಾಮ

ಸಂಸತ್ತಿನ ವಿಶೇಷ ಅಧಿವೇಶನ ಗೋಪ್ಯತೆಯು ಅಗೌರವಕ್ಕೆ ಸಮ

ಕೇಂದ್ರ ಸರ್ಕಾರವು ಈ ತಿಂಗಳ 18ರಿಂದ 22ರವರೆಗೆ ಸಂಸತ್ತಿನ ವಿಶೇಷ ಅಧಿವೇಶನ ಕರೆದಿರುವುದು ಅಚ್ಚರಿ ಮೂಡಿಸುವಂಥದ್ದು. ಅಲ್ಲದೆ, ವಿಶೇಷ ಅಧಿವೇಶನವನ್ನು ಕರೆದಿರುವ ಕಾರಣ ಏನಿರಬಹುದು ಎಂಬ ಬಗ್ಗೆ ಹಲವು ಪ್ರಶ್ನೆಗಳನ್ನು ಮೂಡಿಸುವಂತಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ತೀರ್ಮಾನಗಳನ್ನು ಹಠಾತ್ತನೆ ತೆಗೆದುಕೊಳ್ಳುವುದು, ಜನ ಸಮೂಹದಲ್ಲಿ ತೀವ್ರ ಆಸಕ್ತಿ ಕೆರಳುವಂತೆ ಮಾಡುವುದು ಬಹಳ ಇಷ್ಟವೆಂಬಂತೆ ಕಾಣುತ್ತದೆ. ಗರಿಷ್ಠ ಮುಖಬೆಲೆಯ ನೋಟುಗಳನ್ನು ಹಠಾತ್ತಾಗಿ ರದ್ದು ಮಾಡಿದ ಕ್ರಮ, ಸಂವಿಧಾನದ 370ನೇ ವಿಧಿ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಠಾತ್ತನೆ ಹಿಂದಕ್ಕೆ ಪಡೆದಿದ್ದು ಈ ಮಾತಿಗೆ ನಿದರ್ಶನ. ಆದರೆ ಗೋಪ್ಯವಾಗಿ ತೀರ್ಮಾನಗಳನ್ನು ಕೈಗೊಳ್ಳುವುದು ಅಥವಾ ಅನಿರೀಕ್ಷಿತವಾಗಿ ನಿರ್ಧಾರ ಕೈಗೊಳ್ಳುವುದು ಪ್ರಜಾತಂತ್ರ ವ್ಯವಸ್ಥೆ ಪಾಲಿಗೆ ಸಹಜವೆಂಬಂತೆ ಆಗಬಾರದು. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಪಾರದರ್ಶಕ ನಡೆ ಹಾಗೂ ಮುಕ್ತವಾಗಿ ಮಾಹಿತಿ ಹಂಚಿಕೊಳ್ಳುವುದು ತೀರಾ ಅಗತ್ಯ. ನಿಗೂಢ ರೀತಿಯಲ್ಲಿ ನಿರ್ಧಾರಗಳನ್ನು ಕೈಗೊಳ್ಳುವುದು ಇದಕ್ಕೆ ವಿರುದ್ಧ. ಸಂಸತ್ತಿನ ವಿಶೇಷ ಅಧಿವೇಶನ ಕರೆದಿರುವುದು ತೀರಾ ಕಡಿಮೆ. ದೇಶದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಕೆಲವು ಮಹತ್ವದ ವರ್ಷಾಚರಣೆಗಳ ಕಾರಣದಿಂದಾಗಿ 1972ರಲ್ಲಿ, 1992ರಲ್ಲಿ ಹಾಗೂ 1997ರಲ್ಲಿ ವಿಶೇಷ ಅಧಿವೇಶನಗಳನ್ನು ಕರೆಯಲಾಗಿತ್ತು. 2017ರಲ್ಲಿ ವಿಶೇಷ ಅಧಿವೇಶನ ಕರೆದು ಜಿಎಸ್‌ಟಿ ವ್ಯವಸ್ಥೆಗೆ ಚಾಲನೆ ನೀಡಲಾಗಿತ್ತು. ಈ ವಿಶೇಷ ಅಧಿವೇಶನಗಳನ್ನು ಯಾವ ಕಾರಣಕ್ಕೆ ಕರೆಯಲಾಗುತ್ತಿದೆ ಎಂಬುದನ್ನು ಮುಂಚಿತವಾಗಿ ತಿಳಿಸಲಾಗಿತ್ತು. ಈ ಅಧಿವೇಶನಗಳು ಸಂಸದರ ಪಾಲಿಗೆ ಅಥವಾ ಜನಸಾಮಾನ್ಯರ ಪಾಲಿಗೆ ಧುತ್ತೆಂದು ಎರಗಿ ಬಂದಿರಲಿಲ್ಲ.

ಅಧಿವೇಶನದ ಉದ್ದೇಶವನ್ನು ನಿಗೂಢವಾಗಿ ಇರಿಸುವ ಮೂಲಕ ಕೇಂದ್ರ ಸರ್ಕಾರವು ವಿರೋಧ ಪಕ್ಷಗಳಿಗೆ, ಸಂಸದರಿಗೆ, ಜನಸಾಮಾನ್ಯರಿಗೆ ಅನ್ಯಾಯ ಎಸಗುತ್ತಿದೆ

ವಿಶೇಷ ಅಧಿವೇಶನವನ್ನು ಕರೆದ ಬಗೆಯು ಕೂಡ ಸರಿಯಾದ ರೀತಿಯದ್ದು ಇರಲಿಲ್ಲ. ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ವಿಶೇಷ ಅಧಿವೇಶನ ಕುರಿತ ಘೋಷಣೆಯನ್ನು ಮೊದಲು ಸಾಮಾಜಿಕ ಜಾಲತಾಣಗಳ ಮೂಲಕ ಮಾಡಿದರು. ಅದಾದ ನಂತರದಲ್ಲಿ ಅಧಿವೇಶನದ ಬಗ್ಗೆ ಸಂಸದರಿಗೆ ತಿಳಿಸಲಾಯಿತು. ಈ ವಿಶೇಷ ಅಧಿವೇಶನದಲ್ಲಿ ಪ್ರಶ್ನೋತ್ತರ ಅವಧಿ ಮತ್ತು ಶೂನ್ಯವೇಳೆ ಇರುವುದಿಲ್ಲ. ಆದರೆ, ಸಂಸದೀಯ ಕಲಾಪಗಳಲ್ಲಿ ಇವು ಬಹಳ ಮುಖ್ಯ. ಅಧಿವೇಶನದಲ್ಲಿ ಚರ್ಚೆಯಾಗುವ ವಿಷಯ ಕುರಿತು ಅನಿಶ್ಚಿತತೆ ಹೆಚ್ಚುವಂತೆ ಮಾಡಿದ ನಂತರವೂ ಕೇಂದ್ರವು ಅಧಿವೇಶನವನ್ನು ಕರೆದಿರುವ ನಿರ್ದಿಷ್ಟ ಉದ್ದೇಶ ಏನು ಎಂಬುದರ ಬಗ್ಗೆ ಮಾಹಿತಿ ನೀಡಿಲ್ಲ. 'ಅಮೃತ ಕಾಲದಲ್ಲಿ ಫಲಪ್ರದ ಚರ್ಚೆಗಳು ನಡೆಯುವ ನಿರೀಕ್ಷೆ ಸರ್ಕಾರದ್ದು' ಎಂದಷ್ಟೇ ಸಚಿವ ಜೋಶಿ ಹೇಳಿದ್ದಾರೆ. ಈ ಗೋಪ್ಯತೆಯು ಸರ್ಕಾರದ ಉದ್ದೇಶದ ಬಗ್ಗೆ ಊಹೆಗಳು ಹುಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಮಾಧ್ಯಮ, ಸಂಸದರು, ರಾಜಕಾರಣಿಗಳು ಮತ್ತು ಇತರರು ಇಂಥದ್ದೊಂದು ಮಹತ್ವದ ವಿಚಾರದ ಬಗ್ಗೆ ಊಹಾಪೋಹಗಳನ್ನು ನೆಚ್ಚಿಕೊಳ್ಳಬೇಕಾದ ಸ್ಥಿತಿ ಎದುರಾಗಿರುವುದು ತೀರಾ ದುರದೃಷ್ಟಕರ.

ಅಧಿವೇಶನದ ಉದ್ದೇಶವನ್ನು ನಿಗೂಢವಾಗಿ ಇರಿಸುವ ಮೂಲಕ ಕೇಂದ್ರ ಸರ್ಕಾರವು ವಿರೋಧ ಪಕ್ಷಗಳಿಗೆ, ಸಂಸತ್ತಿನ ಸದಸ್ಯರಿಗೆ ಹಾಗೂ ಜನಸಾಮಾನ್ಯರಿಗೆ ಅನ್ಯಾಯ ಎಸಗುತ್ತಿದೆ. ಅಧಿವೇಶನವೊಂದರಲ್ಲಿ ಯಾವ ವಿಚಾರಗಳು ಚರ್ಚೆಯಾಗುತ್ತವೆ ಎಂಬುದನ್ನು ಸಮಿತಿಯೊಂದು ತೀರ್ಮಾನಿಸುತ್ತದೆ. ಆ ವಿಚಾರಗಳನ್ನು ಮೊದಲೇ ಬಹಿರಂಗಪಡಿಸಲಾಗುತ್ತದೆ. ಹಾಗೆ ಮಾಡಿದಾಗ ಪಕ್ಷಗಳಿಗೆ ಹಾಗೂ ಸಂಸದರಿಗೆ ನಿರ್ದಿಷ್ಟ ವಿಷಯಗಳ ಬಗ್ಗೆ ಅಗತ್ಯ ಅಧ್ಯಯನ ಮಾಡಿ, ಚರ್ಚೆಗೆ ಸಿದ್ಧರಾಗುವುದು ಸಾಧ್ಯವಾಗುತ್ತದೆ. ಇಂತಹ ಅಗತ್ಯ ಮಾಹಿತಿಯನ್ನು ಕೊಡದೆ, ಎಲ್ಲರೂ ಊಹೆಗಳ ಆಧಾರದಲ್ಲಿ ಸಿದ್ಧತೆ ನಡೆಸಿಕೊಳ್ಳಲಿ ಎಂದು ಬಯಸುವುದು ತಪ್ಪು. ಹೀಗೆ ಮಾಡುವುದು ಸಂಸತ್ತು ಹಾಗೂ ಜನರಿಗೆ ತೋರುವ ಅಗೌರವ. ಇನ್ನೊಬ್ಬರ ಮೇಲೆ ವಿಶ್ವಾಸ ಇಲ್ಲದವರು, ಇತರರಿಗಿಂತ ತಮಗೆ ಮಾತ್ರ ಹೆಚ್ಚು ತಿಳಿದಿದೆ ಎಂದು ಭಾವಿಸಿರುವವರಲ್ಲಿ ಗೋಪ್ಯತೆಯನ್ನು ಕಾಯ್ದುಕೊಳ್ಳುವ ಗುಣಗಳು ಹೆಚ್ಚು ಇರುತ್ತವೆ. ಆಡಳಿತ ಹಾಗೂ ಸಾರ್ವಜನಿಕ ವ್ಯವಹಾರಗಳಲ್ಲಿ ಇಂತಹ ನಡೆಗಳು ಇತರರ ಬಗ್ಗೆ ಅಗೌರವ ತೋರುವುದಕ್ಕೆ, ಇತರರಿಗೆ ಅಗತ್ಯ ಅವಕಾಶ ನೀಡದೇ ಇರುವುದಕ್ಕೆ ಸಮವಾಗುತ್ತವೆ. ಇದು ಪ್ರಜಾತಂತ್ರದ ಆಶಯಕ್ಕೆ ವಿರುದ್ಧ.

ದಿನದ ಟ್ವೀಟ್

ಪ್ರಶ್ನೆಗಳಿಗೆ ದಾರಿ...

ದೇಶದಿಂದ ಪರಾರಿಯಾಗಿರುವ ಉದ್ಯಮಿ ಲಲಿತ್ ಮೋದಿ ಅವರು, ಹಿರಿಯ ವಕೀಲರೂ ಮಾಜಿ ರಾಷ್ಟ್ರಪತಿ ಕೋವಿಂದ್ ಅವರ ನೇತೃತ್ವದಲ್ಲಿ ರಚನೆಯಾಗಿರುವ 'ಒಂದು ರಾಷ್ಟ್ರ, ಒಂದು ಚುನಾವಣೆ'ಗೆ ಸಂಬಂಧಿಸಿದ ಸಮಿತಿಯ ಸದಸ್ಯರೂ ಆಗಿರುವ ಹರೀಶ್ ಸಾಳ್ವೆ ಅವರ ಮೂರನೇ ಮದುವೆಯಲ್ಲಿ ಪಾಲ್ಗೊಂಡಿದ್ದುದು ಪ್ರಶ್ನೆಗಳಿಗೆ ದಾರಿ ಮಾಡಿಕೊಡುತ್ತದೆ. ಭ್ರಷ್ಟಾಚಾರ ಮತ್ತು ಹಣದ ಅಕ್ರಮ ವರ್ಗಾವಣೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಲಲಿತ್ ಮೋದಿ ಅವರು ಭಾರತದ ಸಂಸ್ಥೆಗಳಿಗೆ ಬೇಕಾದವರಾಗಿದ್ದಾರೆ.

(ಲಂಡನ್‌ನಲ್ಲಿ ನಡೆದ ಹರೀಶ್ ಸಾಳ್ವೆ ಅವರ ವಿವಾಹದಲ್ಲಿ ಲಲಿತ್ ಮೋದಿ ಅವರು ಪಾಲ್ಗೊಂಡಿದ್ದಕ್ಕೆ ಪ್ರತಿಕ್ರಿಯೆ)

ಮನೀಶ್ ಛಿಬ್ಬರ್, ಪತ್ರಕರ್ತ

ಕಿಡಿನುಡಿ

ಕಾವೇರಿ ನದಿ ನೀರಿನ ವಿಚಾರವಾಗಿ ಈಗ ಮಾತನಾಡುತ್ತಿರುವ ಸಂಘಟನೆಗಳಾಗಲಿ, ಬಿಜೆಪಿ, ಜೆಡಿಎಸ್ ನಾಯಕರುಗಳಾಗಲಿ ಮೇಕೆದಾಟು ಯೋಜನೆಗೆ ಅನುಮತಿ ನೀಡಿ ಎಂದು ಕೇಂದ್ರ ಸರ್ಕಾರವನ್ನು ಯಾಕೆ ಆಗ್ರಹಿಸುತ್ತಿಲ್ಲ? ಪರಿಸರ ಇಲಾಖೆಯಿಂದ ಯಾಕೆ ಅನುಮತಿ ಕೊಡಿಸುತ್ತಿಲ್ಲ? ಈಗ ಹೋರಾಟ ಮಾಡುತ್ತಿರುವವರು ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕಲ್ಲವೇ?

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ
ಶನಿವಾರ, 5-9-1998

• **ಭಾರತಕ್ಕೆ ಸಂತೃಪ್ತಿ ತಂದ ಅಲಿಪ್ತ ಶೃಂಗ ಘೋಷಣೆ**

ಕೆ.ಎನ್.ಹರಿ ಕುಮಾರ್

ದರ್ಬಾನ್ (ದಕ್ಷಿಣ ಆಫ್ರಿಕಾ), ಸೆ. 4– ಅಣ್ವಸ್ತ್ರ ಪ್ರಸರಣ ಹಾಗೂ ಭಾರತ ಮತ್ತು ಪಾಕಿಸ್ತಾನ ಇತ್ತೀಚೆಗೆ ನಡೆಸಿದ ಅಣ್ವಸ್ತ್ರ ಪರೀಕ್ಷೆ ಬಗ್ಗೆ ಅಲಿಪ್ತ ಚಳವಳಿಯ 12ನೇ ಶೃಂಗಸಭೆಯ ಘೋಷಣೆಯಲ್ಲಿ ತೆಗೆದುಕೊಂಡ ನಿಲುವು ಭಾರತಕ್ಕೆ ತೃಪ್ತಿ ತಂದಿದೆ ಎಂದು ರಾಜತಾಂತ್ರಿಕರು ಇಲ್ಲಿ ಹೇಳಿದರು.

ಅಣ್ವಸ್ತ್ರೀಕರಣ ಹಾಗೂ ಅಣ್ವಸ್ತ್ರ ಸಿಡಿತಲೆಗಳನ್ನು ಕ್ಷಿಪಣಿಗಳ ಮೇಲೆ ಅಳವಡಿಸುವ ಬಗ್ಗೆಯೂ ದರ್ಬಾನ್‌ನಲ್ಲಿ ಅಂತ್ಯಗೊಂಡ 12ನೇ ಶೃಂಗಸಭೆ ಘೋಷಣೆ ನಿಲುವು ಭಾರತಕ್ಕೆ ಸಮಾಧಾನಕರವಾಗಿದೆ.

ಸತತ ಮಾತುಕತೆ ನಂತರ ಭಾರತದ ನಿಯೋಗದವರು ತಮ್ಮ ನಿಲುವನ್ನು ಪ್ರತಿಪಾದಿಸುವಲ್ಲಿ ಸಮರ್ಥರಾದರು ಹಾಗೂ ಈ ಸಂಬಂಧ ಮೂಲ ಕರಡನ್ನು ತಿದ್ದುಪಡಿ ಮಾಡಿಸುವಲ್ಲಿ ಯಶ ಪಡೆದರು.

• **ಅಗತ್ಯಬಿದ್ದರೆ ಸರ್ಕಾರ ರಚನೆ: ಸೋನಿಯಾ**

ಪಂಚಮಡಿ(ಮಧ್ಯಪ್ರದೇಶ), ಸೆ. 4 (ಪಿಟಿಐ, ಯುಎನ್‌ಐ)– 'ಕೇಂದ್ರದಲ್ಲಿ ಅಗತ್ಯವೆನಿಸಿದಾಗ ಪರ್ಯಾಯ ಸರ್ಕಾರ ರಚನೆ ಮಾಡುವ ಮೂಲಕ ಕಾಂಗ್ರೆಸ್ ಪಕ್ಷವು ತನ್ನ ಸಾಂವಿಧಾನಿಕ ಹೊಣೆಗಾರಿಕೆಯನ್ನು ನಿರ್ವಹಿಸಲು ಸಿದ್ಧವಾಗಿದೆ' ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ತಮ್ಮ ನಿಲುವನ್ನು ಪುನರುಚ್ಚರಿಸಿದ್ದಾರೆ.

ಆಯ್ದ 250 ಮಂದಿ ಕಾಂಗ್ರೆಸಿಗರ ವಿಶೇಷ ಅಧಿವೇಶನ ಉದ್ಘಾಟಿಸಿ ಮಾತನಾಡಿದರು.

50 ವರ್ಷಗಳ ಹಿಂದೆ
ಬುಧವಾರ, 5-9-1973

• **ರಾಜ್ಯದ ಯೋಜನೆಗೆ ಕೃಷ್ಣಾ ಮೇಲ್ದಂಡೆ ಕಾರ್ಯ ಸೇರಿಸಲು ಆಗ್ರಹ**

ನವದೆಹಲಿ, ಸೆ. 4– ಮೈಸೂರು ರಾಜ್ಯದ ಐದನೇ ಯೋಜನೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಅಡಕ ಮಾಡುವಂತೆ ಪ್ರಬಲವಾಗಿ ಮನವಿ ಮಾಡಿ, ಸಂಸದೀಯ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಡಿ.ಎಸ್. ಅಫ್ಜಲ್‌ಪುರ್‌ಕರ್ ಅವರು ಕೇಂದ್ರ ಯೋಜನಾ ಮಂತ್ರಿ ಡಿ.ಪಿ.ಧರ್ ಅವರಿಗೆ ಪತ್ರವೊಂದನ್ನು ಬರೆದಿದ್ದಾರೆ.

ನೀರಾವರಿ ಮತ್ತು ವಿದ್ಯುತ್ ಬಗ್ಗೆ ರಾಜ್ಯದ ಯೋಜನಾ ಸಲಹೆಗಳ ಒಟ್ಟು ಮೊತ್ತ ಸುಮಾರು 775 ಕೋಟಿ ರೂಪಾಯಿಗಳು. ಇದನ್ನು ಯೋಜನಾ ಆಯೋಗ ಪರಿಶೀಲಿಸಲಿದೆ. ಕೃಷ್ಣಾ ಮೇಲ್ದಂಡೆ ಮತ್ತು ಕಾಳಿ ನದಿ ಯೋಜನೆಗಳಿಗೆ ರಾಜ್ಯ ಸರ್ಕಾರ ಸ್ವಲ್ಪ ಹಣ ಒದಗಿಸಿದೆ ಎಂದೂ ಅವರು ಪತ್ರದಲ್ಲಿ ತಿಳಿಸಿದ್ದಾರೆ.

• **ಆಲ್ಜಿಯರ್ಸ್ ಸಮ್ಮೇಳನ: ಪ್ರತಿಷ್ಠಿತ ರಾಜಕೀಯ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಭಾರತದ ಒಮ್ಮತ ಆಯ್ಕೆ**

ಆಲ್ಜಿಯರ್ಸ್, ಸೆ. 4– ಅಲಿಪ್ತ ರಾಷ್ಟ್ರಗಳ ಸಮ್ಮೇಳನದ ಅತ್ಯಂತ ಮುಖ್ಯ ಸಮಿತಿಯಾದ ರಾಜಕೀಯ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಭಾರತ ಆಯ್ಕೆಯಾಗಿದೆ.

ಸಮ್ಮೇಳನದ ಇನ್ನೊಂದು ಪ್ರತಿಷ್ಠಿತ ಸಮಿತಿಯಾದ ಆರ್ಥಿಕ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಚಿಲಿ ಆಯ್ಕೆಯಾಗಿದೆ.

ಬೆಳಿಗ್ಗೆ ವಿದೇಶಾಂಗ ಸಚಿವರು ತಮ್ಮ ಸಭೆಯನ್ನು ಮತ್ತೆ ಆರಂಭಿಸಿದಾಗ ಭಾರತದ ಸರ್ವಾನುಮತದ ನೇಮಕವನ್ನು ಪ್ರಕಟಿಸಲಾಯಿತು. ಭಾರತವು ರಾಜಕೀಯ ಸಮಿತಿಯ ಅಧ್ಯಕ್ಷ ಪೀಠ ಅಲಂಕರಿಸಲು ಅನಾಸಕ್ತಿಯನ್ನು ತೋರಿತ್ತು.

ಜನಸಂಖ್ಯೆಗೆ ಅನುಗುಣವಾಗಿ ಈಗ ಲೋಕಸಭಾ ಸದಸ್ಯಬಲ ಹೆಚ್ಚಿಸಿದರೆ ಏನಾಗಲಿದೆ?

ಲೋಕಸಭಾ ಕ್ಷೇತ್ರ: ಮರುವಿಂಗಡಣೆಯ ಮರ್ಮ

ವಿಶ್ಲೇಷಣೆ

ದೇವನೂರ ಮಹಾದೇವ

ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಜನಸಂಖ್ಯೆಯ ಏರುಪೇರಿಗೆ ಅನುಗುಣವಾಗಿ ಪುನರ್ವಿಂಗಡಣೆ ಮಾಡುವ ಪ್ರಸ್ತಾವದ ಕುರಿತು ನಡೆಯುತ್ತಿರುವ ಚರ್ಚೆಗಳು ಆತಂಕ ಹಾಗೂ ಗಾಬರಿ ಹುಟ್ಟಿಸುವಂತಿವೆ. ಭಾರತ ಸಂವಿಧಾನದ ಪ್ರಥಮ ವಿಧಿಯು 'ಇಂಡಿಯಾ, ದಟ್ ಈಸ್ ಭಾರತ್, ಶಲ್ ಬಿ ಎ ಯೂನಿಯನ್ ಆಫ್ ಸ್ಟೇಟ್ಸ್' (ಇಂಡಿಯಾ, ಅಂದರೆ ಭಾರತವು, ರಾಜ್ಯಗಳ ಒಂದು ಒಕ್ಕೂಟ) ಎಂದು ಹೇಳುತ್ತದೆ. ಆದರೆ, ಇದನ್ನು ಯಾರೂ ಗಂಭೀರವಾಗಿ ಪರಿಗಣಿಸಿದಂತಿಲ್ಲ. ಇಂದಿನ ಸಮಸ್ಯೆಗೆ ಇದೇ ಮೂಲ ಕಾರಣ ಅನ್ನಿಸುತ್ತದೆ. ಹೀಗಾಗಿ, ಭಾರತದಲ್ಲಿ ಅತ್ಯಂತ ಕಡೆಗಣನೆಗೆ ಒಳಗಾಗಿರುವುದು ಯಾವುದೆಂದರೆ, ಸಂವಿಧಾನದ ಪ್ರಥಮ ವಿಧಿ ಎಂದು ಹೇಳಬಹುದೇನೊ!

ಇಂಡಿಯಾ ಅಂದರೆ ಭಾರತವು ರಾಜ್ಯಗಳ ಒಕ್ಕೂಟವಾಗುವುದಕ್ಕೂ ಮೊದಲು, ಭರತಖಂಡದಲ್ಲಿ ಐನೂರಕ್ಕೂ ಹೆಚ್ಚು ರಾಜಮನೆತನಗಳು ಆಳ್ವಿಕೆ ನಡೆಸುತ್ತಿದ್ದವು. ಅವು ಇಂದಿನ ರಾಜ್ಯಗಳಾಗಿ ಅಸ್ತಿತ್ವ ಪಡೆದು ಭಾರತದ ಒಕ್ಕೂಟವಾಗುವುದರ ಹಿಂದೆ ಬಹಳಷ್ಟು ಕಸರತ್ತು ನಡೆದಿದೆ. ಅನೇಕಾನೇಕ ಸವಾಲುಗಳನ್ನು ಎದುರಿಸಲಾಗಿದೆ. ಕೆಲವು ರಾಜ್ಯಗಳಿಗೆ ಸವಲತ್ತು, ವಿಶೇಷ ಸ್ಥಾನಮಾನ ನೀಡಿ ಒಕ್ಕೂಟಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಇಂದಿನ ರಾಜ್ಯಗಳ ಸ್ವರೂಪದಲ್ಲಿ ವಿವಿಧ ರಾಜರುಗಳ ಆಳ್ವಿಕೆ, ಪಾಳೆಪಟ್ಟು, ಬ್ರಿಟಿಷ್ ಹಿಡಿತದ ಪ್ರಾಂತ್ಯ ಎಲ್ಲವೂ ಮಿಳಿತವಾಗಿವೆ. ಇಂತಿರುವ ರಾಜ್ಯಗಳಿಗೆ ಗಡಿಯನ್ನು ನಿರ್ಧರಿಸುವಾಗ ಭಾಷೆಯ ಎಲ್ಲೆಯನ್ನು ಅಳತೆಗೋಲಾಗಿಸಲಾಗಿದೆ. ಆಗ, ರಾಜ್ಯಗಳಿಗೆ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಜನಸಂಖ್ಯೆ ಆಧರಿಸಿ ಪರಿಗಣಿಸುವಾಗಲೂ ಅದರೊಳಗೆ ಒಂದು ಅನುಪಾತದ ಸೂತ್ರ ಇದೆ, ವಿವೇಕ ಇದೆ ಹಾಗೂ 1976 ಮತ್ತು ತದನಂತರ ಜನಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸದೆ, ಇದುವರೆಗೂ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಕೈಗೊಂಡ ನಿರ್ಧಾರದಲ್ಲಿ, ಒಕ್ಕೂಟ ವ್ಯವಸ್ಥೆಯನ್ನು ಕಾಪಾಡಿಕೊಳ್ಳಬೇಕೆಂಬ ಬಗ್ಗೆ ಆಳ್ವಿಕೆಗೆ ಇರುವ ಹೊಣೆಗಾರಿಕೆಯನ್ನೂ ಗಮನಿಸಬೇಕು. ರಾಜ್ಯಗಳ ಒಕ್ಕೂಟವಾದ ದೇಶವನ್ನು ಯಾವುದೇ ಒಂದು ಭಾಷೆಯವರು ಅಥವಾ ಒಂದು ಪ್ರದೇಶದವರು ಆಳ್ವಿಕೆ ನಡೆಸುವಂತೆ ಆಗಬಾರದು ಎಂಬ ಅಂತರ್ಗತ ಎಚ್ಚರವೂ ಇದರಲ್ಲಿ ಅಡಕವಾಗಿದೆ.

ಈಗ ಯಾಕೋ ಎಚ್ಚರಿಕೆಯ ಗಂಟೆ ಬಡಿದುಕೊಳ್ಳುತ್ತಿದೆ. ಅದರ ಸದ್ದು ಕೇಳಿಸುತ್ತಿದೆ. ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು ಹಾಗೂ ಸಂವಿಧಾನ ರಚಿಸಿದವರಿಗೆ ಏನಾದರೂ ದುಃಸ್ವಪ್ನ ಬಿದ್ದಿತ್ತೇ?

ಹೌದು, ಭಾಷೆಯ ಎಲ್ಲೆಗೊಳಪಡಿಸಿ ರಾಜ್ಯಗಳನ್ನಾಗಿಸಿ, ಆ ರಾಜ್ಯಗಳ ಲೋಕಸಭೆ ಸ್ಥಾನಗಳ ಸಂಖ್ಯೆಯನ್ನು ಈಗ ಜನಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸುವುದಾದರೆ ಭಾರತ ಎನ್ನುವ ಪರಿಕಲ್ಪನೆಗೇ ಇದು ಒಂದು ದುಃಸ್ವಪ್ನ. ಯಾಕೆಂದರೆ, ಈಗ ಕೇಳಿಬರುತ್ತಿರುವ ಸುದ್ದಿಗಳಂತೆ, ಜನಸಂಖ್ಯೆಗೆ ಅನುಗುಣವಾಗಿ 800ಕ್ಕೂ ಹೆಚ್ಚು ಲೋಕಸಭಾ ಸದಸ್ಯ ಸ್ಥಾನಗಳ ಸಂಖ್ಯೆ ನಿಗದಿ ಆಗುವುದಾದರೆ ಏನಾಗುತ್ತದೆ? ಉತ್ತರದ ರಾಜ್ಯಗಳ ಜನಸಂಖ್ಯೆ ಹೆಚ್ಚಳವು ದಕ್ಷಿಣದ ರಾಜ್ಯಗಳಿಗೆ ಹೋಲಿಸಿದರೆ ಭಾರಿ ಅಧಿಕವಿರುವುದರಿಂದ ಬರೀ ಮೂರು ಮತ್ತೊಂದು ಹಿಂದಿ ಭಾಷೆಯ ರಾಜ್ಯಗಳಷ್ಟೇ ಕೂಡಿಕೊಂಡು ಕೇಂದ್ರದಲ್ಲಿ ಬಹುಮತ ಗಳಿಸಿಕೊಳ್ಳಲೂಬಹುದು! ಆಗ ಹಿಂದಿ ಭಾಷೆಯು ಭಾರತದ ಉಳಿದೆಲ್ಲ ಶ್ರೀಮಂತ ಭಾಷೆಗಳ ಮೇಲೆ ಸವಾರಿ ಮಾಡಬಹುದು. ಈ ರೀತಿಯಾದರೆ ದೇಶದ ಉಳಿದೆಲ್ಲ ರಾಜ್ಯಗಳು ಸಾಮಂತ ರಾಜ್ಯಗಳಾಗಿಬಿಡುತ್ತವೆ. ಉತ್ತರದ ಹಿಂದಿ ಚಕ್ರವರ್ತಿಗೆ ಕಪ್ಪ ಒಪ್ಪಿಸುತ್ತಿರಬೇಕಾಗುತ್ತದೆ. ಆಗ ಭಾರತವು ಭಾರತವಾಗಿ ಉಳಿದಿರುವುದಿಲ್ಲ. ಉತ್ತರ ಭಾರತದ ಮೂರ್ನಾಲ್ಕು ರಾಜ್ಯಗಳ ಆಳ್ವಿಕೆಗೆ ಉಳಿದೆಲ್ಲ ಪ್ರದೇಶಗಳು ಒಳಪಟ್ಟು, ಭಾರತ ದೇಶದೊಳಗೇ ವಸಾಹತುಶಾಹಿ ಆಳ್ವಿಕೆ ಬಂದಂತೆ ಆಗುತ್ತದೆ. ಅದಕ್ಕಾಗಿಯೇ ಎಚ್ಚರಿಕೆಯ ಗಂಟೆ ಬಡಿದುಕೊಳ್ಳುತ್ತಿರಬೇಕು.

ಹಾಗಾದರೆ ಒಬ್ಬ ವ್ಯಕ್ತಿ, ಒಂದು ಮೌಲ್ಯ, ಒಂದು ವೋಟು ಎಂಬ ಮೌಲ್ಯವನ್ನು ಕಡೆಗಣಿಸಬೇಕೆ? 'ವಯಸ್ಕ ಮತದಾನ ಬೇಕೇ ಬೇಡವೇ' ಎಂಬ ಸಂದರ್ಭದಲ್ಲಿ ಇದು ಮಹತ್ವದ ಮೌಲ್ಯ. ಆದರೆ, ಇಲ್ಲಿ ಚರ್ಚಿತವಾಗುತ್ತಿರುವುದು ಒಕ್ಕೂಟ ದೇಶವೊಂದರ ರಾಜ್ಯಗಳ ಪ್ರಾತಿನಿಧ್ಯದ ಸಮಸ್ಯೆ. ಈಗ, ಅಮೆರಿಕದ ಪ್ರಜಾಪ್ರಭುತ್ವದ ಬಗ್ಗೆ ಎಲ್ಲರೂ, ಅದರಲ್ಲೂ ಹೆಚ್ಚಾಗಿ ಯುವಜನ ಸಂಭ್ರಮಿಸುತ್ತಾರೆ. ಅಮೆರಿಕದ ಮೇಲ್ಮನೆ ಸೆನೆಟರ್‌ಗಳ ಆಯ್ಕೆಯನ್ನು ಗಮನಿಸುವುದಾದರೆ, ಅಲ್ಲಿ ಪ್ರತಿ ರಾಜ್ಯಕ್ಕೂ ಇಬ್ಬರು ಸೆನೆಟರ್‌ಗಳ ಸಂಖ್ಯೆಯನ್ನು ಸಮಸಮ ನಿಗದಿಪಡಿಸಲಾಗಿದೆ. ಇಲ್ಲಿ ಸೆನೆಟರ್‌ಗಳನ್ನು ರಾಜ್ಯಗಳ ಜನಸಂಖ್ಯೆಯ ಆಧಾರದ ಮೇಲೆ ನಿಗದಿಪಡಿಸಲಾಗಿಲ್ಲ! ರಾಜ್ಯಗಳ ಲೆಕ್ಕದಲ್ಲಿ ನಿಗದಿಪಡಿಸಲಾಗಿದೆ. ಇದು ರ್‍ಯಾಡಿಕಲ್ ಬದಲಾವಣೆ ಅನ್ನಿಸಿಕೊಂಡಿದೆ.

ಇಂತಹ ಆಶಯಗಳು ಭಾರತಕ್ಕೇ ಹೆಚ್ಚು ಅಗತ್ಯ. ವೈವಿಧ್ಯ ಕಡಿಮೆ ಪ್ರಮಾಣದಲ್ಲಿ ಇರುವ ಅಮೆರಿಕದಂತಹ ದೇಶದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ನಿರ್ಧರಿಸಿದರೂ ನಡೆಯುತ್ತದೆ. ಆದರೆ ವೈವಿಧ್ಯಗಳಿಂದ ತುಂಬಿ ತುಳುಕುತ್ತಿರುವ ಭಾರತದಲ್ಲಿ ಇದು ಸಲ್ಲದು.

ಜೊತೆಗೆ, ಭಾರತದ ಒಕ್ಕೂಟದೊಳಗೆ ಬಹುತೇಕ ರಾಜ್ಯಗಳ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಜನಸಂಖ್ಯೆ 20 ಲಕ್ಷದ ಆಸುಪಾಸಿನಲ್ಲಿದ್ದರೂ, ಬರೀ 64 ಸಾವಿರ ಜನಸಂಖ್ಯೆ ಇರುವ ಲಕ್ಷದ್ವೀಪಕ್ಕೆ, ಎರಡೂ ಮುಕ್ಕಾಲು ಲಕ್ಷ ಜನಸಂಖ್ಯೆ ಇರುವ ಲಡಾಕ್ ಕೇಂದ್ರಾಡಳಿತ ಪ್ರದೇಶಕ್ಕೆ ಲೋಕಸಭೆಯ ಸದಸ್ಯತ್ವ ಸ್ಥಾನ ನೀಡಿ ಸಮಾನ ಅವಕಾಶ ಕಲ್ಪಿಸಿರುವುದರಲ್ಲಿ, ಒಳಗೊಳ್ಳುವ ಒಕ್ಕೂಟ ತತ್ವದ ಪ್ರಜಾಪ್ರಭುತ್ವದ ವಿವೇಕ ಇರುವುದನ್ನೂ ನಾವು ಗಮನಿಸಬೇಕು.



ಮತ್ತೆ ಮತ್ತೆ ಹೇಳುವೆ- ಈ ತತ್ವವನ್ನು ಕೈಬಿಟ್ಟರೆ ಭಾರತವು ವಸಾಹತುಶಾಹಿ ದೇಶವಾಗಿಬಿಡುತ್ತದೆ. ನೆನಪಿಟ್ಟುಕೊಳ್ಳೋಣ- ಜೀವನ ಅಂಕಗಣಿತ ಅಲ್ಲ, ರಾಜಕಾರಣವೂ ಅಂಕಗಣಿತ ಅಲ್ಲ. ಅಂಕಗಣಿತ ಎಂಬಂತೆ ಪರಿಗಣಿಸುವ ಆಳ್ವಿಕೆಯು ಬೇಜವಾಬ್ದಾರಿಯ ಅಂಧ ದರ್ಬಾರ್ ಮಾತ್ರ. ಆದ್ದರಿಂದ, ರಾಜ್ಯಗಳಿಗೆ ಈಗ ನಿಗದಿಪಡಿಸಿರುವ ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು ಸದಾ ಕಾಯ್ದುಕೊಳ್ಳುವುದು ದೇಶದ ಉಳಿವಿನ ದೃಷ್ಟಿಯಿಂದ ಕ್ಷೇಮಕರ. ಭಾರತವು ತನ್ನ ನೆಲದ ಜಾಯಮಾನಕ್ಕೆ ಅನುಗುಣವಾಗಿ ವರ್ತಿಸಬೇಕು.

ಇದೆಲ್ಲದರ ನಡುವೆ, ಲೋಕಸಭಾ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡಬೇಕೆನ್ನುವ ಉಮೇದನ್ನು ಮತ್ತೊಮ್ಮೆ ಮುಂದಕ್ಕೆ ಹಾಕಿದರೆ ಅದರಿಂದ ತೊಂದರೆಯೇನೂ ಆಗದು. ಈಗ ಲೋಕಸಭೆಯ 543 ಸದಸ್ಯರು ನಡೆಸುವ ಗದ್ದಲವನ್ನೇ ದೇಶವು ತಡೆದುಕೊಳ್ಳಲಾಗದೆ ತತ್ತರಿಸುತ್ತಿದೆ. ಇನ್ನು ಈ ಸದಸ್ಯರ ಸಂಖ್ಯೆ ಎಂಟುನೂರನ್ನು ಮೀರಿದರೆ ಗದ್ದಲ ಡಬಲ್ ಆಗಬಹುದಷ್ಟೇ! ಇದು ಯಾವ ಪುರುಷಾರ್ಥಕ್ಕೆ?

ಇನ್ನು ಲೋಕಸಭೆಯ ಕಲಾಪದ ಗುಣಮಟ್ಟವನ್ನು ಪರಿಶೀಲಿಸುವುದಾದರೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಆಧಾರದ ಮೇಲೆ ನಮ್ಮ ಲೋಕಸಭಾ ಸದಸ್ಯರ ಸಂಖ್ಯೆ ನಿಜವಾಗಿಯೂ ಇರುವುದು ಎಷ್ಟೆಂದು ಅಂದಾಜಿಸೋಣ. ನನ್ನ ಪ್ರಕಾರ, ಆಡಳಿತಾರೂಢ ಬಿಜೆಪಿ ಸಂಸದರ ಸಂಖ್ಯೆ- ಬರೀ ಒಂದು. ಈ ಪಕ್ಷಕ್ಕೆ ಸೇರಿದ ಉಳಿದ ಸಂಸತ್ ಸದಸ್ಯರೆಲ್ಲ ಜೈಜೈ ಎನ್ನುವವರು. ಹೀಗೆಯೇ, ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳಲ್ಲಿ ಒಂದಿಷ್ಟು ಭಿನ್ನಮತವಾದರೂ ಇರುವುದರಿಂದ, ವಿರೋಧ ಪಕ್ಷಗಳ ಲೋಕಸಭಾ ಸದಸ್ಯರ ಸಂಖ್ಯೆ ಹೆಚ್ಚೆಂದರೆ ತಲಾ ಮೂರ್ನಾಲ್ಕು ಇರಬಹುದು. ಹೀಗಿದೆ ನಮ್ಮ ಲೋಕಸಭೆ!

ವಕೀಲ ಪ್ರೊ. ರವಿವರ್ಮಕುಮಾರ್ ಅವರು ಹೇಳಿದ ಮಾತು ನನಗೆ ನೆನಪಾಗುತ್ತಿದೆ- 'ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚು ಮಹತ್ವ ಕೊಟ್ಟಿರುವ ಸಂವಿಧಾನವನ್ನು ಹೊಂದಿರುವ ಭಾರತದಲ್ಲಿ ನಮ್ಮ ಲೋಕಸಭಾ ಸದಸ್ಯರ ಅಭಿವ್ಯಕ್ತಿ ಸ್ವಾತಂತ್ರ್ಯದ ಸ್ಥಿತಿಗತಿ ದಯನೀಯವಾಗಿದೆ'- ಈ ನಿಜಕ್ಕೆ ನಾವು ಬೆಚ್ಚಬೇಕಾಗಿದೆ. ಎಚ್ಚೆತ್ತವರು ಇತ್ತಲೂ ತಮ್ಮ ಚಿತ್ತಹರಿಸಿ ಧಾವಿಸಬೇಕಾಗಿದೆ.

ಮತ್ತೂ ನೆನಪಿಟ್ಟುಕೊಳ್ಳೋಣ; ಎಲ್ಲಾ ರಾಜ್ಯಗಳ ರಾಜಧಾನಿಗಳ ಜನಸಂಖ್ಯೆಯು ಲಂಗುಲಗಾಮಿಲ್ಲದೆ ಬೆಳೆಯುತ್ತಿದೆ. ಮುಂದೊಂದು ದಿನ ರಾಜಧಾನಿ, ಅದನ್ನು ಒಳಗೊಂಡ ಜಿಲ್ಲೆ ಹಾಗೂ ಅಕ್ಕಪಕ್ಕದ ಮೂರ್ನಾಲ್ಕು ಜಿಲ್ಲೆಗಳ ಜನಸಂಖ್ಯೆಯೇ ರಾಜ್ಯದ ಅರ್ಧದಷ್ಟು ಜನಸಂಖ್ಯೆ ಆಗಿಬಿಡಲೂಬಹುದು. ರಾಜಧಾನಿಯ ಸುತ್ತಮುತ್ತಲ ಜಿಲ್ಲೆಗಳೇ ವಿಧಾನಸಭೆಯಲ್ಲಿ ಬಹುಮತ ಪಡೆದು ಆಳ್ವಿಕೆ ನಡೆಸುವ ಪರಿಸ್ಥಿತಿ ಬರಲೂಬಹುದು. ಇದಾಗಬಾರದು. ನಗರ ಮತ್ತು ಗ್ರಾಮಾಂತರ ಪ್ರದೇಶದ ವಿಧಾನಸಭಾ ಕ್ಷೇತ್ರಗಳಿಗೆ ಜನಸಂಖ್ಯೆಯನ್ನು ನಿರ್ಧರಿಸುವಾಗಲೂ ಸಮತೋಲನದ ಸೂತ್ರವೊಂದನ್ನು ಕಂಡುಕೊಂಡು, ರಾಜ್ಯದೊಳಗಿನ ಎಲ್ಲಾ ಜಿಲ್ಲೆಗಳ ಹಿತವನ್ನು ರಕ್ಷಿಸಿಕೊಳ್ಳಬೇಕಾದ ಹೊಣೆಗಾರಿಕೆಯೂ ನಮ್ಮ ಮೇಲಿದೆ.

ಚುರುಮುರಿ

ವಿಮಾನ ಶಕ್ತಿ

• ಲಿಂಗರಾಜು ಡಿ.ಎಸ್.

'ನೋಡ್ರೋ, ಶಿವಮೊಗ್ಗಕ್ಕೆ ಇಮಾನ ಬುಡಕ್ಕೆ 450 ಕೋಟಿ ಖರ್ಚಾಗ್ಯದಂತೆ! ಅದೇ 15 ಲಕ್ಷ ಕಿಲೊಮೀಟರ್ ದೂರ ಇರೋ ಸೂರ್ಯನ ಮನೆ ಗೇಟು ಬಾಗಿಲಗಂಟ ರಾಕೆಟ್ ಬುಡಕ್ಕೆ 400 ಕೋಟಿ ಅಷ್ಟೇಯಂತೆ ಖರ್ಚಾಗಿರದು' ಯಂಟಪ್ಪಣ್ಣ ಸುದ್ದಿ ಹೇಳಿತು.

'ಇನ್ನೂ ಕಲಬುರಗಿ, ಹಾಸನ, ಮಂಗಳೂರು, ಕಾರವಾರ, ಬಳ್ಳಾರಿ, ರಾಯಚೂರು, ಕೊಪ್ಪಳ, ದಾವಣಗೆರೆಗೂ ವಿಮಾನ ಬುಟ್ಟಾರಂತೆ ಕನಣ್ಯೆ. ಜನಕ್ಕೆ ಇದರಿಂದ ಅನುಕೂಲ ಆದದೇ' ಆಶ್ಚರ್ಯ ತೋರಿಸಿದೆ.

'ಗುಲಬರ್ಗಾದಿಂದ ತೊಗರಿಬ್ಯಾಳೆ, ಹಾಸನದಿಂದ ಕಾಫಿ, ಮಂಗಳೂರು-ಕಾರವಾರದಿಂದ ಮೀನು, ಬಳ್ಳಾರಿಯಿಂದ ಅದಿರು, ಶಿವಮೊಗ್ಗದಿಂದ ಅಡಕೆ ಲೋಡು ಹೊಡಿಯಕ್ಕೆ ಸುಲಭಾತದೆ ಕನೋ' ಯಂಟಪ್ಪಣ್ಣ ಘೋಷಿಸಿತು.

'ಇಮಾನದೇಲಿ ಅಡಕೆ, ಕಾಫಿ ತಕ್ಕೋಗುವಾಗ ಸೇಲ್‌ಟ್ಯಾಕ್ಸಿನೋರು ದಾರಿ ಮಧ್ಯದೇಲಿ ಅಡ್ಡ ಹಾಕಿ ಇಮಾನ ನಿಲ್ಸಿ 'ಬಿಲ್ಲು ಕೊಡಿ' ಅಂತ ರೋಸಕುಲ್ಲ ಅಲ್ಲುವರಾ?' ಚಂದ್ರು ಅನುಮಾನಪಟ್ಟ.

'ಎಲ್ಲ ಜಿಲ್ಲೆ ಜನಕ್ಕೂ ಏರೋಪ್ಲೇನ್ ಹತ್ತಿಸಬೇಕು ಅನ್ನೋ ಸಿದ್ದಣ್ಣನ ಕನಸಿಗೆ ಸಿಸ್ಯ ಪಾಟೀಲಣ್ಣ 'ಸರ್ಕಾರಿ ಇಮಾನ ಕಂಪನಿ ಮಾಡಿ ಇಮಾನ ಬುಡದೇಯ!' ಅಂದವ್ನೆ' ತುರೇಮಣೆ ವಿವರಿಸಿದರು.

'ವಿಮಾನ ಬುಡಕ್ಕೂ ಸಿದ್ದಣ್ಣನಿಗೂ ಏನು ಸಂಬಂಜ ಸಾ?' ಅಂತ ಕೇಳಿದೆ.

'ಫ್ರೀ ಅಕ್ಕಿ, ಕರಂಟು, ಕೈಗೆ ಕಾಸು, ಬಸ್ಸು ಅಂತ ಗ್ಯಾರಂಟಿಗಳ ಕೊಟ್ಟು ಸಿದ್ದಣ್ಣ ಫೇಮಸ್ ಆಗಿಬುಟ್ಟವ್ನಲ್ಲೋ!' ಅಂದ್ರು ತುರೇಮಣೆ.

'ಈಗಾಗ್ಲೆ ಕರಂಟು ಶಾಕ್ ಕೊಟ್ಟಾಗ್ಯದೆ. ಹಾಲು-ಆಲ್ಕೋಹಾಲು ರೇಟು ಮುಕ್ಕುರಿಕ್ಯಂಡು ಮ್ಯಾಕ್ಕೋಗ್ಯದೆ. ಗಿಲೀಟು ಮಾತು ನಿಲ್ಸಿ!' ಸಿಟ್ಟಲ್ಲಿ ತಿವಿದೆ.

'ಸುಮ್ಕಿರಪ್ಪ. ಲೋಕಸಭೆ ಎಲೆಕ್ಷನ್ನಿಗೆ ಮೊದಲೇ ಕರ್ನಾಟಕದ ತಿಮ್ಮಕ್ಕ, ರಾಮಕ್ಕ, ಬೋರಮ್ಮರಿಗೆ ಇಮಾನದೇಲಿ ಫ್ರೀ ಪ್ರಯಾಣ ಮಾಡಿಸೋ ವಿಮಾನ ಶಕ್ತಿ ಯೋಜನೆ ತಂದಾರಂತೆ. ಆಮೇಲೆ ಅಷ್ಟೂ ಓಟು ಸಿದ್ದಣ್ಣನ ಕಡಿಕೆ ಇಟ್ಟಾಡೋಯ್ತವೆ!' ತುರೇಮಣೆ ಹೊಸ ಗ್ಯಾರಂಟಿ ಯೋಜನೆ ಲೀಕು ಮಾಡಿದರು.

ಸಂಗತ

ಜೀವನಪಾಠ ಕಲಿಸುವ ವಿಶ್ವಗುರು

ಶಿಕ್ಷಕನ ಸ್ಥಾನದಲ್ಲಿ ಬುದ್ಧನನ್ನು ಇರಿಸಿ, ವಿದ್ಯಾರ್ಥಿಗಳು ಏಕಲವ್ಯನಂತೆ ಕಲಿಯಬಹುದಾದ ಜೀವನಪಾಠಗಳಿವೆ. ಅವನನ್ನು ಶಿಕ್ಷಕನನ್ನಾಗಿ ಒಪ್ಪಿ ಪಠ್ಯದಲ್ಲಿ ಅಳವಡಿಸಿಕೊಳ್ಳುವ ಅಗತ್ಯವೂ ಇದೆ

• ಜ್ಯೋತಿ

ಗೌತಮ ಬುದ್ಧ ಹಲವಾರು ವಿಷಯಗಳಲ್ಲಿ ನಮಗೆ ಸೂಕ್ತ ಮಾರ್ಗದರ್ಶಕನಾಗಿ ಪ್ರಸ್ತುತವೆನಿಸುತ್ತಾನೆ. ಬದುಕಿನ ವಿವಿಧ ಹಂತಗಳಲ್ಲಿ ನಮಗೆ ಎದುರಾಗುವ ಪ್ರಶ್ನೆಗಳಿಗೆ ಸಮಾಧಾನಕರ, ಸರಳ ಮತ್ತು ಎಲ್ಲರೂ ಅನುಸರಿಸಬಹುದಾದ ಉತ್ತರ ನೀಡುವ ಜಗತ್ತಿನ ದಾರ್ಶನಿಕರಲ್ಲಿ ಮುಂಚೂಣಿಯ ಹೆಸರು ಬುದ್ಧನದ್ದು. ಅವನ ಅರ್ಥಗರ್ಭಿತ ಅಸಂಖ್ಯಾತ ಹೇಳಿಕೆಗಳಲ್ಲಿ ಬಹಳ ಮಹತ್ವದ್ದೆಂದರೆ, 'ನಿನಗೆ ನೀನೇ ದಾರಿದೀಪ'. ಇದು ಶಿಕ್ಷಕರ ದಿನಾಚರಣೆಯ ಈ ಸಂದರ್ಭದಲ್ಲಿ, ವರ್ತಮಾನದ ಶಿಕ್ಷಣ ವ್ಯವಸ್ಥೆಯಲ್ಲಿ ಬಹಳ ಪ್ರಸ್ತುತವಾದ ಹೇಳಿಕೆ ಎನ್ನಬಹುದು.

ಇಂದಿನ ವಾಸ್ತವವೆಂದರೆ, ಗುರು-ಶಿಷ್ಯರ ಮೈತ್ರಿ ಹಿಂದಿನಂತಿಲ್ಲ. ಹಿಂದೆ, ಪ್ರತಿಯೊಬ್ಬ ಸಾಧಕ ಮೊದಲು ಜ್ಞಾಪಿಸಿಕೊಳ್ಳುತ್ತಿದ್ದುದು ತನ್ನ ನೆಚ್ಚಿನ ಗುರುವನ್ನು. ಶಿಕ್ಷಣ ಒಂದು ವ್ಯಾಪಾರವಾಗಿ ಬದಲಾದ ಕಾಲದಲ್ಲಿ, ಗುರು-ಶಿಷ್ಯರ ನಡುವೆ ಸ್ವಾಭಾವಿಕವಾಗಿ ಇರಬೇಕಾದ ಆಪ್ತ ಸಂಬಂಧ, ಪರಸ್ಪರ ಕಾಳಜಿ, ಬೆಂಬಲ, ನಿಸ್ವಾರ್ಥ ಸೇವೆ ಕಡಿಮೆಯಾಗುತ್ತಿರುವುದನ್ನು ನಾವು ಗಮನಿಸಬಹುದು. ಇಂದಿನ ಡಿಜಿಟಲ್ ಯುಗದಲ್ಲಿ, ಮನುಷ್ಯರ ನಡುವೆ ಆಪ್ತವಾಗಿ ಇರಬೇಕಾದ ಎಲ್ಲಾ ಸಂಬಂಧಗಳು ಯಾಂತ್ರಿಕವಾಗಿವೆ. ಸಾಮಾಜಿಕ ಜಾಲತಾಣಗಳು ಮತ್ತು ಇನ್ನಿತರ ಮನರಂಜನಾ ಕ್ಷೇತ್ರಗಳ ಅತಿಯಾದ ಸೆಳೆತ ಹಾಗೂ ವ್ಯಾವಹಾರಿಕತೆಯಲ್ಲಿ ಬತ್ತಿಹೋಗಿರುವ ರಕ್ತಸಂಬಂಧಗಳು ವಿದ್ಯಾರ್ಥಿಗಳನ್ನು ಗೊಂದಲದಲ್ಲಿಟ್ಟು, ಅವರು ಆಯ್ಕೆ ಮಾಡಬಹುದಾದ ಆಸಕ್ತಿಯ ದಾರಿಗಳನ್ನು ಸಂಪೂರ್ಣವಾಗಿ ಮುಚ್ಚಿಸಿವೆ. ಇಂತಹ ಸಂದರ್ಭದಲ್ಲಿ ಅವರಿಗೆ ಮಾರ್ಗದರ್ಶನ ನೀಡುವ ಬೆಳಕೆಂದರೆ ಬುದ್ಧ. ಅವನ ಜೀವನತತ್ವಗಳನ್ನು ಪ್ರಾಥಮಿಕ ಹಂತದಲ್ಲಿಯೇ ಪಠ್ಯಕ್ರಮದಲ್ಲಿ ಅಳವಡಿಸಬೇಕಾದ ಅಗತ್ಯವಿದೆ. ಹಾಗಿದ್ದರೆ, ಶಿಕ್ಷಕನ ಸ್ಥಾನದಲ್ಲಿ ಬುದ್ಧನನ್ನು ಇರಿಸಿ, ವಿದ್ಯಾರ್ಥಿಗಳು ಏಕಲವ್ಯನಂತೆ ಕಲಿಯಬಹುದಾದ ಜೀವನಪಾಠಗಳೇನು?

ವಿಶೇಷವಾಗಿ ನಮ್ಮ ಕಾಲದ ವಿದ್ಯಾರ್ಥಿಗಳಿಗೆ ಬುದ್ಧ ಕೊಡುವ ಶಿಕ್ಷಣವೆಂದರೆ ವ್ಯಕ್ತಿ ಸ್ವಾತಂತ್ರ್ಯ, ಸಮಾಜಮುಖಿಯಾಗಿ ಬದುಕುವ ಪ್ರಾಮುಖ್ಯ, ಪರಿಸರ ಪ್ರಜ್ಞೆ, ಅನ್ಯಜೀವಿಗಳ ಕುರಿತು ಕಾಳಜಿ, ವರ್ತಮಾನದಲ್ಲಿ ಬದುಕುವ ಕಲೆ, ಸಂವಹನದಲ್ಲಿ ವಿಶ್ವಾಸ, ಹರಿಯುವ ನದಿಯಂತೆ ಮುಂದೆ ಸಾಗುವ ಸ್ಥಿರಚಿತ್ತ, ಸರಳತೆಯ ಮಹತ್ವ, ಮನುಷ್ಯತ್ವದಂತಹ ಅಂಶಗಳನ್ನು ಒಳಗೊಂಡ ಜೀವನ ತತ್ವ.

ನಮ್ಮ ಜೀವನವನ್ನು ನಾವೇ ರೂಪಿಸಬಹುದೆಂಬ ಸರಳ ಸಂದೇಶ ನೀಡಿದ ಬುದ್ಧ. ಅದು, ಬದುಕಿನ ದಾರಿಯನ್ನು ನಾವೇ ಕಂಡುಕೊಳ್ಳುವ, ನುಡಿಗೂ ಮತ್ತು ನಡೆಗೂ ವ್ಯತ್ಯಾಸವಿರದ ಪಾರದರ್ಶಕ ಮಾರ್ಗವಾಗಿತ್ತು. ಬುದ್ಧನ ಶಿಕ್ಷಣಕ್ಕೆ ಎಲ್ಲರಿಗೂ ಮುಕ್ತ ಪ್ರವೇಶವಿತ್ತು. ಇಂದಿನ ವರ್ಗಭೇದ ಶಿಕ್ಷಣ ಸಂಸ್ಥೆಗಳೆದುರು, ಬುದ್ಧನ ಶಿಷ್ಯರಲ್ಲಿ ಎಲ್ಲ ವರ್ಗದವರಿದ್ದುದು ವಿಶೇಷವಾಗಿತ್ತು. ಪ್ರಾಪಂಚಿಕ ಆಡಂಬರಗಳ ಹಂಗು ತೊರೆದು ಅಲ್ಲಿ ಸೇರಿದ ಮೇಲೆ, ತಮ್ಮ ಹಿನ್ನೆಲೆಗಳನ್ನು ಮರೆತು, ಸಹಜವಾಗಿ ಎಲ್ಲರಲ್ಲೂ ಸಮಾನತೆಯ ಭಾವ ಮೂಡುತ್ತಿದ್ದುದು ವಿಶೇಷವಾಗಿತ್ತು.

ಬುದ್ಧ ಉದಾತ್ತವಾದ ಪರಿಸರ ಪ್ರಜ್ಞೆಯನ್ನು ದೈನಂದಿನ ಜೀವನದ ಭಾಗವಾಗಿಸಿಕೊಂಡಿದ್ದ. ಹಿಂಬಾಲಕರಿಗೆ ಅವನ ಉಪದೇಶವೇನೆಂದರೆ- ಮನುಷ್ಯ, ತನ್ನ ಮೂಲಭೂತ ಅಗತ್ಯಗಳ ಪೂರೈಕೆಗಷ್ಟೇ ಪ್ರಕೃತಿಯನ್ನು ಬಳಸಿಕೊಳ್ಳಬೇಕು, ಅನ್ಯಜೀವಿಗಳಿಗೆ ವೃಥಾ ಹಾನಿ ಮಾಡದೇ ಸಹಬಾಳ್ವೆ ನಡೆಸಬೇಕು. ಹೀಗೆ, ಜಗತ್ತಿನ ಎಲ್ಲ ಜೀವಿಗಳಿಗೂ ತನ್ನ ಕಾರುಣ್ಯವನ್ನು ಪಸರಿಸಿದ್ದ. ಕಾಣದ ನರಕ, ಸ್ವರ್ಗ, ಪುನರ್ಜನ್ಮ, ಪಾಪ, ಪುಣ್ಯಗಳ ಕುರಿತು ಹೆಚ್ಚು ತಲೆಕೆಡಿಸಿಕೊಳ್ಳದ ಬುದ್ಧ, ವರ್ತಮಾನದ ವಾಸ್ತವ ಪ್ರಪಂಚದಲ್ಲಿ, ನಾವು ದಿನನಿತ್ಯ ಎದುರಿಸುವ ಎಲ್ಲಾ ಅಡೆತಡೆಗಳನ್ನು ಸಹಜವಾಗಿ ಸ್ವೀಕರಿಸಿ, ಸಮಾಜಮುಖಿಯಾಗಿ ಬದುಕುವುದರಲ್ಲಿ ಹೆಚ್ಚು ನಂಬಿಕೆ ಇಟ್ಟಿದ್ದ.

ಕಲಿಕೆಯ ಆಧಾರಸ್ತಂಭ ಪ್ರಶ್ನಿಸುವುದು ಎಂಬಂತೆ, ಬುದ್ಧನ ಅನ್ವೇಷಣೆಯ ಮೂಲವು ನಿರಂತರವಾಗಿ ಪ್ರಶ್ನಿಸುವುದಾಗಿತ್ತು. ಪ್ರಶ್ನಿಸದೆ ಯಾವುದನ್ನೂ ಯಾರ ಮಾತನ್ನೂ ಒಪ್ಪಿಕೊಳ್ಳಬೇಡಿ ಎಂದು ಕರೆ ನೀಡಿದ. ಬುದ್ಧ ನಂಬಿದ್ದು ನಿರಂತರ ಚಲನೆಯಲ್ಲಿ. ಎಲ್ಲಿಯೂ ನಿಲ್ಲದೆ, ಮನೆಯನೆಂದೂ ಕಟ್ಟದೆ, ಕೊನೆಯನೆಂದೂ ಮುಟ್ಟದೆ ನಡೆಯುತ್ತಲೇ ಹೋದ. ನದಿಯೊಂದು ತಾನು ಸಾಗುವ ದಾರಿಯಲ್ಲಿ ಎದುರಾಗುವ ಎಲ್ಲಾ ಅಡೆತಡೆಗಳನ್ನು ದಾಟಿ, ಗುನುಗುತ್ತಾ ಸಾಗರವ ಸೇರುವಂತೆ ಬುದ್ಧ ನಡೆದ. ಇದು ಇಂದಿನ ವಿದ್ಯಾರ್ಥಿಗಳಿಗೆ ಬಹಳ ಅಗತ್ಯವಾದ ಬೋಧನೆ. ಅತಿಯಾದ ನಿರೀಕ್ಷೆ ಮತ್ತು ಆಸೆಗಳ ಸಮುದ್ರದಲ್ಲಿ ಮುಳುಗೇಳುವ ನಮಗೆ, ಬುದ್ಧ ಆಸರೆಯ ಹುಲ್ಲುಕಡ್ಡಿಯಂತೆ ಗೋಚರಿಸುತ್ತಾನೆ.



ಸರಳ ಜೀವನಕ್ರಮದಲ್ಲಿ ನಂಬಿಕೆಯಿಟ್ಟಿದ್ದ ಬುದ್ಧ, ತಾನು ಬದುಕುಳಿಯಲು ಬೇಕಾದ ಮೂಲಭೂತ ಅಗತ್ಯಗಳ ಪೂರೈಕೆಯ ನಂತರ, ತನ್ನ ಉನ್ನತ ಚಿಂತನೆಗಳಲ್ಲಿ ಉಳಿದ ಸಮಯ ಕಳೆಯುತ್ತಿದ್ದ. ಹೀಗೆ, ತಾನು ಜಗತ್ತಿನಲ್ಲಿ ಕಾಣಬಯಸುವ ಬದಲಾವಣೆಗಳನ್ನು ತನ್ನ ಹುಡುಕಾಟ, ಸ್ವಅಧ್ಯಯನದ ಮೂಲಕ ಅಳವಡಿಸಿಕೊಂಡು, ಬದುಕಿನ ನೋವು ನಲಿವುಗಳ ನಡುವೆ ಮಾನಸಿಕ ಸ್ಥಿಮಿತ ಸಾಧಿಸುವ ಕೌಶಲವನ್ನು ಕಂಡುಕೊಂಡು ಜವಾಬ್ದಾರಿಯುತ ನಾಗರಿಕನಾಗಿ ಬದುಕಿ ವಿಶ್ವಕ್ಕೆ ಮಾದರಿಯಾದ.

ಜಾತಿ, ವರ್ಗ ಮತ್ತು ಧರ್ಮ ಮೀರಿದ ವಿಶ್ವಗುರು ಬುದ್ಧನನ್ನು ಶಿಕ್ಷಕನನ್ನಾಗಿ ಒಪ್ಪಿಕೊಳ್ಳಬೇಕಾದ, ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಬೇಕಾದ ಅಗತ್ಯ ಇಂದಿನ ಶಿಕ್ಷಣ ವ್ಯವಸ್ಥೆಗಿದೆ.

ಲೇಖಕಿ: ಸಹಾಯಕ ಪ್ರಾಧ್ಯಾಪಕಿ
ತುಮಕೂರು ವಿಶ್ವವಿದ್ಯಾಲಯ, ತುಮಕೂರು

ವಾಚಕರ ವಾಣಿ

ಯಾವ ಧರ್ಮವೂ ನಾಶವಾಗದು

'ಸನಾತನ ಧರ್ಮವು ಸಮಾನತೆ, ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ. ಇದು ಕೊರೊನಾ, ಡೆಂಗಿ, ಮಲೇರಿಯಾಕ್ಕೆ ಸಮಾನವಾದುದು' ಎಂಬ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಪುತ್ರ, ಸಚಿವ ಉದಯನಿಧಿ ಸ್ಟಾಲಿನ್ ಅವರ ಮಾತು ಸನಾತನಿಗಳು ಮತ್ತು ಪ್ರಗತಿಪರರೆನ್ನುವವರ ಮಧ್ಯೆ ಸಂಘರ್ಷಕ್ಕೆ ಕಾರಣವಾಗಿದೆ. ಭಾರತದಲ್ಲಿ ಯಾವ ಧರ್ಮವೂ ನಾಶವಾಗಿಲ್ಲ, ನಾಶವಾಗುವುದೂ ಇಲ್ಲ.

ಸನಾತನ ಧರ್ಮದ ಪರ ಮಾತನಾಡುವವರು ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ರಮಣ ಮಹರ್ಷಿಯಂತಹವರ ಉದಾತ್ತ ವಿಚಾರಗಳನ್ನು ಅನುಸರಿಸಲಿ. ಸನಾತನ ಧರ್ಮ ಪಾಲಿಸದವರು ಇತರ ಧರ್ಮಗಳ ಮಾನವೀಯ ಮೌಲ್ಯಗಳನ್ನು ಪಾಲಿಸಲಿ. 'ಒಬ್ಬ ಪರಿಪೂರ್ಣ ಹಿಂದೂ ಒಬ್ಬ ಪರಿಪೂರ್ಣ ಕ್ರೈಸ್ತ ಸಹ ಆಗಿರುತ್ತಾನೆ' ಎಂಬ ನುಡಿಯನ್ನು ಎಲ್ಲರೂ ನೆನಪಿಡಬೇಕು. ರಾಜಕಾರಣಿಗಳು ಅಧಿಕಾರಕ್ಕಾಗಿ ಮನಸ್ಸಿಗೆ ಬಂದಂತೆ ಹೇಳಿಕೆ ನೀಡಿ ಮುಗ್ಧ ಜನರ ನಡುವೆ ದ್ವೇಷ ಬಿತ್ತುವುದು ಬೇಡ. ಪರಧರ್ಮ ಸಹಿಷ್ಣುತೆ ಇಂದಿನ ತುರ್ತು ಅಗತ್ಯ.

ಶಿವಕುಮಾರ ಬಂಡೋಳಿ, ಹುಣಸಗಿ

ಶಿಕ್ಷಕರಿವರು, ಅಪ್ಪನಂಥವರು...!

ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳಿಗೆ ಕಲಿಸಲು ಪುರುಷರಿಗಿಂತ ಮಹಿಳೆಯರೇ ಹೆಚ್ಚು ಸೂಕ್ತ ಎಂಬ ಸದಾಶಿವ್ ಸೊರಟೂರು ಅವರ ಲೇಖನದಲ್ಲಿನ (ಸಂಗತ, ಸೆ. 4) ಆಶಯ ಸರಿಯಾಗಿದೆ. ಆದರೆ ಇದು ನಮ್ಮ ಶಾಲೆಯಲ್ಲಿ ಇದ್ದ ವಾತಾವರಣಕ್ಕೆ ತದ್ವಿರುದ್ಧವೆಂಬಂತೆ ಇದೆ. ಅದು 2002- 08ರ ಅವಧಿ. ಒಂದರಿಂದ ಏಳನೇ ತರಗತಿಯಲ್ಲಿ ನಾವು ಓದುತ್ತಿದ್ದೆವು. ಅಂದು ನಮ್ಮ ಶಾಲೆಯಲ್ಲಿ ಕೆಲವು ಶಿಕ್ಷಕಿಯರಿದ್ದರು. ಇವರನ್ನೆಲ್ಲ ಮೀರಿ ಮಕ್ಕಳಿಗೆ ಇಷ್ಟವಾಗುತ್ತಿದ್ದುದು ಡಿ.ಎಫ್. ಈರಗಾರ್ ಎಂಬ ಶಿಕ್ಷಕ. ಅವರ ಮುಗ್ಧ ಮಾತು, ಶಿಕ್ಷಿಸುವ ಶೈಲಿ, ಪಾಲಕರೊಂದಿಗೆ ಮಾತನಾಡುತ್ತಿದ್ದ ಪರಿ, ಹೋಂವರ್ಕ್ ಕೊಡುತ್ತಿದ್ದ ರೀತಿ, ತಂದ ಊಟದ ಡಬ್ಬಿಯನ್ನು ಹಂಚಿ ತಿನ್ನುತ್ತಿದ್ದ ಗುಣ, ಎಲ್ಲರೂ ನನ್ನ ಮಕ್ಕಳು ಎಂಬಂತೆ ಅಪ್ಪಿಕೊಂಡು, ಆಗಾಗ ಹಣದ ಸಹಾಯವನ್ನೂ ಮಾಡುತ್ತಿದ್ದ ಅವರು ನಮಗೆ ಇಂದಿಗೂ ಅಚ್ಚುಮೆಚ್ಚು. ಹಾಗೆಂದು ಉಳಿದ ಶಿಕ್ಷಕರು ಯಾವ ಮಕ್ಕಳನ್ನೂ ಕಡೆಗಣನೆ ಮಾಡುತ್ತಿರಲಿಲ್ಲ.

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ

ಗುರವೇ ನಮಃ

ಡಾ. ರಾಧಾಕೃಷ್ಣನ್‌ರ
ಜನ್ಮದಿನ ಇಂದು
ಅರ್ಥಾತ್ ಶಿಕ್ಷಕರ ದಿನ,
ಹೇಳೋಣ...
ಶ್ರೀ ಗುರವೇ ನಮಃ
ಅನಿಸದಿರಲಿ ಎಂದಿಗೂ
ಗುರು ಏನ್ ಮಹಾ...!

ಮ.ಗು.ಬಸವಣ್ಣ
ನಂಜನಗೂಡು

ಪಡಿತರ ಚೀಟಿ ತಿದ್ದುಪಡಿ: ಗಡುವು ವಿಸ್ತರಿಸಿ

ರಾಜ್ಯ ಸರ್ಕಾರದ ಅನ್ನಭಾಗ್ಯ, ಗೃಹಲಕ್ಷ್ಮಿಯಂತಹ ಮಹತ್ವಾಕಾಂಕ್ಷಿ ಯೋಜನೆಗಳಿಗೆ ಪಡಿತರ ಚೀಟಿ ಕಡ್ಡಾಯ ಮಾಡಿರುವುದರಿಂದ, ಇದೇ ಹತ್ತರವರೆಗೆ ಪಡಿತರ ಚೀಟಿ ತಿದ್ದುಪಡಿ ಮಾಡಲು ಅವಕಾಶ ನೀಡಲಾಗಿದೆ. ಆದರೆ ತಿದ್ದುಪಡಿ ಪ್ರಾರಂಭವಾದ ದಿನದಿಂದಲೂ ಸರ್ವರ್ ಸಮಸ್ಯೆ ತುಂಬಾ ಕಾಡುತ್ತಿದೆ. ಯಾವುದೇ ಸೇವಾ ಸಿಂಧು ಕೇಂದ್ರಕ್ಕೆ ಹೋದರೂ, 'ಸರ್ವರ್ ಇಲ್ಲ ಸರ್', ತಡವಾಗುತ್ತೆ. ದಿನಕ್ಕೆ ಎರಡು ಅಥವಾ ಮೂರು ತಿದ್ದುಪಡಿಗಳನ್ನು ಮಾಡಿದರೆ ಹೆಚ್ಚು. 5-10 ನಿಮಿಷದಲ್ಲಿ ಮುಗಿಯುವಂತಹ ತಿದ್ದುಪಡಿ ಕೆಲಸ ಸರ್ವರ್ ಸಮಸ್ಯೆಯಿಂದ ಒಂದೂವರೆಯಿಂದ ಎರಡು ಗಂಟೆಯವರೆಗೂ ಹಿಡಿಯುತ್ತಿದೆ. ಕೆಲವೊಮ್ಮೆ ಅದೂ ಇಲ್ಲ' ಎನ್ನುತ್ತಾರೆ.

ಜನಸಾಮಾನ್ಯರು ಕೆಲಸಕ್ಕೆ ರಜೆ ಹಾಕಿ ದಿನಪೂರ್ತಿ ಸೇವಾ ಕೇಂದ್ರಗಳಲ್ಲಿಯೇ ಕಾಯುವಂತಹ ಸ್ಥಿತಿ ನಿರ್ಮಾಣವಾಗಿದೆ. ಸರ್ಕಾರವು ಪಡಿತರ ತಿದ್ದುಪಡಿಗೆ ನೀಡಿರುವ ಗಡುವನ್ನು ವಿಸ್ತರಿಸುವುದರ ಜೊತೆಗೆ ಸರ್ವರ್ ಸಮಸ್ಯೆಯನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

ನೊಂದವರ ಇನ್ನಷ್ಟು ನೋಯಿಸದಿರಿ

'ನಾನು ಆಪರೇಷನ್‌ಗೆ ಒಳಗಾಗಲು ನನಗೆ ಕ್ಯಾನ್ಸರ್ ಇಲ್ಲ ಮತ್ತು ಯಾವುದೇ ಗಡ್ಡೆಯೂ ಇಲ್ಲ. ಹೀಗಾಗಿ ಕಾಂಗ್ರೆಸ್‌ನ ಆಪರೇಷನ್‌ಗೆ ಒಳಗಾಗುವುದಿಲ್ಲ' ಎಂದು ಮಾಜಿ ಶಾಸಕ ರಾಜೂಗೌಡ ಅವರು ಹೇಳಿರುವುದನ್ನು (ಪ್ರ.ವಾ., ಸೆ. 4) ಓದಿ ಬಹಳ ಬೇಸರವಾಯಿತು. ಇವರಿಗೆ ಕ್ಯಾನ್ಸರ್ ಕಾಯಿಲೆಯ ಬಗ್ಗೆ ಮಾಹಿತಿಯಾಗಲೀ ಕ್ಯಾನ್ಸರ್ ರೋಗಿಗಳನ್ನು ಮುಖಾಮುಖಿಯಾಗಿ ನೋಡಿರುವ ಅನುಭವವಾಗಲೀ ಇಲ್ಲ ಎನಿಸುತ್ತದೆ. ಇವರ ರಾಜಕೀಯದ ಆಪರೇಷನ್ ಅನ್ನು ರೋಗದ ಆಪರೇಷನ್‌ಗೆ ಅದರಲ್ಲೂ ಕ್ಯಾನ್ಸರ್‌ನಂತಹ ಪ್ರಮುಖ ಕಾಯಿಲೆಯ ಆಪರೇಷನ್‌ಗೆ ಹೋಲಿಸಿರುವುದು ಎಷ್ಟು ಸರಿ?

ಇವರು ಕ್ಯಾನ್ಸರ್ ಆಸ್ಪತ್ರೆಗೆ ಭೇಟಿ ನೀಡಿ, ರೋಗಿಗಳನ್ನು ಮುಖತಃ ಭೇಟಿ ಮಾಡಿ, ಆ ಕಾಯಿಲೆಯ ಬಗ್ಗೆ ಸೂಕ್ತ ಮಾಹಿತಿ ಪಡೆದುಕೊಳ್ಳಲಿ. ಆಗ ಕ್ಯಾನ್ಸರ್ ಎಂಬ ಪದ ಕೇಳಿದರೆ ಅವರು ಬೆಚ್ಚಿ ಬೀಳಬಹುದು. ಮಾತನಾಡುವ ಭರದಲ್ಲಿ ನೊಂದವರನ್ನು ಇನ್ನೂ ನೋಯಿಸುವುದು ಬೇಡ.

ಸು.ವಿಜಯಲಕ್ಷ್ಮಿ, ಶಿವಮೊಗ್ಗ

ಲೈಂಗಿಕ ಅಲ್ಪಸಂಖ್ಯಾತರ ಕಲ್ಯಾಣ ಆದ್ಯತೆಯಾಗಲಿ

ಸಮಾರಂಭಗಳು, ಬಸ್ ನಿಲ್ದಾಣದಂತಹ ಸ್ಥಳಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತರಿಂದ ಜನರಿಗೆ ಆಗುತ್ತಿರುವ ತೊಂದರೆಯ ಕುರಿತು ಬೂಕನಕೆರೆ ವಿಜೇಂದ್ರ ಪ್ರಸ್ತಾಪಿಸಿದ್ದಾರೆ (ವಾ.ವಾ., ಸೆ. 4). ಇಂತಹವರಿಗೆ ಶಾಶ್ವತ ನೆಲೆ ಕಲ್ಪಿಸುವುದು ಸರ್ಕಾರ ಮತ್ತು ಸಮಾಜದ ಕರ್ತವ್ಯವಾಗಿದೆ. ಸರ್ಕಾರಿ ಉದ್ಯೋಗಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತರಿಗೆ ಕಲ್ಪಿಸಿರುವ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಬೇಕು. ಅವರ ಕುರಿತು ಸಮಾಜದಲ್ಲಿರುವ ಕೀಳು ಭಾವನೆಯನ್ನು ಹೋಗಲಾಡಿಸಲು ಜನರಲ್ಲಿ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಪ್ರಾಥಮಿಕ ಶಾಲಾ ಹಂತದ ಪಠ್ಯಪುಸ್ತಕಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಕುರಿತಾದ ಪಠ್ಯವನ್ನು ಮಕ್ಕಳಿಗೆ ಬೋಧಿಸಬೇಕು.

ಸಮಾಜದಲ್ಲಿ ಸಾಧನೆ ಮಾಡಿದ ಲೈಂಗಿಕ ಅಲ್ಪಸಂಖ್ಯಾತರ ಬಗ್ಗೆ ಜನರಿಗೆ ತಿಳಿಯುವಂತೆ ಮಾಡಬೇಕು. ಇದಕ್ಕಿಂತ ಹೆಚ್ಚಾಗಿ ಅವರು ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವ ಜವಾಬ್ದಾರಿ ಸರ್ಕಾರದ್ದಾಗಿದೆ. ರಾಜ್ಯ ಮತ್ತು ಕೇಂದ್ರ ಬಜೆಟ್‌ನಲ್ಲಿ ಪ್ರತಿವರ್ಷ ಲೈಂಗಿಕ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಹಣವನ್ನು ಮೀಸಲಿಡಬೇಕು.

ರಾಸುಮ ಭಟ್, ಚಿಕ್ಕಮಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆಯ ಕನ್ನಡ ಶಿಕ್ಷಕ ನಾರಾಯಣ ಭಾಗ್ವತ್ ಹಾಗೂ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದ ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕಿ ಸಪ್ನಾ ಶ್ರೀಶೈಲ ಅನಿಗೋಳ ಅವರು ಕೇಂದ್ರ ಶಿಕ್ಷಣ ಸಚಿವಾಲಯದ **'ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ'** ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಅವರು ತಮ್ಮ ವೃತ್ತಿಜೀವನದ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ

ಕಲೆ ಮೂಲಕ ಜೀವನಕಲೆಯ ಪಾಠ

• ನಾರಾಯಣ ಭಾಗ್ವತ್

ಬಾಲ್ಯವನ್ನು ಕಡು ಬಡತನದಿಂದಲೇ ಕಳೆದಿದ್ದೆ. ಈಗಲೂ ಶಾಲೆಯಲ್ಲಿ ಮಕ್ಕಳೊಂದಿಗೆ ಕಳೆಯುವಾಗ ನನಗೆ ಬಾಲ್ಯದ ದಿನಗಳು ಪದೇ ಪದೇ ನೆನಪಾಗುತ್ತವೆ. ನನ್ನಿಂದ ಕಲಿತ ಬಡ ಮಕ್ಕಳು ವಿಶಿಷ್ಟವಾದ ಸಾಧನೆ ಮಾಡಿದರೆ, ಅದಕ್ಕಿಂತ ದೊಡ್ಡ ಪ್ರಶಸ್ತಿ ಬೇರೆಯಿಲ್ಲ ಎಂಬ ಭಾವನೆ ನನ್ನದು. ವೃತ್ತಿ ಜೀವನದಲ್ಲಿ ನನಗೆ ಅಂತಹ ನೂರಾರು ಪ್ರಶಸ್ತಿಗಳು ಸಂದಿವೆ.

ಮಕ್ಕಳಿಗೆ ಪಾಠ ಮಾಡುವುದಷ್ಟೇ ನನ್ನ ಕೆಲಸವಲ್ಲ ಮತ್ತು ಹಾಗೆಂದು ನಾನು ಭಾವಿಸಿಯೂ ಇಲ್ಲ. ಮಕ್ಕಳಲ್ಲಿ ಇರುವ ಪ್ರತಿಭೆ ಗುರುತಿಸಿ, ಅದನ್ನು ಬೆಳಕಿಗೆ ತರುವುದೇ ಕಾಯಕ ಎಂಬ ಭಾವನೆ ನನ್ನದು. ಪುಸ್ತಕ ಮತ್ತು ಶಾಲಾ ಕೊಠಡಿ ಹೊರಗಡೆ ಚೆಂದದ ಜಗತ್ತಿದೆ ಎಂಬುದನ್ನು ಮಕ್ಕಳಿಗೆ ತೋರಿಸಿಕೊಡಲು ಪ್ರಯತ್ನಿಸುತ್ತೇನೆ. ರಂಗಭೂಮಿ, ಸಾಹಿತ್ಯ, ಸಂಗೀತ, ಚಿತ್ರಕಲೆ ಹೀಗೆ ವಿವಿಧ ಕಲಾ ಪ್ರಕಾರಗಳನ್ನು ಅವರಿಗೆ ಮನದಟ್ಟು ಮಾಡಿ, ಆಸಕ್ತಿ ಮೂಡಿಸುತ್ತೇನೆ.

ನಾನು ಶಿಕ್ಷಕ ಆಗಬೇಕು ಎಂಬ ಹಂಬಲ ಬಾಲ್ಯದಲ್ಲೇ ಚಿಗುರಿತ್ತು. ಅಪ್ಪ ಸಣ್ಣ ಚಹಾ ಅಂಗಡಿ ನಡೆಸುತ್ತಿದ್ದರು. ಆದಾಯಕ್ಕಿಂತ ಸಾಲವೇ ಹೆಚ್ಚಿತ್ತು. ಇಷ್ಟೆಲ್ಲದರ ಮಧ್ಯೆಯೂ ಹಿರಿಯ ಅಣ್ಣ ಜಿ.ಪಿ. ಭಾಗ್ವತ್ ನನ್ನನ್ನು ಓದಿಸಿದರು. 1990ರಲ್ಲಿ ನನ್ನ ಕನಸು ಸಾಕಾರಗೊಂಡಿತು. ಪ್ರಾಥಮಿಕ ಶಾಲೆಯ ಶಿಕ್ಷಕನಾಗಿ ಮುಂಡಗೋಡ ತಾಲ್ಲೂಕಿನ ಕೊಳಗಿ ಶಾಲೆಯಲ್ಲಿ ವೃತ್ತಿ ಜೀವನ ಆರಂಭಿಸಿದೆ.

ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುವಾಗ ಬಿ.ಇಡಿ ಪದವಿ ಪಡೆಯಲು ನಿರ್ಧರಿಸಿದೆ. ಆಗ ಎರಡು ವರ್ಷ ಸಂಬಳರಹಿತ ರಜೆ ಪಡೆದೆ. ಪತ್ನಿ ಮಹಾದೇವಿ ಹೆಗಡೆ ಕೂಡ ಶಿಕ್ಷಕಿಯಾಗಿದ್ದರು. ಅವರ ವೇತನವು ನನ್ನ ಓದಿಗೆ ನೆರವಾಯಿತು. 1998ರಲ್ಲಿ ನೇರ ನೇಮಕಾತಿ ಮೂಲಕ ರಾಯಭಾಗ ಪ್ರೌಢಶಾಲೆಗೆ ಸೇರಿದೆ. ಖಾನಾಪುರದಲ್ಲಿ ಶಿಕ್ಷಣ ಸಂಯೋಜಕನಾಗಿ ನೇಮಕಗೊಂಡೆ. ಆದರೆ, ಮಕ್ಕಳಿಗೆ ಪಾಠ ಮಾಡುವುದು ನನ್ನ ಗುರಿಯಾಗಿತ್ತು. ಅದಕ್ಕೆ ಒಂದೇ ವರ್ಷಕ್ಕೆ ಸಂಯೋಜಕ ಹುದ್ದೆ ತೊರೆದು ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಶಾಲೆಯಲ್ಲಿ ಮರಳಿ ಶಿಕ್ಷಕನಾದೆ.

ರಂಗಭೂಮಿ ನನ್ನ ಆಸಕ್ತಿಯ ಕ್ಷೇತ್ರ. ಶಿಕ್ಷಕನಾದರೂ ರಂಗಭೂಮಿ ಜೊತೆಗಿನ ನಂಟು ಬಿಟ್ಟಿಲ್ಲ. 1998-99ರಲ್ಲಿ ಕಾರ್ಗಿಲ್ ಯುದ್ಧ ನಡೆಯುತಿತ್ತು. ಎಲ್ಲೆಲ್ಲೂ ಯುದ್ಧದ್ದೇ ಮಾತು. ಆಗ ನಾನು ಕೆಲಸ ಮಾಡುತ್ತಿದ್ದ ಬೆಳಗಾವಿ ಜಿಲ್ಲೆಯ ರಾಯಭಾಗದ ಸರ್ಕಾರಿ ಶಾಲೆಯ ಮಕ್ಕಳಿಗೆ ಕಾರ್ಗಿಲ್ ಕಥನ ಆಧರಿಸಿ ನಾಟಕ ತರಬೇತಿ ನೀಡಿದೆ. ನಾಟಕವು ರಾಜ್ಯಮಟ್ಟದಲ್ಲಿ ಮೊದಲ ಬಹುಮಾನ ಗಳಿಸಿತು. ಇದು ಜೀವನಕ್ಕೆ ಇನ್ನೊಂದು ತಿರುವು ಕೊಟ್ಟಿತು.

'ನಾನೂ ಗಾಂಧಿ ಆಗ್ತೇನೆ' ಎಂಬ ನಾಟಕಕ್ಕೆ ರಾಜ್ಯಮಟ್ಟದ ಪ್ರಶಸ್ತಿ ಜತೆಗೆ, ಉತ್ತಮ ನಿರ್ದೇಶಕ ಪ್ರಶಸ್ತಿಯೂ ಲಭಿಸಿತು. ಮುಂಡಗೋಡ ತಾಲ್ಲೂಕಿನ ಮಳಗಿ ಶಾಲೆಯಲ್ಲಿದ್ದಾಗ ಸಮಾನ ಮನಸ್ಕ ಶಿಕ್ಷಕರ ಜೊತೆ ಸೇರಿ 'ಗುರು ಬಳಗ' ಹೆಸರಿನ ರಂಗಕರ್ಮಿಗಳ ತಂಡ ಕಟ್ಟಿದೆ. ದಾನಿಗಳ ನೆರವಿನಿಂದ ರಂಗ ಪರಿಕರಗಳನ್ನು ಸಂಗ್ರಹಿಸಲು ಸಾಧ್ಯವಾಯಿತು. ಸಾಮಾಜಿಕ ಜಾಗೃತಿ ಮೂಡಿಸುವ ನಾಟಕ ಪ್ರದರ್ಶಿಸುವುದು ಹವ್ಯಾಸವಾಯಿತು.

ದಾನಿಗಳ ನೆರವು ಪಡೆದು ಶಿರಸಿಯ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆಯಲ್ಲಿ ಇ–ಕಲಿಕಾ ತರಗತಿ ರಚಿಸಿಕೊಂಡಿದ್ದೇನೆ. ಸಾಹಿತಿಗಳ, ಸಾಹಿತ್ಯ ಮತ್ತು ಅದಕ್ಕೆ ಪೂರಕವಾದ ಚಟುವಟಿಕೆಗಳ ಕುರಿತು ಮಕ್ಕಳಿಗೆ ವಿಡಿಯೊದ ಮೂಲಕ ಪಾಠ ಮಾಡುತ್ತೇನೆ. ಪ್ರತಿ ತರಗತಿ ಮುಗಿದ ಬಳಿಕ 'ಕನ್ನಡದ ಕೋಟ್ಯಧಿಪತಿ' ಮಾದರಿಯಲ್ಲಿ ರಸಪ್ರಶ್ನೆ ಆಯೋಜಿಸುತ್ತೇನೆ.

ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ ಕನ್ನಡ ಪರಿಣಾಮಕಾರಿಯಾಗಿ ಕಲಿಸುವುದು ನನ್ನ ಗುರಿ. ಅದಕ್ಕಾಗಿ, ಪ್ರತಿ ತರಗತಿಯಲ್ಲಿ ಕನಿಷ್ಠ ಎರಡು ಹೊಸ ಕನ್ನಡ ಪದಗಳನ್ನು ಕಲಿಸುತ್ತೇನೆ. ಗೋಡೆ ಬರಹದ ತಿಂಗಳ ಪತ್ರಿಕೆಯನ್ನು 8 ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಂದ ಕನ್ನಡದಲ್ಲಿ ರಚಿಸುವಂತೆ ಮಾಡಿದ್ದೇನೆ.

ನಿರೂಪಣೆ: ಗಣಪತಿ ಹೆಗಡೆ, ಕಾರವಾರ

ಶಿರಸಿಯ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಭಾಷಾ ವಿಷಯದ ತರಗತಿ ನಡೆಸುತ್ತಿರುವ ನಾರಾಯಣ ಭಾಗ್ವತ್

> **ಸರಳ ರೀತಿ ಪಾಠ ಬೋಧಿಸುವುದರ ಜೊತೆಗೆ ಬದುಕಿನ ಮಹತ್ವವನ್ನು ತಿಳಿಸುವ ನಾರಾಯಣ ಸರ್ ಅಪರೂಪದ ಮೇಷ್ಟ್ರು. ಅವರು ನಮ್ಮ ಪಾಲಿಗೆ ದೇವರು ಕೊಟ್ಟ ಉಡುಗೊರೆ**
> **ರಕ್ಷಾ ದಿನೇಶ್ ಹೆಗಡೆ,** ವಿದ್ಯಾರ್ಥಿನಿ

> **ಕನ್ನಡ ಕಲಿಕೆ ಜೊತೆ ನಾಟಕ, ಸಂಗೀತವನ್ನು ಆಸಕ್ತಿಯಿಂದ ಕಲಿಸುವ ನಾರಾಯಣ ಸರ್ ನಮ್ಮ ಪಾಲಿನ ಹೆಮ್ಮೆಯ ಮೇಷ್ಟ್ರು. ಅವರಿಗೆ ರಾಷ್ಟ್ರಮಟ್ಟದ ಪ್ರಶಸ್ತಿ ಸಿಕ್ಕಿದ್ದು ಖುಷಿ ಕೊಟ್ಟಿದೆ**
> **ದರ್ಶನ್ ಎಸ್.ಭಟ್ಟ,** ವಿದ್ಯಾರ್ಥಿ

ವಿಜ್ಞಾನ ಕಲಿಸುತ್ತಾ ಮೌಢ್ಯ ಅಳಿಸುತ್ತಾ...

• ಸಪ್ನಾ ಅನಿಗೋಳ

ಮಕ್ಕಳಿಗೆ ಪಾಠ ಮಾಡುವುದು ಪ್ರತಿಯೊಬ್ಬ ಶಿಕ್ಷಕ ಮತ್ತು ಶಿಕ್ಷಕಿಯ ಕರ್ತವ್ಯ. ಆದರೆ, ಅದು ಸಾರ್ಥಕವಾಗುವುದು ಮಕ್ಕಳಿಗೆ ಪಾಠವು ಸರಳವಾಗಿ ಮತ್ತು ಸುಲಭವಾಗಿ ಮನನವಾದಾಗ. ಶಾಲೆ ಮತ್ತು ಮನೆಯಲ್ಲಿ ಪುಸ್ತಕಗಳನ್ನು ಓದಿದಾಗ, ಮಕ್ಕಳಿಗೆ ಸಹಜವಾಗಿ ಜ್ಞಾನ ವೃದ್ಧಿಸುತ್ತದೆ. ಆದರೆ, ಪರಿಸರ ಕಾಳಜಿ ಎಂಬುದು ತರಗತಿ ಚಟುವಟಿಕೆಯ ಜೊತೆಗೆ ದೈನಂದಿನ ಆಸಕ್ತಿ ಮತ್ತು ಬದ್ಧತೆ ಆಗಬೇಕು.

ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತು ಆಸಕ್ತಿ ಮೂಡಿಸುವುದರ ಜೊತೆಗೆ ಮೂಢನಂಬಿಕೆಯ ವಿರುದ್ಧ ಜಾಗೃತ ಮನೋಭಾವ ಬೆಳೆಸಬೇಕು ಎಂಬ ಆಶಯ ನನ್ನದು. ಬಾಲ್ಯದ ದಿನಗಳಲ್ಲೇ ಈ ಎಲ್ಲಾ ಸಂಗತಿಗಳು ಅರಿವಾದರೆ, ದೊಡ್ಡವರಾದ ಬಳಿಕ ಸಮಾಜದ ಬಗ್ಗೆ ಸ್ಪಷ್ಟ ಪರಿಕಲ್ಪನೆ ಸಿಗುತ್ತದೆ. ನನ್ನ ವೃತ್ತಿ ಜೀವನದ ಪರಮಗುರಿಯೇ ಇದು.

ಮಹಾಲಿಂಗಪುರದ ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆಯಲ್ಲಿ 19 ವರ್ಷಗಳಿಂದ ವಿಜ್ಞಾನದ ಶಿಕ್ಷಕಿಯಾಗಿರುವ ನಾನು ಮಕ್ಕಳಿಗೆ ಸರಳವಾಗಿ ಪಾಠ ಬೋಧಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತೇನೆ. ಪರಿಸರ ಪ್ರಜ್ಞೆ ಬೆಳೆಸಲು ಪ್ರಾಶಸ್ತ್ಯ ನೀಡುತ್ತೇನೆ. ಸಸಿ ನೆಡುವುದು, ಕಾಳಜಿಯಿಂದ ಬೆಳೆಸುವುದು, ಕಾಡು ರಕ್ಷಿಸುವುದು ಮತ್ತು ಸುತ್ತಲ ಪರಿಸರವನ್ನು ಶುಚಿಯಾಗಿ ಇಟ್ಟುಕೊಳ್ಳುವುದರ ಬಗ್ಗೆ ಪ್ರತಿದಿನವೂ ಪಾಠದ ಜೊತೆ ತಿಳಿ ಹೇಳುತ್ತೇನೆ.

ಮಕ್ಕಳ ಪರಿಸರ ಪ್ರೇಮದಿಂದಲೇ ಶಾಲೆಯು ಎರಡು ಬಾರಿ ಪರಿಸರ ಮಿತ್ರ ಪ್ರಶಸ್ತಿ, ರಾಜ್ಯ ಪ್ರಶಸ್ತಿ ಗಳಿಸಿದೆ. ಮಹಾಲಿಂಗಪುರದಲ್ಲಿ ಸ್ವಚ್ಛತೆಯ ರಾಯಭಾರಿಗಳಂತೆ ಮಕ್ಕಳು ಕಾರ್ಯ ನಿರ್ವಹಿಸಿದ್ದಾರೆ. ಮಕ್ಕಳಿಗೆ ವಿಜ್ಞಾನ ಪ್ರಯೋಗಗಳನ್ನು ಮಾಡಿಸುತ್ತೇನೆ. ಮಕ್ಕಳು ಮಾಡಿದ ಪ್ರಯೋಗಗಳು ಎಲ್ಲರ ಮೆಚ್ಚುಗೆ ಗಳಿಸಿವೆ, ಅಲ್ಲದೇ ರಾಷ್ಟ್ರಮಟ್ಟದಲ್ಲಿ ಇನ್‌ಸ್ಪೈಯರ್ ಪ್ರಶಸ್ತಿ ಕೂಡ ಗಳಿಸಿವೆ.

ನಾನು ಶಾಲೆ ಕಲಿಯುವ ಸಂದರ್ಭದಲ್ಲಿ ಪತ್ರಿಕೆ, ಟಿವಿ ಮತ್ತು ರೇಡಿಯೊ ಹೊರತುಪಡಿಸಿ ಬೇರಾವ ಸಮೂಹ ಮಾಧ್ಯಮಗಳಿರಲಿಲ್ಲ. ಎಷ್ಟೋ ಸಲ ಸುದ್ದಿಗಳು ತಡವಾಗಿ ಗೊತ್ತಾಗುತಿತ್ತು. ಪ್ರಮುಖ ವಿಷಯಗಳನ್ನು ತಿಳಿದುಕೊಳ್ಳಲು ಚಡಪಡಿಸುತ್ತಿದ್ದೆ. ಆದರೆ, ಈಗಿನ ಮಕ್ಕಳಿಗೆ ಇಂಟರ್‌ನೆಟ್ ಇದೆ. ಬೇಕಾದ ಮಾಹಿತಿಯನ್ನು ಮೊಬೈಲ್‌ನಲ್ಲಿ ಟೈಪಿಸಿದರೆ ಸಾಕು, ಕ್ಷಣಮಾತ್ರದಲ್ಲಿ ಎಲ್ಲವೂ ಸಿಕ್ಕಿಬಿಡುತ್ತದೆ. ಆದ್ದರಿಂದ, ಮೊಬೈಲ್ ಮತ್ತು ಕಂಪ್ಯೂಟರ್‌ನಲ್ಲಿ ಇಲ್ಲಸಲ್ಲದ ವಿಷಯಗಳನ್ನು ನೋಡುತ್ತ ಕಾಲವ್ಯಯ ಮಾಡುವ ಬದಲು ಜ್ಞಾನ ವೃದ್ಧಿಸಿಕೊಳ್ಳಲು ತಿಳಿಸುತ್ತೇನೆ. ಸ್ಮಾರ್ಟ್ ಕ್ಲಾಸ್, ಶೈಕ್ಷಣಿಕ ಆ್ಯಪ್, ಕಂಪ್ಯೂಟರ್, ಪ್ರಯೋಗಾಲಯಗಳನ್ನು ಬಳಸಿಕೊಂಡು ಪಾಠ ಮಾಡುತ್ತೇನೆ.

ಸಂಕಷ್ಟ ತೋಡಿಕೊಂಡಾಗ, ಪೋಷಕರಿಗೆ ಹಣವನ್ನು ನೀಡಿ ಮಕ್ಕಳು ಶಾಲೆಗೆ ಬರುವಂತೆ ನೋಡಿಕೊಂಡ ಸಮಾಧಾನವಿದೆ. ಎಷ್ಟೋ ಸಲ ಮಕ್ಕಳು ಶಾಲೆಗೆ ಬಾರದಿದ್ದಾಗ, ಅವರನ್ನು ಮನೆಯವರೆಗೆ ಹುಡುಕಿಕೊಂಡು ಹೋಗಿ ಕರೆದುಕೊಂಡ ಬಂದ ಸಂತೃಪ್ತಿಯಿದೆ.

ಭಾರತೀಯ ಸ್ಕೌಟ್ಸ್ ಮತ್ತು ಗೈಡ್ಸ್ ಕ್ಯಾಪ್ಟನ್ ಆಗಿ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಮೂಡಿಸಿದ್ದೇನೆ. 28 ವಿದ್ಯಾರ್ಥಿಗಳು ಗವರ್ನರ್ ಪ್ರಶಸ್ತಿ ಪಡೆದಿದ್ದಾರೆ. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವ ದಿಸೆಯಲ್ಲಿ ಬಟ್ಟೆ ಚೀಲಗಳನ್ನು ತಯಾರಿಸುವ ಬಗ್ಗೆ ತರಬೇತಿ ನೀಡಿದ್ದೇನೆ. ಗಣೇಶನ ಹಬ್ಬದಲ್ಲಿ ಅರಿಸಿನ ಮತ್ತು ಮಣ್ಣಿನ ಗಣಪ ತಯಾರಿಸಿ ನೆರೆಹೊರೆಯವರಿಗೆ ಹಂಚಿರುವ ನಿದರ್ಶನಗಳಿವೆ. ಇದಕ್ಕೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮೆಚ್ಚುಗೆ ವ್ಯಕ್ತವಾಗಿದೆ.

ನಿರೂಪಣೆ: ಮಹೇಶ ಮನ್ನಯ್ಯನವರಮಠ, ಮಹಾಲಿಂಗಪುರ

ವಿದ್ಯಾರ್ಥಿಗಳೊಂದಿಗೆ ಶಿಕ್ಷಕಿ ಸಪ್ನಾ ಅನಿಗೋಳ.

> **ಸಪ್ನಾ ಮೇಡಂ ನೀಡಿದ ಮಾರ್ಗದರ್ಶನದಿಂದ ಎಸ್‌ಎಸ್‌ಎಲ್‌ಸಿಯಲ್ಲಿ ಶೇ 98.27ರಷ್ಟು ಅಂಕ ಪಡೆದೆ. ಅವರ ಪ್ರೋತ್ಸಾಹ, ಆರ್ಥಿಕ ನೆರವಿನಿಂದ ದಾವಣಗೆರೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಪಿಯುಸಿ ಓದುತ್ತಿದ್ದೇನೆ**
> **ಲಕ್ಷ್ಮಿ ಬಂಡಿ,** ವಿದ್ಯಾರ್ಥಿನಿ

> **ಸಪ್ನಾ ಮೇಡಂ ಎಂದರೆ ನಮಗೆ ಹೆಮ್ಮೆ. ಅವರ ಪ್ರೀತಿ, ಕಾಳಜಿ ಹಾಗೂ ಕಲಿಸುವ ರೀತಿ ನಮಗೆ ಅಚ್ಚುಮೆಚ್ಚು. ಪ್ಲಾಸ್ಟಿಕ್ ಬಳಸಬಾರದು ಎಂಬ ಬಗ್ಗೆ ಅರಿವು ಮೂಡಿಸುವ ಮೂಲಕ ಪರಿಸರ ರಕ್ಷಣೆಯ ಜಾಗೃತಿ ಮೂಡಿಸಿದ್ದಾರೆ**
> **ಕಾವೇರಿ ದಲಾಲ,** ವಿದ್ಯಾರ್ಥಿನಿ

ಸಿನಿ ಬಿಟ್ಸ್

'ನಗುವಿನ ಹೂ'ಗಳಾದ ಅಭಿದಾಸ್–ಶರಣ್ಯ

'1980', 'ರವಿ ಬೋಪಣ್ಣ', 'ಪೆಂಟಗನ್' ಹೀಗೆ ಸಾಲು ಸಾಲು ಚಿತ್ರಗಳಲ್ಲಿ ನಟಿಸಿರುವ ನಟಿ ಶರಣ್ಯ ಶೆಟ್ಟಿ ಅಭಿನಯದ ಹೊಸ ಸಿನಿಮಾ 'ನಗುವಿನ ಹೂಗಳ ಮೇಲೆ' ರಿಲೀಸ್‌ಗೆ ಸಜ್ಜಾಗುತ್ತಿದೆ.

ವೆಂಕಟ್ ಭಾರದ್ವಾಜ್ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾ ಮೂಲಕ ಕಿರುತೆರೆ ನಟ ಅಭಿದಾಸ್ ನಾಯಕನಾಗಿ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಡುತ್ತಿದ್ದಾರೆ. ಸಿನಿಮಾದ ಎರಡನೇ ಹಾಡು ಇತ್ತೀಚೆಗೆ ಬಿಡುಗಡೆಯಾಗಿದೆ. ''ಭಾಗ್ಯವಂತರು' ಸಿನಿಮಾದಲ್ಲಿನ ಹಾಡೊಂದರ ಸಾಲು ನಮ್ಮ ಸಿನಿಮಾ ಶೀರ್ಷಿಕೆ. ಇದೊಂದು ಪ್ರೇಮಕಥೆಯಾಗಿದ್ದು, 27 ದಿನಗಳು ಶೂಟಿಂಗ್ ಮಾಡಿ ಮುಗಿಸಿದ್ದೇವೆ' ಎಂದರು ವೆಂಕಟ್.

'ಸೋಲೋ ಹೀರೋಯಿನ್ ಆಗಿ ಮಾಡಿದ ಮೊದಲ ಸಿನಿಮಾ ಇದಾಗಿದೆ. ಎರಡು ವರ್ಷದ ಹಿಂದೆಯೇ ಇದರ ಶೂಟಿಂಗ್ ನಡೆದಿತ್ತು. ಹೀಗಾಗಿ ತೆರೆಯಲ್ಲಿ ನನ್ನ ಮುಗ್ಧತೆ ಕಾಣಿಸುತ್ತದೆ. ಇದು ತನು ಮನುವಿನ ಪ್ರೇಮಕಥೆ' ಎನ್ನುತ್ತಾರೆ ಶರಣ್ಯ. ಬಾಲ ರಾಜವಾಡಿ, ಆಶಾ ಸುಜಯ್, ಗಿರೀಶ್, ನಂಜಪ್ಪ, ಅಭಿಷೇಕ್ ಅಯ್ಯಂಗರ್, ಹರ್ಷಿತ್ ಗೌಡ, ಹರೀಶ್ ಚೌಹಾನ್, ಹರ್ಷ ಗೋ ಭಟ್ ಚಿತ್ರದ ತಾರಾಬಳಗದಲ್ಲಿದ್ದಾರೆ.

ಅಭಿದಾಸ್ ಹಾಗೂ ಶರಣ್ಯ ಶೆಟ್ಟಿ

'ಮಡಿಕೇರಿ'ಯಲ್ಲಿ ಪೃಥ್ವಿ ಅಂಬಾರ್?

'ಕಾಲ್ಗೆಜ್ಜೆ' ಸಿನಿಮಾ ನಿರ್ದೇಶಕ ಎ. ಬಂಗಾರು ನಿರ್ದೇಶನದ ಹೊಸ ಚಿತ್ರದ ಶೀರ್ಷಿಕೆ ಇತ್ತೀಚೆಗೆ ಅನಾವರಣಗೊಂಡಿತು. 'ಮಡಿಕೇರಿ' ಎಂಬ ಶೀರ್ಷಿಕೆ ಹೊತ್ತ ಈ ಸಿನಿಮಾದಲ್ಲಿ ನಾಯಕನಾಗಿ ಪೃಥ್ವಿ ಅಂಬಾರ್ ಅವರು ನಟಿಸುವ ಸಾಧ್ಯತೆ ಇದೆ ಎಂದಿದ್ದಾರೆ ನಿರ್ದೇಶಕರು.

ಪರಮಹಸ್ತ ಪ್ರೊಡಕ್ಷನ್ಸ್ ಮತ್ತು ಶ್ರೀ ಬಾಲಾಜಿ ಸಿನಿ ಕಂಬೈನ್ಸ್ ನಿರ್ಮಾಣದ ಈ ಚಿತ್ರಕ್ಕೆ ಬಂಗಾರು ಅವರೇ ಕಥೆ, ಚಿತ್ರಕತೆ, ಸಂಭಾಷಣೆಯ ಜೊತೆಗೆ ಸಾಹಿತ್ಯವನ್ನೂ ರಚಿಸಿದ್ದಾರೆ. 'ಇದೊಂದು ಸುಮಧುರ ದೃಶ್ಯಕಾವ್ಯ. ಸಂಗೀತವೇ ಚಿತ್ರದ ಜೀವಾಳ. ಮೂರು ಬೇರೆ ಬೇರೆ ಕುಟುಂಬದ ಟ್ರ್ಯಾಕ್‌ನಲ್ಲಿ ಕಥೆ ಸಾಗುತ್ತದೆ. ಸುಹಾಸಿನಿ ಅವರು ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಮನರಂಜನಾತ್ಮಕ ಕಥಾಹಂದರವುಳ್ಳ ಈ ಚಿತ್ರಕ್ಕೆ ಪೃಥ್ವಿ ಅಂಬರ್ ನಾಯಕರಾಗುವ ಸಾಧ್ಯತೆಯಿದೆ. ಶಾಲಿನಿ ಭಟ್ ಚಿತ್ರದ ನಾಯಕಿ. ಶೀರ್ಷಿಕೆ ಅನಾವರಣಕ್ಕೇ ಹಾಡೊಂದನ್ನು ಚಿತ್ರೀಕರಣ ಮಾಡಿದ್ದೇವೆ. ನವಂಬರ್‌ನಲ್ಲಿ ಚಿತ್ರದ ಮುಹೂರ್ತ ಮತ್ತು ಶೂಟಿಂಗ್ ಆರಂಭಿಸಲಾಗುವುದು' ಎಂದಿದ್ದಾರೆ ಬಂಗಾರು.

'ಪದವಿಪೂರ್ವ' ಸಿನಿಮಾ ನಿರ್ಮಾಣ ಮಾಡಿದ್ದ ರವಿ ಶ್ಯಾಮನೂರು ಅವರು ಈ ಚಿತ್ರಕ್ಕೆ ಕೈಜೋಡಿಸಿದ್ದಾರೆ. 'ಮಡಿಕೇರಿ' ಚಿತ್ರಕ್ಕೆ ಗಂಧರ್ವ ಅವರು ಸಂಗೀತವಿದೆ. ಭವಾನಿ ಪ್ರಕಾಶ್, ಅಚ್ಯುತ್‌ಕುಮಾರ್, ಸುಧಾರಾಣಿ, ಅನುಪ್ರಭಾಕರ್, ಶ್ರೀ ಶಂಭು ಸೇರಿದಂತೆ ಹಲವು ಕಲಾವಿದರು ಚಿತ್ರದಲ್ಲಿ ನಟಿಸಲಿದ್ದಾರೆ.

ಶಾಲಿನಿ ಭಟ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಮಹಿಳೆ ಹಾಗೂ ಹೆಣ್ಣುಮಕ್ಕಳು ರಕ್ತದ ಮಡುವಿನಲ್ಲಿ ಬಿದ್ದಿರುವ ಹಾಗೂ ವ್ಯಕ್ತಿಯೊಬ್ಬರು ಅಲ್ಲೇ ಕುಳಿತಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದರೊಂದಿಗೆ 'ಅಜ್ಮಲ್ ಖಾನ್ ಎಂಬವನು ಹಿಂದೂ ಕುಟುಂಬದ ಹೆಣ್ಣುಮಗಳೊಬ್ಬಳನ್ನು ಇಷ್ಟಪಡುತ್ತಾನೆ. ಈ ವಿಷಯವನ್ನು ಆ ಕುಟುಂಬಕ್ಕೂ ತಿಳಿಸುತ್ತಾನೆ. 'ನೀನು ಮುಸ್ಲಿಂ ಆದ ಕಾರಣ ನಾನು ಮದುವೆ ಮಾಡಿಕೊಡುವುದಿಲ್ಲ' ಎಂದು ಹುಡುಗಿಯ ತಂದೆ ಈ ಪ್ರಸ್ತಾವವನ್ನು ನಿರಾಕರಿಸುತ್ತಾನೆ. ಇದರಿಂದ ಕೋಪಗೊಂಡ ಅಜ್ಮಲ್ ತನ್ನ ಮನೆಗೆ ಹಿಂದಿರುಗಿ ಶಸ್ತ್ರಗಳೊಂದಿಗೆ ವಾಪಸು ಬಂದು ಹಿಂದೂ ಕುಟುಂಬದ ಸದಸ್ಯರನ್ನು ಹತ್ಯೆ ಮಾಡುತ್ತಾನೆ. ಇದಕ್ಕೆ ಹಿಂದೂ ನೆರೆಹೊರೆಯವರು ಸುಮ್ಮನಿರುತ್ತಾರೆ. ನಂತರ ಯಾರೊ ಅಜ್ಮಲ್‌ನನ್ನು ಪೊಲೀಸರಿಗೆ ಒಪ್ಪಿಸುತ್ತಾರೆ. ಇದು ರಾಜಸ್ಥಾನದಲ್ಲಿ ನಡೆದಿದೆ' ಎಂಬ ಬರಹವನ್ನೂ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಈ ಘಟನೆಯು 2021ರ ಜುಲೈನಲ್ಲಿ ರಾಜಸ್ಥಾನದ ಅಜ್ಮೀರ್‌ನ ಬ್ಯಾವರ್ ಎಂಬಲ್ಲಿ ನಡೆದಿದೆ. ಹತ್ಯೆ ಮಾಡಿದ ವ್ಯಕ್ತಿಯ ಹೆಸರು ಅಜಿತ್ ಚೀತಾ (30). ಈತ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಹತ್ಯೆ ಮಾಡಿ, ಪತ್ನಿ ಕವಿತಾ ಗಂಭೀರವಾಗಿ ಗಾಯಗೊಳ್ಳುವಂತೆ ಮಾಡಿದ್ದಾನೆ. ತನಗೂ ಗಾಯ ಮಾಡಿಕೊಂಡಿದ್ದಾನೆ. ಅಜಿತ್, ಚೀತಾ ಮೆಹರ್ ಎಂಬ ಸಮುದಾಯಕ್ಕೆ ಸೇರಿದವರು. ಇದು ಮುಸ್ಲಿಮರಲ್ಲಿ ಇರುವ ಒಂದು ಪಂಗಡವಾಗಿದೆ. ಈ ಸಮುದಾಯದಲ್ಲಿ ಕೆಲವು ಭಾಗ ಹಿಂದೂ ಧರ್ಮವನ್ನೂ ಪಾಲಿಸುತ್ತದೆ. ಅಜಿತ್ ನಿರುದ್ಯೋಗಿ ಆಗಿದ್ದ. ಪತ್ನಿಗೆ ಗರ್ಭಕೋಶದ ಶಸ್ತ್ರ ಚಿಕಿತ್ಸೆ ಆಗಿತ್ತು. ನಿರುದ್ಯೋಗಿ ಆಗಿದ್ದ ಒತ್ತಡ ಜೊತೆಗೆ ಮನೆಗೆಲಸ ಮಾಡುವ ಒತ್ತಡವೂ ಸೇರಿಕೊಂಡು ಹೆಂಡತಿಯ ಜೊತೆ ಜಗಳಕ್ಕೆ ಇಳಿದಿದ್ದ. ಸಿಟ್ಟಿನ ಬರದಲ್ಲಿ ಹೆಂಡತಿಗೆ ಹೊಡೆಯಲು ಹೋದಾಗ ಮಕ್ಕಳು ಅಡ್ಡ ಬಂದರು. ಆದ್ದರಿಂದ ಮಕ್ಕಳನ್ನು ಕೊಂದು ಪತ್ನಿಗೆ ಇರಿದಿದ್ದ. ಇದನ್ನು ಅಜ್ಮೀರ್ ಪೊಲೀಸರು ದೃಢಪಡಿಸಿದ್ದಾರೆ. ಆದ್ದರಿಂದ, ಮುಸ್ಲಿಂ ವ್ಯಕ್ತಿ ಹಿಂದೂ ಕುಟುಂಬದ ಸದಸ್ಯರನ್ನು ಹತ್ಯೆ ಮಾಡಿದ್ದಾನೆ ಎನ್ನುವುದು ಸುಳ್ಳು ಸುದ್ದಿ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಸೆಪ್ಟೆಂಬರ್ 5, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಪುಷ್ಠಿ ಗಂ. 15-47 ನಕ್ಷತ್ರ: ಭರಣಿ ಗಂ. 09-00 ಯೋಗ: ವ್ಯಾಘಾತ ಗಂ. 23-23 ಕರಣ: ವಣಿಜ ಗಂ. 15-47, ಸಿಂಹ ಮಾಸದ 19 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-23 **ಸೂರ್ಯಾಸ್ತ :** 06-36
ಮುಸ್ಲಿಂ ದಿನಾಂಕ : 19 ಸಫರ್, ದಿನ ವಿಶೇಷ : ಶ್ರೀ ಮಂಗಳಗೌರಿ ವ್ರತ,
ಅದೃಷ್ಟ ಸಂಖ್ಯೆ : 6, 7

ಮೇಷ: ಸಂಸ್ಥೆಯ ಅಭಿವೃದ್ಧಿಗೆ ನೀವು ತೆಗೆದುಕೊಳ್ಳಬೇಕಾಗಿರುವ ನಿರ್ಧಾರಕ್ಕಾಗಿ ಈ ದಿನ ವಿಷಯದ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸುವುದು ಉತ್ತಮ. ಸಾಧು ಸಂತರ ಭೇಟಿಯಿಂದ ಮನಸ್ಸಿಗೆ ಸಮಾಧಾನ ಕಂಡುಕೊಳ್ಳಬಹುದು.

ವೃಷಭ: ವ್ಯವಸ್ಥಿತವಾಗಿ ದಿನಚರಿ ರೂಪಿಸಿಕೊಂಡರೆ ಈಗಾಗಲೇ ಆರಂಭಿಸಿರುವ ಯೋಜನೆ ಪೂರ್ಣಗೊಳ್ಳಲಿದೆ. ಪಾಲುದಾರಿಕೆ ವ್ಯವಹಾರದಲ್ಲಿ ಚರ್ಚೆಗೆ ಆಸ್ಪದ ನೀಡದಿರಿ. ಸೋದರರನ್ನು ಸರಿಹಾದಿಗೆ ತರುವಲ್ಲಿ ಶ್ರಮ ವಹಿಸುವಿರಿ.

ಮಿಥುನ: ಮಗನ ಸಂಪಾದನೆಯನ್ನು ನೋಡಿ ಹರ್ಷವಾಗುವುದು. ಪ್ರೀತಿ ಪಾತ್ರರಲ್ಲಿನ ಅಭಿಪ್ರಾಯ ವಿನಿಮಯಗಳಿಂದ ಮನಸ್ಸಿಗೆ ಆನಂದ, ನೆಮ್ಮದಿ ಮೂಡುವುದು. ಸಮಸ್ಯೆ ಪರಿಹರಿಸಿಕೊಳ್ಳುವಿರಿ.

ಕರ್ಕಾಟಕ: ದಾಂಪತ್ಯದಲ್ಲಿ ಹೊಂದಾಣಿಕೆಯ ಮನೋಭಾವದಿಂದ ಸಾಮರಸ್ಯ ವೃದ್ಧಿಯಾಗುವುದು. ಮೂತ್ರಕೋಶಕ್ಕೆ ಸಂಬಂಧಿಸಿದಂತೆ ಅನಾರೋಗ್ಯ ಕಂಡುಬಂದಲ್ಲಿ ನಿರ್ಲಕ್ಷಿಸುವುದು ಅಥವಾ ಮನೆಮದ್ದು ಮಾಡುವುದು ಸರಿಯಲ್ಲ.

ಸಿಂಹ: ಒಡಹುಟ್ಟಿದವರ ಸಹಾಯ ಸಹಕಾರದಿಂದ ಮಾನಸಿಕ ನೆಮ್ಮದಿ ಮತ್ತು ಸಂಸಾರದಲ್ಲಿ ಸಮತೋಲನ ಹೊಂದುವಿರಿ. ಅಧಿಕಾರಿಗಳ ಮನಸ್ಸಿನ ಪರಿಸ್ಥಿತಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ.

ಕನ್ಯಾ: ಷೇರುಪೇಟೆಯ ವ್ಯವಹಾರಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿ, ಲಾಭಾಂಶ ಕಡಿಮೆ ಇರುವುದು. ಸಾಂಸಾರಿಕವಾದ ಕೆಲ ವಿಷಯಗಳ ಗೌಪ್ಯತೆ ಕಾಪಾಡಿಕೊಂಡು ಹೋಗುವುದು ನಿಮ್ಮ ಕುಟುಂಬಕ್ಕೆ ಒಳ್ಳೆಯದು.

ತುಲಾ: ಜಾಮೀನು ವಿಷಯಕ್ಕೆ ಸಂಬಂಧಿಸಿದಂತೆ ನೆರೆಯವರಲ್ಲಿ ಮಾತುಕತೆ ನಡೆಯಲಿವೆ, ಉಪಾಯದಿಂದ ಉತ್ತರಿಸಿ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಕನಸಿನ ಉತ್ತಮ ಅವಕಾಶಗಳು ಅರಸಿ ಬರಲಿವೆ.

ವೃಶ್ಚಿಕ: ಬೆಳೆದ ವಸ್ತುಗಳ ಮಾರಾಟದಿಂದ ಆರ್ಥಿಕ ಅನುಕೂಲವಾಗಿ ನಿಮ್ಮ ಮೇಲಿದ್ದ ಸಾಲದ ಹೊರೆ ಕಡಿಮೆಯಾಗಲಿದೆ. ರಾಜಕೀಯ ಪಿತೂರಿ ನಡೆಸುತ್ತಿರುವವರು ಯಾರು ಎಂಬುವುದು ತಿಳಿದುಬರಲಿದೆ.

ಧನು: ಲೋಪ ದೋಷಗಳನ್ನು ತಿದ್ದಿಕೊಳ್ಳುವಂತೆ ಹಿರಿಯರಿಂದ ಸೂಚನೆ, ಅವರ ಅನುಭವದ ಮಾತು ಒದಗಿಬರುವುದು. ಬರಬೇಕಾಗಿದ್ದ ಹಣ ವಸೂಲು ಮಾಡಿಕೊಳ್ಳಲು ನಿಷ್ಠೂರವಾಗಿ ವರ್ತಿಸಬೇಕಾಗುವುದು.

ಮಕರ: ಬಾಲ್ಯ ಸ್ನೇಹಿತನಿಗಾಗಿ ಮನೆಯಲ್ಲಿ ವಿಶೇಷ ಭೋಜನದ ವ್ಯವಸ್ಥೆ ಸಂತೋಷ ಪೂರ್ವಕವಾಗಿ ನಡೆಯುವುದು. ಬಟ್ಟೆ ವ್ಯಾಪಾರಿಗಳಿಗೆ ಇಂದು ಒಳ್ಳೆಯ ದಿನ. ಸಾಮಾಜಿಕ ಕೆಲಸಗಳಿಗಾಗಿ ನಿಮ್ಮ ಓಡಾಟ ಹೆಚ್ಚುವುದು.

ಕುಂಭ: ಕೆಲವು ಕೆಲಸಗಳನ್ನು ನಿರ್ವಹಿಸಲು ದೀರ್ಘ ಪ್ರಯಾಣ ಕೈಗೊಳ್ಳಬೇಕಾದ ಅನಿವಾರ್ಯತೆ ಮೂಡಲಿದೆ. ನಾಯಕತ್ವದ ಗುಣ ಸಹೋದ್ಯೋಗಿಗಳ ಸಹಕಾರದಿಂದ ವೃದ್ಧಿ. ಮಕ್ಕಳಿಂದ ಸಂತೋಷ, ಸೌಖ್ಯವಿರುವುದು.

ಮೀನ: ಸಾಮಾಜಿಕ ಕಾರ್ಯಗಳಲ್ಲಿ ಚಟುವಟಿಕೆಯಿಂದ ಭಾಗವಹಿಸುವಿರಿ. ವಾಹನ ರಿಪೇರಿಗಾಗಿ ಸಣ್ಣ-ಪುಟ್ಟ ಖರ್ಚು ಸಂಭವಿಸಲಿದೆ. ಸಾಂಸಾರಿಕವಾಗಿ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸಿ.

ಗುರಿ ಮತ್ತು ಗುರು

ನುಡಿ ಬೆಳಗು



ಪಿ. ಚಂದ್ರಿಕಾ

ಗುರು ಶಿಷ್ಯನಿಗೆ ಕೇಳಿದ 'ನಿನ್ನ ಕನಸು ಏನು?' ಶಿಷ್ಯನಿಗೆ ಅಚ್ಚರಿಯಾಯಿತು. ಓದು ಮುಗಿದ ಮೇಲೆ ಕೆಲಸ ಮಾಡುವುದು ಬಿಟ್ಟು ಬೇರೆ ಏನಿದೆ ಎಂದು ಶಿಷ್ಯ ಮರು ಪ್ರಶ್ನೆ ಹಾಕಿದ. ಆಗ ಗುರು, 'ಸ್ವಲ್ಪ ದೂರದಲ್ಲಿ ಒಂದು ಮನೆ ನಿರ್ಮಾಣವಾಗುತ್ತಿದೆ, ಅಲ್ಲಿ ಮೂವರು ಕೆಲಸಗಾರರಿದ್ದಾರೆ. ಅವರನ್ನು ಮಾತಾಡಿಸಿ ಏನು ಮಾಡುತ್ತಿದ್ದಾರೆಂದು ತಿಳಿದುಕೊಂಡು ಬಾ' ಎನ್ನುತ್ತಾನೆ.

ಕಟ್ಟುತ್ತಿದ್ದ ಕಟ್ಟಡದ ಬಳಿ ಬಂದು ಶಿಷ್ಯ ಒಬ್ಬನನ್ನು ಕೇಳಿದ 'ಏನು ಮಾಡುತ್ತಿರುವೆ?' ಅವನು ಹೇಳಿದ 'ಇಟ್ಟಿಗೆಯನ್ನು ಇಡುತ್ತಿದ್ದೇನೆ'.

ಶಿಷ್ಯ ಕೇಳಿದ, 'ಇದರಿಂದ ಏನು ಲಾಭ' ಕೆಲಸಗಾರ ಹೇಳಿದ, 'ಇವತ್ತಿನ ಗಂಜಿಗೆ ಇಷ್ಟು ಸಾಕಲ್ಲವೇ?'. ಶಿಷ್ಯನಿಗೆ ಕುತೂಹಲ ಅನ್ನಿಸಿ, ಇನ್ನೊಬ್ಬನನ್ನು ಕೇಳಿದ, 'ನೀನೇನು ಮಾಡುತ್ತಿರುವೆ?' ಎರಡನೆಯವ ಹೇಳಿದ, 'ನಾನು ಒಂದು ಮನೆಯನ್ನು ಕಟ್ಟುತ್ತಿರುವೆ'. ಮತ್ತೆ ಅವನನ್ನು ಕೇಳಿದ, 'ಇದರಿಂದ ಏನು ಪ್ರಯೋಜನ?' ಅದಕ್ಕೆ ಎರಡನೆಯವನು, 'ನಾಳೆ ನಾನೊಬ್ಬ ಮೇಸ್ತ್ರಿ ಆಗಿ ಹತ್ತಾರು ಮನೆಯನ್ನು ಕಟ್ಟುವೆ, ನನ್ನ ಭವಿಷ್ಯ ಚೆನ್ನಾಗಿರುತ್ತೆ' ಎಂದ.

ಶಿಷ್ಯನಿಗೆ ಮತ್ತೂ ಕುತೂಹಲ ಅನ್ನಿಸಿ, ಮೂರನೆಯವನನ್ನು ಅದೇ ಪ್ರಶ್ನೆ ಕೇಳಿದ. ಮೂರನೆಯವನು, 'ನಾನು ಜಗತ್ತಿನಲ್ಲೇ ಅತ್ಯಂತ ಅದ್ಭುತವಾದ ಕಲಾಕೃತಿಯೊಂದನ್ನು ನಿರ್ಮಿಸುತ್ತಿದ್ದೇನೆ. ನಾಳೆ ಇಡೀ ಜಗತ್ತೇ ನನ್ನ ಹಿಂದಿರುತ್ತದೆ' ಎಂದ.

ಎಲ್ಲವನ್ನೂ ವರದಿ ಮಾಡಿದ ಶಿಷ್ಯನನ್ನು ನೋಡಿ ಗುರು ನಗುತ್ತಾ, 'ಅದೇ ಮರಳು, ಅದೇ ಇಟ್ಟಿಗೆ. ಆದರೆ ಮೂವರದ್ದು ಮೂರು ಕನಸು. ಈಗ ಹೇಳು ಗುರಿ ಯಾವುದಿರಬೇಕು? ಬರಿಯ ಹೊಟ್ಟೆ ತುಂಬಿಸಿಕೊಳ್ಳುವುದಾ? ಹೆಚ್ಚು ದುಡಿಮೆ ಮಾಡುವುದಾ? ಇಲ್ಲ ಅದ್ಭುತವನ್ನು ಸಾಧಿಸಿ ಜಗತ್ತಿನ ಗಮನ ಸೆಳೆಯುವುದಾ? ಎಂದ. ಶಿಷ್ಯನಿಗೆ ಅರ್ಥವಾಗಿತ್ತು. ನಾವು ಬಯಸುವ ಗುರಿಗಳೇ ನಮ್ಮನ್ನು ನಡೆಸುವ ನಾವೆ ಎಂದು.

ಪದಬಂಧ 5432

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ನೆಲ ಅಥವಾ ಬೆಟ್ಟ ಕೊರೆದು ಮಾಡಿರುವ ದಾರಿ (3)
5.ಭೇದ ಭಾವವಿಲ್ಲದಿರುವಿಕೆ (5)
6.ದೂರವೇನಲ್ಲಬಹಳ ಹತ್ತಿರ! (3)
7.ವಿಳಂಬವಿಲ್ಲದೆ ಸವಿದ ಮಾವಿನ ಮುರಬ್ಬ! (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರವು ಸ್ವಾಮ್ಯವನ್ನು ಸ್ಥಾಪಿಸುವುದು (5)
9.ಮಾಸದಲ್ಲೇ ಕಟ್ಟಿರುವ ಗೋರಿ (3)
10.ಕಕ್ಷದೊಳಗಿರುವ ಕೃಪಾ ದೃಷಿ ಕಾಣುತ್ತಿದೆಯೇ? (3)
13.ಹಲ್ಲುಗಳನ್ನು ತೊಳೆಯುವುದು (5)
14.ಜಗತಿ ಹತ್ತಿರವಿರುವ ಸುಂಕದ ಕಟ್ಟೆ (3)

ಮೇಲಿಂದ ಕೆಳಕ್ಕೆ
1.ಮುಗುಳು ನಗೆಯಿದು (4)
2.ಓದು ಬರಹ ಕಲಿತವನು (3)
3.ಹರಸುತಲಿದ್ದಾಗ ಕಾಣಿಸಿದ ಮಗ (2)
4.ನೇಣಿಗೇರಿಸುವ ಕಂಬವಿದು (4)
5.ಯಾವುದೇ ಅಪರಾಧ ಮಾಡದಿರುವವನು (5)
7.ಸ್ವಭಾವವನ್ನು ಹೊಗಳಿ ಹೇಳುವುದು (5)
9.ಒಳ್ಳೆಯ ಕುಲದಲ್ಲಿ ಹುಟ್ಟಿದವನು (4)
11.ನಡುವೆ ಪಣ ಒಡ್ಡಿರುವ ಜೈನ ಸನ್ಯಾಸಿ (4)
12.ಅಧೀನ ರಾಜನಿಲ್ಲಿದ್ದಾನೆ (3)
13.ದಂತವನ್ನು ಹೊಂದಿರುವ ಪ್ರಾಣಿ (2)



5431ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನೆಮಾತು
3.ಅಭಿಷೇಕ 5.ಬಡತನ
7.ಪುಸ್ತಕ 8.ವನಪಾಲಕ
11.ಉದಕ 12.ನವರಂಗ
14.ಸರೀಸೃಪ 15.ಪರಿಚಿತ

ಮೇಲಿಂದ ಕೆಳಕ್ಕೆ:
1.ಮನೋಬಲ
2.ಮಾವುತ 4.ಕಣಕ
6.ನವೀನ 7.ಪುಳಕ
8.ವರ್ತಕ 9.ಲಶುನ
10.ಅಂಗಜಾತ 11.ಉಲ್ಲಾಸ
13.ವೈಯಾರಿ

ಸುಡೊಕು 5818

	3			6				2
6		2	4		9		1	
	8					6		9
3		7	2			4		
		8		4			3	7
4					3	2		8
		9	8					4
8					4		2	
		3		2		7		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5817 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಜಿಆರ್‌ಟಿ ಜುವೆಲರ್ಸ್‌ಗೆ ಪ್ರತಿಷ್ಠಿತ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿಲ್ಡ್ ಇಂಡಿಯಾ ಸಂಸ್ಥೆಯು ಆಯೋಜಿಸಿದ್ದ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಜಿಆರ್‌ಟಿ ಜುವೆಲರ್ಸ್ ಕಂಪನಿಯು ದಕ್ಷಿಣ ಭಾರತದ 'ಬೆಸ್ಟ್ ಚೈನ್ ಸ್ಟೋರ್ಸ್ ಪ್ಲಾಟಿನಂ' ಪ್ರಶಸ್ತಿ ಮತ್ತು ದೇಶದ 'ಬೆಸ್ಟ್ ಚೈನ್ ಸ್ಟೋರ್ಸ್ ಪ್ಲಾಟಿನಂ' ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

ಸತತ 7 ಬಾರಿಗೆ ಈ ಪ್ರಶಸ್ತಿ ದೊರೆತಿದೆ. ಪ್ಲಾಟಿನಂ ಮತ್ತು ಇತರ ಚಿನ್ನಾಭರಣಗಳ ವಿನ್ಯಾಸ, ಶ್ರೇಣಿ ಮತ್ತು ಗ್ರಾಹಕರನ್ನು ಸಂತೋಷಪಡಿಸುವಲ್ಲಿ ಕಂಪನಿಯು ನೀಡಿರುವ ಅದ್ವಿತೀಯ ಕೊಡುಗೆಯನ್ನು ಇದು ಸೂಚಿಸುತ್ತದೆ ಎಂದು ತಿಳಿಸಿದೆ.

'ಹಲವು ವರ್ಷಗಳಿಂದ ಶುದ್ಧತೆ, ನಂಬಿಕೆ ಮತ್ತು ದೋಷರಹಿತ ಕಸುಬುದಾರಿಕೆಯ ಉತ್ಕೃಷ್ಟತೆಯನ್ನು ಗ್ರಾಹಕರಿಗೆ ನೀಡಲು ಪಟ್ಟಿರುವ ಶ್ರಮದ ಫಲವನ್ನು ಇಂದು ಅನುಭವಿಸುತ್ತಿದ್ದೇವೆ' ಎಂದು ಜಿಆರ್‌ಟಿ ಜುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. 'ಆನಂದ್' ಅನಂತಪದ್ಮನಾಭನ್ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,435
ಇಂದಿನ ಅಂತ್ಯ	19,528
▲	93
ದಿನದ ಗರಿಷ್ಠ	19,545

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹460

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1720(1740)
ಸೋಯಾ (ರಿಫೈಂಡ್)	₹925(925)
ಸೂರ್ಯಕಾಂತಿ (ರಿಫೈಂಡ್)	₹925(925)
ಪಾಮೋಲಿನ್	₹850(854)

ವಿನಿಮಯ ದರ

$ ಡಾಲರ್	82.71
£ ಪೌಂಡ್	104.45
€ ಯುರೊ	89.29
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹7900-8000
ತುರುವೇಕೆರೆ	---
ಪುತ್ತೂರು	₹7100-8500

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಸಾಗರ**		ಬಿಳಿಗೋಟು	31699-37409
ಬಂಟ್ವಾಳ		ಬಿಳಿಗೋಟು	15119-33329	ಕೋಕ	30019-34300
ಕೋಕ	12500-25000	ಕೋಕ	23199-35801	ಚಾಲಿ	37069-41639
ಹೊಸತು	27500-45000	ಚಾಲಿ	35001-39009	ಕೆಂಪುಗೋಟು	32289-34089
ಹಳತು	46000-48500	ಕೆಂಪುಗೋಟು	32989-36199	ರಾಶಿ	43969-47899
ಕಾರ್ಕಳ		ರಾಶಿ	33989-49009	ತಟ್ಟಿಬೆಟ್ಟೆ	45029-45029
ಹೊಸತು	30000-45000	ಸಿಪ್ಪೆಗೋಟು	14699-22889	**ಯಲ್ಲಾಪುರ**	
ಹಳತು	40000-48500	**ಶಿವಮೊಗ್ಗ**		ಬಿಳಿಗೋಟು	26499-36060
ಕುಮಟಾ		ಬೆಟ್ಟೆ	46299-5081	ಚಾಲಿ	38099-41919
ಚಿಪ್ಪು	32869-34899	ಗೊರಬಲು	17009-36501	ಕೋಕ	18212-28699
ಕೋಕ	18699-32999	ರಾಶಿ	37019-49295	ಕೆಂಪುಗೋಟು	31369-32842
ಹಳೆಚಾಲಿ	39909-41599	ಸರಕು	56069-79300	ರಾಶಿ	47699-54899
ಹೊಸಚಾಲಿ	37569-41009	**ಸಿದ್ದಾಪುರ**		ತಟ್ಟಿಬೆಟ್ಟೆ	40819-45900

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

40ನೇ ವರ್ಷದ ಚಿರಸ್ಮರಣೆ

ಬ್ಯಾಲಹಳ್ಳಿ ಜೋಡಿದಾರ್ ನಂಜುಂಡಯ್ಯನವರು
ಜನನ: 06-08-1905 ಮರಣ: 05-09-1983
ಪಿ.ಲಲಿತಮ್ಮನವರು
ಜನನ: 13-11-1915 ಮರಣ: 26-05-1999
ಸದಾ ನಿಮ್ಮ ನೆನಪಿನಲ್ಲಿ
ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಮತ್ತು ಅಳಿಯಂದಿರು

ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ

ನ.29ರಿಂದ ತಂತ್ರಜ್ಞಾನ ಶೃಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅರಮನೆ ಆವರಣದಲ್ಲಿ ನ.29 ರಿಂದ ಡಿ.1ರ ವರೆಗೆ 26ನೇ ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ನಡೆಯಲಿದೆ.

ಸಂಶೋಧನೆ, ನಾವೀನ್ಯತೆ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿ ಸ್ಥಾನದಲ್ಲಿದೆ. 26ನೇ ತಂತ್ರಜ್ಞಾನ ಶೃಂಗಸಭೆಯಲ್ಲಿ ಎಲೆಕ್ಟ್ರಾನಿಕ್ಸ್, ನವೋದ್ಯಮಗಳು, ಅಂತರರಾಷ್ಟ್ರೀಯ ಉಪಕರಣಗಳ ಪ್ರದರ್ಶನ, ದೇಶೀಯ, ಜಾಗತಿಕ ಹೂಡಿಕೆದಾರರ ಸಮಾವೇಶ ಸೇರಿದಂತೆ ಬಹು ಮಾದರಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಉದ್ಯಮ ಸಾಧಕ ಪ್ರಶಸ್ತಿಗಳು, ನವೋದ್ಯಮದ ಪ್ರೋತ್ಸಾಹ, ಗ್ರಾಮೀಣ ಮಾಹಿತಿ ತಂತ್ರಜ್ಞಾನ, ಜೈವಿಕ ವಿಭಾಗದ ರಸಪ್ರಶ್ನೆಗಳು, ಜೈವಿಕ ಪೋಸ್ಟರ್‌ಗಳ ಬಗ್ಗೆ ಸಮ್ಮೇಳನಗಳು ಜರುಗಲಿವೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಜಾಗತಿಕ ಗಡಿಗಳನ್ನು ಮೀರಿ ಭಾರತದ ತಾಂತ್ರಿಕ ಶಕ್ತಿಯನ್ನು ಜಗತ್ತಿಗೆ ತೋರಿಸಲು ಶೃಂಗಸಭೆ ಸಿದ್ಧವಾಗುತ್ತಿದೆ. ಅದಕ್ಕಾಗಿ ಈ ಬಾರಿಯ ಸಮ್ಮೇಳನದ ಪರಿಕಲ್ಪನೆಯನ್ನು 'ಬ್ರೇಕಿಂಗ್ ಬೌಂಡರೀಸ್' ಎಂದು ಕರೆಯಲಾಗಿದೆ. ಜಪಾನ್, ಕೆನಡಾ, ಇಸ್ರೇಲ್, ಫ್ರಾನ್ಸ್, ಜರ್ಮನಿ ಸೇರಿದಂತೆ ಹಲವು ದೇಶಗಳ ಪ್ರತಿನಿಧಿಗಳು ತಂತ್ರಜ್ಞಾನದ ಆವಿಷ್ಕಾರವನ್ನು ಪ್ರದರ್ಶಿಸುವರು ಎಂದರು.

ಬೆಂಗಳೂರು ಮತ್ತು ಮೈಸೂರಿನಲ್ಲಿ ಸೆಮಿಕಂಡಕ್ಟರ್ ಘಟಕಗಳ ಸ್ಥಾಪಿಸಲಾಗುವುದು. ಕರ್ನಾಟಕವನ್ನು ಉದ್ಯಮಸ್ನೇಹಿ ತಾಣವಾಗಿಸಲು ನಿಯಮಗಳನ್ನು ಇನ್ನಷ್ಟು ಸರಳೀಕರಣಗೊಳಿಸಲಾಗುವುದು ಎಂದರು.

ಕೌಶಲ ಮಂಡಳಿ ರಚನೆಗೆ ಸಿ.ಎಂ ಒಲವು

ಕೌಶಲಾಭಿವೃದ್ಧಿಗೆ ಪ್ರತ್ಯೇಕ ಇಲಾಖೆ ರಚಿಸಿದ ಮೊದಲ ರಾಜ್ಯ ಕರ್ನಾಟಕ. ಹಾಗೆ ಎಲ್ಲಾ ಪಾಲುದಾರರ ಸಹಯೋಗದೊಂದಿದೆ ಕೌಶಲ ಮಂಡಳಿ ರಚಿಸುವ ಚಿಂತನೆ ನಡೆದಿದೆ. ಮಂಡಳಿ ರಚನೆಯಾದರೆ ಉದ್ಯಮ ಹಾಗೂ ಶಿಕ್ಷಣ ಸಂಸ್ಥೆಗಳ ನಡುವಿನ ಅಂತರ ಕಡಿಮೆಯಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಗಾಗಿ ಸೋಮವಾರ ವಿವಿಧ ಕಂಪನಿ ಸಿಇಒಗಳ ಜತೆಗಿನ ಸಮಾಲೋಚನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ ತಂತ್ರಜ್ಞಾನ ಗ್ರೂಪ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್ ಅವರಿಗೆ ಮಾಹಿತಿ ಕೈಪಿಡಿ ನೀಡಿದರು. ಐಟಿ–ಬಿಟಿ ಇಲಾಖೆ ಕಾರ್ಯದರ್ಶಿ ಏಕ್‌ರೂಪ್ ಕೌರ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜೈವಿಕ ತಂತ್ರಜ್ಞಾನ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಇದ್ದರು –ಪ್ರಜಾವಾಣಿ ಚಿತ್ರ

'8 ಉತ್ಕೃಷ್ಟತಾ ಕೇಂದ್ರಗಳ ಸ್ಥಾಪನೆ'

ಬೆಂಗಳೂರು: ರಾಜ್ಯದಲ್ಲಿ ಇದೇ ವರ್ಷ ಹೊಸದಾಗಿ ಎಂಟು ಉತ್ಕೃಷ್ಟತಾ ಕೇಂದ್ರಗಳನ್ನು ಆರಂಭಿಸಲಾಗುವುದು ಎಂದು ಐಟಿ,ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಈ ಕೇಂದ್ರಗಳು ವ್ಯವಹಾರ ಮತ್ತು ಉದಯೋನ್ಮುಖ ತಂತ್ರಜ್ಞಾನಕ್ಕೆ ಇನ್‌ಕ್ಯುಬೇಟರ್‌ಗಳಾಗಿ ಕಾರ್ಯನಿರ್ವಹಿಸಲಿವೆ. ರಾಜ್ಯದಲ್ಲಿ ಆಟೋಮೊಬೈಲ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ, ಆರೋಗ್ಯ ವಿಜ್ಞಾನ ಮತ್ತು ವೈದ್ಯಕೀಯ ಸಾಧನಗಳಿಗೆ ಉತ್ಕೃಷ್ಟತಾ ಕೇಂದ್ರಗಳನ್ನು ಹೊಂದಿದ್ದೇವೆ. ಅವುಗಳನ್ನು ವ್ಯವಹಾರ ಮತ್ತು ಉದಯೋನ್ಮುಖ ತಂತ್ರಜ್ಞಾನಕ್ಕೂ ಬಳಸಿಕೊಳ್ಳಲಾಗುವುದು ಎಂದರು.

ಸುಧಾ, ಮಯೂರ ಓದಿರಿ

ಸುದ್ದಿ 2 ನಿಮಿಷ

₹315 ಲಕ್ಷ ಕೋಟಿಗೆ ಏರಿದ ಬಿಎಸ್‌ಇ ಮಾರುಕಟ್ಟೆ ಮೌಲ್ಯ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತವಾಗಿರುವ ಕಂಪನಿಗಳ ಮಾರುಕಟ್ಟೆ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ ₹315 ಲಕ್ಷ ಕೋಟಿಗೆ ತಲುಪುವ ಮೂಲಕ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ.

ಆರ್ಥಿಕ ಚಟುವಟಿಕೆಗಳನ್ನು ಸೂಚಿಸುವ ಅಂಶಗಳು ಉತ್ತಮ ಬೆಳವಣಿಗೆ ಕಾಣುತ್ತಿರುವುದು, ಹೂಡಿಕೆ ಚಟುವಟಿಕೆ ಹೆಚ್ಚಾಗುತ್ತಿರುವುದು ಹಾಗೂ ಜಾಗತಿಕ ಷೇರುಪೇಟೆಗಳ ವಹಿವಾಟು ಸ್ಥಿರವಾಗಿ ಇರುವ ಕಾರಣಗಳಿಂದಾಗಿ ಮಾರುಕಟ್ಟೆ ಮೌಲ್ಯವು ಈ ಮಟ್ಟವನ್ನು ತಲುಪುವಂತಾಯಿತು.

ಬಿಎಸ್‌ಇ ಸೆನ್ಸೆಕ್ಸ್ ಸೋಮವಾರ 241 ಅಂಶ ಏರಿಕೆ ಕಂಡು 65,628 ಅಂಶಗಳಿಗೆ ತಲುಪಿತು. ಶುಕ್ರವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 556 ಅಂಶ ಏರಿಕೆ ಕಂಡಿತ್ತು. ಈ ಎರಡು ದಿನಗಳ ವಹಿವಾಟಿನಲ್ಲಿ ಮಾರುಕಟ್ಟೆ ಬಂಡವಾಳ ಮೌಲ್ಯವು ₹5.41 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದ್ದು ಒಟ್ಟು ಮೌಲ್ಯವು ₹315 ಲಕ್ಷ ಕೋಟಿಗೆ ತಲುಪಿತು.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಹೆಚ್ಚಳಕ್ಕೆ ತಡೆ ನೀಡಬಹುದು ಎನ್ನುವ ನಿರೀಕ್ಷೆಯಿಂದಾಗಿ ಮಾರುಕಟ್ಟೆಗಳಲ್ಲಿ ಸತತ ಎರಡನೇ ದಿನವೂ ಸೂಚ್ಯಂಕಗಳು ಏರಿಕೆ ಕಂಡುಕೊಂಡವು. ಚೀನಾವು ರಿಯಲ್ ಎಸ್ಟೇಟ್ ವಲಯದ ಪುನಶ್ಚೇತನಕ್ಕೆ ಕ್ರಮಗಳನ್ನು ತೆಗೆದುಕೊಳ್ಳುವ ವರದಿಯು ಸಹ ಷೇರುಪೇಟೆಗಳಲ್ಲಿ ಉತ್ಸಾಹ ಹೆಚ್ಚಾಗಲು ಕಾರಣವಾಯಿತು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಭಾರತದಲ್ಲಿ ₹24.81 ಕೋಟಿ ಹೂಡಿಕೆ ಮಾಡಲಿರುವ ಅಮೆಜಾನ್

ನವದೆಹಲಿ (ಪಿಟಿಐ): ಪ್ರಮುಖ ಇ-ಕಾಮರ್ಸ್ ಕಂಪನಿ ಅಮೆಜಾನ್ ಭಾರತದಲ್ಲಿ ಪರಿಸರ ಆಧಾರಿತ ಯೋಜನೆಗಳಿಗಾಗಿ ₹24.81 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ.

ಕಂಪನಿಯು ಏಷ್ಯಾ ಪೆಸಿಫಿಕ್ ಪ್ರದೇಶದಲ್ಲಿ ಪರಿಸರ ಸಂಬಂಧಿತ ಯೋಜನೆಗಳಿಗಾಗಿ ಒಟ್ಟು ₹124 ಕೋಟಿ ಹೂಡಿಕೆ ಮಾಡಲು ಉದ್ದೇಶಿಸಿದ್ದು, ಭಾರತದಲ್ಲಿ ಹೂಡಿಕೆ ಮಾಡಲಿರುವುದು ಅದರ ಒಂದು ಭಾಗ.

ಮೊದಲ ಯೋಜನೆಯಲ್ಲಿ, ಪಶ್ಚಿಮ ಘಟ್ಟಗಳಲ್ಲಿ ಸಮುದಾಯಗಳು ಮತ್ತು ಅಲ್ಲಿನ ಪರಿಸರ ಸಂರಕ್ಷಣಾ ಕೆಲಸಗಳಿಗೆ ನೆರವಾಗಲು ಸೆಂಟರ್ ಫಾರ್ ವೈಲ್ಡ್‌ಲೈಫ್ ಸ್ಟಡೀಸ್ (ಸಿಡಬ್ಲ್ಯುಎಸ್) ಜೊತೆ ಕೆಲಸ ಮಾಡಲಿದೆ. ಭಾರತದಲ್ಲಿ ಇರುವ ಒಟ್ಟು ವನ್ಯಜೀವಿ ಪ್ರಭೇದಗಳಲ್ಲಿ ಶೇ 30ರಷ್ಟು ಪಶ್ಚಿಮ ಘಟ್ಟ ಪ್ರದೇಶದಲ್ಲಿಯೇ ಇದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಹಾಸನದ ಹಲವು ಕಡೆಗಳಲ್ಲಿ ದೂರು ದಾಖಲು

ಶುಂಠಿ ಕಳವು ಪ್ರಕರಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯಲ್ಲಿ ಟೊಮೆಟೊ ನಂತರ ಇದೀಗ ಶುಂಠಿ ಬೆಳೆ ಕಳವು ಹೆಚ್ಚಾಗುತ್ತಿದೆ. ಕಳವು ಮಾಡಿದ್ದ ಶುಂಠಿ ಮಾರಲು ಹೋಗಿದ್ದ ವ್ಯಕ್ತಿಯೊಬ್ಬರು ಸಿಕ್ಕಿ ಬಿದ್ದಿದ್ದಾರೆ.

ಅರಸೀಕೆರೆ ತಾಲ್ಲೂಕಿನ ಬಂದೂರು ಗ್ರಾಮದ ಚಂದ್ರ ಬಂಧಿತ ಆರೋಪಿ. ಹಾಸನ ತಾಲ್ಲೂಕಿನ ಅಗಲಹಳ್ಳಿಯ ರೈತ ಕೃಷ್ಣಮೂರ್ತಿ ಅವರು ಹೊಲದಲ್ಲಿ ಬೆಳೆದಿದ್ದ 50 ಚೀಲ ಶುಂಠಿಯನ್ನು ಕಳವು ಮಾಡಿದ ಆರೋಪ ಮೇಲಿದೆ.

ಹೊರವಲಯದ ದೊಡ್ಡಮಂಡಿಗನಹಳ್ಳಿಯ ಶುಂಠಿ ತೊಳೆಯುವ ಶೆಡ್‌ಗೆ ಬೆಳಗಿನ ಜಾವ 50 ಚೀಲ ಶುಂಠಿ ತಂದಿದ್ದಾರೆ ಎಂದು ಮಾಹಿತಿ ದೊರೆತ ಕೃಷ್ಣಮೂರ್ತಿ, ಶೆಡ್ ಬಳಿ ಬಂದು ವಿಚಾರಿಸಿದ್ದಾರೆ. ಆಟೊರಿಕ್ಷಾದಲ್ಲಿ ಶುಂಠಿ ಚೀಲಗಳನ್ನು ತುಂಬಿಕೊಂಡು ಕುಳಿತಿದ್ದ ವ್ಯಕ್ತಿಯನ್ನು ಹಿಡಿದು ವಿಚಾರಿಸಿದಾಗ ಪ್ರಕರಣ ಬಯಲಿಗೆ ಬಂದಿದೆ. ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ.

ಬೇಲೂರು ತಾಲ್ಲೂಕಿನ ಟಿ.ವಡ್ಡರ ಕಾಲೊನಿಯ ಮಂಜು ಎಂಬವರ ಹೊಲದಲ್ಲಿ ಬೆಳೆದಿದ್ದ ₹1.70 ಲಕ್ಷ ಮೌಲ್ಯ ಶುಂಠಿಯನ್ನು ಕಳವು ಮಾಡಲಾಗಿದೆ. ಮಂಜು ಅವರು ಶನಿವಾರ ರಾತ್ರಿ ಶುಂಠಿಗೆ ನೀರು ಹಾಯಿಸಿ ಮನೆಗೆ ಬಂದಿದ್ದರು. ಭಾನುವಾರ ಬೆಳಿಗ್ಗೆ ಹೋಗಿ ನೋಡಿದಾಗ, 38 ಚೀಲ ಶುಂಠಿಯನ್ನು ಕಳವು ಮಾಡಿರುವುದು ಗೊತ್ತಾಗಿದೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಲೆ ಹೆಚ್ಚಳದ ಕಾರಣದಿಂದಾಗಿ ಕಳವು ಪ್ರಕರಣಗಳು ಹೆಚ್ಚಾಗಿವೆ ಎನ್ನಲಾಗುತ್ತಿದೆ. ಪ್ರಸ್ತುತ ಕ್ವಿಂಟಲ್‌ಗೆ ₹4,500 ದರ ಇದೆ. ಹಿಂದೆ ಸರಾಸರಿ ₹700ರಿಂದ ₹800 ಇತ್ತು. ಹೋದ ವರ್ಷ ಗರಿಷ್ಠ ₹2,500ಕ್ಕೆ ಏರಿತ್ತು.

ಬ್ಯಾಂಕ್‌ಗೆ ವಂಚನೆ: ₹ 105 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಬಿಐಗೆ ₹ 113.37 ಕೋಟಿ ವಂಚಿಸಿರುವ ಆರೋಪ ಎದುರಿಸುತ್ತಿರುವ ಭಾರತ್ ಇನ್‌ಫ್ರಾ ಎಕ್ಸ್‌ಪೋರ್ಟ್ಸ್ ಆ್ಯಂಡ್ ಇಂಪೋರ್ಟ್ಸ್ ಲಿ.ಗೆ ಸೇರಿದ ₹ 105.5 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಕಂಪನಿಯು ಕಟ್ಟಡ ನಿರ್ಮಾಣ ಸಾಮಗ್ರಿ ವಹಿವಾಟು ನಡೆಸುವುದಾಗಿ ಎಸ್‌ಬಿಐನಿಂದ ಸಾಲ ಪಡೆದಿತ್ತು. ಬಳಿಕ ಸಾಲ ಮರುಪಾವತಿ ಮಾಡದೇ ವಂಚಿಸಿತ್ತು. ಈ ಸಂಬಂಧ ಎಫ್‌ಐಆರ್ ದಾಖಲಿಸಿದ್ದ ಸಿಬಿಐ ತನಿಖೆ ನಡೆಸಿತ್ತು. ಸಿಬಿಐ ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪಪಟ್ಟಿ ಆಧರಿಸಿ ಇ.ಡಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ ಪ್ರತ್ಯೇಕ ಪ್ರಕರಣ ದಾಖಲಿಸಿದೆ.

ಕಂಪನಿ ಬೆಂಗಳೂರಿನಲ್ಲಿ ಹೊಂದಿರುವ ₹ 104.90 ಕೋಟಿ ಮೌಲ್ಯದ ಫಾರ್ಮ್ ಹೌಸ್ ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ₹ 14.5 ಲಕ್ಷ ನಗದನ್ನೂ ವಶಪಡಿಸಿಕೊಳ್ಳಲಾಗಿದೆ ಎಂದು ಇ.ಡಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂಪನಿಯು ಹತ್ತು ಸಾಲದ ಖಾತೆಗಳನ್ನು ಹೊಂದಿತ್ತು. ನಂತರ ಆ ಖಾತೆಗಳಲ್ಲಿನ ಸಾಲದ ಮೊತ್ತವನ್ನು ಹೆಚ್ಚಿಸಲಾಗಿತ್ತು. ಆರಾಧ್ಯ ವೈರ್ ರೋಪ್ಸ್ ಪ್ರೈವೇಟ್ ಲಿಮಿಟೆಡ್, ಆರಾಧ್ಯ ಸ್ಟೀಲ್ ಪ್ರೈವೇಟ್ ಲಿಮಿಟೆಡ್, ವೇದಿಕ್ ಇಸ್ಪಾಟ್ ಪ್ರೈವೇಟ್ ಲಿಮಿಟೆಡ್, ಭವಾನಿ ಸ್ಟೀಲ್ ಕಾರ್ಪೋರೇಷನ್ ಮತ್ತು ಸ್ಪಿಜೆಲ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್ ಜತೆ ಸೇರಿ ಸಂಚು ನಡೆಸಲಾಗಿತ್ತು.

ಬ್ಯಾಂಕ್‌ನಿಂದ ಪಡೆದ ಸಾಲದ ಮೊತ್ತವನ್ನು ಆರಾಧ್ಯ ವೈರ್ ರೋಪ್ಸ್ ಕಂಪನಿ ಖಾತೆಗೆ ವರ್ಗಾಯಿಸಲಾಗಿತ್ತು. ನಂತರ ಹಣವನ್ನು ವಿವಿಧ ಕಂಪನಿಗಳ ಖಾತೆಗಳಿಗೆ ವರ್ಗಾವಣೆ ಮಾಡಲಾಗಿತ್ತು. ಅಂತಿಮವಾಗಿ ಹಣವು ಭಾರತ್ ಇನ್‌ಫ್ರಾ ಎಕ್ಸ್‌ಪೋರ್ಟ್ಸ್ ಆ್ಯಂಡ್ ಇಂಪೋರ್ಟ್ಸ್ ಲಿಮಿಟೆಡ್ ಖಾತೆಗೆ ಮರಳಿ ಬಂದಿತ್ತು. ಅದನ್ನು ದುರ್ಬಳಕೆ ಮಾಡಲಾಗಿತ್ತು ಎಂದು ಇ.ಡಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

3–9–2023

ಜಾವಾ 70/80(ಹೊಸ)	12700-12800
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1730(1750)
ಒಂದು ವಾರದ ಡೆಲಿವರಿ	1725(1745)
ಸೋಯಾ ಕಚ್ಚಾ	872(875)
ಪಾಮ್ ವಾರದ ಡೆಲಿವರಿ	848(852)
ಸೂರ್ಯಕಾಂತಿ ಎಣ್ಣೆ ಕಚ್ಚಾ	850(850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	59,150 (59,150)
ಬೆಳ್ಳಿ ಕೆ.ಜಿ	73,250 (73,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೋಂಡಾ: 2030ರೊಳಗೆ 5 ಎಸ್‌ಯುವಿ ಬಿಡುಗಡೆ

ನವದೆಹಲಿ (ಪಿಟಿಐ): ಹೋಂಡಾ ಕಾರ್ಸ್ ಇಂಡಿಯಾ ಕಂಪನಿಯು 2030ರ ಒಳಗಾಗಿ ಭಾರತದ ಮಾರುಕಟ್ಟೆಗೆ ಒಟ್ಟು ಐದು ಸ್ಪೋರ್ಟ್ಸ್ ಯುಟಿಲಿಟಿ ವಾಹನಗಳನ್ನು (ಎಸ್‌ಯುವಿ) ಬಿಡುಗಡೆ ಮಾಡುವ ಯೋಜನೆ ಇಟ್ಟುಕೊಂಡಿದೆ ಎಂದು ಕಂಪನಿಯ ಭಾರತದ ಅಧ್ಯಕ್ಷ ಟಕುಯಾ ಸುಮುರಾ ಹೇಳಿದ್ದಾರೆ.

ಕಂಪನಿಯು 'ಎಲಿವೇಟ್' ಕಾರನ್ನು ಸೋಮವಾರ ಬಿಡುಗಡೆ ಮಾಡುವ ಮೂಲಕ ಮಧ್ಯಮ ಗಾತ್ರದ ಎಸ್‌ಯುವಿ ವಿಭಾಗವನ್ನು ಪ್ರವೇಶಿಸಿದೆ. ಇದರ ಎಕ್ಸ್ ಷೋರೂಂ ಬೆಲೆ ₹10.99 ಲಕ್ಷದಿಂದ 15.99 ಲಕ್ಷದವರೆಗೆ ಇದೆ.

ಈ ಮಾದರಿಯು ಹುಂಡೈ ಕ್ರೆಟಾ, ಮಾರುತಿ ಸುಜುಕಿ ಗ್ರ್ಯಾಂಡ್ ವಿಟಾರಾ, ಕಿಯಾ ಸೆಲ್ಟೋಸ್ ಮತ್ತು ಟೊಯೋಟ ಅರ್ಬನ್ ಕ್ರೂಸರ್ ಹೈರೈಡರ್ ಮಾದರಿಗಳಿಗೆ ಪೈಪೋಟಿ ನೀಡಲಿದೆ.

ಮಾರಾಟದ ದೃಷ್ಟಿಯಿಂದ ಎಸ್‌ಯುವಿ ವಿಭಾಗವು ಸದ್ಯ ಮುಂಚೂಣಿಯಲ್ಲಿದೆ. ಹೀಗಾಗಿ ಎಸ್‌ಯುವಿ ವಿಭಾಗದಲ್ಲಿ ಕಂಪನಿ ಇರಬೇಕಾದುದು ಬಹಳ ಮುಖ್ಯ ಎಂದು ಅವರು ಹೇಳಿದ್ದಾರೆ.

ಎಲಿವೇಟ್ ಮಾದರಿಯು 1.5 ಲೀಟರ್ ಪೆಟ್ರೋಲ್ ಎಂಜಿನ್ ಹೊಂದಿದ್ದು 6–ಸ್ಪೀಡ್ ಮ್ಯಾನುಯಲ್ ಮತ್ತು 7 ಸ್ಪೀಡ್ ಸಿವಿಟಿ ಆಯ್ಕೆಗಳಲ್ಲಿ ಲಭ್ಯವಿದೆ ಎಂದು ಕಂಪನಿ ತಿಳಿಸಿದೆ.

ಪ್ರಯಾಣಿಕ ವಾಹನಗಳಲ್ಲಿ ಎಸ್‌ಯುವಿ ವಿಭಾಗದ ಪಾಲು 2022-23ನೇ ಹಣಕಾಸು ವರ್ಷದಲ್ಲಿ ಶೇ 43ರಷ್ಟು ಇದ್ದಿದ್ದು ಸದ್ಯ ಶೇ 48ಕ್ಕೆ ಏರಿಕೆ ಕಂಡಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹382-546
ದ್ವಿತಳಿ (ಬಿ.ವಿ)	₹344-660

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹145
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹125

(ಪ್ರತಿ ಕೆ.ಜಿಗೆ)

ಕೆಎಸ್‌ಪಿಸಿಬಿ ಅಧ್ಯಕ್ಷರಾಗಲು ಬಿಇ ಸಾಕು

ಒಂದನೇ ಪುಟದಿಂದ...

ಅಧ್ಯಕ್ಷರಾಗುವವರ ವಯೋಮಿತಿಯನ್ನೂ ಸಡಿಲಿಸಿದೆ. ಈ ಹಿಂದೆ, ಅರ್ಜಿ ಸಲ್ಲಿಸುವ ಕೊನೆಯ ದಿನ 56 ವರ್ಷ ವಯಸ್ಸು ದಾಟಿದವರಿಗೆ ಅಧ್ಯಕ್ಷರಾಗಲು ಅವಕಾಶ ಇರಲಿಲ್ಲ. ಅದನ್ನು 65 ವರ್ಷ ದಾಟಿರಬಾರದು ಎಂದು ತಿದ್ದುಪಡಿ ಮಾಡಲಾಗಿದೆ.

ಮಂಡಳಿಯ ಸದಸ್ಯ ಕಾರ್ಯದರ್ಶಿ ಹುದ್ದೆಗೆ ಹಿರಿಯ ಐಎಎಸ್ ಅಧಿಕಾರಿಯನ್ನು ನಿಯೋಜಿಸಲು ಈ ಹಿಂದೆ ಅವಕಾಶ ಇತ್ತು. ಹೊಸ ಆದೇಶದಲ್ಲಿ ಅಂತಹ ಐಎಎಸ್ ಅಧಿಕಾರಿ ಎಂಜಿನಿಯರಿಂಗ್ ಪದವಿ ಅಥವಾ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ಅಥವಾ ಅಂಗೀಕೃತ ವಿಶ್ವವಿದ್ಯಾಲಯ ಅಥವಾ ಸಂಸ್ಥೆಯಿಂದ ಪರಿಸರಕ್ಕೆ ಸಂಬಂಧಿಸಿದ ವಿಷಯ (ಅಲೈಡ್ ಸೈನ್ಸ್) ಓದಿರಬೇಕು. ಜೊತೆಗೆ, ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ವಿಷಯದಲ್ಲಿ ಅನುಭವ ಹೊಂದಿರಬೇಕು ಎಂದೂ ತಿಳಿಸಲಾಗಿದೆ.

ಮಂಡಳಿಗೆ ರಾಜ್ಯ ಸರ್ಕಾರ ಮಾಲಿನ್ಯ ನಿಯಂತ್ರಣ ಮತ್ತು ಪರಿಸರ ಸಂಬಂಧಿಸಿದ ವಿಷಯಗಳ ಜೊತೆ ನೇರ ಸಂಬಂಧ ಇರುವ ರಾಜ್ಯ ಸರ್ಕಾರದ ಇಲಾಖೆಗಳಿಂದ ಐವರು ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳಿಂದ ಐವರು, ಮೂವರು ಅಧಿಕಾರೇತರ ಸದಸ್ಯರು ಕಂಪನಿಗಳನ್ನು ಪ್ರತಿನಿಧಿಸುವ ಇಬ್ಬರನ್ನು ನಾಮನಿರ್ದೇಶನ ಮಾಡಲು ಕೂಡಾ ಅವಕಾಶ ಕಲ್ಪಿಸಲಾಗಿದೆ.

ಕೆಎಸ್‌ಪಿಸಿಬಿ ಅಧ್ಯಕ್ಷ ಸ್ಥಾನದ ತಮ್ಮ ಅಧಿಕಾರಾವಧಿ ಮೊಟಕುಗೊಳಿಸಿದ್ದ ಕ್ರಮವನ್ನು ಪ್ರಶ್ನಿಸಿ ಶಾಂತ್.ಎ. ತಿಮ್ಮಯ್ಯ ಸಲ್ಲಿಸಿರುವ ತಕರಾರು ಅರ್ಜಿ ಇದೇ 7ರಂದು ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿದೆ.

ಅಕ್ಕಿ ದರ ಎಲ್ಲೆಡೆ ದುಬಾರಿ

ಒಂದನೇ ಪುಟದಿಂದ...

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಅಭಿಲಾಷಾ, ಪದ್ಮರೇಖಾ, ಜಡ್ಡಕ್ಕಿ ತಳಿ ಬೆಳೆಯಲಾಗುತ್ತದೆ. ಕಳೆದ ಎರಡು ತಿಂಗಳಲ್ಲಿ ಸಾಗರದಲ್ಲಿ ಅಭಿಲಾಷಾ ಹಾಗೂ ಪದ್ಮರೇಖಾ ಅಕ್ಕಿಯ ದರ ಕೆ.ಜಿ.ಗೆ ₹26 ಇದ್ದದ್ದು ₹46ಕ್ಕೆ ಏರಿಕೆಯಾಗಿದೆ.

'ಎರಡು ತಿಂಗಳ ಅವಧಿಯಲ್ಲಿ (ಜುಲೈ, ಆಗಸ್ಟ್) ಧಾರವಾಡ ಜಿಲ್ಲೆಯಲ್ಲಿ ಅಕ್ಕಿ ಪೂರೈಕೆ ಕೊಂಚ ಕಡಿಮೆಯಾದ ಕಾರಣ ಬೆಲೆಯು ಕೆ.ಜಿ.ಗೆ ₹10ರಿಂದ ₹12ರವರೆಗೆ ಏರಿಕೆಯಾಗಿದೆ' ಎಂದು ವ್ಯಾಪಾರಿಗಳು ಹೇಳುತ್ತಾರೆ.

ಬಯಲುಸೀಮೆಯಲ್ಲಿ ತುಟ್ಟಿ: ಕಳೆದ ಎಂಟು ತಿಂಗಳ ಅವಧಿಯಲ್ಲಿ ಉತ್ತಮ ಗುಣಮಟ್ಟದ ಸೋನಾ ಮಸೂರಿ ಅಕ್ಕಿಯ ದರ ಶೇ 25ರಷ್ಟು ಹೆಚ್ಚಳ ಕಂಡಿದೆ ಎಂದು ಕಲಬುರಗಿ ಜಿಲ್ಲಾ ಕಿರಾಣಿ ವರ್ತಕರ ಸಂಘದ ಅಧ್ಯಕ್ಷ ರವೀಂದ್ರ ಮಾದಮಶೆಟ್ಟಿ ಹೇಳುತ್ತಾರೆ.

ಕಳೆದ ಎರಡು ತಿಂಗಳಿಂದ ಬೀದರ್ ಜಿಲ್ಲೆಗೆ ಅಕ್ಕಿ ಆವಕ ಭಾರಿ ಪ್ರಮಾಣದಲ್ಲಿ ಕಡಿಮೆ ಆಗಿರುವುದು ಬೆಲೆ ಏರಿಕೆಗೆ ಮುಖ್ಯ ಕಾರಣ ಎಂದು ಅಕ್ಕಿ ವ್ಯಾಪಾರಿಗಳು ಹೇಳುತ್ತಾರೆ. ಉತ್ತಮ ಗುಣಮಟ್ಟದ ಅಕ್ಕಿ ದರ ಎರಡು ತಿಂಗಳ ಹಿಂದೆ ಕ್ವಿಂಟಲ್‌ಗೆ ಗರಿಷ್ಠ ₹5,500 ಇದ್ದಿದ್ದು ಈಗ ₹6,800ರವರೆಗೆ ತಲುಪಿದೆ.

'ಮಳೆ ಕೊರತೆಯ ಕಾರಣ ಮುಂದಿನ ದಿನಗಳಲ್ಲಿ ದರ ಇನ್ನೂ ಹೆಚ್ಚಲಿದೆ' ಎಂದು ಕರ್ನಾಟಕ ರಾಜ್ಯ ಅಕ್ಕಿ ಗಿರಣಿ ಮಾಲೀಕರ ಸಂಘದ ಕಾರ್ಯಾಧ್ಯಕ್ಷ, ರಾಯಚೂರಿನ ಸಾವಿತ್ರಿ ಪುರುಷೋತ್ತಮ್ ತಿಳಿಸಿದರು. 'ರಾಯಚೂರಿನಲ್ಲಿ 90 ಅಕ್ಕಿ ಗಿರಣಿಗಳಿವೆ. ಜಿಲ್ಲೆಯಲ್ಲಿ ರೈತರು ಭತ್ತದ ಎರಡು ಬೆಳೆ ತೆಗೆಯುತ್ತಾರೆ. ಈ ವರ್ಷ ಮುಂಗಾರು ಕೈಕೊಟ್ಟಿದೆ. ಹಿಂಗಾರಿನ ಭರವಸೆ ಇಲ್ಲ. ಮಳೆ ಬಾರದಿದ್ದರೆ ಅಕ್ಕಿ ಗಿರಣಿಗಳು ಬಾಗಿಲು ಮುಚ್ಚಲಿವೆ. ಅಕ್ಕಿ ದರ ಇನ್ನೂ ಹೆಚ್ಚಾಗಲಿದೆ. ಕಾರ್ಮಿಕರು ಬೀದಿಗೆ ಬರಲಿದ್ದಾರೆ' ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಹೊರೆ: ಮಂಡ್ಯ ಜಿಲ್ಲೆಯ ರೈತರು ಜಯ, ಐಆರ್–64, 1001 ತಳಿಯ ಭತ್ತವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಈ ತಳಿಗಳ ರೀಟೆಲ್ ದರ ಏರಿಕೆಯಾಗಿದೆ. ಎರಡು ತಿಂಗಳ ಹಿಂದೆ ₹22–₹25ರಷ್ಟು ಇದ್ದ ಕೆ.ಜಿ. ಜಯ ಅಕ್ಕಿ ಬೆಲೆ ಈಗ ₹38–₹40ಕ್ಕೆ ತಲುಪಿದೆ. ₹30–₹32 ಇದ್ದ ಐಆರ್–64 ಅಕ್ಕಿ ಈಗ ₹45ರವರೆಗೂ ಏರಿಕೆ ಕಂಡಿದೆ. ₹23ರವರೆಗೆ ಮಾರಾಟವಾಗುತ್ತಿದ್ದ 1001 ಅಕ್ಕಿ ಬೆಲೆ ಈಗ ₹35ರವೆಗೂ ಏರಿಕೆಯಾಗಿದೆ.

ಮೈಸೂರು ಭಾಗದಲ್ಲಿ ಭತ್ತ ಬೆಳೆಯುವ ಪ್ರದೇಶ ಕ್ರಮೇಣ ಕಡಿಮೆಯಾಗುತ್ತಿದೆ. ಭತ್ತ ಬೆಳೆಯುವ ಕಡೆಗಳಲ್ಲಿ, ಇಳುವರಿ ಕುಸಿತವಾಗಿರುವುದರಿಂದ ದಪ್ಪ ಅಕ್ಕಿ ಬೆಲೆ ಏರಿಕೆಯಾಗಿದೆ ಎನ್ನುತ್ತಾರೆ ರೈತರು.

ಮಧ್ಯ ಕರ್ನಾಟಕದಲ್ಲಿ ಭತ್ತ ಭಾರ: ಮಳೆಯ ಕೊರತೆ, ಹೊರ ರಾಜ್ಯಗಳಿಂದ ಭತ್ತ ಹಾಗೂ ಅಕ್ಕಿಗೆ ಬೇಡಿಕೆ ಹೆಚ್ಚಿರುವುದರಿಂದ ದಾವಣಗೆರೆ ಜಿಲ್ಲೆಯಲ್ಲಿ ಅಕ್ಕಿ ದರ ಕ್ವಿಂಟಲ್‌ಗೆ ₹400ರಿಂದ ₹500ರಷ್ಟು ಏರಿಕೆಯಾಗಿದೆ. ಆರ್‌ಎನ್‌ಆರ್ ತಳಿ, ಸೋನಾ ಮಸೂರಿ, ಕಚ್ಚಾ ಅಕ್ಕಿ ಸೇರಿದಂತೆ ಎಲ್ಲ ಬಗೆಯ ಅಕ್ಕಿ ದರ ಹೆಚ್ಚಿದೆ ಎಂದು ವ್ಯಾಪಾರಿಗಳು ಹೇಳಿದ್ದಾರೆ.

ತಮಿಳುನಾಡು, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಿಂದ ರಾಜ್ಯದ ಅಕ್ಕಿಗೆ ಬೇಡಿಕೆ ಹೆಚ್ಚಾಗಿದೆ. ಈ ಬಾರಿ ವಾಡಿಕೆಯಷ್ಟು ಮಳೆ ಆಗಿಲ್ಲ. ಮಳೆ ಕೊರತೆಯಿಂದಾಗಿ ಭದ್ರಾ ಜಲಾಶಯ ಭರ್ತಿಯಾಗಿಲ್ಲ. ನಿರೀಕ್ಷಿತ ಪ್ರಮಾಣದಲ್ಲಿ ಭತ್ತ ನಾಟಿ ಕೂಡ ಆಗಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ ಭತ್ತಕ್ಕೆ ಬಂಪರ್ ಬೆಲೆ ದೊರೆಯಬಹುದು ಎಂದು ಭಾವಿಸಿರುವ ಕೆಲ ರೈತರು ಭತ್ತವನ್ನು ದಾಸ್ತಾನು ಮಾಡುತ್ತಿದ್ದಾರೆ. ಅಕ್ಕಿ ದರ ಏರಿಕೆಗೆ ಇದು ಪ್ರಮುಖ ಕಾರಣ ಎಂದು ವರ್ತಕರು ಹೇಳುತ್ತಾರೆ.

'ಭತ್ತ ಬೆಳೆಯುವ ಪ್ರದೇಶ ಅಡಿಕೆ ತೋಟವಾಗಿ ಮಾರ್ಪಾಡಾಗುತ್ತಿದೆ. ಸಹಜವಾಗಿ ಭತ್ತದ ಉತ್ಪಾದನೆ ಕುಂಠಿತವಾಗಿದೆ. ಇದೂ ದರ ಹೆಚ್ಚಳಕ್ಕೆ ಕಾರಣ' ಎಂದು ರೈತ ಸಂಘದ ರಾಜ್ಯ ಘಟಕದ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಅಭಿಪ್ರಾಯಪಡುತ್ತಾರೆ.

ಬೆಂಗಳೂರು ಸುತ್ತ: ತುಮಕೂರು ಮಾರುಕಟ್ಟೆಗೆ ಅಕ್ಕಿ ಆವಕ ಕಡಿಮೆಯಾದ ಕಾರಣ ಬೆಲೆ ಏರುಮುಖವಾಗಿದೆ. ಕಳೆದ ಐದಾರು ತಿಂಗಳಿಂದ ದರ ಹೆಚ್ಚುತ್ತಲೇ ಸಾಗಿದ್ದು, ಈ ವಾರ ಕೆ.ಜಿ.ಗೆ ಸರಾಸರಿ ₹5ರಷ್ಟು ಹೆಚ್ಚಳವಾಗಿದೆ. ಎರಡು–ಮೂರು ತಿಂಗಳ ಹಿಂದೆ ಉತ್ತಮ ಗುಣಮಟ್ಟದ ಸೋನಾ ಮಸೂರಿ ಅಕ್ಕಿ ಕೆ.ಜಿಗೆ ₹40–₹50ಕ್ಕೆ ಸಿಗುತ್ತಿತ್ತು. ಈಗ ₹60ಕ್ಕೆ ಹೆಚ್ಚಳವಾಗಿದೆ. ರಾಜಮುಡಿ ಕೆ.ಜಿ ₹60ರಿಂದ ₹66ಕ್ಕೆ ಜಿಗಿದಿದೆ ಎಂದು ಇಲ್ಲಿನ ಮಂಡಿಪೇಟೆ ವರ್ತಕರು ತಿಳಿಸಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ತಿಂಗಳಿನಿಂದ ಎಲ್ಲ ಮಾದರಿಯ ಅಕ್ಕಿ ಬೆಲೆ ಕೆ.ಜಿಗೆ ₹10ರಿಂದ ₹15ವರೆಗೆ ಏರಿಕೆಯಾಗಿದೆ. ಕೆ.ಜಿ ಸೋನಾ ಮಸೂರಿ ಅಕ್ಕಿ ದರ ₹55 ಇದ್ದದ್ದು ಈಗ ₹70ರವರೆಗೆ ಹೆಚ್ಚಾಗಿದೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.

ಬೆಂಗಳೂರಿನ ಸಗಟು ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಸೋನಾ ಮಸೂರಿಯ ಗರಿಷ್ಠ ಮಾರಾಟ ಬೆಲೆಯು ವಾರದ ಅವಧಿಯಲ್ಲಿ ಕ್ವಿಂಟಲ್‌ಗೆ ₹600ರಷ್ಟು (ಕೆ.ಜಿ.ಗೆ ₹6) ಹೆಚ್ಚಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ
CITATION
IN THE COURT OF I ADDL SENIOR CIVIL JUDGE, AT KALABURAGI
O.S.No.283 OF 2022
Plaintiff: Smt Geetha. N
Versus
Defendants: Prakash and others
To. Defendant No. 3(a)
Sridhar S. S/o V. Shankar, Aged about: 40 years, Occ: IT Professional, R/o No:118/1, 1 Floor, 4th Main Road, 6th Cross, Sampangiram Nagar, South Bengaluru-560027
Whereas the notices issued to you the Defendant No. 3(a) in ordinary course and by RPAD are returned unserved for one or the other reason. That you Defendant No. 3(a) is intentionally avoiding the service of notice.
Therefore by this publication you are hereby directed to appear in person or through a pleader duly instructed and able to answer the material questions on 04-10-2023 at 11-00am, on failure the matter will be heard and decided as per law.
Given under my hand and seal of this Court on this the day of 22nd August, 2023, at Kalaburagi.
By order of the Hon'ble Court
Sd/-C.M.O
I Addl. Civil Judge (Sr. Dn)
Kalaburagi
Place: Kalaburagi
Date: 22/8/2023
Sd/- M.R. Hiremath
Advocate for Plaintiff

ಉದ್ಯೋಗಾವಕಾಶ
Hotel
ಬೆಂಗಳೂರು ಪೀಣ್ಯ ಇಂಡಸ್ಟ್ರಿಯಲ್ ಕ್ಯಾಂಟೀನಿಗೆ ಅಡುಗೆಯವರು (ದಕ್ಷಿಣ/ಉತ್ತರ ಭಾರತ ಶೈಲಿ) ಅಡುಗೆ ಸಹಾಯಕರು, ರುಬ್ಬುವವರು, ತರಕಾರಿ ಹೆಚ್ಚುವವರು. Supervisor ಬೇಕಾಗಿದ್ದಾರೆ. ಊಟ ವಸತಿ ಸೌಕರ್ಯವಿದೆ. ಸಂಪರ್ಕಿಸಿ 9591810814
Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366430266, 6366430366
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

General
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673
ಭವಿಷ್ಯ
Astrology
★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806

ವ್ಯಾಪಾರ
Business Offers
Finance
ಹೊಸ ಉದ್ಯಮಕ್ಕೆ ಮಾಹಿತಿ ಮತ್ತು ಆರ್ಥಿಕ ಸಹಾಯ ಬೇಕಾದಲ್ಲಿ ಸಂಪರ್ಕಿಸಿ: 7406009827, 8310891968, 8310754239
ಪ್ರವಾಸ
Travel
ಶಿವನಂದಿ ಟ್ರಾವಲ್ಸ್, ಹನುಮಂತನಗರ, ಬೆಂಗಳೂರು. ಕಾಶಿ ಯಾತ್ರ 10ದಿನ 5.10.2023 ದೆಹಲಿ,ಆಗ್ರಾ, ಮಥುರಾ,ನೈಮಿಷಾರಣ್ಯ ಅಯೋಧ್ಯ,ಕಾಶಿ,ಗಯಾ ತ್ರಿವೇಣಿ ಸಂಗಮ. 9036056352, 9481027363.
16112023 14ದಿನ ಮಧ್ಯಪ್ರದೇಶ, ಗುಜರಾತ್,ರಾಜಸ್ಥಾನ. ಡಿಸೆಂಬರ್ & ಜನವರಿಯಲ್ಲಿ 9ದಿನ ಅಂಡಮಾನ್ ಪ್ರವಾಸ ಹಡಗು & ವಿಮಾನದಲ್ಲಿ.ಶ್ರೀಗಂಗಾ ಟೂರಿಸ್ಟ್. 9480253807
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH Classifieds ಪ್ರಜಾವಾಣಿ
More value, more impact
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

ನರಮೇಧ ಎಂದು ಹೇಳಿಲ್ಲ, ಪ್ರಕರಣ ಎದುರಿಸಲೂ ಸಿದ್ಧ: ಡಿಎಂಕೆ ಸಚಿವ ಉದಯನಿಧಿ ಸ್ಟಾಲಿನ್

‘ಸನಾತನ ಧರ್ಮ ಕುರಿತ ಹೇಳಿಕೆಗೆ ಬದ್ಧ’

ಪ್ರಜಾವಾಣಿ ವಾರ್ತೆ

ಉದಯನಿಧಿ ಸ್ಟಾಲಿನ್

ಚೆನ್ನೈ: ‘ಸನಾತನ ಧರ್ಮದ ವಿರುದ್ಧ ಮಾತನಾಡುವುದನ್ನು, ಅದನ್ನು ವಿರೋಧಿಸುವುದನ್ನು ಮುಂದುವರಿಸುತ್ತೇನೆ. ಈ ವಿಷಯದಲ್ಲಿ ಎಷ್ಟು ಪ್ರಕರಣ ದಾಖಲಾದರೂ ಎದುರಿಸಲು ನಾನು ಸಿದ್ಧ’ ಎಂದು ಡಿಎಂಕೆ ಸಚಿವ ಉದಯನಿಧಿ ಸ್ಟಾಲಿನ್ ಹೇಳಿದ್ದಾರೆ.

‘ಆದರೆ, ಯಾವುದೇ ಸಮುದಾಯದ ನರಮೇಧ ಮಾಡಬೇಕು ಎಂದು ನಾನು ಎಂದಿಗೂ ಹೇಳಿಲ್ಲ. ಸನಾತನ ಧರ್ಮದ ನಿರ್ಮೂಲನೆ ಕುರಿತಂತೆ ಭಾನುವಾರ ನಾನು ಹೇಳಿರುವ ಮಾತುಗಳಿಗೆ ಈಗಲೂ ಬದ್ಧನಾಗಿದ್ದೇನೆ’ ಎಂದು ಸೋಮವಾರ ಸ್ಪಷ್ಟಪಡಿಸಿದರು.

ತಮ್ಮ ಹೇಳಿಕೆಗೆ ವ್ಯಕ್ತವಾದ ಆಕ್ರೋಶ, ಟೀಕೆಗಳಿಂದ ಧೃತಿಗೆಡದ ಅವರು, ‘ನನ್ನ ಮಾತಿನಿಂದ ಹಲವರಿಗೆ ಇರಿಸುಮುರಿಸಾಗುತ್ತದೆ ಎಂದಿದ್ದೆ. ಅದು ನಿಜವಾಗಿದೆ. ಸನಾತನ ಧರ್ಮ ಮಹಿಳೆಯರ ಬೆಳವಣಿಗೆಗೆ ಅಡ್ಡಿಯಾಗಿದೆ. ಇದಕ್ಕೆ ಪೆಟ್ಟು ನೀಡಿರುವುದೇ ದ್ರಾವಿಡ ಸಿದ್ಧಾಂತ’ ಎಂದರು.

ಒಂದು ಸಿದ್ಧಾಂತವನ್ನು ವಿರೋಧಿಸುವುದರ ಅರ್ಥ ಅದನ್ನು ಪಾಲಿಸುವವರನ್ನು ಕೊಲ್ಲುವುದು ಎಂದಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ‘ಕಾಂಗ್ರೆಸ್ ಮುಕ್ತ’ ಭಾರತ ಸ್ಥಾಪನೆ ಕುರಿತಂತೆ ಮಾತನಾಡುತ್ತಾರೆ. ಅದರರ್ಥ ಕಾಂಗ್ರೆಸ್ಸಿಗರನ್ನು ಕೊಲ್ಲುವುದು ಎಂಬುದೇ ಎಂದು ಕಟುವಾಗಿ ಪ್ರಶ್ನಿಸಿದ ಅವರು, ಬಿಜೆಪಿಯು ನನ್ನ ಹೇಳಿಕೆಯನ್ನು ‘ಹತ್ಯಾಕಾಂಡ’ ಎಂಬಂತೆ ತಿರುಚುತ್ತಿದೆ ಎಂದು ಆರೋಪಿಸಿದರು.

‘ಸನಾತನ ಧರ್ಮದ ಸಿದ್ಧಾಂತ ವಿರೋಧಿಸಬೇಕು ಎಂದಷ್ಟೇ ಹೇಳಿದ್ದೇನೆ. ಅದನ್ನು ನಿರ್ಮೂಲನೆ ಮಾಡಬೇಕು ಎಂದು ಪುನರುಚ್ಚರಿಸುತ್ತೇನೆ. ತಮಿಳುನಾಡಿನಲ್ಲಿ ಕೆಲವರು ದ್ರಾವಿಡ ಸಿದ್ಧಾಂತ ನಿರ್ಮೂಲನೆ ಮಾಡಬೇಕು ಎನ್ನುತ್ತಾರೆ. ಅದರರ್ಥ ಡಿಎಂಕೆ ಯವರನ್ನು ಕೊಲ್ಲಬೇಕು ಎಂಬುದೇ? ಎಂದು ಅವರು ಪ್ರಶ್ನಿಸಿದ ಉದಯನಿಧಿ ಅವರು, ‘ಸಮಾನತೆಯ ವಿರುದ್ಧ ಇರುವ ಯಾವುದೇ ಸಿದ್ಧಾಂತಕ್ಕೆ ನಮ್ಮ ವಿರೋಧವಿದೆ’ ಎಂದು ಹೇಳಿದರು.

ವಿಸಿಕೆ ಬೆಂಬಲ: ಡಿಎಂಕೆ ಮೈತ್ರಿ ಪಕ್ಷವಾದ ವಿಡುತಲೈ ಚಿರುತೈಗಲ್ ಕಾಟ್ಚಿ (ವಿಸಿಕೆ) ಉದಯನಿಧಿ ಅವರನ್ನು ಬೆಂಬಲಿಸಿದೆ.

ಪಕ್ಷದ ನಾಯಕ ತೋಲ್ ತಿರುಮವಲವನ್, ‘ಸನಾತನಧರ್ಮ ವಿರೋಧಿಸುವುದು ಎಂದರೆ ಹಿಂದುತ್ವವನ್ನು ವಿರೋಧಿಸುವುದು ಎಂದರ್ಥವಲ್ಲ ಎಂದು ಹೇಳಿದರು.

ನ್ಯೂನತೆ ಮರೆಮಾಚಲು ಧರ್ಮದ ಅಸ್ತ್ರ ಬಳಕೆ: ಸ್ಟಾಲಿನ್


ಎಂ.ಕೆ. ಸ್ಟಾಲಿನ್

ಚೆನ್ನೈ: ‘ಬಿಜೆಪಿಯ ಕೋಮುವಾದಿ ರಾಜಕೀಯ, ದ್ವೇಷ ಪ್ರೇರಿತ ನೀತಿಗಳಿಂದ ಮಣಿಪುರ ಮತ್ತು ಹರಿಯಾಣದ ಸ್ಥಿತಿ ಬಿಗಡಾಯಿಸಿದೆ. ಭಾರತದ ಸ್ಥಿತಿಯೂ ಹೀಗಾಗದಂತೆ ತಡೆಯಲು 2024ರ ಲೋಕಸಭಾ ಚುನಾವಣೆಯಲ್ಲಿ ‘ಇಂಡಿಯಾ’ ಮೈತ್ರಿಕೂಟವು ಜಯಗಳಿಸಬೇಕಿದೆ’ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಪ್ರತಿಪಾದಿಸಿದ್ದಾರೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಅಭಿಯಾನದ ಭಾಗವಾಗಿ ಹಮ್ಮಿಕೊಂಡಿರುವ ಪಾಡ್‌ಕಾಸ್ಟ್‌ನ ಮೊದಲ ಸರಣಿಯಲ್ಲಿ ಅವರು, ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದರು.

ಸರ್ಕಾರವು ತನ್ನ ನ್ಯೂನತೆಗಳನ್ನು ಮರೆಮಾಚಲು ಧರ್ಮವನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದೆ. ಜನರ ನಡುವೆ ಧಾರ್ಮಿಕ ಭಾವನೆಗಳನ್ನು ಕೆರಳಿಸುತ್ತಿದೆ. ಈ ಕೋಮು ಜ್ವಾಲೆಯಲ್ಲಿ ತನ್ನ ಇಚ್ಛೆಯನ್ನು ಈಡೇರಿಸಿಕೊಳ್ಳುತ್ತಿದೆ ಎಂದು ದೂರಿದರು.

‘ಇಂಡಿಯಾ’ ಕ್ಷಮೆಯಾಚಿಸಲಿ: ರಾಜನಾಥ್ ಸಿಂಗ್

ಜೈಸಲ್ಮೇರ್ (ಪಿಟಿಐ): ಉದಯನಿಧಿ ಅವರ ಹೇಳಿಕೆ ವಿಚಾರದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಅಶೋಕ್ ಗೆಹಲೋತ್ ಅವರು ಏಕೆ ಮೌನ ವಹಿಸಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೋಮವಾರ ಪ್ರಶ್ನಿಸಿದರು.

ರಾಜಸ್ಥಾನದಲ್ಲಿ ಬಿಜೆಪಿಯ ಮೂರನೇ ಹಂತದ ‘ಪರಿವರ್ತನಾ ಯಾತ್ರೆ’ಗೆ ಚಾಲನೆ ನೀಡಿ ಮಾತನಾಡಿದ ಅವರು, ‘ಚಂದ್ರಯಾನವು ಚಂದ್ರನ ದಕ್ಷಿಣ ಧ್ರುವದಲ್ಲಿ ಯಶಸ್ವಿಯಾಗಿ ಲ್ಯಾಂಡ್ ಆಗಿದೆ. ಆದರೆ ‘ರಾಹುಲ್‌ಯಾನ’ ಉಡಾವಣೆಯೂ ಆಗಿಲ್ಲ, ಲ್ಯಾಂಡ್ ಕೂಡ ಆಗಿಲ್ಲ’ ಎಂದು ರಾಹುಲ್ ಗಾಂಧಿ ಅವರನ್ನು ಅಣಕಿಸಿದರು.

‘ಸನಾತನ ಧರ್ಮವನ್ನು ಅವಮಾನಿಸಿದ್ದಕ್ಕಾಗಿ ವಿರೋಧ ಪಕ್ಷಗಳ ಒಕ್ಕೂಟ ‘ಇಂಡಿಯಾ’ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಭಾರತ ನಿಮ್ಮನ್ನು ಕ್ಷಮಿಸುವುದಿಲ್ಲ’ ಎಂದು ಆಗ್ರಹಿಸಿದರು.

ಪ್ರಕರಣ ದಾಖಲು

ಮುಜಫ್ಫರಪುರ (ಬಿಹಾರ): ಸನಾತನ ಧರ್ಮ ಕುರಿತು ವಿವಾದಾತ್ಮಕ ಹೇಳಿಕೆ ನೀಡಿರುವ ಉದಯನಿಧಿ ಸ್ಟಾಲಿನ್ ವಿರುದ್ಧ ಬಿಹಾರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ.

ಉದಯನಿಧಿ ಅವರ ಹೇಳಿಕೆಯಿಂದ ಹಿಂದೂಗಳ ಭಾವನೆಗೆ ಧಕ್ಕೆಯಾಗಿದೆ ಎಂದು ಆರೋಪಿಸಿ ಇಲ್ಲಿನ ಮುಖ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಪಂಕಜ್ ಕುಮಾರ್ ಅವರಲ್ಲಿ ವಕೀಲ ಸುಧೀರ್ ಕುಮಾರ್ ಓಝಾ ಅವರು ಪ್ರಕರಣ ದಾಖಲಿಸಿದ್ದಾರೆ. ಪ್ರಕರಣದ ವಿಚಾರಣೆಯನ್ನು ಕೋರ್ಟ್ ಸೆಪ್ಟೆಂಬರ್ 14ಕ್ಕೆ ಮುಂದೂಡಿದೆ.

ಸರ್ವ ಧರ್ಮ ಗೌರವಿಸಿ: ಕಾಂಗ್ರೆಸ್

ನವದೆಹಲಿ (ಪಿಟಿಐ): ‘ಎಲ್ಲಾ ಧರ್ಮಗಳನ್ನು ಗೌರವಿಸಬೇಕು. ಜೊತೆಗೆ, ತನ್ನ ಸ್ವಂತ ಅಭಿಪ್ರಾಯ ಹಂಚಿಕೊಳ್ಳಲು ಪ್ರತಿ ರಾಜಕೀಯ ಪಕ್ಷಕ್ಕೂ ಸ್ವಾತಂತ್ರ್ಯವಿದೆ’ ಎಂದು ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

ಸನಾತನ ಧರ್ಮದ ಬಗ್ಗೆ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ನೀಡಿದ ಹೇಳಿಕೆ ಬಗ್ಗೆ ಕಾಂಗ್ರೆಸ್ ಮೌನವಹಿಸಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಪ್ರಶ್ನಿಸಿದ ಬೆನ್ನಲ್ಲೇ, ಕೈಪಾಳಯದಿಂದ ಭಿನ್ನವಾದ ಹೇಳಿಕೆ ಹೊರಬಿದ್ದಿದೆ.

‘ಸರ್ವ ಧರ್ಮಗಳನ್ನು ಸಮಾನವಾಗಿ ಕಾಣಬೇಕು ಎಂಬುದು ಪಕ್ಷದ ಸಿದ್ಧಾಂತ. ಆದರೆ, ಆಯಾ ಪಕ್ಷಗಳು ಸ್ವಂತ ಅಭಿಪ್ರಾಯ ಮಂಡಿಸಲು ಸ್ವಾತಂತ್ರ್ಯ ಹೊಂದಿವೆ ಎಂಬುದನ್ನೂ ಬಿಜೆಪಿ ಅರ್ಥಮಾಡಿಕೊಳ್ಳಬೇಕಿದೆ. ಪ್ರತಿಯೊಬ್ಬರ ನಂಬಿಕೆಗಳನ್ನು ನಾವು ಗೌರವಿಸುತ್ತೇವೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

ವಿವಿಧತೆಯಲ್ಲಿ ಏಕತೆಯೇ ಭಾರತದ ವೈಶಿಷ್ಟ್ಯ. ಪ್ರತಿ ಧರ್ಮವೂ ಪ್ರತ್ಯೇಕ ಉದಾತ್ತ ಭಾವನೆ ಹೊಂದಿದೆ. ಹಾಗಾಗಿ, ಯಾರೊಬ್ಬರೂ ಜನರ ಭಾವನೆಗಳಿಗೆ ಚ್ಯುತಿ ತರಬಾರದು

ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ, ಪಶ್ಚಿಮ ಬಂಗಾಳ

‘ಮಾನವೀಯತೆ ಇಲ್ಲದ ಧರ್ಮ ಶುದ್ಧೀಕರಣವಾಗಲಿ’

ದಾವಣಗೆರೆ: ‘ಯಾವ ಧರ್ಮವು ನ್ಯಾಯ, ಸಮಾನತೆಯನ್ನು ಬೋಧಿಸುವುದಿಲ್ಲವೋ ಅದು ಧರ್ಮ ಎನಿಸಿಕೊಳ್ಳುವು ದಿಲ್ಲ. ಮನುಷ್ಯ, ಮಾನವೀಯತೆ ಇಲ್ಲದ ಧರ್ಮ ಶುದ್ಧೀಕರಣವಾಗಬೇಕು’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ಸಚಿವ ಉದಯನಿಧಿ ಸ್ಟಾಲಿನ್ ಅವರ ಹೇಳಿಕೆಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ‘ಸನಾತನವಾದಿಗಳು ಶೂದ್ರ ಶಕ್ತಿಗಳಿಗೆ ಓದುವುದನ್ನೇ ಕಲಿಸಿರಲಿಲ್ಲ. ಎಲ್ಲವನ್ನೂ ಮುಚ್ಚಿಟ್ಟಿದ್ದರು. ಲಾರ್ಡ್ ಮೆಕಾಲೆ ಬಂದ ಮೇಲೆ ಎಲ್ಲರೂ ಮುಕ್ತವಾಗಿ ವಿದ್ಯೆ ಕಲಿತರು. ಡಾ.ಬಿ.ಆರ್. ಅಂಬೇಡ್ಕರ್ ಇಲ್ಲದಿದ್ದರೆ ದಲಿತರಿಗೆ ಇಂಗ್ಲಿಷ್ ಕಲಿಯಲು, ಸಂಶೋಧನೆ, ಅಧ್ಯಯನ ಮಾಡಲು ಆಗುತ್ತಿತ್ತೇ? ಪ್ರಪಂಚದಲ್ಲೇ ನಂಬರ್–1 ಬುದ್ಧಿಶಕ್ತಿಯ (ಇಂಟೆಲೆಕ್ಚ್ಯುಲ್) ರಾಷ್ಟ್ರ ಎಂದು ಕರೆಸಿಕೊಳ್ಳಲು ಆಗುತ್ತಿತ್ತೇ?, ದಲಿತರು ಅಕ್ಷರ ಕಲಿತರೆ ಕಾದ ಎಣ್ಣೆಯನ್ನು ಕಿವಿಯಲ್ಲಿ ಹಾಕುತ್ತಿದ್ದರು’ ಎಂದು ಹೇಳಿದರು.

ಸನಾತನ ಧರ್ಮದ ಕುರಿತು ಉದಯನಿಧಿ ಸ್ಟಾಲಿನ್ ನೀಡಿರುವ ಹೇಳಿಕೆಯನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಪಟ್ನಾದಲ್ಲಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಮುಂದುವರಿದ ಬಿಜೆಪಿ ವಾಗ್ದಾಳಿ

ನವದೆಹಲಿ (ಪಿಟಿಐ): ತಮಿಳುನಾಡಿನ ಸಚಿವ ಉದಯ ನಿಧಿ ಸ್ಟಾಲಿನ್ ಅವರು ಸನಾತನ ಧರ್ಮ ಕುರಿತು ನೀಡಿರುವ ಹೇಳಿಕೆ ವಿಚಾರವಾಗಿ ವಿರೋಧ ಪಕ್ಷಗಳ ಮೇಲೆ ಬಿಜೆಪಿ ಸೋಮವಾರವೂ ವಾಗ್ದಾಳಿ ಮುಂದುವರಿಸಿದೆ.

ಸನಾತನ ಧರ್ಮದ ವಿರುದ್ಧದ ಅಜೆಂಡಾವನ್ನು ಅಂತಿಮಗೊಳಿಸಲೆಂದೇ ವಿರೋಧ ಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ ಮುಂಬೈನಲ್ಲಿ ಸಭೆ ಸೇರಿತ್ತೇ ಎಂದು ಕಾಂಗ್ರೆಸ್ ಪಕ್ಷವನ್ನು ಪ್ರಶ್ನಿಸಿರುವ ಬಿಜೆಪಿ, ಹಿಂದೂಗಳ ಭಾವನೆಗಳ ಜೊತೆ ಆಟ ಆಡದಿರಿ ಎಂದು ಒತ್ತಿ ಹೇಳಿದೆ.

‘ಉದಯನಿಧಿ ಅವರ ಹೇಳಿಕೆ ಆಘಾತಕಾರಿ ಮತ್ತು ನಾಚಿಕೆಗೇಡು’ ಎಂದು ಕೇಂದ್ರದ ಮಾಜಿ ಸಚಿವ ಮತ್ತು ಬಿಜೆಪಿ ನಾಯಕ ರವಿ ಶಂಕರ್ ಪ್ರಸಾದ್ ಹೇಳಿದರು.

‘ವಿರೋಧ ಪಕ್ಷಗಳ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ನಿತೀಶ್ ಕುಮಾರ್ ಮತ್ತು ಮಮತಾ ಬ್ಯಾನರ್ಜಿ ಏಕೆ ಮೌನವಾಗಿದ್ದಾರೆ? ಮತಕ್ಕಾಗಿ ಹಿಂದೂಗಳ ಭಾವನೆಯೊಂದಿಗೆ ಚೆಲ್ಲಾಟವಾಡುತ್ತಿದ್ದೀರಾ? ನೂರು ವರ್ಷಗಳ ಇಸ್ಲಾಮಿಕ್ ಆಡಳಿತ ಮತ್ತು ಬ್ರಿಟಿಷ್ ಆಳ್ವಿಕೆಗೂ ಸನಾತನ ಧರ್ಮವನ್ನು ನಿರ್ಮೂಲನೆ ಮಾಡಲು ಸಾಧ್ಯವಾಗಲಿಲ್ಲ ಎಂಬುದು ನಿಮಗೆ ತಿಳಿದಿರಲಿ’ ಎಂದು ಚಾಟಿ ಬೀಸಿದರು.

‘ಹಿಟ್ಲರ್ ಮನಸ್ಥಿತಿಯ ಉದಯನಿಧಿ’

ಬೆಂಗಳೂರು: ತಮಿಳುನಾಡಿನ ಡಿಎಂಕೆ ಸಚಿವ ಉದಯನಿಧಿ ಸ್ಟಾಲಿನ್ ಸನಾತನ ಧರ್ಮದ ಕುರಿತು ನೀಡಿರುವ ಹೇಳಿಕೆ ‘ಹಿಟ್ಲರ್’ ಮನಸ್ಥಿತಿಯನ್ನು ತೋರಿಸುತ್ತದೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಕಿಡಿ ಕಾರಿದ್ದಾರೆ. ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು ಎಂದು ಉದಯನಿಧಿ ನೀಡಿರುವ ಹೇಳಿಕೆಯ ಬಗ್ಗೆ ಅವರು ಪ್ರತಿಕ್ರಿಯೆ ನೀಡಿದ್ದು, ‘ಚುನಾವಣೆಯಲ್ಲಿ ಒಂದು ವರ್ಗವನ್ನು ಓಲೈಸಲು ಈ ರೀತಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಸಂವಿಧಾನ ವಿರೋಧಿ ಹೇಳಿಕೆ ನೀಡಿರುವ ಉದಯನಿಧಿ ಅವರನ್ನು ತಕ್ಷಣ ಸಂಪುಟದಿಂದ ವಜಾ ಮಾಡಬೇಕು’ ಎಂದು ಒತ್ತಾಯಿಸಿದರು.

ಯಾವುದೇ ಧರ್ಮ ಸಮಾನತೆ, ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದ್ದರೆ ಅಂತಹ ಧರ್ಮವನ್ನು ಒಪ್ಪಲು ಸಾಧ್ಯವಿಲ್ಲ ಎನ್ನುವುದು ನನ್ನ ನಿಲುವು

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

ಕಾಂಗ್ರೆಸ್ ನಿಲುವೇನು?: ಇಂಡಿಯಾದ ಕೂಟದ ಪಾಲುದಾರಿಕೆ ಹೊಂದಿರುವ ಕಾಂಗ್ರೆಸ್‌ನ ನಿಲುವೇನು? ಉದಯನಿಧಿ ಹೇಳಿಕೆಯನ್ನು ಬೆಂಬಲಿಸುತ್ತದೆಯಾ? ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಏನು ಹೇಳುತ್ತಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಪ್ರಶ್ನಿಸಿದ್ದಾರೆ.

ಹೈದರಾಬಾದ್‌ನಲ್ಲಿ 16, 17ಕ್ಕೆ ಸಿಡಬ್ಲ್ಯುಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೊಸದಾಗಿ ರಚನೆಗೊಂಡಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು (ಸಿಡಬ್ಲ್ಯುಸಿ) ಹೈದರಾಬಾದ್‌ನಲ್ಲಿ ಇದೇ 16 ಹಾಗೂ 17ರಂದು ಸಭೆ ಸೇರಲಿದೆ.

ಈ ವರ್ಷಾಂತ್ಯದಲ್ಲಿ ತೆಲಂಗಾಣ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, 17ರಂದು ನಡೆಯುವ ಸಾರ್ವಜನಿಕ ರ್‍ಯಾಲಿಯಲ್ಲಿ ಕಾಂಗ್ರೆಸ್ ಪಕ್ಷದ ಐದು ‘ಗ್ಯಾರಂಟಿ’ಗಳನ್ನು ಘೋಷಣೆ ಮಾಡಲಾಗುತ್ತದೆ.

ಮಧ್ಯಪ್ರದೇಶ ವಿಧಾನಸಭೆಗೂ ಈ ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿದೆ. ಅಲ್ಲಿನ ಭೋಪಾಲ್‌ನಲ್ಲಿ ‘ಇಂಡಿಯಾ’ ಮೈತ್ರಿಕೂಟದ ನಾಯಕರ ಸಭೆ ಹಾಗೂ ಸಾರ್ವಜನಿಕ ರ್‍ಯಾಲಿಯನ್ನು ಅಕ್ಟೋಬರ್ ಮೊದಲಾರ್ಧದಲ್ಲಿ ನಡೆಸಲು ಯೋಜಿಸಲಾಗಿದೆ. ಈ ಕುರಿತು ಕಳೆದ ವಾರ ಮುಂಬೈಯಲ್ಲಿ ನಡೆದ ‘ಇಂಡಿಯಾ’ ಮೈತ್ರಿಕೂಟದ ಮೂರನೇ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, ‘16ರಂದು ನಡೆಯುವ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಾಮಾನ್ಯ ಸದಸ್ಯರು, ಕಾಯಂ ಆಹ್ವಾನಿತರು ಹಾಗೂ ವಿಶೇಷ ಆಹ್ವಾನಿತರು ಭಾಗವಹಿಸಲಿದ್ದಾರೆ. ಮರುದಿನ ವಿಸ್ತೃತ ಕಾರ್ಯಕಾರಿ ಸಮಿತಿ ಸಭೆ ನಡೆ ಯಲಿದೆ. ಅದರಲ್ಲಿ ಪಕ್ಷದ ರಾಜ್ಯ ಘಟ ಕದ ಅಧ್ಯಕ್ಷರು, ಶಾಸಕಾಂಗ ಪಕ್ಷದ ನಾಯಕರು, ಸಂಸದೀಯ ಪಕ್ಷದ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಆ ಬಳಿಕ ಹೈದರಾಬಾದ್ ಸಮೀಪ ಬೃಹತ್ ಸಾರ್ವಜನಿಕ ರ್‍ಯಾಲಿ ನಡೆಸಲಾಗುತ್ತದೆ. ಇದರಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ಪಕ್ಷದ ನಾಯಕ ರಾಹುಲ್ ಗಾಂಧಿ ಭಾಗಿಯಾಗಲಿದ್ದಾರೆ. ಈ ಸಭೆಯಲ್ಲಿ ಐದು ಗ್ಯಾರಂಟಿಗಳನ್ನು ಘೋಷಣೆ ಮಾಡಲಾಗುತ್ತದೆ. ಜತೆಗೆ, ತೆಲಂಗಾಣ ಸರ್ಕಾರದ ವಿರುದ್ಧ ಆರೋಪಪಟ್ಟಿಯನ್ನೂ ಬಿಡುಗಡೆ ಮಾಡಲಾಗುತ್ತದೆ.

ರ್‍ಯಾಲಿಯಲ್ಲಿ ವೈ.ಎಸ್.ಶರ್ಮಿಳಾ ಭಾಗವಹಿಸುವ ಸಾಧ್ಯತೆ ಇದೆ. ಅವರ ನೇತೃತ್ವದ ವೈಎಸ್‌ಆರ್ ತೆಲಂಗಾಣ ಪಕ್ಷವು ಕಾಂಗ್ರೆಸ್‌ನೊಂದಿಗೆ ವಿಲೀನವಾಗುವ ಸಾಧ್ಯತೆ ದಟ್ಟವಾಗಿದೆ. ಪಕ್ಷವನ್ನು ವಿಲೀನ ಮಾಡುವ ಸಂಬಂಧ ಶರ್ಮಿಳಾ ಅವರು ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರೊಂದಿಗೆ ಕಳೆದ ವಾರ ಸಮಾಲೋಚನೆ ನಡೆಸಿದ್ದರು.

ಚುನಾವಣಾ ಸಮಿತಿಗೆ ಜಾರ್ಜ್

ಕೆ.ಜೆ.ಜಾರ್ಜ್

ನವದೆಹಲಿ: ಲೋಕಸಭಾ ಚುನಾವಣೆಗೆ ಕೆಲವೇ ತಿಂಗಳು ಉಳಿದಿರುವಾಗ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಕೇಂದ್ರ ಚುನಾವಣಾ ಸಮಿತಿಯನ್ನು ಸೋಮವಾರ ಪುನರ್ ರಚಿಸಿದ್ದಾರೆ. 16 ಸದಸ್ಯರ ಸಮಿತಿಯಲ್ಲಿ ಕರ್ನಾಟಕದ ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಥಾನ ಪಡೆದಿದ್ದಾರೆ.

ಸಮಿತಿ ಸದಸ್ಯರು: ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಅಂಬಿಕಾ ಸೋನಿ, ಅಧೀರ್ ರಂಜನ್ ಚೌಧರಿ, ಸಲ್ಮಾನ್ ಖುರ್ಷಿದ್, ಮಧುಸೂದನ್ ಮಿಸ್ತ್ರಿ, ಎನ್. ಉತ್ತಮ್ ಕುಮಾರ್ ರೆಡ್ಡಿ, ಟಿ.ಎಸ್.ಸಿಂಗ್ ಡಿಯೊ, ಕೆ.ಜೆ.ಜಾರ್ಜ್, ಪ್ರೀತಂ ಸಿಂಗ್, ಮೊಹಮ್ಮದ್ ಜಾವೆದ್, ಅಮಿ ಯಾಜ್ನಿಕ್, ಪಿ.ಎಲ್.ಪುನಿಯಾ, ಓಂಕಾರ್ ಮರ್ಕಂ, ಕೆ.ಸಿ. ವೇಣುಗೋಪಾಲ್.

ಈ ಹಿಂದಿನ ಸಮಿತಿಯಲ್ಲಿ 11 ಸದಸ್ಯರು ಇದ್ದರು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಮಾಜಿ ಸಚಿವರಾದ ಎ. ಕೆ.ಆಂಟನಿ, ಎಂ. ವೀರಪ್ಪ ಮೊಯಿಲಿ ಸೇರಿದಂತೆ 7 ಸದಸ್ಯರನ್ನು ಕೈಬಿಡಲಾಗಿದೆ. ಈ ಸಮಿತಿಯು ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಅಂತಿಮ ತೀರ್ಮಾನ ಕೈಗೊಳ್ಳುತ್ತದೆ.

ಸಂವಿಧಾನ ನಿಷ್ಠೆ: ಪ್ರಮಾಣಪತ್ರ ಸಲ್ಲಿಕೆಗೆ ‘ಸುಪ್ರೀಂ’ ತಾಕೀತು

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಜಮ್ಮು ಮತ್ತು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವಾಗಿದೆ. ಅಲ್ಲದೆ, ಸಂವಿಧಾನದ ಬಗ್ಗೆ ತಮಗೆ ನಿಷ್ಠೆ ಇದೆ’ ಎಂದು ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸುವಂತೆ ನ್ಯಾಷನಲ್ ಕಾನ್ಫರೆನ್ಸ್ ನಾಯಕ ಹಾಗೂ ಸಂಸದ ಮೊಹಮ್ಮದ್ ಅಕ್ಬರ್ ಲೋನ್ ಅವರಿಗೆ ಸುಪ್ರೀಂ ಕೋರ್ಟ್ ತಾಕೀತು ಮಾಡಿದೆ.

ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದತಿ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅಧ್ಯಕ್ಷತೆಯ ಸಾಂವಿಧಾನಿಕ ಪೀಠವು ಸೋಮವಾರ ನಡೆಸಿತು.

‘ಸಂವಿಧಾನದ 32ನೇ ವಿಧಿಯಡಿ ಅರ್ಜಿದಾರರು (ಲೋನ್) ನ್ಯಾಯಾಲಯಕ್ಕೆ ಸಾಂವಿಧಾನಿಕ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಹಾಗಾಗಿ, ಅವರು ಸಂವಿಧಾನಕ್ಕೂ ವಿಧೇಯರಾಗಿರಬೇಕು’ ಎಂದು ಚಂದ್ರಚೂಡ್ ಹೇಳಿದರು.

2018ರಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಧಾನಸಭೆಯಲ್ಲಿ ಲೋನ್ ಅವರು ‘ಪಾಕಿಸ್ತಾನ ಜಿಂದಾಬಾದ್’ ಎಂದು ಘೋಷಣೆ ಕೂಗಿದ್ದರು. ಇದಕ್ಕೆ ಪಶ್ಚಾತ್ತಾಪ ವ್ಯಕ್ತಪಡಿಸಲು ಅವರು ನಿರಾಕರಿಸಿದ್ದರು.

ಉಗ್ರರ ಬಂಧನ

ಲಾಹೋರ್ (ಪಿಟಿಐ): ಐಎಸ್‌ನ ಇಬ್ಬರು ಕಮಾಂಡರ್‌ಗಳೂ ಸೇರಿದಂತೆ ಏಳು ಮಂದಿ ಶಂಕಿತ ಉಗ್ರರನ್ನು ಬಂಧಿಸಿರುವ ಪಾಕಿಸ್ತಾನ ಪೊಲೀಸರು ದೊಡ್ಡ ದಾಳಿ ಸಂಚು ವಿಫಲಗೊಳಿಸಿದ್ದಾರೆ.

ಎಡಿಟರ್ ಗಿಲ್ಡ್ ಅಧ್ಯಕ್ಷೆ, ಸದಸ್ಯರ ವಿರುದ್ಧ ಎಫ್‌ಐಆರ್

ಇಂಫಾಲ್ (ಪಿಟಿಐ): ಮಣಿಪುರದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳ ವರದಿಗಾರಿಕೆ ಮತ್ತು ಸರ್ಕಾರದ ನಿಲುವಿನ ಬಗ್ಗೆ ಭಾರತೀಯ ಸಂಪಾದಕರ ಒಕ್ಕೂಟ (ಇಜಿಐ) ಪ್ರಕಟಿಸಿರುವ ಸತ್ಯಶೋಧನಾ ವರದಿಯು ಪ್ರಚೋದನಕಾರಿಯಾಗಿದೆ ಎಂದು ಮಣಿಪುರ ಸರ್ಕಾರವು ಆರೋಪಿಸಿದೆ.

ಈ ಸಂಬಂಧ ಒಕ್ಕೂಟದ ಅಧ್ಯಕ್ಷೆ ಸೀಮಾ ಮುಸ್ತಾಫ, ಸದಸ್ಯರಾದ ಸೀಮಾ ಗುಹಾ, ಭರತ್ ಭೂಷಣ್ ಹಾಗೂ ಸಂಜಯ್ ಕಪೂರ್ ಅವರ ವಿರುದ್ಧ ಸೋಮವಾರ ಎಫ್‌ಐಆರ್ ದಾಖಲಿಸಿದೆ.

ಐಪಿಸಿ ಸೆಕ್ಷನ್ 153ಎ (ಧಾರ್ಮಿಕ, ಹುಟ್ಟಿದ ಸ್ಥಳ, ಭಾಷೆ ಹಿನ್ನೆಲೆಯಲ್ಲಿ ಭಿನ್ನ ಗುಂಪುಗಳ ನಡುವೆ ದ್ವೇಷ ಹರಡುವಿಕೆ), 200 (ಸುಳ್ಳನ್ನು ಸತ್ಯವೆಂದು ಘೋಷಣೆ), 298 (ಧಾರ್ಮಿಕ ಭಾವನೆಗಳಿಗೆ ಧಕ್ಕೆ), ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಪ್ರೆಸ್ ಕೌನ್ಸಿಲ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಸತ್ಯಶೋಧನಾ ತಂಡವು ಇತ್ತೀಚೆಗೆ ಸಂಘರ್ಷ ಪೀಡಿತ ಕಣಿವೆ ರಾಜ್ಯಕ್ಕೆ ಭೇಟಿ ನೀಡಿತ್ತು. ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವಿನ ಸಂಘರ್ಷ ಕುರಿತು ಕೆಲವು ಮಾಧ್ಯಮಗಳು ಏಕಪಕ್ಷೀಯವಾಗಿ ವರದಿ ಪ್ರಕಟಿಸಿವೆ. ಇಂಟರ್‌ನೆಟ್ ಸೇವೆ ಸ್ಥಗಿತಗೊಂಡಿರುವುದರಿಂದ ಪತ್ರಕರ್ತರ ವರದಿಗಾರಿಕೆಗೆ ತೊಂದರೆಯಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಸಂಘರ್ಷ ತಡೆಗೆ ಸಂಬಂಧಿಸಿದಂತೆ ಸರ್ಕಾರದ ನಿಲುವು ಪಕ್ಷಪಾತಿಯಾಗಿದೆ. ಇಡೀ ರಾಜ್ಯವನ್ನು ಪ್ರತಿನಿಧಿಸಬೇಕಾದ ಸರ್ಕಾರವು ಪ್ರಜಾಸತ್ತಾತ್ಮಕವಾಗಿ ಕರ್ತವ್ಯ ನಿರ್ವಹಿಸುವಲ್ಲಿ ಸೋತಿದೆ ಎಂದು ದೂರಲಾಗಿದೆ.

ಹಿಂಸಾಚಾರಕ್ಕೆ ಮತ್ತಷ್ಟು ಪ್ರಚೋದನೆ: ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್, ‘ಸಂಪಾದಕರ ಒಕ್ಕೂಟದ ಸದಸ್ಯರು ವರದಿ ಪ್ರಕಟಿಸುವ ಮೂಲಕ ರಾಜ್ಯದಲ್ಲಿ ಹಿಂಸಾಚಾರ ಮತ್ತಷ್ಟು ಉಲ್ಬಣಿಸಲು ಪ್ರಚೋದನೆ ನೀಡಿದ್ದಾರೆ’ ಎಂದು ಆಪಾದಿಸಿದರು.

‘ಸಂಘರ್ಷದಿಂದ ಹಲವರು ಜೀವ ಕಳೆದುಕೊಂಡಿದ್ದಾರೆ. ನೂರಾರು ಜನರಿಗೆ ನೆಲೆ ಇಲ್ಲದಂತಾಗಿದೆ. ಕಣಿವೆ ರಾಜ್ಯದ ಹಿನ್ನೆಲೆ, ಇತಿಹಾಸ ಹಾಗೂ ಹಿಂಸಾಚಾರದ ಜಟಿಲತೆಯನ್ನು ಅರ್ಥೈಸಿಕೊಳ್ಳದೆ ಏಕಪಕ್ಷೀಯವಾಗಿ ವರದಿ ಪ್ರಕಟಿಸಲಾಗಿದೆ’ ಎಂದು ದೂರಿದರು.

ಎಫ್‌ಐಆರ್ ವಾಪಸ್‌ಗೆ ಆಗ್ರಹ

ನವದೆಹಲಿ (ಪಿಟಿಐ): ಸಂಪಾದಕರ ಒಕ್ಕೂಟದ ಅಧ್ಯಕ್ಷೆ ಹಾಗೂ ಸದಸ್ಯರ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಅನ್ನು ಕೂಡಲೇ ವಾಪಸ್ ಪಡೆಯುವಂತೆ ಪ್ರೆಸ್ ಕ್ಲಬ್ ಆಫ್ ಇಂಡಿಯಾ (ಪಿಸಿಐ) ಒತ್ತಾಯಿಸಿದೆ.

‘ಮಣಿಪುರದಲ್ಲಿ ಶಾಂತಿ ಪುನರ್ ಸ್ಥಾಪಿಸುವ ಬದಲಿಗೆ ಪತ್ರಕರ್ತರ ಮೇಲೆ ದೂರು ದಾಖಲಿಸುವುದು ಸರಿಯಲ್ಲ’ ಎಂದು ಹೇಳಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66ಎ ಅಸಾಂವಿಧಾನಿಕವಾಗಿದೆ ಎಂದು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಆದರೂ, ದೇಶದ ದೊಡ್ಡ ಮಾಧ್ಯಮ ಒಕ್ಕೂಟಕ್ಕೆ ಬೆದರಿಕೆವೊಡ್ಡಲು ರಾಜ್ಯ ಸರ್ಕಾರವು ಈ ತಂತ್ರ ಅನುಸರಿಸಿದೆ ಎಂದು ದೂರಿದೆ.

ಜಿ–20 ಶೃಂಗಸಭೆಗೆ ಷಿ–ಜಿನ್‌ಪಿಂಗ್ ಗೈರು

ಷಿ–ಜಿನ್‌ಪಿಂಗ್

ಬೀಜಿಂಗ್ (ಪಿಟಿಐ): ನವದೆಹಲಿಯಲ್ಲಿ ನಡೆಯಲಿರುವ ಜಿ–20 ಶೃಂಗದಲ್ಲಿ ಚೀನಾ ಅಧ್ಯಕ್ಷ ಷಿ–ಜಿನ್‌ಪಿಂಗ್ ಪಾಲ್ಗೊಳ್ಳುವುದಿಲ್ಲ. ಪ್ರಧಾನಿ ಲಿ ಕ್ವಿಯಾಂಗ್ ಅವರ ನೇತೃತ್ವದ ನಿಯೋಗ ಭಾಗವಹಿಸಲಿದೆ ಎಂದು ವಿದೇಶಾಂಗ ಸಚಿವಾಲಯ ಸೋಮವಾರ ತಿಳಿಸಿದೆ.

ಭಾರತ ಸರ್ಕಾರದ ಆಹ್ವಾನದ ಮೇರೆಗೆ ಸೆಪ್ಟೆಂಬರ್ 9 ಮತ್ತು 10ರಂದು ನಡೆಯಲಿರುವ 18ನೇ ಜಿ–20 ಶೃಂಗಸಭೆಯಲ್ಲಿ ಪ್ರಧಾನಿ ಲಿ ಕ್ವಿಯಾಂಗ್ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ಇಲಾಖೆ ವಕ್ತಾರ ಮಾಯೊ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಷಿ–ಜಿನ್ ಪಿಂಗ್ ಅವರು ಗೈರು ಆಗುತ್ತಿರುವುದಕ್ಕೆ ಅವರು ಕಾರಣ ಬಹಿರಂಗಪಡಿಸಿಲ್ಲ. ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ (ಆಸಿಯಾನ್) ಮತ್ತು ಪೂರ್ವ ಏಷ್ಯಾ ಶೃಂಗಕ್ಕೂ ಜಿನ್‌ಪಿಂಗ್ ಗೈರು ಹಾಜರಾಗಲಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಮತ್ತು ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಸೇರಿದಂತೆ ಅನೇಕ ಜಾಗತಿಕ ನಾಯಕರು ಶೃಂಗದಲ್ಲಿ ಭಾಗಿಯಾಗಲಿದ್ದಾರೆ.

ಬೈಡನ್ ಸೆ. 7ರಂದು ಭಾರತಕ್ಕೆ ಆಗಮಿಸಲಿದ್ದಾರೆ. ಸೆ.8ರಂದು ಭಾರತ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದ್ವಿಪಕ್ಷೀಯ ಚರ್ಚೆ ನಡೆಸಲಿದ್ದಾರೆ.

ಭಾರತ ಪ್ರವಾಸವನ್ನು ಎದುರು ನೋಡುತ್ತಿರುವುದಾಗಿ ಹೇಳಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್, ಷಿ–ಜಿನ್‌ಪಿಂಗ್ ಗೈರಾಗುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

14ರಿಂದ ಆರ್‌ಎಸ್‌ಎಸ್ ಸಮನ್ವಯ ಸಮಿತಿ ಸಭೆ


ಮೋಹನ್ ಭಾಗವತ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಾರ್ಷಿಕ ಸಮನ್ವಯ ಸಭೆ ಸೆ.14ರಿಂದ ಮೂರು ದಿನ ಪುಣೆಯಲ್ಲಿ ನಡೆಯಲಿದೆ. ರಾಷ್ಟ್ರೀಯ ಭದ್ರತೆ, ದೇಶದ ಸಾಮಾಜಿಕ–ಆರ್ಥಿಕ ಸ್ಥಿತಿ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಗುತ್ತದೆ.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಸಹ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಸೇರಿದಂತೆ ಪ್ರಮುಖ ಮುಖಂಡರು, ಬಿಜೆಪಿಯಲ್ಲಿನ ಸಂಘದ ಪ್ರತಿನಿಧಿ ಅರುಣ್ ಕುಮಾರ್ ಮತ್ತು ಇತರ ಪ್ರಮುಖ ಪ್ರತಿನಿಧಿಗಳು ಭಾಗವಹಿಸುವರು.

ಸಮನ್ವಯ ಸಭೆಯು ಸೆ.16ರಂದು ಮುಕ್ತಾಯವಾಗಲಿದೆ. ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಆರ್‌ಎಸ್‌ಎಸ್‌ನಿಂದ ಪ್ರೇರೇಪಿತವಾಗಿರುವ ಇತರೆ 35 ಸಂಘಟನೆಗಳ ಮುಖ್ಯಸ್ಥರು ಭಾಗ ವಹಿಸುವರು. ಸಮನ್ವಯ ಸಭೆಯು ಕಳೆದ ವರ್ಷ ಛತ್ತೀಸಗಢದಲ್ಲಿ ನಡೆದಿತ್ತು. ರಾಷ್ಟ್ರೀಯ ಸೇವಿಕ ಸಮಿತಿ, ವಿಶ್ವ ಹಿಂದೂ ಪರಿಷತ್, ವನವಾಸಿ ಕಲ್ಯಾಣ ಆಶ್ರಮ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಭಾರತೀಯ ಕಿಸಾನ್ ಸಂಘ, ವಿದ್ಯಾಭಾರತಿ, ಭಾರತೀಯ ಮಜ್ದೂರ್ ಸಂಘ, ಸಂಸ್ಕಾರ ಭಾರತಿ, ಸೇವಾ ಭಾರತಿ, ಸಂಸ್ಕೃತ ಭಾರತಿ ಈ 35 ಸಂಘಟನೆಗಳಲ್ಲಿ ಸೇರಿವೆ.

'ಸಂಘಟನೆಗಳ ಮುಖ್ಯಸ್ಥರು ಸಾಮಾಜಿಕ ಬದುಕಿನ ವಿವಿಧ ಸ್ತರಗಳಲ್ಲಿ ತಮ್ಮ ಕಾರ್ಯ, ಅನುಭವ ಕುರಿತು ಮಾತನಾಡಲಿದ್ದಾರೆ. ಸಾಮಾಜಿಕ ಬದಲಾವಣೆಗಾಗಿ ಮಾಡಬಹುದಾದ ಕಾರ್ಯಗಳ ಕುರಿತೂ ಚರ್ಚೆ ನಡೆಯಲಿದೆ. ಸಾಮಾಜಿಕ ಸೌಹಾರ್ದ, ಪರಿಸರ, ಸಂಘದ ಕೌಟುಂಬಿಕ ಸಮಾಲೋಚನೆ ಕಾರ್ಯ ಕ್ರಮ, ಸಾಮಾಜಿಕ, ಆರ್ಥಿಕತೆ, ರಾಷ್ಟ್ರೀಯ ಭದ್ರತೆ ಹಾಗೂ ಪ್ರಚಲಿತ ರಾಷ್ಟ್ರೀಯ ವಿದ್ಯಮಾನಗಳ ಕುರಿತು ವಿಸ್ತೃತವಾದ ಚರ್ಚೆ ನಡೆಯಲಿದೆ’ ಎಂದು ಮೂಲಗಳು ವಿವರಿಸಿವೆ.

ಜನಾಶೀರ್ವಾದ ಯಾತ್ರೆಗೆ ಕಡೆಗಣನೆ ಉಮಾಭಾರತಿ ತೀವ್ರ ಅಸಮಾಧಾನ

ಉಮಾಭಾರತಿ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದಲ್ಲಿ ‘ಜನಾಶೀರ್ವಾದ ಯಾತ್ರೆ’ಗೆ ಆಹ್ವಾನಿಸದ ಪಕ್ಷದ ಕ್ರಮಕ್ಕೆ ಬೇಸರ ವ್ಯಕ್ತಪಡಿಸಿರುವ ಬಿಜೆಪಿ ನಾಯಕಿ ಉಮಾಭಾರತಿ, ‘ಈಗ ಆಹ್ವಾನಿಸಿದರೂ ಹೋಗುವುದಿಲ್ಲ’ ಎಂದಿದ್ದಾರೆ.

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿಯೂ ಆಗಿರುವ ಅವರು ‘ಎಕ್ಸ್’ ಜಾಲತಾಣದಲ್ಲಿ ಸರಣಿ ಸಂದೇಶ ಪೋಸ್ಟ್ ಮಾಡಿದ್ದಾರೆ. ರಾಜ್ಯ ವಿಧಾನಸಭೆಗೆ ಈ ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿದೆ.

ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಕೋರಿದರೆ ಪ್ರಚಾರ ಮಾಡುತ್ತೇನೆ ಎಂದೂ ಹೇಳಿದ್ದಾರೆ. ಜನಾಶೀರ್ವಾದ ಯಾತ್ರೆ ಭಾನುವಾರ ಆರಂಭವಾಗಿದ್ದು, ಸೆ.25ರಂದು ಭೋಪಾಲ್‌ನಲ್ಲಿ ಸಮಾಪ್ತಿಗೊಳ್ಳಲಿದೆ.

‘ಯಾತ್ರೆಗೆ ಪಕ್ಷ ಆಹ್ವಾನಿಸಿಲ್ಲ ಎಂಬುದು ನಿಜ. ಇದರಿಂದ ನನ್ನ ವ್ಯಕ್ತಿತ್ವ ಬದಲಾಗದು. ಈಗ ಆಹ್ವಾನಿಸಿದರೆ ಹೋಗುವುದಿಲ್ಲ. ಸಮಾರೋಪದಲ್ಲಿಯೂ ಪಾಲ್ಗೊಳ್ಳುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

‘ನನ್ನ ಮತ್ತು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ನಡುವೆ ಗೌರವದ ಬಾಂಧವ್ಯವಿದೆ. ಅವರು ಕೋರಿದರೆ ಭಾಗವಹಿಸುತ್ತೇನೆ. ಬಿಜೆಪಿ ಕಟ್ಟುವಲ್ಲಿ ನನ್ನ ಪಾತ್ರವಿದೆ. ಪಕ್ಷಕ್ಕೆ ಧಕ್ಕೆ ಉಂಟುಮಾಡುವುದಿಲ್ಲ’ ಎಂದಿದ್ದಾರೆ.

‘ಕಚ್ಚಾಟವಿಲ್ಲ, ವರಿಷ್ಠರಿಂದ ಸಿ.ಎಂ ಆಯ್ಕೆ’

ನವದೆಹಲಿ (ಪಿಟಿಐ): ‘ರಾಜ್ಯ ಬಿಜೆಪಿಯಲ್ಲಿ ಆಂತರಿಕ ಕಚ್ಚಾಟವಿಲ್ಲ. ವಿಧಾನಸಭೆ ಚುನಾವಣೆಯನ್ನು ಒಗ್ಗಟ್ಟಿನಿಂದ ಎದುರಿಸಲಿದ್ದು, ಮುಖ್ಯಮಂತ್ರಿ ಅಭ್ಯರ್ಥಿಯನ್ನು ಪಕ್ಷ ನಿರ್ಧರಿಸಲಿದೆ’ ಎಂದು ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ ಸಿಂಗ್ ಚೌಹಾಣ್ ಹೇಳಿದ್ದಾರೆ.

ಜ್ಯೋತಿರಾದಿತ್ಯ ಸಿಂಧಿಯಾ ಅವರು 2020ರಲ್ಲಿ ಬಿಜೆಪಿಗೆ ಸೇರಿದ್ದಾರೆ ಎಂದು ಉಲ್ಲೇಖಿಸಿದ ಅವರು, ಅವರ ಜೊತೆಗೆ ಪಕ್ಷವನ್ನು ಸೇರಿದ್ದವರು ಹಾಲಿನಲ್ಲಿ ಸಕ್ಕರೆ ಬೆರೆತಂತೆ ಪಕ್ಷದಲ್ಲಿ ಒಂದುಗೂಡಿದ್ದಾರೆ. ಪಕ್ಷವು ಒಗ್ಗಟ್ಟಾಗಿದೆ’ ಎಂದು ಪ್ರತಿಪಾದಿಸಿದರು.

ಬಿಜೆಪಿಯೇ ಶ್ರೀಮಂತ



ಬಿಜೆಪಿ ಬಳಿ ₹6,046.81 ಕೋಟಿ ಆಸ್ತಿ ಇದ್ದು 2021–22ರಲ್ಲಿ ಅತೀ ಶ್ರೀಮಂತ ಪಕ್ಷ ಎನಿಸಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಬಿಡುಗಡೆ ಮಾಡಿದ ವರದಿಯಲ್ಲಿ ಹೇಳಲಾಗಿದೆ. ದೇಶದ ಎಂಟು ರಾಷ್ಟ್ರೀಯ ಪಕ್ಷಗಳ ಒಟ್ಟು ಆಸ್ತಿಯ ಮೌಲ್ಯ ₹8,829.15 ಕೋಟಿ. ಈ ಮೊತ್ತದಲ್ಲಿ ಬಿಜೆಪಿಯದ್ದೇ ಹೆಚ್ಚಿನ ಪಾಲು ಅಂದರೆ, ಶೇ 69ರಷ್ಟಿದೆ ಎಂದೂ ವರದಿಯಲ್ಲಿ ಹೇಳಲಾಗಿದೆ. 2020–21ರ ಅವಧಿಯಲ್ಲಿ ಎಂಟು ಪಕ್ಷಗಳ ಆಸ್ತಿ ಮೌಲ್ಯವು ₹7,297.61 ಕೋಟಿಯಷ್ಟಿತ್ತು. ಇದಕ್ಕೆ ಹೋಲಿಸಿದರೆ, 2021–22ರಲ್ಲಿ ಈ ಪಕ್ಷಗಳ ಆಸ್ತಿ ಮೌಲ್ಯದಲ್ಲಿ ಶೇ 20.98ರಷ್ಟು ಏರಿಕೆಯಾಗಿದೆ. ಟಿಎಂಸಿ ಪಕ್ಷದ ಆಸ್ತಿ ಮೌಲ್ಯ ಹಾಗೂ ಮೀಸಲು ನಿಧಿಗಳಲ್ಲಿ ಭಾರಿ ಏರಿಕೆ ಕಂಡುಬಂದಿದೆ.

ಹೆಚ್ಚು ಸಾಲಗಾರ ಪಕ್ಷಗಳು

(₹ ಕೋಟಿಗಳಲ್ಲಿ)



ಕೆಲವು ಪಕ್ಷಗಳ ಬಳಿ ಇರುವ ಮೀಸಲು ನಿಧಿ

(₹ ಕೋಟಿಗಳಲ್ಲಿ)

ವರ್ಷ	ಮೀಸಲು ನಿಧಿ	ಏರಿಕೆ ಪ್ರಮಾಣ
ಬಿಜೆಪಿ		
2021-22	6041.64	21.34%
2020-21	4978.99	
ಕಾಂಗ್ರೆಸ್		
2021-22	763.73	23.28%
2020-21	619.53	
ಟಿಎಂಸಿ		
2021-22	455.541	155.73%
2020-21	178.135	
ಬಿಎಸ್‌ಪಿ		
2021-22	690.71	5.74%↓
2020-21	732.79	

ಕೆಲವು ರಾಷ್ಟ್ರೀಯ ಪಕ್ಷಗಳ ಆಸ್ತಿ ವಿವರ (₹ ಕೋಟಿಗಳಲ್ಲಿ)



ಏಷ್ಯಾ ಕಪ್ • ನೇಪಾಳ ವಿರುದ್ಧ 10 ವಿಕೆಟ್ ಗೆಲುವು • ಸೂಪರ್ 4 ಹಂತಕ್ಕೆ ಭಾರತ ಲಗ್ಗೆ

ರೋಹಿತ್, ಗಿಲ್ ಶತಕ ಜತೆಯಾಟ

ಪಲ್ಲೆಕೆಲೆ (ಶ್ರೀಲಂಕಾ), (ಪಿಟಿಐ): ನಾಯಕ ರೋಹಿತ್ ಶರ್ಮ ಮತ್ತು ಶುಭಮನ್ ಗಿಲ್ ಅವರ ಅಜೇಯ ಅರ್ಧಶತಕಗಳ ನೆರವಿನಿಂದ ನೇಪಾಳ ತಂಡವನ್ನು 10 ವಿಕೆಟ್‌ಗಳಿಂದ ಮಣಿಸಿದ ಭಾರತ, ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತ ಪ್ರವೇಶಿಸಿತು.

ಕ್ರಿಕೆಟ್ ಲೋಕದಲ್ಲಿ ಅಂಬೆಗಾಲಿಡುತ್ತಿರುವ ನೇಪಾಳ ತಂಡ, ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿ ಭಾರತದ ಬೌಲರ್‌ಗಳನ್ನು ವಿಶ್ವಾಸದಿಂದ ಎದುರಿಸಿ 48.2 ಓವರ್‌ಗಳಲ್ಲಿ 230 ರನ್‌ಗಳ ಗೌರವಾರ್ಹ ಮೊತ್ತ ದಾಖಲಿಸಿತು.

‘ಎ’ ಗುಂಪಿನ ಈ ಪಂದ್ಯದಲ್ಲೂ ಮಳೆ ‘ಆಟ’ವಾಡಿತು. ಇದರಿಂದ ಭಾರತದ ಗೆಲುವಿಗೆ ಡಕ್ವರ್ತ್ ಲೂಯಿಸ್ ನಿಯಮದ ಪ್ರಕಾರ 23 ಓವರುಗಳಲ್ಲಿ 145 ರನ್‌ಗಳ ಗುರಿ ನಿಗದಿಪಡಿಸಲಾಯಿತು.

ರೋಹಿತ್ (74 ರನ್; 59 ಎ., 4X6, 6X5) ಮತ್ತು ಗಿಲ್ (67 ರನ್; 62 ಎ., 4X8, 6X1) ಅವರ ಅಜೇಯ ಆಟದಿಂದ ಭಾರತ ತಂಡ, 20.1 ಓವರ್‌ಗಳಲ್ಲಿ 147 ರನ್ ಗಳಿಸಿ ಗೆದ್ದಿತು.

ಬ್ಯಾಟಿಂಗ್‌ನಲ್ಲಿ ತೋರಿದ ಅದೇ ಛಲವನ್ನು ಬೌಲಿಂಗ್‌ನಲ್ಲೂ ತೋರಿಸಲು ನೇಪಾಳಕ್ಕೆ ಸಾಧ್ಯವಾಗಲಿಲ್ಲ. ಇದರಿಂದ ಭಾರತ ತಂಡದ ಗೆಲುವಿನ ಹಾದಿ ಸುಗಮವಾಯಿತು. ಆರಂಭದಲ್ಲಿ ಅಲ್ಪ ತಡಕಾಡಿದ ರೋಹಿತ್ ಬಳಿಕ ಲಯ ಕಂಡುಕೊಂಡು ಐದು ಸಿಕ್ಸರ್‌ಗಳನ್ನು ಹೊಡೆದರು.

ಭಾರತ ತಂಡ 2.1 ಓವರ್‌ಗಳಲ್ಲಿ 17 ರನ್ ಗಳಿಸಿದ್ದಾಗ ಮಳೆ ಸುರಿಯಿತು. ಇದರಿಂದ ಪರಿಷ್ಕೃತ ಗುರಿ ನೀಡಲಾಯಿತು.

ಆಸಿಫ್, ಕಮಿ ಆಸರೆ: ಇದನ್ನೂ ಮುನ್ನ ಬ್ಯಾಟಿಂಗ್ ಮಾಡಲು ಕಳುಹಿಸ್ಪಟ್ಟ ನೇಪಾಳ ತಂಡಕ್ಕೆ ಆರಂಭ ಆಟಗಾರ ಆಸಿಫ್ ಶೇಖ್ (97 ಎಸೆತಗಳಲ್ಲಿ 58), ಕುಶಲ್ ಭುರ್ತೆಲ್ (38, 25ಎ) ಮತ್ತು ಸೋಮಪಾಲ್ ಕಮಿ (48, 55 ಎ) ಅವರು ಉತ್ತಮ ಕೊಡುಗೆ ನೀಡಿದರು.

ಈ ಹಿಂದಿನ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ 104 ರನ್‌ಗಳಿಗೆ ಉರುಳಿದ್ದ ನೇಪಾಳ ಈ ಬಾರಿ ಸುಧಾರಿತ ಪ್ರದರ್ಶನ ನೀಡಿ ಮೊದಲ 10 ಓವರುಗಳಲ್ಲಿ ಒಂದು ವಿಕೆಟ್‌ಗೆ 65 ರನ್ ಗಳಿಸಿ ಉತ್ತಮ ಆರಂಭ ಮಾಡಿತು. ಕುಶಲ್ ಧೈರ್ಯದಿಂದ ಬ್ಯಾಟ್ ಬೀಸಿದರು. ಅವರ 25 ಎಸೆತಗಳ ಇನಿಂಗ್ಸ್‌ನಲ್ಲಿ ಎರಡು ಸಿಕ್ಸರ್, ಮೂರು ಬೌಂಡರಿಗಳಿದ್ದವು.

ಕುಶಲ್‌ಗೆ ಎರಡು ಜೀವದಾನಗಳೂ ದೊರಕಿದ್ದವು. ಮೊದಲ ಓವರ್‌ನಲ್ಲೇ ಶ್ರೇಯಸ್ ಅಯ್ಯರ್ ಕ್ಯಾಚ್ ಬಿಟ್ಟರು. ಏಳು ರನ್ ಗಳಿಸಿದ್ದಾಗ, ಕೀಪರ್ ಇಶಾನ್ ಕಿಶನ್ ಜೀವದಾನ ನೀಡಿದರು. ಎರಡೂ ಬಾರಿ ಮಧ್ಯಮ ವೇಗಿ ಮೊಹಮ್ಮದ್ ಶಮಿ ಅವರಿಗೆ ನಷ್ಟವಾಯಿತು.

ಶಾರ್ದೂಲ್ ಕೊನೆಗೂ ಭಾರತಕ್ಕೆ ಯಶಸ್ಸು ಗಳಿಸಿಕೊಟ್ಟರು. ಭುರ್ತೆಲ್ ಅವರ ಬ್ಯಾಟಿನ ಅಂಚಿಗೆ ತಗುಲಿದ ಚೆಂಡನ್ನು ಹಿಡಿಯುವಲ್ಲಿ ವಿಕೆಟ್ ಕೀಪರ್ ಕಿಶನ್ ಈ ಬಾರಿ ಎಡವಲಿಲ್ಲ. ನೇಪಾಳದ ಮಧ್ಯಮ ಕ್ರಮಾಂಕದ ಆಟಗಾರರು ರವೀಂದ್ರ ಜಡೇಜಾ (40ಕ್ಕೆ3) ಅವರ ಸ್ಪಿನ್ ದಾಳಿ ಎದುರು ನೆಲೆಯೂರಲು ಆಗಲಿಲ್ಲ. ಉತ್ತಮ ಆರಂಭದ ನಂತರ ತಂಡ ಒಂದು ಹಂತದಲ್ಲಿ 101 ರನ್‌ಗಳಾಗುವಷ್ಟರಲ್ಲಿ 4 ವಿಕೆಟ್‌ಗಳನ್ನು ಕಳೆದುಕೊಂಡಿತು.

ಅನುಭವಿ ಜಡೇಜಾ ಅವರು ನಾಯಕ ರೋಹಿತ್ ಪೌದೆಲ್, ಕುಶಲ್ ಮಲ್ಲ ಮತ್ತು ಭೀಮ್ ಶಾರ್ಕಿ ಅವರ ವಿಕೆಟ್‌ಗಳನ್ನು ಪಡೆದು ಎದುರಾಳಿ ತಂಡಕ್ಕೆ ಲಗಾಮು ಹಾಕಿದರು. ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ (34/0) ನಿರೀಕ್ಷಿತ ಅಪಾಯ ಒಡ್ಡಲಿಲ್ಲ.

ದೀಪೇಂದ್ರ ಸಿಂಗ್ ಐರಿ (29) ಮತ್ತು ಸೋಮಪಾಲ್ ಕಮಿ ಏಳನೇ ವಿಕೆಟ್‌ಗೆ 50 ರನ್ ಸೇರಿಸಿ ತಂಡ 200ರ ಗಡಿ ತಲುಪಲು ನೆರವಾದರು. ಜಸ್‌ಪ್ರೀತ್ ಬೂಮ್ರಾ ಇಲ್ಲದೇ ಭಾರತದ ಬೌಲರ್‌ಗಳ ಇತಿಮಿತಿಯೂ ಈ ಪಂದ್ಯದಲ್ಲಿ ಬಯಲಾಯಿತು.

ಸಂಕಿಪ್ತ ಸ್ಕೋರು: ನೇಪಾಳ: 48.2 ಓವರುಗಳಲ್ಲಿ 230 (ಕುಶಲ್ ಭುರ್ತೆಲ್ 38, ಆಸಿಫ್ ಶೇಖ್ 58, ಗುಲ್ಶನ್ ಝಾ 23, ದೀಪೇಂದ್ರ ಸಿಂಗ್ ಐರಿ 29, ಸೋಮಪಾಲ್ ಕಮಿ 48; ಶಮಿ 29ಕ್ಕೆ1, ಸಿರಾಜ್ 61ಕ್ಕೆ3, ಹಾರ್ದಿಕ್ ಪಾಂಡ್ಯ 34ಕ್ಕೆ1, ಶಾರ್ದೂಲ್ ಠಾಕೂರ್ 26ಕ್ಕೆ1, ರವೀಂದ್ರ ಜಡೇಜ 40ಕ್ಕೆ3)

ಭಾರತ: 20.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 147 (ರೋಹಿತ್ ಶರ್ಮ ಔಟಾಗದೆ 74, ಶುಭಮನ್ ಗಿಲ್ ಔಟಾಗದೆ 67) ಫಲಿತಾಂಶ: ಭಾರತಕ್ಕೆ 10 ವಿಕೆಟ್ ಗೆಲುವು (ಡಿಎಲ್‌ಎಸ್ ಅನ್ವಯ)

ಇಂದಿನ ಪಂದ್ಯ
ಅಫ್ಘಾನಿಸ್ತಾನ–ಶ್ರೀಲಂಕಾ (ಮಧ್ಯಾಹ್ನ 3) ಸ್ಥಳ: ಲಾಹೋರ್

ಶತಕದ ಜತೆಯಾಟ ನೀಡಿದ ರೋಹಿತ್ ಶರ್ಮ (ಬಲ) ಮತ್ತು ಶುಭಮನ್ ಗಿಲ್ ರನ್ ಗಳಿಸಿದ ಕ್ಷಣ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು
- 59 ಎಸೆತಗಳಲ್ಲಿ 74 ರನ್ ಗಳಿಸಿದ ರೋಹಿತ್
- ರವೀಂದ್ರ ಜಡೇಜ, ಸಿರಾಜ್‌ಗೆ 3 ವಿಕೆಟ್
- ನೇಪಾಳ ತಂಡದ ಆಸಿಫ್ ಶೇಖ್ ಅರ್ಧಶತಕ

ಇಗಾ ಶ್ವಾಂಟೆಕ್‌ಗೆ ಆಘಾತ

ಅಮೆರಿಕ ಓಪನ್: ಸೋಲಿನೊಡನೆ ಅಗ್ರ ಪಟ್ಟಕ್ಕೆ ಚ್ಯುತಿ

ನ್ಯೂಯಾರ್ಕ್ (ಎಪಿ): ಹಾಲಿ ಚಾಂಪಿಯನ್ ಪಟ್ಟ ಹಾಗೂ ಕಳೆದ ಆರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಮೂರರಲ್ಲಿ ಗೆದ್ದು ಇಲ್ಲಿಗೆ ಬಂದಿದ್ದ ಇಗಾ ಶ್ವಾಂಟೆಕ್ ಅವರಿಗೆ ಇದ್ಯಾವುದೂ ನೆರವಿಗೆ ಬರಲಿಲ್ಲ. ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಅಮೆರಿಕ ಓಪನ್ ಮಹಿಳಾ ಸಿಂಗಲ್ಸ್ ನಾಲ್ಕನೇ ಸುತ್ತಿನ ಪಂದ್ಯದಲ್ಲಿ ಶ್ವಾಂಟೆಕ್, 20ನೇ ಶ್ರೇಯಾಂಕದ ಯೆಲೆನಾ ಒಸ್ಟಪೆಂಕೊ ಅವರಿಗೆ ಮಣಿದರು. ಜೊತೆಗೆ ಅಗ್ರಕ್ರಮಾಂಕದ ಆಟಗಾರ್ತಿಯ ಪಟ್ಟವನ್ನೂ ಕಳೆದುಕೊಂಡರು.

2017ರ ಫ್ರೆಂಚ್ ಓಪನ್ ಚಾಂಪಿಯನ್ ಒಸ್ಟಪೆಂಕೊ 3-6, 6-3, 6-1 ರಿಂದ ಅಗ್ರ ಶ್ರೇಯಾಂಕದ ಶ್ವಾಂಟೆಕ್ ಅವರನ್ನು ಸೋಲಿಸಿದರು. ಲಾತ್ವಿಯಾ ಆಟಗಾರ್ತಿಯ ಶಕ್ತಿಶಾಲಿ ಆಟದ ಶೈಲಿಯೆದುರು ಶ್ವಾಂಟೆಕ್ ಅವರ ಲಯ ಪೂರ್ಣವಾಗಿ ತಪ್ಪಿಹೋಯಿತು.

ಈ ಸೋಲಿನೊಡನೆ 22 ವರ್ಷದ ಶ್ವಾಂಟೆಕ್ ಅವರ 75 ವಾರಗಳ ಅಗ್ರಪಟ್ಟವೂ ಅಂತ್ಯಗೊಂಡಿತು. ಮುಂದಿನ ವಾರ ಪ್ರಕಟವಾಗಲಿರುವ ರ‍್ಯಾಂಕಿಂಗ್‌ನಲ್ಲಿ ಬೆಲಾರಸ್‌ನ ಅರಿನಾ ಸಬಲೆಂಕಾ ಅವರು ಮೊದಲ ಬಾರಿ ಅಗ್ರಸ್ಥಾನಕ್ಕೆ ಏರಲಿದ್ದಾರೆ.

ಈ ಸೋಲು ಪೋಲೆಂಡ್ ಆಟಗಾರ್ತಿಯನ್ನು ದಿಗಿಲುಗೊಳಿಸಿದ್ದು ಅವರ ಮಾತಿನಲ್ಲಿ ವ್ಯಕ್ತವಾಯಿತು. ‘ನನ್ನ ಆಟದ ಮಟ್ಟ ಇಷ್ಟೊಂದು ಕುಸಿದಿದ್ದು ಆಶ್ಚರ್ಯ ಮೂಡಿಸಿತು. ಆರಂಭದಲ್ಲಿ ಆಟ ಕಳಪೆಯಾಗಿದ್ದರೆ, ನಂತರ ಹೊಂದಿಕೊಂಡು ಸುಧಾರಿಸಿಕೊಳ್ಳುತ್ತಿದ್ದೆ ಅಥವಾ ಪರಿಹಾರ ಕಂಡುಕೊಳ್ಳುತ್ತಿದ್ದೆ. ಆದರೆ ಇಂದಿನ ಆಟ ಸಂಪೂರ್ಣ ಉಲ್ಟಾ ಆಗಿತ್ತು’ ಎಂದ ಶ್ವಾಂಟೆಕ್, ‘ನನ್ನ ಆಟ ಏಕೆ ಹೀಗಾಯಿತೆಂದು ತಿಳಿಯಲೇ ಇಲ್ಲ. ನನಗೆ ಹಿಡಿತವೇ ಸಿಗಲಿಲ್ಲ’ ಎಂದು ಅಲವತ್ತುಕೊಂಡರು.

26 ವರ್ಷದ ಒಸ್ಟಪೆಂಕೊ ಹೇಳಿಕೆ ಭಿನ್ನವಾಗಿತ್ತು. ‘ಆಕೆ (ಶ್ವಾಂಟೆಕ್) ಪ್ರಬಲ ಹೊಡೆತಗಳ ಆಟಗಾರ್ತಿಯರೆದುರು ಆಡಲು ಇಷ್ಟಪಡುವುದಿಲ್ಲ. ಅವರು ಹೊಂದಿಕೊಳ್ಳಲು ಸಮಯ ತೆಗೆದುಕೊಳ್ಳುತ್ತಾರೆ. ನಾನು ವೇಗವಾಗಿ, ಆಕ್ರಮಣಕಾರಿಯಾಗಿ ಮತ್ತು ಪ್ರಬಲ ಹೊಡೆತಗಳನ್ನು ಅಟ್ಟುವಾಗ ಅವರು ಪರದಾಡುತ್ತಿದ್ದರು’ ಎಂದು ವಿಶ್ಲೇಷಿಸಿದರು. ಅವರ ಆಟದಲ್ಲಿ 31 ಗೆಲುವಿನ (ವಿನ್ನರ್) ಹೊಡೆತಗಳಿದ್ದರೆ, ಶ್ವಾಂಟೆಕ್ ಆಟದಲ್ಲಿ ಇದ್ದುದು 18 ಮಾತ್ರ.

20ನೇ ಶ್ರೇಯಾಂಕದ ಒಸ್ಟಪೆಂಕೊ ಕ್ವಾರ್ಟರ್ ಫೈನಲ್‌ನಲ್ಲಿ 19 ವರ್ಷದ ಕೊಕೊ ಗಾಫ್ ಅವರನ್ನು ಎದುರಿಸಲಿದ್ದಾರೆ. ಆತಿಥೇಯ ಅಮೆರಿಕದ ಗಾಫ್ 6-3, 3-6, 6-1 ರಿಂದ ಕರೋಲಿನ್ ವೊಜ್ನಿಯಾಕಿ ಅವರ ಓಟಕ್ಕೆ ತಡೆಹಾಕಿದರು.

ಎಂಟರ ಘಟ್ಟಕ್ಕೆ ಅಮೆರಿಕದ ಮೂವರು: 2005ರ ನಂತರ ಮೊದಲ ಬಾರಿ ಅಮೆರಿಕದ ಮೂವರು ಆಟಗಾರರು ಪುರುಷರ ಸಿಂಗಲ್ಸ್‌ನಲ್ಲಿ ಅಂತಿಮ ಎಂಟರ ಘಟ್ಟದಲ್ಲಿ ಸ್ಥಾನ ಪಡೆದಿದ್ದಾರೆ. ಟೇಲರ್ ಫ್ರಿಟ್ಜ್, ಫ್ರಾನ್ಸೆಸ್ ಟಿಫೊ ಮತ್ತು ಬೆನ್ ಶೆಲ್ಟನ್ ಅವರು ನಾಲ್ಕನೇ ಸುತ್ತಿನ ಪಂದ್ಯಗಳನ್ನು ಗೆದ್ದುಕೊಂಡಿದ್ದಾರೆ. ಇವರಲ್ಲಿ ಒಬ್ಬರು ಸೆಮಿಫೈನಲ್ ತಲುಪುವುದೂ ಖಚಿತವಾಗಿದೆ.

ಟಿಫೊ, ವೈಲ್ಡ್‌ಕಾರ್ಡ್ ಪಡೆದಿದ್ದ ಆಸ್ಟ್ರೇಲಿಯಾದ ರಿಂಕಿ ಹಿಜಿಕಾಟಾ ಅವರನ್ನು 6-4, 6-1, 6-4 ರಿಂದ ಹಿಮ್ಮೆಟ್ಟಿಸಿದರು. ಅವರ ಕ್ವಾರ್ಟರ್‌ಫೈನಲ್ ಎದುರಾಳಿ ಶೆಲ್ಟನ್ 6-4, 6-3, 4-6, 6-4 ರಿಂದ ಸ್ವದೇಶದ ಟಾಮಿ ಪಾಲ್ ಅವರಿಗೆ ಸೋಲುಣಿಸಿದರು.

ಜೊಕೊ ಮುನ್ನಡೆ: ಇಲ್ಲಿ ನಾಲ್ಕನೇ ಬಾರಿ ಪ್ರಶಸ್ತಿಗೆ ಗೆಲ್ಲುವ ಯತ್ನದಲ್ಲಿರುವ ಸರ್ಬಿಯಾ ಆಟಗಾರ ನೊವಾಕ್ ಜೊಕೊವಿಚ್ 6-2, 7-5, 6-4 ರಿಂದ ಬೋರ್ನಾ ಗೋಜೊ ಅವರಿಗೆ ಸೋಲುಣಿಸಿದರು. ಜೊಕೊ ಇಲ್ಲಿ ಪ್ರಶಸ್ತಿ ಗೆದ್ದಲ್ಲಿ ಆಸ್ಟ್ರೇಲಿಯಾದ ಆಟಗಾರ್ತಿ ಮಾರ್ಗರೇಟ್ ಕೋರ್ಟ್ ಅವರ 24 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ದಾಖಲೆ ಸರಿಟ್ಟಿದಂತಾಗಲಿದೆ.

ಶ್ವಾಂಟೆಕ್ ಅವರನ್ನು ಮಣಿಸಿದ ಸಂಭ್ರಮದಲ್ಲಿ ಒಸ್ಟಪೆಂಕೊ –ಎಎಫ್‌ಪಿ ಚಿತ್ರ

ಕ್ವಾರ್ಟರ್ ಫೈನಲ್‌ಗೆ ಬೋಪಣ್ಣ–ಎಬ್ಡೆನ್

ಆರನೇ ಶ್ರೇಯಾಂಕದ ಭಾರತ– ಆಸ್ಟ್ರೇಲಿಯಾ ಜೋಡಿಯಾದ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯೂ ಎಬ್ಡೆನ್ ಅವರು ಪುರುಷರ ಡಬಲ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಇವರಿಬ್ಬರು 6-4, 6-7 (5), 7-6 (10-6) ರಿಂದ ಬ್ರಿಟನ್‌ನ ಜೂಲಿಯನ್ ಕ್ಯಾಶ್– ಹೆನ್ರಿ ಪ್ಯಾಟನ್ ಅವರನ್ನು ಸೋಲಿಸಿದರು. ಮೂರು ಸೆಟ್‌ಗಳ ಈ ಪಂದ್ಯ 2 ಗಂಟೆ 22 ನಿಮಿಷಗಳ ಕಾಲ ನಡೆಯಿತು.

ಆದರೆ ಮಿಕ್ಸೆಡ್ ಡಬಲ್ಸ್‌ನಲ್ಲಿ ಬೋಪಣ್ಣ ಸವಾಲು ಅಂತ್ಯಗೊಂಡಿತು. ಬೋಪಣ್ಣ– ಅಲ್ದಿಲಾ ಸಟ್ಜಿಯಾಡಿ ಜೋಡಿ ಎರಡನೇ ಸುತ್ತಿನಲ್ಲಿ 2-6, 5-7 ರಿಂದ ಅಮೆರಿಕದ ಬೆನ್ ಶೆಲ್ಟನ್ – ಟೇಲರ್ ಟ್ರಾನ್ಸೆಂಡ್ ಜೋಡಿಯೆದುರು ಸೋಲನ್ನು ಕಂಡಿತು.

ಲಾಹೋರ್ ತಲುಪಿದ ಬಿನ್ನಿ, ಶುಕ್ಲಾ

ಅಮೃತಸರ (ಪಿಟಿಐ): ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಮತ್ತು ಉಪಾಧ್ಯಕ್ಷ ರಾಜೀವ್ ಶುಕ್ಲಾ ಅವರು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಆಹ್ವಾನದಂತೆ ಸೋಮವಾರ ವಾಘಾ ಗಡಿ ಮೂಲಕ ಲಾಹೋರ್‌ಗೆ ತೆರಳಿದರು.

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯವನ್ನು ವೀಕ್ಷಿಸಲು ಪಾಕ್‌ಗೆ ಬರುವಂತೆ ಪಿಸಿಬಿಯು, ಬಿಸಿಸಿಐ ಪದಾಧಿಕಾರಿಗಳಿಗೆ ಆಹ್ವಾನ ನೀಡಿತ್ತು. ಬಿಸಿಸಿಐ ಪದಾಧಿಕಾರಿಗಳು ಪಾಕ್‌ಗೆ ಭೇಟಿ ನೀಡಿದ್ದು 17 ವರ್ಷಗಳ ಬಳಿಕ ಇದೇ ಮೊದಲು.

ರಾಜಕೀಯ ಇಲ್ಲ: ‘ಏಷ್ಯಾ ಕಪ್ ಟೂರ್ನಿಗೆ ಪಾಕಿಸ್ತಾನ ಆತಿಥ್ಯ ವಹಿಸಿದೆ. ಎರಡು ದಿನಗಳ ನಮ್ಮ ಈ ಭೇಟಿಯು ಕ್ರಿಕೆಟ್ ಕಾರಣದಿಂದ ನಡೆಯುತ್ತಿದೆಯೇ ಹೊರತು, ಯಾವುದೇ ರಾಜಕೀಯ ಇಲ್ಲ. ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಗವರ್ನರ್ ಆಯೋಜಿಸುವ ಔತಣಕೂಟದಲ್ಲಿ ಪಾಲ್ಗೊಳ್ಳಲಿದ್ದೇವೆ. ಬಾಂಗ್ಲಾದೇಶ, ಅಫ್ಘಾನಿಸ್ತಾನ ಮತ್ತು ಪಾಕ್ ಆಟಗಾರರು ಈ ವೇಳೆ ಹಾಜರಿರುವರು. ನಾವು ಕ್ರಿಕೆಟ್‌ಅನ್ನು ರಾಜಕೀಯದೊಂದಿಗೆ ಬೆರೆಸಬಾರದು’ ಎಂದು ಪಾಕ್‌ಗೆ ತೆರಳುವ ಮುನ್ನ ಶುಕ್ಲಾ ಅವರು ಮಾಧ್ಯಮದವರಿಗೆ ತಿಳಿಸಿದರು.

ಏಷ್ಯಾ ಕಪ್ ಟೂರ್ನಿಗೆ ಭಾರತ ತಂಡವನ್ನು ಪಾಕ್‌ಗೆ ಕಳುಹಿಸುವುದಿಲ್ಲ ಎಂದು ಬಿಸಿಸಿಐ ಹೇಳಿತ್ತು. ಆದ್ದರಿಂದ ಈ ಬಾರಿ ‘ಹೈಬ್ರಿಡ್ ಮಾದರಿ’ಯಲ್ಲಿ ಟೂರ್ನಿ ನಡೆಯುತ್ತಿದ್ದು, ಪಾಕ್ ಜತೆ ಶ್ರೀಲಂಕಾ ಕೂಡಾ ಜಂಟಿ ಆತಿಥ್ಯ ವಹಿಸಿಕೊಂಡಿದೆ.

ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಮತ್ತು ಉಪಾಧ್ಯಕ್ಷ ರಾಜೀವ್ ಶುಕ್ಲಾ ಅವರು ಸೋಮವಾರ ವಾಘಾ ಗಡಿ ಮೂಲಕ ಪಾಕ್‌ಗೆ ಪ್ರಯಾಣಿಸಿದರು –ಪಿಟಿಐ ಚಿತ್ರ

ಚೀನಾ ಓಪನ್: ಉತ್ತಮ ಆಟದ ವಿಶ್ವಾಸದಲ್ಲಿ ಪ್ರಣಯ್, ಲಕ್ಷ್ಯ

ಹಾಂಗ್‌ಝೌ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ತಾರೆಗಳಾದ ಎಚ್.ಎಸ್. ಪ್ರಣಯ್ ಮತ್ತು ಲಕ್ಷ್ಯ ಸೇನ್ ಅವರು ಇಲ್ಲಿ ಮಂಗಳವಾರ ಆರಂಭವಾಗಲಿರುವ ಚೀನಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಅಭಿಯಾನವನ್ನು ಮುನ್ನಡೆಸಲಿದ್ದಾರೆ.

ಆದರೆ, ಮಾಜಿ ವಿಶ್ವ ಚಾಂಪಿಯನ್ ಪಿ.ವಿ. ಸಿಂಧು ಟೂರ್ನಿಯಲ್ಲಿ ಭಾಗವಹಿಸುತ್ತಿಲ್ಲ. ಸೆ.23ರಂದು ಆರಂಭವಾಗುವ ಏಷ್ಯನ್ ಗೇಮ್ಸ್‌ನತ್ತ ಗಮನ ಹರಿಸುವ ಉದ್ದೇಶದಿಂದ ಕಡೆ ಕ್ಷಣದಲ್ಲಿ ಅವರು ಹಿಂದೆ ಸರಿದಿದ್ದು, ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಸ್ಪರ್ಧೆ ಇರುವುದಿಲ್ಲ. ಕಳೆದ ಆವೃತ್ತಿಯ ಏಷ್ಯಾಡ್‌ನಲ್ಲಿ ಸಿಂಧು ಬೆಳ್ಳಿ ಗೆದ್ದಿದ್ದರು.

ಕಳೆದ ತಿಂಗಳು ನಡೆದ ವಿಶ್ವ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವದ ಅಗ್ರ ಕ್ರಮಾಂಕದ ವಿಕ್ಟರ್ ಆಕ್ಸೆಲ್ಸನ್ ಅವರಿಗೆ ಆಘಾತ ನೀಡಿ, ಕಂಚು ಗೆದ್ದಿದ್ದ ಪ್ರಣಯ್ ಉತ್ತಮ ಆಟದ ವಿಶ್ವಾಸದಲ್ಲಿದ್ದಾರೆ. ವೃತ್ತಿಜೀವನದಲ್ಲಿ ಶ್ರೇಷ್ಠ ರ‍್ಯಾಂಕ್ (6ನೇ) ಪಡೆದಿರುವ ಅವರು ಮೊದಲ ಸುತ್ತಿನಲ್ಲಿ ಮಲೇಷ್ಯಾದ ಎಂಗ್ ತ್ಸೆ ಯೋಂಗ್ ವಿರುದ್ಧ ಅಭಿಯಾನ ಆರಂಭಿಸುವರು. ಅವರಿಗೆ ಎರಡನೇ ಸುತ್ತಿನಲ್ಲಿ ನಾಲ್ಕನೇ ಕ್ರಮಾಂಕದ ಕುನ್ಲವುತ್ ವಿತಿದ್‌ಸರನ್ (ಥಾಯ್ಲೆಂಡ್) ಎದುರಾಗುವ ಸಾಧ್ಯತೆ ಇದೆ.

ಕಾಮನ್‌ವೆಲ್ತ್ ಗೇಮ್ಸ್ ಮಾಜಿ ಚಾಂಪಿಯನ್ ಲಕ್ಷ್ಯ ಸೇನ್ ಅವರು ಮೊದಲ ಸುತ್ತಿನಲ್ಲಿ ಡೆನ್ಮಾರ್ಕ್‌ನ ಆ್ಯಂಡರ್ಸ್ ಆಂಟೊನ್‌ಸೆನ್ ವಿರುದ್ಧ ಸೆಣಸಾಡುವರು.

ಪ್ರಿಯಾಂಶು ರಾಜಾವತ್ ಅವರು ಮೊದಲ ಸುತ್ತಿನಲ್ಲಿ ಇಂಡೋನೇಷ್ಯಾದ ಶೇಸರ್ ಹಿರೇನ್ ರುಸ್ತಾವಿಟೊ ವಿರುದ್ಧ ಪೈಪೋಟಿ ನಡೆಸುವರು.

ಕ್ರಿಕೆಟ್: ಮನ್ವಂತ್, ಸ್ಮರಣ್‌ಗೆ ಅವಕಾಶ

ಬೆಂಗಳೂರು: ಸೈಯದ್ ಮುಷ್ತಾಕ್ ಅಲಿ ಟ್ರೋಫಿ (ಎಸ್‌ಎಂಎಟಿ) ಕ್ರಿಕೆಟ್ ಟೂರ್ನಿಗೆ 28 ಸಂಭಾವ್ಯ ಆಟಗಾರರ ಕರ್ನಾಟಕ ತಂಡವನ್ನು ಕೆಎಸ್‌ಸಿಎ ಆಯ್ಕೆ ಸಮಿತಿ ಸೋಮವಾರ ಪ್ರಕಟಿಸಿತು.

ಈಚೆಗೆ ನಡೆದ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಗಮನ ಸೆಳೆದಿದ್ದ ಮನ್ವಂತ್ ಕುಮಾರ್, ಆರ್.ಸ್ಮರಣ್, ಸಿ.ಎ.ಕಾರ್ತಿಕ್ ಮತ್ತು ಮೋನಿಶ್ ರೆಡ್ಡಿ ಒಳಗೊಂಡಂತೆ ಕೆಲವು ಯುವ ಆಟಗಾರರು ಸೀನಿಯರ್ ವಿಭಾಗದ ಸಂಭಾವ್ಯರ ತಂಡದಲ್ಲಿ ಕಾಣಿಸಿಕೊಂಡಿದ್ದಾರೆ. ಅ.28 ರಿಂದ ಆರಂಭವಾಗಲಿರುವ 23 ವರ್ಷದೊಳಗಿನ ಟೂರ್ನಿಗೆ 26 ಸದಸ್ಯರ ಸಂಭಾವ್ಯರ ತಂಡವನ್ನೂ ಇದೇ ವೇಳೆ ಪ್ರಕಟಿಸಲಾಯಿತು.

ವಿದರ್ಭ ಪರ ಆಡಲಿರುವ ಕರುಣ್: ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಗಮನ ಸೆಳೆದಿದ್ದ ಬ್ಯಾಟರ್ ಕರುಣ್ ನಾಯರ್ ಅವರ ಹೆಸರು ಸಂಭಾವ್ಯರ ಪಟ್ಟಿಯಲ್ಲಿಲ್ಲ. ಅವರು ಮುಂದಿನ ಋತುವಿನಲ್ಲಿ ವಿದರ್ಭ ಪರ ಆಡಲಿದ್ದು, ಕೆಎಸ್‌ಸಿಎನಿಂದ ನಿರಾಕ್ಷೇಪಣಾ ಪತ್ರ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮನ್ವಂತ್

ಮುಷ್ತಾಕ್ ಅಲಿ ಟ್ರೋಫಿಗೆ ಸಂಭಾವ್ಯರ ತಂಡ: ಕೆ.ಎಲ್.ರಾಹುಲ್, ಮಯಂಕ್ ಅಗರವಾಲ್, ಪ್ರಸಿದ್ಧ ಕೃಷ್ಣ, ಆರ್.ಸಮರ್ಥ್, ದೇವದತ್ತ ಪಡಿಕ್ಕಲ್, ಮನೀಷ್ ಪಾಂಡೆ, ಅಭಿನವ್ ಮನೋಹರ್, ನಿಕಿನ್ ಜೋಸ್, ಬಿ.ಆರ್.ಶರತ್, ಕೆ.ಗೌತಮ್, ಶುಭಾಂಗ್ ಹೆಗ್ಡೆ, ವೈಶಾಖ್ ವಿಜಯಕುಮಾರ್, ವಿದ್ವತ್ ಕಾವೇರಪ್ಪ, ವಿ.ಕೌಶಿಕ್, ಮನ್ವಂತ್ ಕುಮಾರ್, ಮೋನಿಶ್ ರೆಡ್ಡಿ, ಎಲ್.ಆರ್. ಚೇತನ್, ಕೆ.ಎಲ್.ಶ್ರೀಜಿತ್, ಲವನೀತ್ ಸಿಸೋಡಿಯ, ಆರ್.ಸ್ಮರಣ್, ಅಭಿಲಾಷ್ ಶೆಟ್ಟಿ, ಸಿ.ಎ.ಕಾರ್ತಿಕ್, ಜೆ.ಸುಚಿತ್, ಪ್ರಣವ್ ಭಾಟಿಯಾ, ಮನೋಜ್ ಭಾಂಡಗೆ, ರಿಷಿ ಬೋಪಣ್ಣ, ಪ್ರವೀಣ್ ದುಬೆ, ಎಂ.ವೆಂಕಟೇಶ್. ಕೋಚ್: ಪಿ.ವಿ.ಶಶಿಕಾಂತ್

23 ವರ್ಷದೊಳಗಿನ ಸಂಭಾವ್ಯರ ತಂಡ: ವಿಶಾಲ್ ಒಣತ್, ರೋಹನ್ ಪಾಟೀಲ್, ತಿಪ್ಪಾ ರೆಡ್ಡಿ, ಕೆ.ವಿ.ಅನೀಶ್, ಬಿ.ವಿಜಯರಾಜ್, ಮೆಕ್‌ನೀಲ್ ನೊರೊನಾ, ಲೋಚನ್ ಗೌಡ, ಆರ್.ಸ್ಮರಣ್, ಅನೀಶ್ವರ್ ಗೌತಮ್, ಅಕ್ಷನ್ ರಾವ್, ಎಸ್.ಪಿ.ಶ್ರೇಯಸ್, ಕೃತಿಕ್ ಕೃಷ್ಣ, ಆಶೀಶ್ ಮಹೇಶ್, ಶುಭಾಂಗ್ ಹೆಗ್ಡೆ, ಎ.ಸಿ.ರೋಹಿತ್ ಕುಮಾರ್, ಕೆ.ಶಶಿಕುಮಾರ್, ಮೊಹ್ಸಿನ್ ಖಾನ್, ನೇಥನ್ ಡಿಮೆಲೊ, ಪರಾಸ್ ಗುರುಬಕ್ಷ್ ಆರ್ಯ, ಮನ್ವಂತ್ ಕುಮಾರ್, ಯಶೋವರ್ಧನ್ ಪರಂತಪ್, ರಾಜ್‌ವೀರ್ ವಾಧ್ವಾ, ವಿದ್ಯಾಧರ್ ಪಾಟೀಲ್, ಎಲ್.ಆರ್.ಕುಮಾರ್, ಮೋನಿಶ್ ರೆಡ್ಡಿ, ಭೀಮ ರಾವ್. ಕೋಚ್: ರಾಜಶೇಖರ್ ಶಾನಭಾಳ್

ಸಂಕ್ಷಿಪ್ತ ಸುದ್ದಿ

ಭಾರತ ಪ್ರವಾಸಕ್ಕೆ ಮ್ಯಾಕ್ಸ್‌ವೆಲ್ ಅಲಭ್ಯ?

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಪಾದದ ನೋವಿಗೆ ವಿಶ್ರಾಂತಿ ಪಡೆಯಲು ಈ ತಿಂಗಳ ಭಾರತ ಪ್ರವಾಸ ತಪ್ಪಿಸಿಕೊಳ್ಳುವ ಸಾಧ್ಯತೆಯಿದೆ. ವಿಶ್ವಕಪ್ ಹತ್ತಿರದಲ್ಲಿರುವುದರಿಂದ ಮುಂಜಾಗ್ರತೆಯಾಗಿ ಈ ನಿರ್ಧಾರಕ್ಕೆ ಮುಂದಾಗಿದ್ದಾರೆ.

ಮ್ಯಾಕ್ಸ್‌ವೆಲ್

ಎಡಪಾದದ ನೋವಿನಿಂದಾಗಿ 34 ವರ್ಷದ ಈ ಆಟಗಾರ ದಕ್ಷಿಣ ಆಫ್ರಿಕಾ ವಿರುದ್ಧ ಟಿ-20 ಸರಣಿಯಲ್ಲೂ ಆಡಿರಲಿಲ್ಲ. ಕಳೆದ ವರ್ಷವೂ ಇದೇ ಕಾಲಿಗೆ ನೋವು ಕಾಡಿತ್ತು.

ವಿಶ್ವಕಪ್‌ಗೆ ತಾಲೀಮು ಆಗಿ ಆಸ್ಟ್ರೇಲಿಯಾವು ಭಾರತ ವಿರುದ್ಧ ಮೂರು ಏಕದಿನ ಪಂದ್ಯಗಳನ್ನು ಆಡಲಿದ್ದು, ಮೊದಲ ಪಂದ್ಯ ಮೊಹಾಲಿಯಲ್ಲಿ ಸೆಪ್ಟೆಂಬರ್ 22ರಂದು ನಿಗದಿಯಾಗಿದೆ.

ಬೂಮ್ರಾ ದಂಪತಿಗೆ ಗಂಡು ಮಗು

ಮುಂಬೈ: ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಪತ್ನಿ ಸಂಜನಾ ಗಣೇಶನ್ ಸೋಮವಾರ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ.

ತಾವು ತಂದೆಯಾಗಿರುವ ಖುಷಿಯನ್ನು ಬೂಮ್ರಾ ಅವರು ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ‘ನಮ್ಮ ಪುಟ್ಟ ಕುಟುಂಬವು ಬೆಳೆದಿದೆ. ಇಂದು (ಸೋಮವಾರ) ಬೆಳಿಗ್ಗೆ ಪುಟ್ಟ ಹುಡುಗ ಅಂಗದ್ ಜಸ್‌ಪ್ರೀತ್ ಬೂಮ್ರಾನನ್ನು ಈ ಜಗತ್ತಿಗೆ ಸ್ವಾಗತಿಸಿದ್ದೇವೆ’ ಎಂದು ಬರೆದುಕೊಂಡಿದ್ದಾರೆ.

ಬೂಮ್ರಾ ಅವರು ನೇಪಾಳ ವಿರುದ್ಧ ಸೋಮವಾರ ನಡೆದ ಏಷ್ಯಾ ಕಪ್ ಪಂದ್ಯಕ್ಕೆ ಅಲಭ್ಯರಾಗಿದ್ದರು.

ಡಾಡ್ಜ್‌ಬಾಲ್: ಮಂಡ್ಯ, ದಕ್ಷಿಣ ಕನ್ನಡ ತಂಡಗಳಿಗೆ ಪ್ರಶಸ್ತಿ

ಬೆಂಗಳೂರು: ಮಂಡ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ತಂಡಗಳು ಕರ್ನಾಟಕ ರಾಜ್ಯ ಡಾಡ್ಜ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ನಡೆದ 2ನೇ ರಾಜ್ಯ ಮಟ್ಟದ ಸೀನಿಯರ್ ಡಾಡ್ಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದವು.

ಬೆಂಗಳೂರಿನ ಯಲಚೇನಹಳ್ಳಿ ಟ್ರಾನ್ಸೆಂಡ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಆವರಣದಲ್ಲಿ ಭಾನುವಾರ ನಡೆದ ಪುರುಷರ ಫೈನಲ್ ಪಂದ್ಯದಲ್ಲಿ ಮಂಡ್ಯ ತಂಡ 3–2ರಿಂದ ಹಾಸನ ತಂಡವನ್ನು ಮಣಿಸಿತು.

ಮಹಿಳೆಯರ ಫೈನಲ್‌ನಲ್ಲಿ ದಕ್ಷಿಣ ಕನ್ನಡ ತಂಡವು ಮಂಡ್ಯ ತಂಡವನ್ನು 3–2ರಿಂದ ಮಣಿಸಿತು.

ಭಾರತ ವಿರೋಧಿ ಘೋಷಣೆಗೆ ಪ್ರತಿಕ್ರಿಯೆ ನೀಡಿದ್ದೆ : ಗಂಭೀರ್

ಪಲ್ಲೆಕೆಲೆ (ಪಿಟಿಐ): ಭಾರತ –ಪಾಕಿಸ್ತಾನ ನಡುವಣ ಏಷ್ಯಾ ಕಪ್ ಪಂದ್ಯದ ವೇಳೆ ಪ್ರೇಕ್ಷಕರತ್ತ ಅಶ್ಲೀಲ ಸಂಜ್ಞೆ ತೋರಿಸಿದ್ದ (ಮಧ್ಯದ ಬೆರಳು ಎತ್ತಿ) ಮಾಜಿ ಬ್ಯಾಟರ್ ಗೌತಮ್ ಗಂಭೀರ್, ‘ಭಾರತ ವಿರೋಧಿ ಘೋಷಣೆ ಕೂಗಿದ ಪ್ರೇಕ್ಷಕರನ್ನು ಗುರಿಯಾಗಿಸಿ ಆ ರೀತಿ ಪ್ರತಿಕ್ರಿಯಿಸಿದ್ದೆ’ ಎಂದಿದ್ದಾರೆ.

ಗಂಭೀರ್ ಅವರು ಮಧ್ಯದ ಬೆರಳು ಎತ್ತಿ ತೋರಿಸುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ‘ಕೊಹ್ಲಿ, ಕೊಹ್ಲಿ’ ಎಂದು ಕೂಗಿದ ವಿರಾಟ್ ಕೊಹ್ಲಿ ಅಭಿಮಾನಿಗಳತ್ತ ಅವರು ಅಶ್ಲೀಲ ಸಂಜ್ಞೆ ತೋರಿಸಿದ್ದಾರೆ ಎಂದು ಕೆಲವರು ಬರೆದುಕೊಂಡಿದ್ದರು.

ಅದಕ್ಕೆ ಸ್ಪಷ್ಟನೆ ನೀಡಿರುವ ಗಂಭೀರ್, ‘ಸಾಮಾಜಿಕ ಮಾಧ್ಯಮಗಳಲ್ಲಿ ಜನರು ತಮಗೆ ಬೇಕಾದಷ್ಟನ್ನು ಮಾತ್ರ ತೋರಿಸುತ್ತಾರೆ. ಪ್ರೇಕ್ಷಕರಲ್ಲಿ ಕೆಲವರು ಭಾರತ ವಿರೋಧಿ ಘೋಷಣೆ ಕೂಗುತ್ತಿದ್ದರು. ಆಗ ಸಹಜವಾಗಿ ತಕ್ಕ ಪ್ರತಿಕ್ರಿಯೆ ನೀಡಬೇಕಾಗಿ ಬಂದಿತು’ ಎಂದು ಹೇಳಿದ್ದಾರೆ.

ಏಷ್ಯನ್ ಕ್ರೀಡಾಕೂಟಕ್ಕೆ ಅಮ್ಲಾನ್

ನವದೆಹಲಿ (ಪಿಟಿಐ): ಭಾರತದ ಅಗ್ರ ಓಟಗಾರ ಅಮ್ಲಾನ್ ಬೊರ್ಗೊಹೈನ್ ಅವರನ್ನು ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸುವ ಭಾರತ ತಂಡದಲ್ಲಿ ಸೇರ್ಪಡೆಗೊಳಿಸಲಾಗುವುದು ಎಂದು ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಅಧ್ಯಕ್ಷ ಆದಿಲ್ ಸುಮರಿವಾಲಾ ತಿಳಿಸಿದ್ದಾರೆ.

ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸುವ ಆಟಗಾರರ ಪಟ್ಟಿಯನ್ನು ಕೆಲ ದಿನಗಳ ಹಿಂದೆ ಕ್ರೀಡಾ ಸಚಿವಾಲಯ ಬಿಡುಗಡೆ ಮಾಡಿತ್ತು. 65 ಸದಸ್ಯರನ್ನು ಒಳಗೊಂಡ ಅಥ್ಲೆಟಿಕ್ಸ್ ತಂಡದಲ್ಲಿ ಅಸ್ಸಾಂನ ಅಮ್ಲಾನ್ ಹೆಸರು ಇರಲಿಲ್ಲ.

‘ಏಷ್ಯನ್ ಗೇಮ್ಸ್‌ಗಾಗಿ ಎಎಫ್‌ಐ ನಿಗದಿಪಡಿಸಿದ ಅರ್ಹತಾ ಸಮಯವನ್ನು ಮುಟ್ಟಲು ಸಾಧ್ಯವಾಗದ ಕಾರಣ ಅವರನ್ನು ಈ ಹಿಂದೆ ಕೈಬಿಡಲಾಗಿತ್ತು’ ಎಂದು ಸುಮರಿವಾಲಾ ಸ್ಪಷ್ಟಪಡಿಸಿದ್ದಾರೆ.

ಏಷ್ಯನ್ ಗೇಮ್ಸ್ ಆಯ್ಕೆಗಾಗಿ ಭುವನೇಶ್ವರದಲ್ಲಿ ಈಚೆಗೆ ನಡೆದಿದ್ದ ರಾಷ್ಟ್ರೀಯ ಅಂತರ ರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ಅಮ್ಲಾನ್ ಪುರುಷರ 200 ಮೀಟರ್ ಓಟದಲ್ಲಿ ಚಿನ್ನ ಗೆದ್ದಿದ್ದರು.

ಅರುಣಾಚಲ ವುಶು ಸ್ಪರ್ಧಿಗಳಿಗೆ ಏಷ್ಯನ್ ಗೇಮ್ಸ್ ಮಾನ್ಯತಾಪತ್ರ

ನವದೆಹಲಿ (ಪಿಟಿಐ) ಚೆಂಗ್ದುವಿನಲ್ಲಿ ಜುಲೈ ತಿಂಗಳಲ್ಲಿ ನಡೆದಿದ್ದ ವಿಶ್ವ ಯುನಿವರ್ಸಿಟಿ ಕ್ರೀಡೆಗಳ ವೇಳೆ ಚೀನಾ ರಾಯಭಾರ ಕಚೇರಿಯಿಂದ ‘ಸ್ಟೇಪಲ್ಡ್ ವೀಸಾ’ ಪಡೆದಿದ್ದ ಅರುಣಾಚಲಪ್ರದೇಶದ ಮೂವರು ವುಶು ಸ್ಪರ್ಧಿಗಳಿಗೆ ಹಾಂಗ್‌ಝೌ ಏಷ್ಯನ್ ಗೇಮ್ಸ್ ಸಂಘಟಕರು ಮಾನ್ಯತಾಪತ್ರ (ಅಕ್ರೆಡಿಟೇಷನ್) ನೀಡಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ನ್ಯೇಮನ್ ವಾಂಗ್ಸು, ಒನಿಲು ತೆಗಾ ಮತ್ತು ಮೆಪುಂಗ್ ಲಮ್ಗು ಅವರು ಏಷ್ಯನ್ ಗೇಮ್ಸ್‌ಗೆ ಪ್ರಕಟಿಸಲಾಗಿರುವ 10 ಸದಸ್ಯರ ವುಶು ತಂಡದಲ್ಲಿದ್ದಾರೆ. ಏಷ್ಯನ್ ಗೇಮ್ಸ್ ಸೆ. 23 ರಿಂದ ಅ. 8ರವರೆಗೆ ನಡೆಯಲಿದೆ.

ಜುಲೈ 27ರಂದು ಈ ಮೂವರಿಗೆ ಚೀನಾ ಸ್ಟೇಪಲ್ಡ್ ವೀಸಾ ನೀಡಿದ್ದ ಕಾರಣ ಭಾರತದ ಇಡಿ ವುಶು ತಂಡ ಸ್ಪರ್ಧೆಯಿಂದ ಹಿಂದೆಸರಿದಿತ್ತು. ಪಾಸ್‌ಪೋರ್ಟ್‌ನಲ್ಲಿ ನೇರವಾಗಿ ಮೊಹರು ಹಾಕುವ ಬದಲು ಮೊಹರಿನ ಹಾಳೆಯನ್ನು ಪಾಸ್‌ಪೋರ್ಟ್‌ಗೆ ಪಿನ್ ಮಾಡಲಾಗಿರುತ್ತದೆ.

ಫುಟ್‌ಬಾಲ್: ಅಗ್ನಿಪುತ್ರ ತಂಡಕ್ಕೆ ಜಯ

ಬೆಂಗಳೂರು: ಎಫ್‌ಸಿ ಅಗ್ನಿಪುತ್ರ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–1ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ತಂಡವನ್ನು ಮಣಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಅಗ್ನಿಪುತ್ರ ತಂಡದ ನಿಖಿಲ್‌ರಾಜ್ ಮುರುಗೇಶ್‌ಕುಮಾರ್ (45 + 5ನೇ ನಿ.), ಸುಖ್‌ರಾಜ್ ಸುಬ್ಬ (57), ಸಚಿನ್ ಕರಣ್ (90 + 3) ತಲಾ ಒಂದು ಗೋಲು ದಾಖಲಿಸಿದರು. ರಾಜು (90 + 2ನೇ) ಡ್ರೀಮ್ ತಂಡದ ಪರ ಏಕೈಕ ಗೋಲು ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು 3–2ರಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವನ್ನು ಸೋಲಿಸಿತು. ಯೂನಿಯನ್ ತಂಡದ ಪ್ರತೀಕ್ ಸ್ವಾಮಿ (45 + 2 ಮತ್ತು 90 + 3) ಎರಡು ಗೋಲು ಗಳಿಸಿ ಮಿಂಚಿದರೆ, ಬ್ರಿಜೇಶ್ ಕುಮಾರ್ ಯಾದವ್ (86ನೇ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಟಿಟಿ ಏಷ್ಯನ್ ಚಾಂಪಿಯನ್‌ಷಿಪ್: ಮಹಿಳೆಯರಿಗೆ ನಿರಾಸೆ

ಭಾರತ ಪುರುಷರ ತಂಡಕ್ಕೆ ಪದಕ ಖಚಿತ

ಪ್ಯೊಂಗ್‌ಚಾಂಗ್, ದಕ್ಷಿಣ ಕೊರಿಯಾ (ಪಿಟಿಐ): ಭಾರತದ ಪುರುಷರ ಟೇಬಲ್ ಟೆನಿಸ್ ತಂಡವು ಇಲ್ಲಿ ನಡೆಯುತ್ತಿರುವ ಏಷ್ಯನ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್‌ನಲ್ಲಿ 3–0ಯಿಂದ ಸಿಂಗಪುರ ತಂಡವನ್ನು ಮಣಿಸಿ, ಸೆಮಿಫೈನಲ್ ಪ್ರವೇಶಿಸುವ ಮೂಲಕ ಪದಕ ಖಚಿತಪಡಿಸಿಕೊಂಡಿದೆ.

ಸೋಮವಾರ ನಡೆದ ಮೊದಲ ಸಿಂಗಲ್ಸ್‌ನಲ್ಲಿ ಭಾರತದ ಅನುಭವಿ ಆಟಗಾರ ಶರತ್ ಕಮಲ್ ಅವರು 11-1, 10-12, 11-8, 11-13, 14-12 ರಿಂದ ಇಜಾಕ್ ಕ್ವೆಕ್ ವಿರುದ್ಧ ಗೆದ್ದರು.

ಭಾರತದ ಮತ್ತೊಬ್ಬ ಆಟಗಾರ ಜಿ. ಸತ್ಯನ್ 11-6, 11-8, 12-10ರಿಂದ ಯೂ ಎನ್ ಕೋಯೆನ್ ಪಾಂಗ್ ಅವರನ್ನು ಸೋಲಿಸಿ, ಭಾರತಕ್ಕೆ 2-0 ಮುನ್ನಡೆ ಒದಗಿಸಿದರು. ಮೂರನೇ ಪಂದ್ಯದಲ್ಲಿ ಹರ್ಮೀತ್ ದೇಸಾಯಿ 11-9, 11-4, 11-6ರಿಂದ ಝು ಯು ಕ್ಲಾರೆನ್ಸ್ ಚೆವ್ ಅವರನ್ನು ಮಣಿಸಿದರು.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪಂದ್ಯದಲ್ಲಿ ಸೋತ ತಂಡಗಳಿಗೆ ಕಂಚಿನ ಪದಕ ನೀಡಲಾಗುತ್ತಿದ್ದು, ಹೀಗಾಗಿ ಭಾರತಕ್ಕೆ ಪದಕ ಖಚಿತಗೊಂಡಿದೆ.

ಮೂರನೇ ಶ್ರೇಯಾಂಕದ ಭಾರತ ತಂಡವು ಸೆಮಿಫೈನಲ್‌ನಲ್ಲಿ ಇರಾನ್ ಅಥವಾ ಚೀನಾ ತೈಪೆಯನ್ನು ಎದುರಿಸಲಿದೆ. ಎರಡು ವರ್ಷಗಳ ಹಿಂದೆ ದೋಹಾದಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಪುರುಷರ ತಂಡ ಕಂಚು ಗೆದ್ದಿತ್ತು.

ಮಹಿಳೆಯರ ತಂಡಕ್ಕೆ ಸೋಲು: ಭಾರತದ ಮಹಿಳೆಯರ ತಂಡವು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 0–3ರಿಂದ ಜಪಾನ್ ವಿರುದ್ಧ ನಿರಾಸೆ ಅನುಭವಿಸಿತು.

ಆರಂಭಿಕ ಸಿಂಗಲ್ಸ್‌ನಲ್ಲಿ ಅಹಿಕಾ ಮುಖರ್ಜಿ 7-11, 13-15, 8-11 ರಿಂದ ವಿಶ್ವದ ಎಂಟನೇ ಕ್ರಮಾಂಕದ ಮಿಮಾ ಇಟೊ ಅವರಿಗೆ ಮಣಿದರು. ಮಣಿಕಾ ಬಾತ್ರಾ 7-11, 9-11, 11-9, 3-11 ರಿಂದ ಏಳನೇ ಕ್ರಮಾಂಕದ ಹಿನಾ ಹಯಾತಾ ಎದುರು ಪರಾಭವಗೊಂಡರು. ಸುತೀರ್ಥಾ ಮುಖರ್ಜಿ11-7, 4-11, 6-11, 5-11 ರಿಂದ ಮಿಯು ಹಿರಾನೊ ವಿರುದ್ಧ ಸೋತರು.

ಗೆಲುವಿನ ಸಂಭ್ರಮದಲ್ಲಿ ಭಾರತದ ಆಟಗಾರರು –ಸಾಯ್ ಮೀಡಿಯಾ ಚಿತ್ರ